
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 13, 2013 ಪುಟ 20 ರೂ. 14/-

ಸಾಕೇತ್, ನೂರ್ & ಮಾವ್ಲೋನ ನರ್ತಕ





ಖಾನ್ & ಕಮಲ್ ವಿಶ್ವ ರೂಪ-ಕುರೂಪ

ಡ್ಡಿಯ ಸಂಖ್ಯಾಜಾಲದ ಮರ್ಮವೇನು?

ಮೈಸೂರು
ದಗಲ್ಬಾಜಿ ವಿಕ್ರಮ್ ಆಸ್ಪತ್ರೆ


ಹುಬ್ಬಳ್ಳಿ
ಹಾಲಹರವಿಗೆ ಸೋಲಿನ ಭೀತಿ

ಕರಾವಳಿ
ಕಾಗೇರಿ ಹೋಂಸ್ಟೇ ಹಗರಣ



ಪೋಲೀಸರ ದಾರುಣ ಬದುಕು





ಪಾರ್ವತೀಶ
ಬಿಡಿ ಚಿತ್ರಗಳು
bparvateesha@gmail.com

ಆಗಿನ್ನೂ ರಾತ್ರಿ ಒಂದೂವರೆಯ ಸಮಯ.

ಕಳೆದ ತಿಂಗಳು ಯಾವುದೋ ಕೆಲಸಕ್ಕೆಂದು ಹೊರಟಿದ್ದ ನಮಗೆ ಗುಲ್ಬರ್ಗಾ ತಲುಪಲು ಇನ್ನು ನಾಲ್ಕೈದು ಗಂಟೆಗಳ ಪ್ರಯಾಣ ಬಾಕಿ ಇತ್ತು. ನಿದ್ರೆಯಲ್ಲಿದ್ದ ಮಿತ್ರರನ್ನು ಬೋಗಿಯಲ್ಲೇ ಬಿಟ್ಟು ಪ್ಲಾಟ್‌ಫಾರಂಗಿಳಿದಾಗ ಟೀ-ಬಿಸ್ಕತ್ ಮಾರುವವರಿಗೂ ನಿದ್ದೆಯ ಮಂಪರು. ರೈಲು ಹೊರಡಲು ಇನ್ನೂ ಕೊಂಚ ಸಮಯವಿತ್ತಾದ್ದರಿಂದ ನಾನು ನಡೆದು ಆ ಸ್ಥಳದತ್ತ ಹೋದೆ.

ಅದು ಆಂಧ್ರಪ್ರದೇಶ ರಾಜ್ಯದ ಧರ್ಮಾವರಂ ರೈಲ್ವೆ ಸ್ಟೇಷನ್ನಿನ ಪಕ್ಕದ ಕಿರಿದಾದ ಒಂದು ಓಣಿ.

ಸಂದೇ ರಾಜಮೌಳಿಯ ಹತ್ಯೆಯಾದ ಜಾಗ ಅದು.


ಆಂಧ್ರ ವಿಶೇಷ ಪೊಲೀಸು ದಳದವರು ಕೇರಳದ ಕೊಲ್ಲಂನಲ್ಲೆಲ್ಲೊ ರಾಜಮೌಳಿಯನ್ನು ಸೆರೆಹಿಡಿದು ಹಿಂತಿರುಗುವ ದಾರಿಯಲ್ಲಿ ಧರ್ಮಾವರಂ ರೈಲು ನಿಲ್ದಾಣದ ಕಾಲುದಾರಿಯಲ್ಲಿ ಗುಂಡು ಹಾರಿಸಿ ಕೊಂದು ಶವವನ್ನು ಬಿಸುಟು ಹೋಗಿದ್ದರು.

ಚಟುವಟಿಕೆಯಿಂದ ಇದ್ದಾತ. ನಂತರ ದಿಢೀರನೆ ಕಣ್ಮರೆಯಾದ. ಕೆಲ ತಿಂಗಳ ನಂತರ ಪೊಲೀಸರು ಅವನನ್ನು ಕಾಡಿನಲ್ಲೇ ಕೊಂದು ಕೆಡವಿದರು. ಈ ನಂತರ ಪೊಲೀಸರು ಆವನನ್ನು ಕಾಡಿನಲ್ಲೇ ... ಅಪ್ರಜಾತಾಂತ್ರಿಕ ಸರಣಿ ಹತ್ಯೆಗಳು ಹಾಗೂ ಪೊಲೀಸರ ಕೆಟ್ಟ ಕಿರುಕುಳಗಳಿಂದಾಗಿ ಕರ್ನಾಟಕದಲ್ಲಿ ಮಾವೋವಾದಿ ಪಕ್ಷದ ಹೋರಾಟದ ಬಿರುಸು ಈಗ ಕೊಂಚ ಕಡಿಮೆಯಾಗಿದೆ. ಈ ಭೂಗತ ಪಾರ್ಟಿಯ ಚಟುವಟಿಕೆಗಳಲ್ಲಿದ್ದರೆಂದು ಪೊಲೀಸರು ಆರೋಪಿಸಿ ಬಂಧಿಸಿರುವ ದೇವಣ್ಣ, ನಂದಕುಮಾರ್, ಆಶಾ ಮುಂತಾದವರೆಲ್ಲಾ ಈಗ ಮಂಗಳೂರು ಜೈಲಿನಲ್ಲಿದ್ದಾರೆ. ಚಂದ್ರಶೇಖರ್ ಗೋರಬಾಳ್ ಎಂಬ ಇನ್ನೊಬ್ಬರನ್ನು ಹೈದರಾಬಾದಿನ ಚಂಚಲಗೂಡಾ ಸೆಂಟ್ರಲ್ ಜೈಲಿನಲ್ಲಿ ಇಡಲಾಗಿದೆ.

ಈ ಮೇಲಿನ ಎಲ್ಲಾ ಸಂದರ್ಭಗಳಲ್ಲೂ ಮಾವೋವಾದಿಗಳು ಪ್ರತಿಕ್ರಿಯೆ ಬಹುತೇಕ ಒಂದೇ ರೀತಿಯದ್ದಾಗಿದೆ.

ಒಂದೋ
You cannot drain the ocean to catch a fish
ಎನ್ನುವುದು...
ಇಲ್ಲಾ
ಅಂಗೈಯನು ಅಡ್ಡ ಹಿಡಿದು ಸೂರ್ಯ ಕಾಂತಿ ತಡೆಯಲಾಗದು.
ಎನ್‌ಕೌಂಟರ್- ಅರೆಸ್ಟುಗಳ ಮುಂದುವರೆಸಿ ಪ್ರಜಾಕ್ರಾಂತಿ ನಿಲ್ಲಿಸಲಾಗದು...

-ಎಂದು ಘೋಷಣೆ ಹಾಕಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮುಂದಿನ ಅರೆಸ್ಟು ಅಥವಾ ಎನ್‌ಕೌಂಟರ್‌ಗೆ ತಯಾರಾಗಿ ನಿಲ್ಲುವುದು....!



ಸಾಕೇತ್

ಮನುಷ್ಯನ ಆಳದಲ್ಲಿ ಇರಬಹುದಾದ ಸ್ವಾತಂತ್ರ್ಯದ ಹಂಬಲ, ಸುಖ[...] ಲೋಲುಪತೆಯ ಕನಸು, ಹಣ ಮಾಡಿ ಶ್ರೀಮಂತರಾಗುವ ಆಕಾಂಕ್ಷೆಗಳ[...] ನಿರೂಪಿಸುವ ಒಬ್ಬ ಚೀನಿಯನ ಕತೆ. ಕ್ರಾಂತಿಯ ನಂತರದ, ಮಾವೋ[...] ನಾಯಕತ್ವದ ಚೀನಾದ್ದೇ ಕತೆ ಹೇಳುವ ಲೀ ಒಬ್ಬ ಪೊಳ್ಳು ವ್ಯಕ್ತಿ, ಚೀನಾ[...] ಈಶಾನ್ಯ ಪ್ರಾಂತ್ಯ ಕಿಂಗ್‌ಡಾವೋದ ಗ್ರಾಮವೊಂದರ ದಾರುಣ ಬಡತನ[...] ಕುಟುಂಬದಲ್ಲಿ ಹುಟ್ಟಿದ ಲೀ ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಕಮ್ಯುನಿಸ್ಟ[...] ಉತ್ತೇಜನ ಪಡೆದು ಬ್ಯಾಲೆ ಕಲಿಯಲು ಊರು ಬಿಟ್ಟು ಹೊರಡುತ್ತಾನೆ. ಆ[...] ಅವನ ಕುಟುಂಬದವರಿಗೆ ಎರಡು ರೀತಿಯ ಸಂತೋಷ. ಒಂದು ಲೀ[...] ಪಡೆದ ಹೊಸ ಅವಕಾಶದ ಬಗ್ಗೆಯಾದರೆ ಇನ್ನೊಂದು ಮನೆಯಲ್ಲಿ ತಿನ್ನು[...] ಒಂದು ಬಾಯಿ ಕಡಿಮೆಯಾಯಿತಲ್ಲ ಎನ್ನುವ ಖುಷಿ. ಹೀಗೆ[...] ನಗರ ಸೇರಿಕೊಳ್ಳುವ ಲೀ ನಾಲ್ಕಾರು ವರ್ಷ ನಿರಂತರ ತಾಲೀಮು[...] ನಡೆಸಿ ಬ್ಯಾಲೆ ಡ್ಯಾನ್ಸ್‌ನಲ್ಲಿ ಪರಿಣಿತಿ ಗಳಿಸುತ್ತಾನೆ. ಅವ[...] ತರಬೇತುದಾರರೆಲ್ಲಾ ಅಚ್ಚರಿ, ಹೆಮ್ಮೆ, ತೃಪ್ತಿಯ ಭಾವನೆ ಪಡುವಂ[...] ಬೆಳೆಯುತ್ತಾನೆ. ಆಗೊಮ್ಮೆ ಲೀಗೆ ಅಮೆರಿಕಾಗೆ ಹೋಗಿ ಒಂದು ಬ್ಯಾಲೆ ನೃತ್ಯದ ಶೋ ನೀಡುವ ಅವಕಾಶ ಸಿಗುತ್ತದೆ. ಅಮೆರಿಕಾ[...] ಬಂದಿಳಿದ ತಕ್ಷಣ ಅಲ್ಲಿನ ಏರ್‌ಪೋರ್ಟ್, ಹೋಟೆಲ್, ಕಾರು[...] ರಸ್ತೆಗಳು, ಬಂಗಲೆಗಳೆಲ್ಲಾ ಅವನಲ್ಲಿ ಬೆರಗು ಹುಟ್ಟಿಸುತ್ತವೆ. ಅಲ್ಲಿರುವ ಪ್ರತಿಯೊಬ್ಬರೂ ಲೀಗೆ ಆಗರ್ಭ ಶ್ರೀಮಂತರಂತೆ ಕಾಣುತ್ತಾರೆ. ಇದನ್ನೆಲ್ಲ ಚೀನಾದಲ್ಲಿನ ತನ್ನ ಹಾಗೂ ಕುಟುಂಬದವರ ಬಡತನದೊಂದಿಗೆ ಹೋಲಿಸಿ ನೋಡುವ ಲೀಗೆ ಚೀನಾಗೆ ಹಿಂತಿರುಗಲು ಮನಸ್ಸಾಗುವುದಿಲ್ಲ. ಆಗ ಅಮೆರಿಕದ ಉಪಾಧ್ಯಕ್ಷನಾಗಿದ್ದ ಜಾರ್ಜ್ ಬುಷ್‌ನ ಪತ್ನಿ ಬಾರ್ಬಾರಾಳ ನೆರವು ಪಡೆದು ಲೀ ಚೀನಾ ತೊರೆದು ಅಮೆರಿಕನ್ ಪ್ರಜೆಯೇ ಆಗಿಬಿಡುತ್ತಾನೆ.

ಸಾಕೇತ್, ನೂರ್ ಶ್ರೀಧರ್ ಮತ್ತು ಮಾವೋನ ಕೊನೆಯ ನರ್ತಕ

ಇದಾದದ್ದು 2007 ರ ಜೂನ್ 22 ರಂದು. ಎಂದಿನಂತೆ ಈ ಹತ್ಯೆಗೂ ಎನ್‌ಕೌಂಟರ್‌ನ ಕತೆ ಕಟ್ಟಿ ಪ್ರಚಾರ ಮಾಡಲಾಯಿತು. ಭಾರತದಲ್ಲಿ ಕ್ರಾಂತಿಯ ಕನಸು ಹೊತ್ತು ಅಹರ್ನಿಷಿ ಎರಡು ದಶಕ ಕಾಲ ಕೆಲಸ ಮಾಡಿದ್ದ ರಾಜಮೌಳಿ ಎಲ್ಲಾ ತೀವ್ರಗಾಮಿಗಳಂತೆಯೇ ವಿಚಾರಣೆರಹಿತ ಮರಣದಂಡನೆಯ ಶಿಕ್ಷೆಗೀಡಾಗಿ ಜೀವ ತೆತ್ತಿದ್ದರು.

ಈ ರಾಜಮೌಳಿ ಸಾಕೇತನ ಹತ್ಯೆಯ ನಂತರ ಕರ್ನಾಟಕದ ಮಾವೋವಾದಿ ಸಶಸ್ತ್ರ ಹೋರಾಟದ ನಾಯಕತ್ವ ವಹಿಸಿಕೊಂಡಿದ್ದ ವ್ಯಕ್ತಿ ಎಂಬುದು ಆನಂತರ ಬಹಿರಂಗವಾಯಿತು.

ಕರ್ನಾಟಕದ ಜನಸಾಮಾನ್ಯರಿಗೆ ಸಾಕೇತ್ ಬಗ್ಗೆ ತಿಳಿದಿದ್ದ ಕನಿಷ್ಠ ಮಾಹಿತಿಗಳೂ ಕೂಡ ರಾಜಮೌಳಿಯ ಕುರಿತಂತೆ ಇರಲಿಲ್ಲ. ರಾಜಮೌಳಿಯ ಬದುಕಿನ ಕೊನೆಯ ನಿಮಿಷಗಳು ಹೇಗಿದ್ದವೊ ಏನೊ?

ಆತ ಗುಂಡೇಟಿಗೆ ಎದೆಯೊಡ್ಡುವ ಕಡೆಯ ಕ್ಷಣದಲ್ಲಿ ಆಗಲೂ ಧರ್ಮಾವರಂ ರೈಲ್ವೆ ಸ್ಟೇಷನ್ನಿನಲ್ಲಿ ಪ್ರಯಾಣಿಕರು, ಕಾಫಿ-ಟೀ ಮಾರುವವರು ಫ್ಲಾಟ್‌ಫಾರಂ ಮೇಲೆ ಇದ್ದಿರಲಿಕ್ಕೂ ಸಾಕು. ಅವತ್ತು ಅಲ್ಲೇನು ನಡೆಯಿತೆಂಬುದು ಇವತ್ತಿಗೂ ಅಲ್ಲಿರುವವರಿಗೆ ಗೊತ್ತಿರಲು ಸಾಧ್ಯವಿಲ್ಲ. ರಾಜಮೌಳಿಯ ಕತೆ ಹೀಗೆ ಮುಗಿದು ಹೋಯಿತು. ಇದಾದ ಹದಿನೈದೇ ದಿನದಲ್ಲಿ ಮಲೆನಾಡಿನಲ್ಲಿ ಇನ್ನೂ ಐದು ಹತ್ಯೆಗಳಾದವು. 2007 ರ ಜುಲೈ 10 ರಂದು ಮೆಣಸಿನಹಾಡ್ಯದಲ್ಲಿ ANF ಪೊಲೀಸರು ಗೌತಂ, ಸುಂದರೇಶ್, ಕಾವೇರಮ್ಮ, ರಾಮಗೌಡ್ರು ಹಾಗೂ ಪರಮೇಶ್‌ರನ್ನು ಗುಂಡಿಟ್ಟು ಕೊಂದು ಒಂದು ಭಯಾನಕ ದೃಶ್ಯ ಸೃಷ್ಟಿಸಿದ್ದರು. ಇವರ ಪೈಕಿ ಗೌತಂ ಹೊರತುಪಡಿಸಿ ಉಳಿದವರು ನಕ್ಸಲೀಯರಾಗಿರಲಿಲ್ಲವೆಂಬುದು ಸ್ವತಃ ಪೊಲೀಸರಿಗೂ ಗೊತ್ತಿತ್ತು. ಆದರೆ ಆ ಸಾಮೂಹಿಕ ಹತ್ಯೆಯ ಉದ್ದೇಶವಿದ್ದುದು ನಕ್ಸಲೈಟರಿಗೆ ಮಾತ್ರವಲ್ಲ ಅವರ ಆಸುಪಾಸಿನಲ್ಲಿ ಓಡಾಡುತ್ತಿದ್ದವರಿಗೆ, ಸಹಾನುಭೂತಿ ಹೊಂದಿದ್ದ ಗಿರಿಜನರಿಗೂ ಒಂದು ಮರಣದಂಡನೆಯ ವಾರ್ನಿಂಗ್ ನೀಡುವುದಾಗಿತ್ತು. ನಂತರ ನಡೆದ ದುರ್ಘಟನೆಯ ಸತ್ಯಶೋಧನೆಗೆಂದು ನಾವೊಂದಿಷ್ಟು ಮಂದಿ ಅಲ್ಲಿಗೆ ಹೋಗಿದ್ದಾಗ ನಾನೆಂದು ನೋಡಿರದಿದ್ದಷ್ಟು ಬಳಸಿ ಬಿಸಾಡಿದ್ದ ಕಾಡತೂಸುಗಳನ್ನು ಅಲ್ಲಿ ನೋಡಿದ್ದೆ. ಒಂದು gun battle ನ ದೃಶ್ಯ ಸೃಷ್ಟಿಸಲು ಪೊಲೀಸರು ಸುಖಾಸುಮ್ಮನೆ ಕಾವೇರಮ್ಮನ ಮನೆಯೊಳಗೆ ಹಾರಿಸಿದ್ದ ಬುಲೆಟ್‌ಗಳ ಖಾಲಿಯಾಗಿದ್ದ cartridges ಅವಾಗಿದ್ದವು. ಇದಕ್ಕೂ ಮುನ್ನ 2003 ರಲ್ಲಿ ಉಡುಪಿಯ ಬೊಲ್ಲೊಟ್ಟು ಬಳಿ ಪಾರ್ವತಿ ಹಾಜಿಮಾರ ಸಾವು ಸಂಭವಿಸಿತ್ತು. ಆಸಾಂದರ್ಭಿಕವೆನಿಸುವ ಈ ಸಾವುನೋವುಗಳ ಸರಣಿಗೆ premature ಎನ್ನಬಹುದಾದ ಚಾಲನೆ ನೀಡಿದ್ದ ಸಾಕೇತ್ ಕೂಡ ಈ ಸಂಘರ್ಷದಲ್ಲೇ ಕೊಲೆಗೀಡಾದರು.




ಚೀನಿ ಬ್ಯಾಲೆ ತಂಡದೊಂದಿಗೆ ಮಾವೋ

ನಾಳಿನ ಫೆಬ್ರವರಿ 6 ಕ್ಕೆ ಸಾಕೇತ್ ಸತ್ತು ಎಂಟು ವರ್ಷಗಳಾಗಲಿವೆ. ಸಾಕೇತ್ ಸಾವಿನ ನಂತರವೂ ಈ ಹತ್ಯಾ ಸರಣಿ ನಿಂತಿಲ್ಲ. ಕೆಲ ವರ್ಷಕಾಲ ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿದ್ದು ನಂತರ ಬಿಡುಗಡೆಯಾದ ಮನೋಹರ್ ಶಿವಮೊಗ್ಗೆಯಲ್ಲಿ ಎಲ್ಲರೊಂದಿಗೆ ಓಡಾಡಿಕೊಂಡು

ಕ್ಷಮಿಸಿ, ಇದು ಲೇವಡಿಯ ಮಾತಲ್ಲ, ವಿಷಾದ ಹಾಗೂ ಬೇಸರದ ಅನಿಸಿಕೆಗಳು.

ಭಾರತದ ನಕ್ಸಲೀಯ ಚಳವಳಿಯು ಈ ನಾಡಿನ ಅತ್ಯುತ್ತಮ ಹೋರಾಟಗಾರರನ್ನು, ಬುದ್ಧಿಜೀವಿ, ಸಾಹಿತಿಗಳನ್ನು ರೂಪಿಸಿದೆ. ನಮ್ಮ ಕಾಲದ ಭ್ರಷ್ಟ ನಾಯಕರು, ತೆಳ್ಳಗೆ ಬೆಳ್ಳಗೆ ಯೋಚಿಸುವ ಅನೇಕ ಬುದ್ಧಿಜೀವಿಗಳಿಗಿಂತ ಉತ್ತಮ ಅನ್ನಬಹುದಾದ ವ್ಯಕ್ತಿಗಳನ್ನು ರೂಪಿಸಿ ಅವರ ಬೆಂಬಲವನ್ನು ಈ ಚಳವಳಿ ಪಡೆದುಕೊಳ್ಳುತ್ತಾ ಬಂದಿದೆ. ಆದರೆ ಇವರ ಹೋರಾಟದ ಇತಿಹಾಸ-ವರ್ತಮಾನಗಳನ್ನೊಮ್ಮೆ ಅವಲೋಕಿಸಿದರೆ ಎದ್ದು ಕಾಣುವ ಮುಖ್ಯ ದೌರ್ಬಲ್ಯವೇನೆಂದರೆ ಕಾಮನ್‌ಸೆನ್ಸ್ ಕೊರತೆಯದ್ದು!

ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಚೀನಾ ದೇಶದಲ್ಲಿ ಕ್ರಾಂತಿ ನಡೆಸಲು ಮಾವೋ ತ್ಸೆ ತುಂಗ್ ರೂಪಿಸಿದ ರಾಜಕೀಯ ಸಿದ್ಧಾಂತ, ಸಂಘಟನಾ ಸ್ವರೂಪ, ಮಿಲಿಟರಿ ಕಾರ್ಯತಂತ್ರ ಹಾಗೂ ಸಶಸ್ತ್ರ ದಂಗೆಯ ವಿಧಾನವನ್ನೇ ಯಥಾವತ್ತಾಗಿ ಭಾರತದಲ್ಲೂ ಅಳವಡಿಸಲು ಇವರು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದಲ್ಲಿ ಅರ್ಪಣಾ ಮನೋಭಾವ ಹಾಗೂ ದೃಢ ನಿರ್ಧಾರಗಳು ಖಂಡಿತಾ ಇವೆ. ಆದರೆ ಹಲವಾರು ವರ್ಗ, ಪ್ರಾಂತ್ಯ ಜಾತಿ, ಭಾಷೆ, ಧರ್ಮ, ಜನಾಂಗಗಳಿರುವ ಭಾರತದಂತಹ ಒಂದು ಸಂಕೀರ್ಣ ದೇಶಕ್ಕೆ ವಿಭಿನ್ನ ಕಾರ್ಯತಂತ್ರ ಬೇಕಿದೆಯೆಂಬುದು.... ನಲವತ್ತು ವರ್ಷಗಳ ಅನುಭವದಿಂದಲೂ ಇವರು ಕಲಿತಿಲ್ಲ ಎನ್ನುವುದೇ ದುರಂತ.



ಬ್ಯಾಲೆ ನರ್ತಕ ಲೀ

ಇವರೆಲ್ಲಾ ಮಾವೋ ಬಯಸಿರದಿದ್ದ, ಆದರೂ ಆತನ ತಾಳಕ್ಕೆ ತಕ್ಕಂತೆ ಕುಣಿಯಬಯಸುವ ನರ್ತಕರಂತಾಗಿಬಿಟ್ಟದ್ದಾರೆ ಎನಿಸುತ್ತದೆ.

ಯಾವುದೇ ಸಮಾಜ ಅಥವಾ ದೇಶದಲ್ಲಿ ಜನಪರವಾದ structural changes ತರಬೇಕೆಂದರೆ ಬಲಪ್ರಯೋಗ ಅನಿವಾರ್ಯ. ಶಾಂತಿಯುತ ವಿಧಾನದಲ್ಲಿ ಮೂಲಭೂತ ಬದಲಾವಣೆಗಳನ್ನು ತಂದ ಒಂದೇ ಒಂದು ಉದಾಹರಣೆಯೂ ಮನುಷ್ಯ ಜನಾಂಗದ ಚರಿತ್ರೆಯಲ್ಲಿ ಕಾಣಸಿಗುವುದಿಲ್ಲ. ಬದಲಾವಣೆಯೆಂಬುದು ಎರಡು ಅಲಗಿನ ಕತ್ತಿಯ ಮೇಲಿನ ನಡಿಗೆಯಿದ್ದಂತೆ. ಒಂದು ಕ್ರಾಂತಿಕಾರಿ ಹೋರಾಟದಲ್ಲಿ ಜಯಗಳಿಸಿ ಅಧಿಕಾರಕ್ಕೆ ಬರುವುದು ಮೊದಲ ಹಂತವಾದರೆ ತರಬೇಕಾದ ಬದಲಾವಣೆಗಳಿಗೆ ಜನರನ್ನು ಸಿದ್ಧಗೊಳಿಸಿ ಮುನ್ನಡೆಯುವುದು ಅತ್ಯಂತ ಸವಾಲಿನ ಹಾಗೂ ಸಂಕೀರ್ಣವಾದ ಕೆಲಸ. ಒಂದು ಸಮಾಜದಲ್ಲಿ ಬದಲಾವಣೆಯ ಪರ ಹೇಗೆ ಜನರಿರುತ್ತಾರೋ ಅದನ್ನು ಪ್ರತಿರೋಧಿಸುವ ಜನವರ್ಗಗಳೂ ಇದ್ದೇ ಇರುತ್ತವೆ. ಆ ಬದಲಾವಣೆಯ ಆಶಯಗಳಲ್ಲಿ ಸಕಲ ಜನರ ಹಿತವೇ ಅಡಗಿದ್ದರೂ ಎಲ್ಲರೂ ನಾಯಕತ್ವದ ಅಪೇಕ್ಷೆಗೆ, ತಾಳಕ್ಕೆ ತಕ್ಕಂತೆ ಕುಣಿಯಲಾರರು. 1949 ರಲ್ಲಿ ಚೀನಾ ಕ್ರಾಂತಿ ಯಶಸ್ವಿಯಾದ ನಂತರವೂ ಮಾವೋ ಅನೇಕ ಹೊಸ ಪ್ರಯೋಗಗಳನ್ನು ನಡೆಸಿದ್ದು ಇದೇ ಕಾರಣಕ್ಕೆ. ಅವನು "ಸಮಾಜವಾದಿ ಕ್ರಾಂತಿಯಿಂದಲೇ ಎಲ್ಲವೂ ಸಾಧ್ಯವಿಲ್ಲ. ನಾವೀಗ ಹೊಸ ಸಮಾಜವಾದಿ ಮನುಷ್ಯರನ್ನೇ ರೂಪಿಸಬೇಕಿದೆ" ಎಂದು ಆಶಿಸಿದ. ಈ ಆಶಯವೂ ಅನೇಕರಲ್ಲಿ ಕಸಿವಿಸಿ ಹುಟ್ಟಿಸಿದ್ದು ನಿಜ. ವೈಯಕ್ತಿಕ ಸ್ವಾತಂತ್ರ್ಯವನ್ನು ಅಪೇಕ್ಷಿಸುವವರು ಸರ್ಕಾರವು ಎಲ್ಲರ ಎಲ್ಲಾ ವಿಷಯಗಳಲ್ಲೂ ತಲೆ ಹಾಕುವ ಪ್ರವೃತ್ತಿಯ ಬಗ್ಗೆ ಅಸಮಾಧಾನ ತಾಳಿಯೇ ತಾಳುತ್ತಾರೆ.

ನಾನು ಇತ್ತೀಚೆಗೆ ಓದಿದ 'ಮಾವೋನ ಕೊನೆಯ ನರ್ತಕ' (ಇಂಗ್ಲಿಷ್ ಮೂಲ Mao's last dancer by Li Cunxin) ಪುಸ್ತಕವು ಪ್ರತಿ ಕ್ರಾಂತಿಪೂರ್ವ ಚೀನಾದ ಪಾಳೇಗಾರಿಕೆಯ ವ್ಯವಸ್ಥೆಯ ಕೊಡುಗೆಯಾಗಿದ್ದ ರೈತಾಪಿಯ ದಾರುಣ ಬಡತನದ ಬದುಕಿಗೆ ಕ್ರಾಂತಿಯ ನಂತರದ ಮಾವೋ[...] ನಾಯಕತ್ವವೇ ಕಾರಣವೆಂಬಂತೆ ಕಲ್ಪಿಸಿಕೊಂಡು ತನ್ನ ನಿಲುವಿಗೆ ತಾನೇ ಸಮರ್ಥನೆ ಕೊಟ್ಟುಕೊಂಡು ಹಣ, ಕೀರ್ತಿಯ ಬೆನ್ನು ಹತ್ತಿಹೋಗುತ್ತಾನೆ. ಅನೇ[...] ಏಳುಬೀಳುಗಳನ್ನು ಹಾದು ಯಶಸ್ವಿಯೂ ಆಗುತ್ತಾನೆ. ಇದಾದ ಕೆಲ ವರ್ಷಗ[...] ನಂತರ ಲೀ ಪುನಃ ಚೀನಾಕ್ಕೆ ಭೇಟಿ ನೀಡಲು ಬಯಸಿದಾಗ ಆಗಿನ[...] ಈಗಿನಷ್ಟು ಕೆಟ್ಟರದಿದ್ದ ಚೀನಾದ ಕಮ್ಯುನಿಸ್ಟ್ ಸರ್ಕಾರ ಲೀಗೆ ಸ್ವಾಗತ ನೀ[...] ಅವನ ಕಲಾ ಪ್ರೌಢಿಮೆಯನ್ನು ಗೌರವಿಸಿ ಹಿಂತಿರುಗಿ ಕಳಿಸುತ್ತದೆ.

ಕಮ್ಯುನಿಸ್ಟರ ನೆರವಿನಿಂದ ಬ್ಯಾಲೆ ಕಲಿತ ಲೀ ತನ್ನ ನೃತ್ಯ ಪ್ರತಿಭೆಯನ್ನು ಶ್ರೀಮಂತರ ರಂಜನೆಗಾಗಿ ಖರ್ಚು ಮಾಡುತ್ತಾ, ಅನೇಕ ಹೆಂಗಸರೊಂದಿಗೆ ಒಡನಾಡಿ, ದುಡ್ಡು ದುಡಿದು ಅಮೆರಿಕನ್ ಮಾನದಂಡದಲ್ಲಿ ಓರ್ವ ಯಶ[...] ವ್ಯಕ್ತಿ ಎನಿಸಿಕೊಳ್ಳುತ್ತಾನೆ. ಮತ್ತೊಂದೆಡೆ ಕಮ್ಯುನಿಸ್ಟ[...] ದೃಷ್ಟಿಯಲ್ಲಿ ಅವನದು ಅಧಃಪತನದ ಬದುಕೆನಿಸಿಕೊಳ್ಳುತ್ತದೆ.

ಪ್ರಚಂಡ ಚಿಂತಕನೆನಿಸಿಕೊಂಡಿದ್ದ ಮಾವೋಗೆ night owl ಎಂಬ ಕೀರ್ತಿಯೂ ಇತ್ತು. 'ಕಲೆ ಮತ್ತು ಸಾಹಿತ್ಯ ಯಾರಿಗಾಗಿ' ಎನ್ನುವ ಅವ[...] ಪ್ರಖ್ಯಾತ ಯೆನಾನ್ ಉಪನ್ಯಾಸವನ್ನು ಒಂದು ದಿನ ರಾತ್ರಿ ಆರಂಭಿಸಿ ಮರುದಿನ ಬೆಳಗಿ[...] ಜಾವದವರೆಗೂ ನೀಡಿದ್ದ. ಚೀನಾದ ನೂರಾರು ಸಾಹಿತಿ ಕಲಾವಿದರೆಲ್ಲ ಆಣಿನೆರೆದಿದ್ದ ಆ ಸಭೆಯಲ್ಲಿ ಮಾವೊ "ಕಲೆಗಾಗಿ ಕಲೆ ಎಂಬುದಿಲ್ಲ, ಇಂದಿನ ಜಗತ್ತಿನಲ್ಲಿ ಅದು ಯಾವುದಾದರೂ ವರ್ಗ ಹಾಗೂ ರಾಜಕೀಯ ನಿಲುವನ್ನು ಹೊಂದಿರುತ್ತದೆ" ಎಂದು ಪ್ರತಿಪಾದಿಸಿದ್ದ. ಕ್ರಾಂತಿಯ ನಂತರ ಮಾವೋ ಸರ್ಕಾರ ತರಬೇತಿ ನೀಡಿದ್ದ ಚೀನಿ ಬ್ಯಾಲೆ ತಂಡ ಕೇವಲ ನಗರಗಳಲ್ಲಿ ಮಾತ್ರವಲ್ಲದೆ ಕಾರ್ಖಾನೆಗಳು, ಹಳ್ಳಿಗಳಿಗೂ ಹೋಗಿ ಕಾರ್ಮಿಕ ರೈತರೆದುರು ಪ್ರದರ್ಶನ ನೀಡುವುದು ಆ[...] ಕಡ್ಡಾಯವಾಗಿತ್ತು. ಯುರೋಪ್ ಅಮೆರಿಕಾದ ಶ್ರೀಮಂತರೆದುರು ನರ್ತಿಸುತ್ತಾ ಹಣ ಬಾಚಿಕೊಳ್ಳುತ್ತಿದ್ದ ಲೀಗೆ ಮಾವೋನ ಈ ಸಾಂಸ್ಕೃತಿಕ ನೀತಿ ಇಷ್ಟವಾಗಲು ಹೇಗೆ ಸಾಧ್ಯವಿತ್ತು?

ಹಾಗಾಗಿ ಲೀ ಚೀನಾದಲ್ಲಿನ ತನ್ನ ಬದುಕನ್ನು ಸರ್ಕಾರದ, ನೀತಿಗಳನ್ನು ಗೇಲಿ ಮಾಡುವಂತೆ ತನ್ನನ್ನೇ 'ಮಾವೋನ ಕೊನೆಯ ನರ್ತಕ'ನೆಂದು ಹೇಳಿಕೊಳ್ಳುತ್ತಾನೆ.

ಚೀನಾದಲ್ಲಿ ನಡೆದ ಸಾಂಸ್ಕೃತಿಕ ಕ್ರಾಂತಿಯ ಅತಿರೇಕಗಳ ಬಗ್ಗೆ ವಿಮರ್ಶಾತ್ಮಕ ಅಂತರ ಇರಿಸಿಕೊಳ್ಳುತ್ತಲೇ ಇಂಡಿಯಾದಲ್ಲಿನ ಮಾವೋನ ರಾಜಕೀಯ ನರ್ತಕರ ಬಗ್ಗೆ ಈಗಲಾದರೂ ಕೆಲವು ನಿಷ್ಠೂರ ವಿಮರ್ಶೆಗಳು ಬರಬೇಕಿದೆ.

ನಾಲ್ಕು ದಶಕಗಳ ನಕ್ಸಲೀಯರ ಹೋರಾಟಕ್ಕೆ ಇಂದಿಗೂ ಕಾಡಿನೊಳಗಿನಿಂದ ಹೊರಬಂದು ನಾಡಿನ ಜನರನ್ನೆಲ್ಲ ಒಳಗೊಳ್ಳುವ ಸಮೂಹ ಹೋರಾಟವಾಗಿ ಬೆಳೆಯಲಾಗುತ್ತಿಲ್ಲ. ಕ್ರಾಂತಿಪೂರ್ವ ಚೀನಾದಲ್ಲಿ ಅನೇಕ war lord ಗಳಿದ್ದ ಅರಾಜಕ ಸನ್ನಿವೇಶದಲ್ಲಿ ಒಂದು ವಿಮೋಚಿತ ಸ್ಥಾವರ ಪ್ರದೇಶವನ್ನು ಸ್ಥಾಪಿಸುವ ಮಾವೋನ ಕಾರ್ಯತಂತ್ರವು ಅವತ್ತಿನ ಚೀನಾದ ಪರಿಸ್ಥಿತಿಗೆ ತಕ್ಕಂತಿತ್ತು. ಈಗ ಭಾರತದ ಮಾವೋವಾದಿಗಳೂ ತಮಗೂ ಅದೇ ಪರಿಹಾರವೆಂಬಂತೆ ನಿರ್ಧರಿಸಿ ಸಶಸ್ತ್ರ ಬಂಡಾಯ ಘೋಷಿಸಿ ಒಂದು liberated base area ಕಟ್ಟಲು ಕಳೆದ ನಾಲ್ಕು ದಶಕಗಳಿಂದಲೂ ವಿಫಲ ಪ್ರಯತ್ನ ನಡೆಸುತ್ತಲೇ ಇದ್ದಾರೆ. ಇಂಡಿಯಾದಾದ್ಯಂತ ಹರಡಿಕೊಂಡಿರುವ ರೈತ, ಕಾರ್ಮಿಕ ಸಂಘಟನೆಗಳು, ಆದಿವಾಸಿ, ಮಹಿಳಾ, ಪ್ರಗತಿಪರ ಚಳವಳಿಗಳೆಗೆಲ್ಲಾ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾ ಭವಿಷ್ಯದ ದಿನಗಳಲ್ಲಿ ಒಂದು ಬೃಹತ್ ಜನಾಂದೋಲನವನ್ನು ರೂಪಿಸಬಹುದಾದ ಸಾಧ್ಯತೆಗಳು ಬಹಳಷ್ಟಿವೆ. ಆದರೆ ಇದನೆಲ್ಲಾ ತಾವೇ ನಾಶ ಮಾಡುತ್ತಾ ಯಾವುದೇ ತರದ ಎಲ್ಲಾ ಪ್ರತಿಭಟನೆ, ಸಂಘಟನೆ ಹೋರಾಟಗಳೂ ಕೇವಲ ಸಶಸ್ತ್ರ ಹೋರಾಟವನ್ನು ಬಲಪಡಿಸುವ ಕರ್ತವ್ಯವನ್ನು

>>>4

ಇಬ್ಬರ ನಟರ ನಡುವಿನ ವ್ಯತ್ಯಾಸ

ಕಂಡಹಾಗೆ



editorlankesh@gmail.com ಗೌರಿ ಲಂಕೇಶ್

ಷೇ ವಾರ ಖ್ಯಾತ ನಟರಾದ ಕಮಲ್ ಹಾಸನ್ ಶಾರುಖ್ ಖಾನ್ ವಿವಿಧ ಕಾರಣಗಳಿಗೆ ಸುದ್ದಿಯಲ್ಲಿದ್ದಾರೆ.

ಮಲ್ ಹಾಸನ್ ಭಾರತದ ಓರ್ವ ಪ್ರತಿಭಾವಂತ ಎಂಬುದರ ಬಗ್ಗೆ ಎರಡು ಮಾತಿಲ್ಲ. ಸದಾ ಹೊಸತನ್ನು ಯು ತುಡಿತುಡಿಸುವ ಕಮಲ್ ತಮಿಳು ಚಿತ್ರರಂಗಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ತಾನೇ ನಿರ್ದೇಶಕ, ಬರಹಗಾರ ಎಲ್ಲವೂ ಆಗಿರಬೇಕೆಂದು ವ ಕಮಲ್ ಒಂದು ರೀತಿಯಲ್ಲಿ ಮೆಗಲೋಮೇನಿ ಕೂಡ ಹೌದು. ಈ ಕಾರಣಕ್ಕೆ ಅವರ ಹಲವು ಗಳು ಆತ್ಮರತಿಯ ಕಸರತ್ತುಗಳಂತೆ ಕಾಣಿಸುತ್ತವೆ. ಬುದ್ಧಿಜೀವಿ ನಟ ಎಂದೇ ಪರಿಗಣಿಸಲಾಗಿರುವ ಕಮಲ್ ಖಂಡಿತಾ ಯಾವ ನಿಟ್ಟಿನಲ್ಲೂ ಪೆದ್ದರಲ್ಲ. ರಾಜ್ಯ ಮತ್ತು ಅಂತರರಾಷ್ಟ್ರೀಯ ರಾಜಕೀಯವನ್ನೂ ಬಲ್ಲವರು . ಆದರೆ ಕಮಲ್ ಹಾಸನ್ ತಮ್ಮ ಸರ್ವಸ್ವವನ್ನೂ ಟ್ಟು ಎಲ್ಲಾ ಮುಸಲ್ಮಾನರನ್ನು ಭಯೋತ್ಪಾದಕರಂತೆ ಸುವ 'ವಿಶ್ವರೂಪಂ' ತರಹದ ಸಿನಿಮಾವನ್ನು ದ್ದಾರೆಂದರೆ ಅದು ಸಾಮಾನ್ಯ ಸಂಗತಿಯಲ್ಲ. (ಆ ಬಗ್ಗೆ ಇದೇ ಸಂಚಿಕೆಯಲ್ಲಿ ನಮ್ಮ ಜಿ. ರಾಜಶೇಖರ ಒಂದು ಲೇಖನ ಬರೆದಿರುವುದರಿಂದ ಅದನ್ನು ನಾನು ಇಲ್ಲಿ ಹೆಚ್ಚು ಹೇಳುವ ಅಗತ್ಯವಿಲ್ಲ.)

ಅಂತರರಾಷ್ಟ್ರೀಯ ರಾಜಕೀಯದ ನ್ಯೂನತೆಗಳನ್ನು ಮತ್ತು ಕ ಸೂಕ್ಷ್ಮತೆಯನ್ನು ಚೆನ್ನಾಗಿ ಬಲ್ಲವರಾದ ಕಮಲ್ ಅವರು ಯಾಕಿಂತಹ ಕೃತ್ಯಕ್ಕೆ ಕೈಹಾಕಿದರು? ಈ ಪ್ರಶ್ನೆಗೆ ನಮ್ಮ ಮುಂದೆ ಸಹಜವಾಗಿಯೇ ಭುಗಿಲೆದ್ದು ನಿಲ್ಲುವ ಉತ್ತರ: ಕಮಲ್ ಅವರು ತಮ್ಮ ಅಂತರಾಳದಲ್ಲಿ ಹಿಂದೂ ಮೂಲಭೂತವಾದಿ ವಿಚಾರಗಳನ್ನು ಹೊಂದಿದ್ದಾರೆಯೇ ಎಂದು.

ತಮ್ಮ ಜೀವನದ ಮಹತ್ವಾಕಾಂಕ್ಷೆ ಸಿನಿಮಾಗಳಲ್ಲಿ ಒಂದಾದ 'ವಿಶ್ವರೂಪಂ' ಸುತ್ತಲಿನ ವಿವಾದದಿಂದಾಗಿ ಕಮಲ್ ಹಾಸನ್ ಸಹಜವಾಗಿಯೇ ಹತಾಶೆಗೊಂಡಿದ್ದಾರೆ; ರಾಜ್ಯ ಮತ್ತು ದೇಶವನ್ನೇ ತೊರೆದು ಯಾವುದೋ 'ಜಾತ್ಯತೀತ' ಪ್ರದೇಶಕ್ಕೆ ವಲಸೆಹೋಗುವ ಮಾತನಾಡಿದ್ದಾರೆ. ಸಮಸ್ಯೆ ಇರುವುದು ಅವರ ಸಿನಿಮಾವನ್ನು ವಿರೋಧಿಸುತ್ತಿರುವ ಜನರಲ್ಲಲ್ಲ ಬದಲಾಗಿ ತಮ್ಮ ಸಿನಿಮಾದಲ್ಲಿ ಎಂದು ಯಾಕೆ ಕಮಲ್ ಹಾಸನ್ ಅವರಿಗೆ ಅರ್ಥವಾಗುತ್ತಿಲ್ಲ? ಈಗಲೂ ಕಾಲ ಮಿಂಚಿಲ್ಲ. ಕಮಲ್ ಹಾಸನ್ ತಮ್ಮ ಸ್ವಪ್ರತಿಷ್ಠೆಯನ್ನು ಬದಿಗಿಟ್ಟು ತಾವು ಮಾಡಿರುವ ಪ್ರಮಾದವನ್ನು ಸರಿಮಾಡಿಕೊಂಡರೆ ಅವರ ಸಿನಿಮಾಗೆ ಯಾರೂ ಅಡೆತಡೆ ಉಂಟುಮಾಡುವುದಿಲ್ಲ. ಯಾಕೆಂದರೆ ಯಾರೂ ಕಮಲ್ ಹಾಸನ್ ಅವರಿಗೆ ಕೆಟ್ಟದ್ದನ್ನು ಬಯಸುವುದಿಲ್ಲ. ಅವರಿಂದ ಇನ್ನೂ ಹೆಚ್ಚಿನ ಕ್ರಿಯಾತ್ಮಕ ಸಿನಿಮಾಗಳನ್ನು ನಿರೀಕ್ಷಿಸುವ ಜನ ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ.

ಇದು ಕಮಲ್ ಹಾಸನ್ ಅವರಿಗೆ ಅರ್ಥವಾಗಬೇಕಷ್ಟೇ.

ಇನ್ನು ರಾಜಶೇಖರ್ ಅವರು ಹೇಳಿರುವಂತೆ ಯಾವುದೇ ಪುಸ್ತಕ, ಕಲೆ, ಸಿನಿಮಾವನ್ನು ನಿಷೇಧಿಸುವ ಪ್ರವೃತ್ತಿಯನ್ನು ಯಾವ ಕಾರಣಕ್ಕೂ ಬೆಂಬಲಿಸಲಾಗುವುದಿಲ್ಲ. ಅದು ನಮಗೆ ಸಹ್ಯವಾಗದಿದ್ದರೆ ಅದನ್ನು ನಿರ್ಲಕ್ಷಿಸಬೇಕು. 'ವಿಶ್ವರೂಪಂ' ಸಿನಿಮಾ ಕುರಿತೂ ನಮ್ಮ ನಿಲುವು ಕೂಡ ಇದೇ ಆಗಿದೆ.

ಕಮಲ್ ಹಾಸನ್ ಅವರಿಗೆ ಹೋಲಿಸಿದರೆ ಶಾರುಖ್ ಖಾನ್ ಅತ್ಯುತ್ತಮ ನಟನೂ ಅಲ್ಲ, ಬುದ್ಧಿಜೀವಿಯಂತೂ ಖಂಡಿತಾ ಅಲ್ಲವೇ ಅಲ್ಲ. ಆತ ತನ್ನ ಜನಪ್ರಿಯ ಪಾತ್ರಗಳ ಮೂಲಕ ಸೂಪರ್‌ಸ್ಟಾರ್ ಆಗಿರುವ ಓರ್ವ ಸಾಮಾನ್ಯ ವ್ಯಕ್ತಿ. ಹಾಗೆ ನೋಡಿದರೆ ಹಿಂದಿ ಸಿನಿಮಾರಂಗದಲ್ಲಿ ಈತನಿಗಿಂತ 'ಬುದ್ಧಿವಂತ' ಎನಿಸಿಕೊಂಡಿರುವವನು ಆಮಿರ್ ಖಾನ್; ಹಾಗೆಯೇ ಈತನಿಗಿಂತ ಜನಪ್ರಿಯವಾಗಿರುವವನು ಸಲ್ಮಾನ್ ಖಾನ್.

ಆದರೂ ಈ ಶಾರುಖ್ ಖಾನ್ ಒಂದು ರೀತಿಯಲ್ಲಿ ಸೂಕ್ಷ್ಮ ಸಂವೇದನೆಯ ವ್ಯಕ್ತಿ. ಒಂದು ಸಂದರ್ಶನದಲ್ಲಿ ಆತ ಹೀಗೆ ಹೇಳಿದ್ದ: "ನಾನು ಇಸ್ಲಾಮ್ ಧರ್ಮದ ಬಗ್ಗೆ ನಮ್ಮ ಮಕ್ಕಳಿಗೆ ಹೇಳಿಕೊಡುತ್ತೇನೆ. ನನ್ನ ಹೆಂಡತಿ ಗೌರಿ ಹಿಂದೂ ಧರ್ಮದ ಬಗ್ಗೆ ಅವರಿಗೆ ಹೇಳಿಕೊಡುತ್ತಾಳೆ. ಪರಿಣಾಮವಾಗಿ ಕಳೆದ ಗಣೇಶ ಹಬ್ಬದ ಸಂದರ್ಭದಲ್ಲಿ ನಾನು ಗಣೇಶನ ಪ್ರತಿಮೆಯನ್ನು ನನ್ನ ಮಗ ಆರ್ಯನಿಗೆ ತೋರಿಸಿ 'ಇದು ಯಾರು?' ಎಂದು ಕೇಳಿದಾಗ ಆತ 'ಅಲ್ಲಾಹು ಗಣೇಶ' ಎಂದು ಉತ್ತರಿಸಿದ. ನಮ್ಮ ಎರಡೂ ಧರ್ಮಗಳು ನಮ್ಮ ಮುಗ್ಧ ಮಕ್ಕಳ ಮನಸ್ಸಿನಲ್ಲಿ ಮಿಲಿತಗೊಂಡಿರುವುದು ಹೀಗೆ."

ಆತನ ಈ ಹೇಳಿಕೆ ನನಗೆ ಎಷ್ಟು ಇಷ್ಟವಾಗಿತ್ತೆಂದರೆ ಅದು ನನಗಿನ್ನೂ ನೆನಪಿದೆ.


ಮೊನ್ನೆ ಶಾರುಖ್ ಖಾನ್ 'ಔಟ್‌ಲುಕ್' ಎಂಬ ವಿದೇಶಿ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದಾನೆ. ಅದರಲ್ಲಿ ಆತ ಎಲ್ಲೂ ತನಗೆ ಭಾರತದಲ್ಲಿ ರಕ್ಷಣೆ ಇಲ್ಲ ಎಂದು ಹೇಳಿಲ್ಲ. ಮಾತ್ರವಲ್ಲ ತನಗೆ ವಿದೇಶದಲ್ಲಿ, ಅದರಲ್ಲೂ ಅಮೆರಿಕದಲ್ಲಿ, ಆಗಿರುವ ಅವಮಾನದ ಬಗ್ಗೆ ಮಾತನಾಡಿದ್ದಾನೆ. ಅಷ್ಟೇ ಅಲ್ಲ ಖಾನ್ ಎಂಬ ಹೆಸರನ್ನು ಹೊತ್ತಿರುವ ಮುಸಲ್ಮಾನನಾದ ತನ್ನ ದೃಷ್ಟಿಯಲ್ಲಿ ಧರ್ಮ ಎಂದರೆ ಏನು ಎಂಬುದನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾನೆ. ಸೌಹಾರ್ದ ಮತ್ತು ಸಹಿಷ್ಣು ಬದುಕಿಗೆ ಒತ್ತು ಕೊಟ್ಟಿದ್ದಾನೆ.

ಈ ಲೇಖನ ಪ್ರಕಟವಾಗುತ್ತಿದ್ದಂತೆ ಪಕ್ಕದ ಪಾಕಿಸ್ತಾನದ ಸಚಿವನೊಬ್ಬ "ಶಾರುಖ್ ಖಾನ್‌ಗೆ ಭಾರತದಲ್ಲಿ ರಕ್ಷಣೆ ಇಲ್ಲದಿದ್ದರೆ ಆತ ನಮ್ಮ ದೇಶಕ್ಕೆ ಬಂದು ನೆಲೆಸಬಹುದು" ಎಂಬ ಹೇಳಿಕೆ ನೀಡಿದ್ದಾನೆ. ಜೊತೆಗೆ ಲಷ್ಕರ್ ತೋಯ್ಬಾ ಎಂಬ ಭಯೋತ್ಪಾದಕರ ಸಂಘಟನೆಯ ಮುಖ್ಯಸ್ಥನಾದ ಹಫೀಜ್ ಸಯದ್ ಎಂಬಾತ ಕೂಡ ಇಂತಹದ್ದೇ ಮಾತನಾಡಿದ್ದಾನೆ.

ಶಾರುಖ್ ಖಾನ್ ಬರೆದಿರುವ ಲೇಖನವನ್ನು ಓದದಿರುವ, ಆದರೆ ಪಾಕಿಸ್ತಾನದ ಇವರಿಬ್ಬರ ಹೇಳಿಕೆಗಳನ್ನು ಮಾತ್ರ ಓದಿರುವ ಜನರ ಮನಸ್ಸಿನಲ್ಲಿ ಶಾರುಖ್ ಖಾನ್ ಎಂತಹದ್ದೋ ಅಪಾಯಕಾರಿ ಲೇಖನವನ್ನು ಬರೆದಿರಬೇಕು ಎಂಬ ಸಂಶಯ ಮೂಡುತ್ತದೆ. ಅಂತಹದ್ದೇನನ್ನೂ ಶಾರುಖ್ ಖಾನ್ ಮಾಡಿಲ್ಲ. ನಮ್ಮ ಓದುಗರಿಗಾಗಿ ಶಾರುಖ್ ಖಾನ್ ಅವರ ಲೇಖನದ ಅನುವಾದವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಕಮಲ್ ಹಾಸನ್ ಎಂಬ ಪ್ರತಿಭಾವಂತ ಮಾಡಿಕೊಂಡಿರುವ ಎಡವಟ್ಟು ಮತ್ತು ಶಾರುಖ್ ಖಾನ್ ಎಂಬ ಸಾಮಾನ್ಯನ ಸೂಕ್ಷ್ಮತೆ... ಇವರಿಬ್ಬರ ನಡುವೆ ಇರುವ 'ಮೂಲಭೂತ' ವ್ಯತ್ಯಾಸವನ್ನು ಈ ಸಂಚಿಕೆಯಲ್ಲಿರುವ ಎರಡೂ ಲೇಖನಗಳು ತೋರುತ್ತದೆ ಎಂಬ ನಂಬಿಕೆ ನನ್ನದು. ■





ನಾನೊಬ್ಬ ಖಾನ್...

ನಾನೊಬ್ಬ ನಟ. ನನ್ನ ದಿನಗಳಿಗೆ ಚೌಕಟ್ಟನ್ನು ದು ಪ್ರತಿಮೆಗಳೇ ಹೊರತು ಸಮಯವಲ್ಲ. ಗಳೇ ನನ್ನ ಬದುಕಿನ ಆಕಾರಗಳಾಗಿವೆ. ನನ್ನ ಅನುಭವದ ಮುಖ್ಯ ಕ್ಷಣಗಳು ಮತ್ತು ನೆನಪುಗಳು ಬಿಂಬವನ್ನು ನನ್ನ ಮನಸ್ಸಿನ ಮೇಲೆ ಕ್ಷಣದಲ್ಲಿ ದ ಚಿತ್ರದಂತೆ ಮೂಡಿರುತ್ತವೆ ಮತ್ತು ಅವನ್ನು ಅಭಿವ್ಯಕ್ತಿಸುತ್ತೇನೆ. ನನ್ನ ಕಲೆಯ ಸಾರವೇ ನಾವು ವ ಪ್ರತಿಮೆಗಳು ಅವುಗಳನ್ನು ನೋಡುತ್ತಿರುವವರ ಗಳೊಂದಿಗೆ ಸ್ಪಂದಿಸುವಂತೆ ಮಾಡುವುದೇ ಆಗಿದೆ. ನಾನೊಬ್ಬ ಖಾನ್.

ಖಾನ್ ಎಂಬ ಹೆಸರೇ ನನ್ನ ಮನಸ್ಸಿನಲ್ಲೂ ಹಲವಾರು ಗಳನ್ನು ಹುಟ್ಟುಹಾಕುತ್ತದೆ: ಕುದುರೆಸವಾರಿ ತ್ತಿರುವ ಕಟ್ಟುಮಸ್ತಾದ ಪುರುಷ, ಆತನ ತಲೆ ಮೇಲೆ ಗಿ ಕಟ್ಟಿರುವ ಪೇಟದ ಅಡಿಯಿಂದ ನಿರ್ಲಕ್ಷದಿಂದ ವ ಕೂದಲು, ಅವನ ದೃಢವಾದ ಸುಂದರ ಮುಖದ ಮೂಡಿರುವ ಕಪ್ಪನಪ್ಪದ ಗೆರೆಗಳು, ಜೊತೆಗೆ ದೊಡ್ಡದಾದ ಮೂಗು...

ಮು ಈಗ ರೂಢಮಾದರಿಯಾಗಿರುವ ಉಗ್ರವಾದಿಯ : ನೃತ್ಯ ಮಾಡದ, ಮದ್ಯ ಕುಡಿಯದ, ತುಟಿಯಂಚಿ ಸಿಗರೇಟು ಜೋತಾಡದ, ಬಹುವಿವಾಹಿಯಾದ, ದನ್ನೂ ನಿಂದಿಸದ ಮನುಷ್ಯನ ಪ್ರತಿಮೆ. ತನ್ನ ಆಳದಲ್ಲಿ ಉತ್ತಿರುವ ಕೋಪವನ್ನೂ ಮುಚ್ಚಿಕೊಂಡಿರುವ ಬೆಳ್ಳಗಿನ ಮುಖ. ದೇವರ ಹೆಸರಿನಲ್ಲಿ ತನ್ನನ್ನೇ ಕೊಳ್ಳುವಂತಹ ಎಳೆಯನ್ನು ಹೊಂದಿರುವ ಮನುಷ್ಯ. ದರ ಜೊತೆಗೆ ಇನ್ನೊಂದು ಪ್ರತಿಮೆಯೂ ಇದೆ. ಕದ ಓರ್ವ ಮಾಜಿ ಅಧ್ಯಕ್ಷನ ಹೆಸರಿಟ್ಟಿರುವ ಒಂದು ವಿಮಾನ ನಿಲ್ದಾಣದ ಹಿಂಬದಿಯ ಕೋಣೆಗೆ ದೂಡಿದ ಪ್ರತಿಮೆ. (ಸದ್ಯ ಆ ಅಧ್ಯಕ್ಷನನ್ನು ವನು ಲೀ * ಎಂಬಾತ. ಆತ ಮುಸಲ್ಮಾನನಾಗಿ ಅಥವಾ ಹಲವರು ತಪ್ಪಾಗಿ ಊಹಿಸುವಂತೆ ಚೀನೀ ದವನೂ ಆಗಿರಲಿಲ್ಲ. ನನ್ನನ್ನು ಆ ಕೋಣೆಗೆ ತ್ತಿರುವ ದೃಶ್ಯವನ್ನು ನಾನು ನನ್ನ ಮನಸ್ಸಿನಿಂದ ಬಂದ ಹೊರಹಾಕುತ್ತೇನೆ.)

ದಿಷ್ಟು ಬಟ್ಟೆ ಕಳಚುವಿಕೆ, ಒಂದಿಷ್ಟು ದೈಹಿಕ ಮತ್ತು ಹಲವಾರು ಪ್ರಶ್ನೆಗಳ ನಂತರ ನನಗೆ ರೀತಿಯ ಸ್ಪಷ್ಟೀಕರಣವನ್ನು ನೀಡಲಾಯಿತು. "ನಮ್ಮ ಟರ್ ಸಿಸ್ಟಮ್‌ಗಳಲ್ಲಿ ನಿಮ್ಮ ಹೆಸರು ಇತ್ತು ವಿ ಸಾರಿ", "ಸೋ ಆಪ್ ಐ"? ಎಂದು ಹೇಳುತ್ತಾ ಮನಸ್ಸಿನಲ್ಲೇ "ಈಗ ನನ್ನ ಒಳ ಉಡುಪುಗಳನ್ನು ಕೊಡುತ್ತೀರಾ ಪ್ಲೀಸ್" ಎಂದುಕೊಳ್ಳುತ್ತೇನೆ. ಅದೇ ಹೊತ್ತಿಗೆ ನಾನು ಸದಾ ಕಾಣುವ ಇನ್ನೊಂದು ಪ್ರತಿಮೆ ನನ್ನನ್ನು ಆವರಿಸುತ್ತದೆ. ನನ್ನ ದೇಶದಲ್ಲಿ ನಾನೊಬ್ಬ ಸೂಪರ್‌ಸ್ಟಾರ್ ಎಂದು ಜನ ನನ್ನನ್ನು ಆರಾಧಿಸುವುದು, ಪ್ರೀತಿಸುವುದು, ಮುತ್ತಿಗೆ ಹಾಕುವುದು, ವೈಭವೀಕರಿಸುವುದು...

ನಾನೊಬ್ಬ ಖಾನ್.

ಹಲವು ಪ್ರತಿಮೆಗಳೊಂದಿಗೆ ನನಗೆ ಹೋಲಿಕೆ ಇದೆ ಎಂದು ಭಾವಿಸುತ್ತೇನೆ. ನಾನು ದಷ್ಟಪುಷ್ಟವಾದ ಆರು ಅಡಿ ಎತ್ತರದ ಮನುಷ್ಯ... ಒಂದು ಮೂರು ಇಂಚು ಕಳೆದರೆ! ಆದರೆ ಕುದುರೆಸವಾರಿ ಬಗ್ಗೆ ನನಗೆ ಗೊತ್ತೇ ಇಲ್ಲ. ಒಮ್ಮೆ ಕುದುರೆಯೊಂದು ಅಸಹಾಯಕನಾಗಿ ಜೋಲಾಡುತ್ತಿದ್ದ ನನ್ನನ್ನು ಹೊತ್ತುಕೊಂಡು ಓಡಿಹೋಗಿತ್ತು, ಅವತ್ತಿನಿಂದ ನನ್ನ ಎಲ್ಲ ಕಾಂಟ್ರಾಕ್ಟುಗಳಲ್ಲಿ "ಕುದುರೆ ಸವಾರಿ ಇರುವುದಿಲ್ಲ" ಎಂಬ ಅಂಶವನ್ನು ತಪ್ಪದೇ ಸೇರಿಸುತ್ತೇನೆ.

ನನ್ನ ಇಬ್ಬರು ಮಕ್ಕಳು ನನ್ನ ಎರಡು ಕಿವಿಗಳ ನಡುವೆ ನನಗೆ ಹೆಚ್ಚಾಗಿ ಸ್ನಾಯುಗಳಿವೆ ಎಂದು ಹೇಳುತ್ತಿರುತ್ತಾರೆ. ಹಿಂದೊಮ್ಮೆ ನಾನು ಬೆಳ್ಳಗಿದ್ದೆ ಆದರೀಗ ಕಂದು ಬಣ್ಣಕ್ಕೆ ತಿರುಗಿದ್ದೇನೆ. ಆದರೆ ಈಗಲೂ ನನ್ನ ಕಂಕುಳುಗಳ ಸಿಕ್ಕಿನಲ್ಲಿ ನಾನು ಬೆಳ್ಳಗಿದ್ದ ದಿನಗಳ ಚಹರೆಗಳಿವೆ. ಸರಿಯಾದ ಲೈಟ್‌ಗಳ ಅಡಿ ನಾನು ಚೆಂದವಾಗಿ ಕಾಣಿಸುತ್ತೇನೆ ಮತ್ತು ಸ್ವಲ್ಪ ದೊಡ್ಡದಾದ ಮೂಗೂ ನನಗಿದೆ. ನನ್ನ ಸಿನಿಮಾಗಳಲ್ಲಿ ನಾನು ಸೂಪರ್‌ಸ್ಟಾರ್ ರೀತಿ ಎಂಟ್ರಿ ಕೊಡುವ ಮುನ್ನವೇ ನನ್ನ ಮೂಗು ಬಾಗಿಲಿನ ಹಿಂದಿನಿಂದ ಆ ದೃಶ್ಯವನ್ನು ಪ್ರವೇಶಿಸಿರುತ್ತದೆ. ಈ ನನ್ನ ಮೂಗಿನ ಹೊರತಾಗಿ ನನ್ನ ಹೆಸರಿನ ಬಗ್ಗೆ ನಾನು ಚಿಂತಿಸುವುದು ಸಂದರ್ಭೋಚಿತವಾಗಿ ಮಾತ್ರ.

ಸ್ಟೀರಿಯೋಟೈಪ್ ಮಾಡುವುದು ಮತ್ತು ಸಂದರ್ಭೋಚಿತವಾಗಿಸುವುದು ನಾವು ಜೀವಿಸುತ್ತಿರುವ ಜಗತ್ತಿನ ಕ್ರಮವೇ ಆಗಿಬಿಟ್ಟಿದೆ. ಯಾವುದನ್ನೇ ಆಗಲಿ ಅದನ್ನು ವಿಷದೀಕರಿಸುವುದು ಭದ್ರತೆಯ ಭಾಗವಾಗಿಬಿಟ್ಟಿದೆ. ಕನಿಷ್ಠ ಮಾಹಿತಿ ಮತ್ತು ಸರಳ ಲಕ್ಷಣಗಳನ್ನು ಆಧರಿಸಿ ವಸ್ತುಗಳನ್ನು, ಜನರನ್ನು, ದೃಶ್ಯಗಳನ್ನೂ ವಿಷದೀಕರಿಸುವುದರಲ್ಲಿ ಒಂದು ರೀತಿಯ ನೆಮ್ಮದಿಯನ್ನು ಪಡೆಯುತ್ತೇವೆ. ಹೀಗೆ ಮಾಡುವ ಮೂಲಕ ಸಿಗುವ ಸಿದ್ಧ ಮಾದರಿಗಳಿಂದಾಗಿ ನಾವು ನಮ್ಮ ಇತಿಮಿತಿಗಳಲ್ಲೇ ಸುರಕ್ಷರಾಗಿದ್ದೇವೆ ಎಂದು ಭ್ರಮಿಸುತ್ತೇವೆ.

ನಾವು ನಮ್ಮದೇ ಆದ ಪ್ರತಿಮೆಗಳ ಚಿಕ್ಕ ಡಬ್ಬಿಗಳನ್ನು ಸೃಷ್ಟಿಸಿಕೊಳ್ಳುತ್ತೇವೆ. ಅಂತಹ ಒಂದು ಡಬ್ಬದ ಬಾಗಿಲನ್ನು ಈಗ ಭದ್ರವಾಗಿ ಮುಚ್ಚಲಾಗುತ್ತಿದೆ. ಆ ಡಬ್ಬದ ಒಳಗೆ ನನ್ನ ಧರ್ಮದ ಬಗ್ಗೆ ಜನರ ಮನಸ್ಸಿನಲ್ಲಿರುವ ಪ್ರತಿಮೆಗಳಿವೆ. ನನ್ನ ದೇಶದ ಅಲ್ಪಸಂಖ್ಯಾತ ಮುಸಲ್ಮಾನ ಸಮುದಾಯದ ಬಗ್ಗೆ ಮೃದುವಾದ ನಿಲುವನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಆ ಡಬ್ಬದೊಳಗಿನ ಪ್ರತಿಮೆ ನನ್ನ ಎದುರು ನಿಲ್ಲುತ್ತದೆ. ಯಾಕೆಂದರೆ ಇಸ್ಲಾಮ್ ಹೆಸರಲ್ಲಿ ಹಿಂಸಾ ಕೃತ್ಯಗಳು ನಡೆದಾಗಲೆಲ್ಲ ನಾನು ಮುಸಲ್ಮಾನನಾಗಿರುವ ಏಕೈಕ ಕಾರಣಕ್ಕೆ ನಾನು ಆ ಸಂವೇದನಾರಹಿತ ಕೃತ್ಯವನ್ನು ಖಂಡಿಸುವಂತೆ ನನ್ನ ಅಭಿಪ್ರಾಯವನ್ನು ಕೇಳಲಾಗುತ್ತದೆ. ಭಯೋತ್ಪಾದಕ ಕೃತ್ಯಗಳನ್ನು ಎಸಗುವವರು ಮತ್ತು ಇತರೆ ಮುಸಲ್ಮಾನರು ತಮ್ಮ ಧರ್ಮವನ್ನು ಬೇರೆಬೇರೆ ರೀತಿಯಲ್ಲಿ ಅರ್ಥೈಸಿದ್ದರೂ ನಮ್ಮನ್ನೆಲ್ಲ ಬೇರೆಯವರು ಒಂದೇ ತಕ್ಕಡಿಯಲ್ಲಿ ಇಟ್ಟು ತೂಗದಂತೆ ಎಚ್ಚರಿಕೆ ವಹಿಸಲು ನನ್ನ ಧರ್ಮೀಯರ ಪ್ರತಿನಿಧಿಯಾಗಿ ನನ್ನ ಅಭಿಪ್ರಾಯವನ್ನು ಕೇಳಲಾಗುತ್ತದೆ.

ಹಲವು ರಾಜಕೀಯ ನಾಯಕರು ಭಾರತೀಯ ಮುಸಲ್ಮಾನರ ತಪ್ಪು ಒಪ್ಪುಗಳಿಗೆ ಮತ್ತು ಅವರ ದೇಶ ನಿಷ್ಠತೆಗೆ ನನ್ನನ್ನೇ ಸಂಕೇತವಾಗಿಸಿಕೊಂಡಿದ್ದೂ ಇದೆ. ನಾನು ನನ್ನ ದೇಶಕ್ಕೆ ನಿಷ್ಠನಾಗಿರದೆ ನೆರೆಯ ದೇಶಕ್ಕೆ ನಿಷ್ಠನಾಗಿದ್ದೇನೆ ಎಂದೂ ಅವರು ಆರೋಪಿಸಿದ್ದಾರೆ. ನಾನು ಭಾರತೀಯನಾಗಿದ್ದು ನನ್ನ ತಂದೆ ನನ್ನ ಭಾರತ ದೇಶದ ಸ್ವಾತಂತ್ರಕ್ಕೆ ಹೋರಾಡಿದ್ದರೂ ಅಂತಹ ನಾಯಕರು ನನ್ನ ಮನೆಗೆ ಮುತ್ತಿಗೆ ಹಾಕಿ ನಾನು ನನ್ನ ದೇಶವನ್ನು ತೊರೆದು ನನ್ನ 'ಅಸಲಿ ಸ್ವದೇಶಕ್ಕೆ' ಹಿಂದಿರುಗಬೇಕು ಎಂದೂ ಒತ್ತಾಯಿಸಿದ್ದಾರೆ. ಆಗ ನಾನು ಅವರ ಬೇಡಿಕೆಯನ್ನು ನಯವಾಗಿಯೇ ತಿರಸ್ಕರಿಸಿದ್ದೇನೆ. ನನ್ನ ಮನೆಯ ನಲ್ಲಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದೂ, ಅಷ್ಟು ದೂರ ಪ್ರಯಾಣಿಸುವ ಮುನ್ನ ನಾನು ಸ್ನಾನ ಮಾಡಬೇಕಿದೆ ಎಂದೂ ನಾನು ಅವರಿಗೆ ಕೆಲವೊಮ್ಮೆ ಹೇಳಿದ್ದೇನೆ. ಈ ನನ್ನ ನೆಪ ಇನ್ನೆಷ್ಟು ದಿನ ಬಳಕೆಗೆ ಬರುತ್ತದೋ ಗೊತ್ತಿಲ್ಲ!

ನಾನು ನನ್ನ ಮಗನಿಗೆ ಆರ್ಯನ್ ಎಂದೂ, ಮಗಳಿಗೆ ಸುಹಾನಾ ಎಂದೂ ಹೆಸರಿಟ್ಟಿದ್ದೇನೆ. ಇವೆರಡೂ ಭಾರತಕ್ಕಾಗಲಿ, ಒಂದು ಧರ್ಮಕ್ಕಾಗಲಿ ಸೀಮಿತವಾಗಿಲ್ಲದ ಹೆಸರುಗಳು. ಖಾನ್ ಎಂಬ ಹೆಸರು ನನ್ನಿಂದ ಅವರಿಗೆ ಸಿಕ್ಕಿರುವುದರಿಂದ ಅದರಿಂದ ಅವರು ತಪ್ಪಿಸಿಕೊಳ್ಳಲಾಗುವುದಿಲ್ಲ. ಮುಸಲ್ಮಾನರು ಅವರ ಹೆಸರುಗಳನ್ನು ಕೇಳಿದಾಗ ನಾನು ನನ್ನ ಕಿರುನಾಲಗೆಯನ್ನು ಉಪಯೋಗಿಸಿ ಅವರ ಹೆಸರನ್ನು ಹೇಳುತ್ತೇನೆ, ಹಾಗೆಯೇ ಮುಸಲ್ಮಾನೇತರರು ಕೇಳಿದಾಗ ಆರ್ಯನ್ ಎಂಬ ಹೆಸರನ್ನು ಮುಂದೆ ಮಾಡುತ್ತೇನೆ.

ಭವಿಷ್ಯದಲ್ಲಿ ಗೊತ್ತುಗುರಿಯಿಲ್ಲದ ಫತ್ವಾಗಳು ಮತ್ತು ಅನಧಿಕೃತ ಒಕ್ಕಲೆಬ್ಬಿಸುವಿಕೆಯಿಂದ ನನ್ನ ಮಕ್ಕಳ ಹೆಸರುಗಳು ಅವರನ್ನು ರಕ್ಷಿಸುತ್ತದೆ ಎಂಬ ಕಲ್ಪನೆ ನನ್ನದು. ಜೊತೆಗೆ ನನ್ನ ಮಕ್ಕಳನ್ನು ಸಂಪೂರ್ಣವಾಗಿ ಗೊಂದಲದ ಸ್ಥಿತಿಯಲ್ಲಿಡುವ ಉದ್ದೇಶವೂ ನನ್ನದು. ಅವರಿಬ್ಬರು ಹಲವೊಮ್ಮೆ ತಾವು ಯಾವ ಧರ್ಮಕ್ಕೆ ಸೇರಿದವರು ಎಂದು ಕೇಳುತ್ತಾರೆ. ಆಗೆಲ್ಲ ನಾನು ಹಿಂದಿ ಸಿನಿಮಾದ ಒಳ್ಳೆಯ ಹೀರೋ ತರಹ ನನ್ನ ಕಣ್ಣುಗಳನ್ನು ಮೇಲಕ್ಕೆ ಹೊರಳಿಸುತ್ತಾ "ನೀವು ಭಾರತೀಯರು ಮತ್ತು ನಿಮ್ಮ ಧರ್ಮ ಮಾನವೀಯತೆ" ಎಂಬಂತಹ ತತ್ವಜ್ಞಾನಿಯ ಉತ್ತರ ಕೊಡುತ್ತೇನೆ ಅಥವಾ "ತು ಹಿಂದೂ ಬನೇಗಾ ನಾ ಮುಸಲ್ಮಾನ್ ಬನೇಗಾ... ಇನ್‌ಸಾನ್ ಕಿ ಔಲಾದ್ ಹೈ ಔಲದ್ ಬನೇಗಾ" ಎಂಬ ಹಳೆ ಹಿಂದಿ ಹಾಡನ್ನು ಹಾಡುತ್ತೇನೆ. ಆದರೆ ಗಂಗ್ನಾಮ್ ಹಾಡಿನ ಶೈಲಿಯಲ್ಲಿ.

ಇದೆಲ್ಲದರಿಂದ ಅವರಿಬ್ಬರಿಗೆ ಯಾವ ಸ್ಪಷ್ಟತೆಯೂ ಸಿಗದೆ, ಅವರು ಇನ್ನಷ್ಟು ಗೊಂದಲಕ್ಕೀಡಾಗಿ ತಮ್ಮ ತಂದೆಯ ಬಗ್ಗೆ ಜಾಗರೂಕತೆಯಿಂದಿರುವಂತೆ ಮಾಡಿದೆ.


ಸ್ವತಂತ್ರರ ನಾಡಿಗೆ ನನ್ನನ್ನು ಹಲವಾರು ಬಾರಿ ಆಹ್ವಾನಿಸಲಾಗಿದೆಯಲ್ಲದೆ ಅಲ್ಲಿ ನನಗೆ ಹಲವಾರು ಬಾರಿ ಸನ್ಮಾನವನ್ನೂ ಮಾಡಲಾಗಿದೆ. ಆದರೆ ಆ ದೇಶದಲ್ಲಿ ನನ್ನನ್ನು ಸಂದರ್ಭೋಚಿತವಾಗಿ ನೋಡಿದ್ದರ ಪರಿಣಾಮ ನನ್ನನ್ನು ಹಲವಾರು ಬಾರಿ ವಿಮಾನ ನಿಲ್ದಾಣದಲ್ಲಿ ತಡೆಹಿಡಿಯಲಾಗಿದೆ.

ಕಾಕತಾಳೀಯವಾಗಿ ನನ್ನಂತೆ ಖಾನ್ ಎಂಬ ಕೊನೆ ಹೆಸರನ್ನು ಹೊಂದಿರುವ ತಲೆಕೆಟ್ಟ ಭಯೋತ್ಪಾದಕನೊಂದಿಗೆ ನನ್ನನ್ನು ಸಮೀಕರಿಸಿದ್ದು ನನ್ನಲ್ಲೆಷ್ಟು ರೇಜಿಗೆ ಹುಟ್ಟಿಸಿತೆಂದರೆ ನಾನು 'ಮೈ ನೇಮ್ ಇಸ್ ಖಾನ್ (ಆದರೆ ನಾನು ಭಯೋತ್ಪಾದಕನಲ್ಲ)' ಎಂಬ ಸಿನಿಮಾವನ್ನು ನಿರ್ಮಿಸಿದೆ. ಆದರೆ ವಿಪರ್ಯಾಸ ನೋಡಿ, ಆ ಸಿನಿಮಾವನ್ನು ಅಮೆರಿಕದಲ್ಲಿ ಪ್ರದರ್ಶಿಸಲು ನಾನು ಹೋಗಿದ್ದಾಗ ನನ್ನನ್ನು ವಿಮಾನ ನಿಲ್ದಾಣದಲ್ಲಿ ಹಲವು ಗಂಟೆಗಳ ಕಾಲ ತಡೆಹಿಡಿಯಲಾಯಿತು. ಅಂದಹಾಗೆ, (ಟಿಮೋತಿ) ಮಕ್‌ವೈ ** ಎಂಬ ಕೊನೆ ಹೆಸರನ್ನು ಹೊಂದಿರುವವರಿಗೂ ಅಮೆರಿಕದಲ್ಲಿ ನನಗೆ ಆದದ್ದೇ ಆಗುತ್ತದೆಯೇ ಎಂದು ಹಲವೊಮ್ಮೆ ಯೋಚಿಸಿದ್ದೇನೆ.

ಯಾರ ಮನಸ್ಸನ್ನೂ ನೋಯಿಸುವ ಉದ್ದೇಶ ನನಗಿಲ್ಲ. ಆದರೆ ಸತ್ಯ ಹೇಳಬೇಕೆಂದರೆ ಮನುಷ್ಯರ ಪ್ರಾಣವನ್ನು ಬಲಿ ತೆಗೆದುಕೊಳ್ಳುವ ಉಗ್ರ ಮನಸ್ಥಿತಿಯವನು ತನ್ನ ಮನಸ್ಸಿನ ಆದೇಶಗಳನ್ನೇ ಪಾಲಿಸುತ್ತಾನೆ. ಆತನ ಮನಸ್ಥಿತಿಗೂ ಯಾವುದೇ ಒಂದು ಹೆಸರಿಗೂ, ಜಾಗಕ್ಕೂ, ಧರ್ಮಕ್ಕೂ ಸಂಬಂಧವೇ ಇರುವುದಿಲ್ಲ. ಅಂತಹ ಮನಸ್ಥಿತಿಗೆ ತನ್ನದೇ ಆದ ಆಚಾರ, ತಪ್ಪು ಮತ್ತು ಸರಿಗಳನ್ನು ನಿರ್ಧರಿಸುವ ಭೇದ ಭಾವ ಮತ್ತು ತನ್ನದೇ ಆದ ಸಿದ್ಧಾಂತವೂ ಇರುತ್ತದೆ. ಮಾತ್ರವಲ್ಲ ಅದಕ್ಕೆ ತನ್ನದೇ ಆದ 'ಧರ್ಮ'ವೂ ಇರುತ್ತದೆ. ಆದರೆ ಸಹಸ್ರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ಮತ್ತು ಮಸೀದಿ ಹಾಗು ಚರ್ಚ್‌ಗಳಲ್ಲಿ ಬೋಧಿಸಲಾಗುತ್ತಿರುವ ಧರ್ಮಗಳಿಗೂ ಆತನ 'ಧರ್ಮ'ಕ್ಕೂ ಯಾವುದೇ

>>>5

ಪದ್ಮನಾಭನಗರದಲ್ಲಿ ಪೊಲೀಸ್ ರಾಜ್ಯ




ಯಾರೋ ಧಿಕ್ಕಾರ ಕೂಗಿದನೆಂದು ನುಗ್ಗಿ ಆತನನ್ನು ಝಾಡಿಸಿ ಒದೆಯುವುದು, ನೆರೆದ ನೂರಾರು ಜನರಿಗೆ ಅಮ್ಮನ್, ಅಕ್ಕನ್ ಮತ್ತು ಅದಕ್ಕೂ ಅಸಹ್ಯವಾಗಿ ಬಯ್ಯುವುದನ್ನು ಯಾರೋ ರೌಡಿಯೊಬ್ಬ ಮಾತಾಡಿದನೆಂದರೆ ಜನ ನಂಬಬಹುದು. ರಾಜ್ಯದ ಗೃಹಮಂತ್ರಿ, ಅದರಲ್ಲೂ ಉಪಮುಖ್ಯಮಂತ್ರಿ ಓರ್ವ ರೌಡಿಗಿಂತಲೂ ಅಸಹ್ಯವಾಗಿ ವರ್ತಿಸುತ್ತಾನೆಂಬುದು ಪದ್ಮನಾಭನಗರದಲ್ಲಿ ಸಾಬೀತಾಗಿದೆ.

ಮೊನ್ನೆ ಜನವರಿ 6 ರಂದು ಉಪಮುಖ್ಯಮಂತ್ರಿ ಅಶೋಕರ ಪದ್ಮನಾಭನಗರದಲ್ಲಿ ಅಯ್ಯಪ್ಪ ಪೂಜೆಗೆಂದು ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ನೂರಕ್ಕೂ ಅಧಿಕ ಪೊಲೀಸರ ಪಡೆ ಕಟ್ಟಿಕೊಂಡು ಅಶೋಕ್ ನಡೆಸಿದ ಗೂಂಡಾಗಿರಿಗೆ ಸಿಲುಕಿ ಓರ್ವನ ಕಾಲು ಮುರಿದು ಆಸ್ಪತ್ರೆಗೆ ದಾಖಲಾಗಿದ್ದಾಗಲಿ, ಪೊಲೀಸರ ಲಾಠಿ ಏಟಿಗೆ ಸಿಲುಕಿ ಅರ್ಧ ಡಜನ್ ಕಾಂಗ್ರೆಸ್ ಕಾರ್ಯಕರ್ತರು ಗಾಯಗೊಂಡಿದ್ದಾಗಲಿ ಎಲ್ಲೂ ಸುದ್ದಿಯಾಗದ ಹಾಗೆ ಮಾಡಿದ್ದು ಕೂಡ ಅಶೋಕ್ ಕೈಚಳಕಕ್ಕೆ ಸಾಕ್ಷಿಯಂತಿದೆ!

ಅಶೋಕ್ ಪ್ರತಿನಿಧಿಸುವ ಪದ್ಮನಾಭನಗರದ ಎಂಟು ಬಿಬಿಎಂಪಿ ವಾರ್ಡುಗಳ ಪೈಕಿ ಚಿಕ್ಕಲ್ಲಸಂದ್ರದ 183ನೇ ವಾರ್ಡಿನ ಬಿಜೆಪಿ ಕೌನ್ಸಿಲರ್ ಆಗಿರುವವನು ಅಶೋಕ್ ಚೇಲಾ ವೆಂಕಟಸ್ವಾಮಿ ನಾಯ್ಡು. ಇಲ್ಲಿನ ಇಟ್ಟಮಡು ಪಕ್ಕದ ಕಾಕತೀಯನಗರವೆಂಬ ಬಡಾವಣೆಯಲ್ಲಿ ಪ್ರತಿ ವರ್ಷ ಅಯ್ಯಪ್ಪಸ್ವಾಮಿಯ ಚಪ್ಪರ ಹಾಕಿ ಸಾವಿರಾರು ಭಕ್ತಾದಿಗಳಿಗೆ ಅನ್ನದಾನ ಮಾಡಲಾಗುತ್ತದೆ. ಅಶೋಕ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಗುರಪ್ಪನಾಯ್ಡು ಆ ಕಾಲದಿಂದಲೂ ಅಯ್ಯಪ್ಪ ಅನ್ನದಾನಕ್ಕೆ ಮುಖ್ಯ ಪ್ರಾಯೋಜಕರಾದ್ದರಿಂದ ಹೆಚ್ಚುಕಮ್ಮಿ ಇದು ಕಾಂಗ್ರೆಸ್ ಕಾರ್ಯಕ್ರಮವಾಗೇ ನಡೆದುಬಂದಿತ್ತು.

ಕಾಂಗ್ರೆಸ್ ಕಾರ್ಯಕರ್ತರ ಹಿಡಿತದಿಂದ ಈ ಕಾರ್ಯಕ್ರಮವನ್ನು ಕಿತ್ತುಕೊಂಡರೆ ಮುಂಬರುವ ಚುನಾವಣೆಯಲ್ಲಿ ಲಾಭವಾಗುತ್ತದೆ ಎಂದು ಅದ್ಯಾವ ಚಾಣಾಕ್ಷ ಅಶೋಕ್ ತಲೆಗೆ ಹುಳ ಬಿಟ್ಟನೋ!

ಕೌನ್ಸಿಲರ್ ವೆಂ.ಸ್ವಾ. ನಾಯ್ಡುವನ್ನು ಛೂಬಿಟ್ಟವನೇ ಅಯ್ಯಪ್ಪ ಉತ್ಸವವನ್ನು ಆಕ್ರಮಿಸುವಂತೆ ಆದೇಶಿಸಿದ್ದಾನೆ.




ಆಸ್ಪತ್ರೆಯಲ್ಲಿ ಇಟ್ಟಮಡು ಸುರೇಶ್

ಇದನ್ನು ಮೊದಲೇ ಲೆಕ್ಕ ಹಾಕಿ ಅಯ್ಯಪ್ಪ ಸ್ವಾಮಿ ಭಕ್ತಮಂಡಳಿಯ ಮುಖ್ಯಸ್ಥ ವೆಂಕಟೇಶ್ ಕಟ್ಟಿಸುತ್ತಿದ್ದ ಮನೆ ಮೇಲೆ ಪಾಲಿಕೆ ಅಧಿಕಾರಿಗಳನ್ನು ಛೂಬಿಟ್ಟದ್ದೂ ಅಲ್ಲದೆ ಆತನಿಗೆ ಲಕ್ಷಗಟ್ಟಲೆ ಬಿಬಿಎಂಪಿಯ ಗ್ರಿಲ್ ಗುತ್ತಿಗೆಯನ್ನೂ ಕೊಟ್ಟು ಬಿಜೆಪಿ ಪಟಾಲಮ್ಮಿಗೆ ಸೆಳೆಯಲಾಯ್ತು. ಇದ್ಯಾವುದರ ಪರಿವೆಯಿಲ್ಲದ ಕಾಂಗ್ರೆಸ್ ನಾಯಕ ಗುರಪ್ಪನಾಯ್ಡು ಮಾಮೂಲಿನಂತೆ ಈ ವರ್ಷವೂ ಅನ್ನದಾನಕ್ಕೆಂದು ದುಡ್ಡು ಕೊಟ್ಟಿದ್ದಾರೆ.

ಆದರೆ ಅನ್ನದಾನಕ್ಕಿನ್ನು ಎರಡು ದಿನ ಬಾಕಿ ಇರುವಂತೆಯೇ ಅಯ್ಯಪ್ಪ ಚಪ್ಪರದ ಸುತ್ತ ಅಶೋಕ್ ಮುಖ, ಕಮಲದ ಚಿಹ್ನೆ ಹೊತ್ತ ಫ್ಲೆಕ್ಸು, ಬ್ಯಾನರುಗಳು ಬಿದ್ದಿವೆ. ಜೊತೆಗೆ ಭಕ್ತಾದಿಗಳೇ ನಿಂತು ಗುರಪ್ಪನಾಯ್ಡು ಮತ್ತು ಕಳೆದ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ. ಪ್ರಮೋದ್‌ಕುಮಾರ್‌ರ ಫೋಟೋ ಹಾಕಿ ಅಯ್ಯಪ್ಪಸ್ವಾಮಿಯ ಚಿತ್ರದ ಸ್ವಾಗತದ ಫ್ಲೆಕ್ಸನ್ನೂ ಹಾಕಿಸಿದ್ದಾರೆ.

ಜನವರಿ 6ರ ಬೆಳಿಗ್ಗೆ ಪೂಜೆಗೆಂದು ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರ ಸಮೇತ ಅಯ್ಯಪ್ಪ ಚಪ್ಪರಕ್ಕೆ ಬಂದ ಪ್ರಮೋದ್‌ಗೆ ಇದ್ದಕ್ಕಿದ್ದಂತೆ ಕೌನ್ಸಿಲರ್ ವೆಂಕಟಸ್ವಾಮಿ ನಾಯ್ಡು ಅಡ್ಡಗಟ್ಟಿದ್ದೇ ವಾಚಾಮಗೋಚರ ಬೈದುಬಿಟ್ಟ. ಇದಾಗಿ ಕೆಲ ನಿಮಿಷಕ್ಕೇ ಸುಬ್ರಹ್ಮಣ್ಯಪುರದ ಇನ್ಸ್‌ಪೆಕ್ಟರ್ ಬಾಳೇಗೌಡರು ಪ್ರಮೋದ್‌ಗೆ ಫೋನ್ ಮಾಡಿ "ನೀವ್ಯಾಕ್ರೀ ಅಲ್ಲಿಗೆ ಬಂದ್ರಿ? ಯಾರ್ರೀ ನಿಮ್ಮನ್ನು ಬರೋಕ್ಕೆ ಹೇಳಿದ್ದು...?" ಎಂದು ಗದರಿದ್ದಾರೆ.


ಇದಾಗಿ ಅರ್ಧ ಗಂಟೆಗೇ ನಾಲ್ಕು ಬಸ್ಸುಗಳ ತುಂಬ ಪೊಲೀಸರು ದಾಳಿಯಿಟ್ಟದ್ದೇ ಕಾಂಗ್ರೆಸ್ ಕಾರ್ಯಕರ್ತರನ್ನು ಸುತ್ತುವರಿದಿದ್ದಾರೆ. ಜೊತೆಗೇ ಚನ್ನಮ್ಮನಕೆರೆ ಅಚ್ಚುಕಟ್ಟು, ಬನಶಂಕರಿ, ಸುಬ್ರಹ್ಮಣ್ಯಪುರ ಮತ್ತು ಕುಮಾರಸ್ವಾಮಿ ಲೇಔಟ್ ಠಾಣೆಗಳ ಇನ್ಸ್‌ಪೆಕ್ಟರುಗಳಲ್ಲದೆ ಎಸಿಪಿ, ಡಿಸಿಪಿ ರೇವಣ್ಣ ಎಲ್ಲರೂ ಸ್ಥಳಕ್ಕಾಗಮಿಸಿ ಒಂದೊಂದು ದಿಕ್ಕನ್ನು ಸುತ್ತುವರಿದಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರ್‍ಯಾರೂ ಅಯ್ಯಪ್ಪ ಚಪ್ಪರಕ್ಕೆ ಹೋಗಲೇಕೊಡದೆಂದು ಪೊಲೀಸರು ಹಾಕಿದ ಧಮಕಿಗೆ ಸಹಜವಾಗೇ ಅಯ್ಯಪ್ಪ ಭಕ್ತರು ಕೆರಳಿದ್ದಾರೆ. ಅಷ್ಟರಲ್ಲೇ ಪೊಲೀಸ್ ತುಕಡಿಯಿದ್ದ ಬಸ್ಸೊಂದನ್ನು ತಂದಿದ್ದೇ ನೆರೆದ ಕಾಂಗ್ರೆಸ್ ಕಾರ್ಯಕರ್ತರೆದುರು ಅಡ್ಡ ನಿಲ್ಲಿಸಲಾಗಿದೆ. ಏಕಾಏಕಿ ನಡೆದ ಪೊಲೀಸ್ ದೌರ್ಜನ್ಯದಿಂದ ಕಂಗಾಲಾದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಯ್ಯಪ್ಪ ಭಕ್ತಾದಿಗಳು ಡಿಸಿಎಂ ಅಶೋಕ್ ಬಂದುಹೋದ ಮೇಲಾದರೂ ಪೂಜೆಗೆ ಕೂತರಾಯ್ತು ಎಂದು ಪಕ್ಕದ ರಸ್ತೆಗೆ ಬಂದಿದ್ದಾರೆ.



ಅಯ್ಯಪ್ಪ ಪೂಜೆಯಲ್ಲಿ ಅಶೋಕ್

ಅಷ್ಟರಲ್ಲೇ ಮೂರ್‍ನಾಲ್ಕು ಕೆಂಪು ದೀಪಗಳ ಕಾರುಗಳ ಬೆಂಗಾವಲಿಂದ ಡಿಸಿಎಂ ಅಶೋಕ್ ಆಗಮನವಾಗಿದೆ. ಅಯ್ಯಪ್ಪ ಪೂಜೆಗೆ ಬಂದಂತೆ ಮಾಡಿ ಚಪ್ಪರದ ಪಕ್ಕದ ಮನೆಯ ರಿಯಲ್ ಎಸ್ಟೇಟ್ ಖದೀಮನೊಬ್ಬನ ಮನೆಗೆ ಹೊಕ್ಕಿದ್ದಾರೆ. ಅಶೋಕ್‌ರ ಪೊಲೀಸ್ ಅಟ್ಟಹಾಸ ಕಂಡೇ ಕಂಗಾಲಾದ ಅಯ್ಯಪ್ಪ ಭಕ್ತರು ಮತ್ತು ಬಡಾವಣೆಯ ನಿವಾಸಿಗಳೆಲ್ಲ ಕಾಂಗ್ರೆಸ್ ಕಾರ್ಯಕರ್ತರ ಜೊತೆ ಸೇರಿ ಪಕ್ಕದ ರಸ್ತೆಯಲ್ಲಿ ಜಮಾಯಿಸಿದ್ದರೆ ಅಶೋಕ್‌ರ ಅಯ್ಯಪ್ಪ ಪೂಜೆಗೆಂದು ಇದ್ದದ್ದು ಐವತ್ತು ಮಂದಿ ಬಿಜೆಪಿ ಕಾರ್ಯಕರ್ತರು ಮಾತ್ರ!

ಅಲ್ಲಿಗೆ ಡಿಸಿಎಂ ಅಟ್ಟಹಾಸದ ವಿರುದ್ಧ ಜನ ತಿರುಗಿ ಬಿದ್ದಿದ್ದಾರೆಂಬುದು ಸಾಬೀತಾಗಿತ್ತು. ಹಾಗೇ ಪೂಜೆಯ ನಾಟಕ ಮುಗಿಸಿದ ಅಶೋಕ್ ಬಂದದಾರಿಗೆ ಸುಂಕವಿಲ್ಲ ಎಂಬಂತೆ ಇನ್ನೇನು ಕಾರು ಹತ್ತಬೇಕೆನ್ನುವಷ್ಟರಲ್ಲಿ ಅಲ್ಲಿಗೆ ಕಾಂಗ್ರೆಸ್ ನಾಯಕ ಗುರಪ್ಪ ನಾಯ್ಡು ಬಂದಿದ್ದಾರೆ. ಅವರನ್ನೂ ಚಪ್ಪರದೆದುರು ಪೊಲೀಸರು ಅಡ್ಡಗಟ್ಟಿದ್ದಾರೆ. ಇದು ಕಾಂಗ್ರೆಸ್ ಕಾರ್ಯಕರ್ತರನ್ನು ಕೆರಳಿಸಿದೆ. ಅವರೆಲ್ಲ ಇದ್ದಕ್ಕಿದ್ದಂತೆ ಚಪ್ಪರದೆದುರು ಗುರಪ್ಪ ನಾಯ್ಡುವನ್ನು ಸುತ್ತುವರೆಯುತ್ತಿದ್ದಂತೆ ಅಶೋಕ್ ಕಾರು ಹಾದುಹೋಗಿದೆ. ನೆರೆದ ಅಯ್ಯಪ್ಪ ಭಕ್ತಾದಿಗಳಿಗೆ ಮೊದಲೇ ಸಿಟ್ಟಿತ್ತಲ್ಲ, ಮಾಲೆ ಧರಿಸಿದ ಭಕ್ತನೊಬ್ಬ ರೊಚ್ಚಿಗೆದ್ದಿದ್ದೇ ಅಶೋಕ್‌ಗೆ ಧಿಕ್ಕಾರ ಕೂಗಿದ್ದಾನೆ.



ಇದು ಅಶೋಕ್ ಕಿವಿಗೆ ಬಿದ್ದಿರಬೇಕು. ವಾಪಸ್ಸಾಗುತ್ತಿದ್ದ ಕಾರನ್ನು ಏಕಾಏಕಿ ನಿಲ್ಲಿಸಿದ್ದೇ ಪೊಲೀಸರ ಲಾಠಿಯ ನೆರಳಲ್ಲಿದ್ದ ಅಯ್ಯಪ್ಪ ಭಕ್ತರತ್ತ ಅಶೋಕ್ ನುಗ್ಗಿಬಂದಿದ್ದಾರೆ. ಪೊಲೀಸರಿದ್ದಾರೆ ಎಂಬುದನ್ನೂ ಲೆಕ್ಕಿಸದೆ ಧಿಕ್ಕಾರ ಕೂಗಿದವನನ್ನು ಝಾಡಿಸಿ ಒದ್ದಿದ್ದಾರೆ. ಡಿಸಿಎಂ ಅಶೋಕ್ ಬಂದಿದ್ದೇ ನಮ್ಮನ್ನೆಲ್ಲ ಸಮಾಧಾನ ಮಾಡಬಹುದು. ಅಹವಾಲು ಕೇಳಬಹುದು ಎಂದು ಭಾವಿಸಿದ್ದ ಜನಕ್ಕೆ ಉಪಮುಖ್ಯಮಂತ್ರಿಯ ಏಕಾಏಕಿ ವರ್ತನೆ ಆಘಾತವೆನಿಸಿದೆ. ಹೀಗೆ ಝಾಡಿಸಿ ಒದ್ದ ಅಶೋಕ್ ಅಷ್ಟಕ್ಕೇ ಸುಮ್ಮನಾಗದೆ "ಲೋಫರ್ ನನ್‌ಮಕ್ಳಾ, ಅಶೋಕ್ ಏನು ನಿಮ್ಮಮ್ಮನ್... ದಿದ್ದನಾ?" ಎಂದು ಕ್ರುದ್ಧ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಯ್ಯಪ್ಪ ಭಕ್ತರನ್ನೇ ಬೈದು ಒದ್ದಿದ್ದಾರೆ.


ಇನ್ನು ಜನ ಕೇಳಬೇಕೆ? ಅಶೋಕ್ ವಿರುದ್ಧ ಮತ್ತೆ ಧಿಕ್ಕಾರ ಹಾಕಿದ್ದಾರೆ. ಸುತ್ತ ನೆರೆದಿದ್ದ ನೂರಕ್ಕೂ ಅಧಿಕ ಪೊಲೀಸರು ಏಕಾಏಕಿ ಲಾಠಿ ಬೀಸಲಾರಂಭಿಸಿದ್ದಾರೆ. ಸಿಕ್ಕಸಿಕ್ಕವರನ್ನು ಹಿಡಿದು ಬಡಿದಿದ್ದಾರೆ. ಅಶೋಕ್‌ರೇ ನಿಂತು ಪೊಲೀಸರಿಂದ ಹೊಡೆಸಿದ ರೀತಿ ಹೇಗಿತ್ತೆಂದರೆ ಇಟ್ಟಮಡು ಸುರೇಶ್ ಎಂಬ ಕಾಂಗ್ರೆಸ್ ಕಾರ್ಯಕರ್ತನ ಮಂಡಿ ಚಿಪ್ಪು ಚಿಂದಿಯಾಗಿದೆ. ಆರಕ್ಕೂ ಅಧಿಕ ಅಯ್ಯಪ್ಪ ಭಕ್ತರಿಗೂ ಗಾಯವಾಗಿದೆ. ಒಂದು ವಾರ ಪೂರ್ತಿ ಆಸ್ಪತ್ರೆಯಲ್ಲಿ ನರಳಿದ ಕಾಂಗ್ರೆಸ್ ಕಾರ್ಯಕರ್ತ ಕಾಲು ಶಾಶ್ವತವಾಗಿ ಊನಗೊಂಡಿದ್ದು ಬದಿಗಿರಲಿ.

ಓರ್ವ ಉಪಮುಖ್ಯಮಂತ್ರಿ ನಡೆದುಕೊಳ್ಳುವ ವರ್ತನೆಯಾ ಇದು?

ಯಃಕಶ್ಚಿತ್ ರೌಡಿಗೂ ಅಶೋಕ್‌ಗೂ ಏನು ವ್ಯತ್ಯಾಸ ಬಂತು?

● ರಾ.ಸೋ.

ಗೃಹ ಸಚಿವನ ಕ್ಷೇತ್ರದಲ್ಲೇ ನಕಲಿ ಪೊಲೀಸರು! 'ಸಾರ್ವಜನಿಕರೆ ಎಚ್ಚರ...!'



ತಾವು ಪೊಲೀಸರೆಂದು ಹೇಳಿಕೊಂಡು ಜನರನ್ನು ನಂಬಿಸಿ ವಂಚಿಸುವ ಪ್ರಕರಣಗಳು ಇತ್ತೀಚೆಗೆ ಬನಶಂಕರಿ ವಿಭಾಗದಲ್ಲಿ ಹೆಚ್ಚಾಗುತ್ತಿವೆ. ಆದಕಾರಣ ಸಾರ್ವಜನಿಕರು ಈ ಬಗ್ಗೆ ಜಾಗ್ರತೆ ವಹಿಸಬೇಕೆಂದು ಹಾಗೂ ನಕಲಿ ಪೊಲೀಸರಿಂದ ವಂಚನೆಗೊಳಗಾಗದೆ ಎಚ್ಚರದಿಂದಿರಬೇಕೆಂದು ಈ ಮೂಲಕ ಕೋರಲಾಗಿದೆ.

-ವಿಚಿತ್ರ ಆದರೂ ಸತ್ಯ ಎನ್ನಬಹುದಾದ ಈ ತರಹದ ಜಾಹೀರಾತು ಫಲಕಗಳು ನಿಮಗೆ ಬೆಂಗಳೂರಿನ ಬನಶಂಕರಿ ಏರಿಯಾದ ಸುತ್ತಮುತ್ತ ಕಾಣಸಿಗುತ್ತಿವೆ.

ಅಂದಹಾಗೆ ಈ ನಕಲಿ ಪೊಲೀಸರ ಜಾಹೀರಾತು ಫಲಕ ಹಾಕಿರುವುದು ಬನಶಂಕರಿಯ ಅಸಲಿ ಪೊಲೀಸರು. ನಂಬಿದರೆ ನಂಬಿ ಇಲ್ಲ ಬಿಡಿ, ಈ ಪ್ರದೇಶವು ಪೊಲೀಸ್ ಮಂತ್ರಿ ಆರ್. ಅಶೋಕನ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ!

ಭೂಗಳ್ಳ ಅಶೋಕನ ಮಂತ್ರಿಗಿರಿಯಲ್ಲಿ ಪೊಲೀಸ್ ಇಲಾಖೆಯು ಅದೆಷ್ಟು ಅದಕ್ಷತೆ ಹಾಗೂ ನಿಷ್ಕ್ರಿಯತೆ ಮೈಗೂಡಿಸಿಕೊಂಡಿದೆ ಎನ್ನಲು ಈ ಜಾಹೀರಾತು ಫಲಕಗಳೇ ಸಾಕ್ಷಿಯಾಗಿವೆ. ಕರ್ನಾಟಕ ರಾಜ್ಯದ ಗೃಹ ಸಚಿವ ಪ್ರತಿನಿಧಿಸುತ್ತಿರುವ ಪ್ರದೇಶದಲ್ಲೇ ನಕಲಿ ಪೊಲೀಸರು ಯಾವುದೇ ಭಯಭೀತಿಯಿರದೆ ಹಾವಳಿಯಿಡುತ್ತಿದ್ದಾರೆಂದರೆ, ಆ ಬಗ್ಗೆ ಅಸಲಿ ಪೊಲೀಸರೇ ಅಸಹಾಯಕರಂತೆ ಜಾಹೀರಾತು ಪ್ರಕಟಿಸಿ ಜನರಿಗೆ ವಾರ್ನಿಂಗ್ ನೀಡುವ ಮಟ್ಟಕ್ಕೆ ಪರಿಸ್ಥಿತಿ ಬಂದಿದೆ ಎಂದರೆ ಏನೆನ್ನಬೇಕು ಹೇಳಿ? ಇದೇನು ನಕಲಿ ಮಾರ್ಕ್ಸ್ ಕಾರ್ಡು, ನಕಲಿ ಡಿಗ್ರಿ ಸರ್ಟಿಫಿಕೇಟು ಅಥವಾ ನಕಲಿ ಸರ್ಕಾರಿ ನೌಕರನೆಂದು ಹೇಳಿ ಜನರನ್ನು ನಂಬಿಸಿ ವಂಚಿಸುವ ಲೋ ರೇಂಜ್ ದಂಧೆಯಂತದ್ದಲ್ಲ. ಇವತ್ತು ವಂಚಕ ಕ್ರಿಮಿನಲ್‌ಗಳು ಕರ್ನಾಟಕದ ಉದ್ದಗಲಕ್ಕೂ ಇದ್ದಾರೆ ನಿಜ. ಆದರೆ ಅವರು ರಾಜ್ಯದ ಪೊಲೀಸ್ ಸಚಿವನ ವಿಧಾನಸಭಾ ಕ್ಷೇತ್ರಕ್ಕೆ ದಾಳಿಯಿಟ್ಟು ಅಸಲಿ ಪೊಲೀಸರ ವೇಷ ತೊಟ್ಟು ಜನರನ್ನು ವಂಚಿಸುತ್ತಾ ರಾಜಾರೋಷವಾಗಿ ಓಡಾಡುತ್ತಾ ಅಸಲಿ ಪೊಲೀಸರನ್ನೇ ಕಂಗೆಡಿಸುತ್ತಿದ್ದಾರೆಂದರೆ....

ಆರ್. ಅಶೋಕನೂ ಒಬ್ಬ ನಕಲಿ ಹೋಂ ಮಿನಿಸ್ಟರ್ ಇರಬಹುದು ಅನಿಸುವುದಿಲ್ಲವೆ?

2«« ಬಿಡಿಚಿತ್ರಗಳು......

ಮಾತ್ರ ಹೊಂದಿರತಕ್ಕದೆಂಬ ಕುರುಡುನೀತಿ ಅನುಸರಿಸುತ್ತಾ ಮಾವೋನ ಹೆಸರಿನಲ್ಲೇ ರಕ್ತಸಿಕ್ತ ನರ್ತನ ನಡೆಸುತ್ತಿದ್ದಾರೆ.

ಈಗ ನೂರ್ ಶ್ರೀಧರ್ ಎಂದು ಪರಿಚಿತರಾಗುತ್ತಿರುವ, ಕಳೆದ ಎರಡು ದಶಕಗಳಿಂದ ಹೋರಾಟದಲ್ಲಿದ್ದವರು 'ಕೇವಲ ಬಂದೂಕಿನ ಭಾಷೆಯಲ್ಲಿ ಮಾತ್ರ ಮಾತನಾಡುವ' ಮಾವೋವಾದಿಗಳ ಜಡನಿಲುವನ್ನು ಒಪ್ಪದೆ ಹೊಸ ಆಲೋಚನೆಗಳನ್ನು ಕರ್ನಾಟಕದ ಜನರ ಮುಂದಿಡುತ್ತಿದ್ದಾರೆ. ಅವರ 'ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳವಳಿ' ಪುಸ್ತಕವು ಕಮ್ಯುನಿಸಂನ ಇತಿಹಾಸ, ಬೆಳವಣಿಗೆಗಳ ಬಗ್ಗೆ ಹಾಗೂ ಭಾರತದ ಮಾವೋವಾದಿಗಳ ಹೋರಾಟದ ಬದ್ಧತೆ ಮತ್ತು ಸೈದ್ಧಾಂತಿಕ, ಆಚರಣಾತ್ಮಕ ನಿಲುವುಗಳ ಮಿತಿಗಳ ಬಗ್ಗೆ ಅನೇಕ ಒಳನೋಟಗಳನ್ನು ನೀಡುವಂತಿದೆ.

"ಕೇವಲ ಸಶಸ್ತ್ರ ಹೋರಾಟದಿಂದ ಸಮಾಜದ ಬದಲಾವಣೆ ಸಾಧ್ಯವಿಲ್ಲ, ಜನರು ಬದುಕಲು ಹೋರಾಟಕ್ಕೆ ಬರುತ್ತಾರೆಯೇ ಹೊರತು ಸಾಯಲಿಕ್ಕೋ, ಸಾಯಿಸಲಿಕ್ಕೋ ಅಲ್ಲ, ನಮ್ಮ ಮನೋಬಯಕೆಯಾಗಿ ಸಶಸ್ತ್ರ ಸಂಘರ್ಷಕ್ಕೆ ಕರೆಕೊಟ್ಟರೆ ವಿಶಾಲ ಜನಸ್ತೋಮ ಅದನ್ನು ತನ್ನದಾಗಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಜನರಪ್ರಜ್ಞೆ ಹಾಗೂ ಹೋರಾಟದ ಮಟ್ಟಕ್ಕೆ ತಕ್ಕಂತೆ ನಾನಾ ರೀತಿಯ ಹೋರಾಟದ ಮಾರ್ಗಗಳನ್ನು ಅಳವಡಿಸಿಕೊಳ್ಳಬೇಕು" ಎಂದು ಹೇಳುತ್ತಿದ್ದಾರೆ.


"ಒಂದು ರಾಜಕೀಯ ಹೋರಾಟವು ವಿಶಾಲ, ಪ್ರಬಲ ಹಾಗೂ ಪರಿಣಾಮಕಾರಿಯಾಗಿ ನಡೆದಷ್ಟೂ ಪ್ರಭುತ್ವದ ಕ್ರೌರ್ಯಕ್ಕೆ ಕಡಿವಾಣ ಬೀಳುತ್ತದೆ. ಸಶಸ್ತ್ರ ಹೋರಾಟದ ಗೀಳು ನಮ್ಮನ್ನು ಅಂಟಿಕೊಳ್ಳದಂತೆ, ಶಾಂತಿಯುತ ಬದಲಾವಣೆಯ ಹಗಲುಗನಸೂ ನಮ್ಮನ್ನು ಆವರಿಸಿಕೊಳ್ಳದಂತೆ ಎಚ್ಚರಿಕೆ ವಹಿಸುತ್ತಾ ದಮನಿತ ಜನಸಮೂಹವನ್ನು ಹೋರಾಟದ ಹೊಸ ದಿಕ್ಕಿನೆಡೆಗೆ ಮುನ್ನಡೆಸಬೇಕಿದೆ" ಎನ್ನುವ ನೂರ್ ಶ್ರೀಧರ್ ಸಂಪ್ರದಾಯವಾದಿ ಮಾವೋವಾದಿಗಳಿಗಿಂತ ಭಿನ್ನ ಮಾವೋವಾದಿಯಾಗಿ ಕಾಣಿಸುತ್ತಾರೆ. ಭೂಗತ ಮಾವೋವಾದಿ ಪಕ್ಷದೊಂದಿಗೆ ಭಿನ್ನಾಭಿಪ್ರಾಯ ತಾಳಿ ಹೊರಬಂದಿದ್ದೇನೆ ಎಂದು ಹೇಳಿಕೊಳ್ಳುವ ನೂರ್ ಶ್ರೀಧರ್ ವಿರುದ್ಧ ಪೊಲೀಸರು ಅನೇಕ ಕೇಸುಗಳನ್ನು ಹಾಕಿರುವುದು, ಹಾಕುತ್ತಿರುವುದು ಆಶ್ಚರ್ಯಕರವಾಗಿದೆ. ಒಂದೋ ಸುಳ್ಳು ಕೇಸುಗಳನ್ನು ಹಾಕಿಸಿಕೊಂಡು ವರ್ಷಗಟ್ಟಲೆ ವಿನಾಕಾರಣ ಸೆರೆವಾಸ ಅನುಭವಿಸುವುದು ಇಲ್ಲಾ ಬಂಧನ avoid ಮಾಡಲು ಭೂಗತ ಜೀವನವನ್ನೇ ಆರಿಸಿಕೊಳ್ಳಬೇಕಾದ ಎರಡೇ ಆಯ್ಕೆ ಇರುವ ಕಾರಣಕ್ಕೆ ನೂರ್ ಶ್ರೀಧರ್ ಈಗ ತೆರೆಮರೆಯಲ್ಲೇ ಇದ್ದಿರಬಹುದು. ಕಲೆಗಾಗಿ ಕಲೆ ಎಂಬುದು ಹೇಗೆ ಅಸಂಬದ್ಧವೋ ಅದೇ ರೀತಿ ಹೋರಾಟಕ್ಕಾಗಿಯೇ ಹೋರಾಟ ಎನ್ನುವ ನಿಲುವು ಕೂಡಾ ಅಸಂಬದ್ಧವೆ. ಕರ್ನಾಟಕದ ಮಾವೋವಾದಿಗಳು ಕೇವಲ ಇಲ್ಲಿನ ಸರ್ಕಾರ, ಪೊಲೀಸರು, ಪುರೋಹಿತಶಾಹಿ, ಪಾಳೆಗಾರಿಕೆ, ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಮಾತ್ರವಲ್ಲದೆ ಲೀ ತರದವರು ಒಡ್ಡುವ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

ಎಲ್ಲರೂ ಎಲ್ಲದರ ತಾತ್ಕಾಲಿಕ ವಿದ್ಯಾರ್ಥಿಗಳಂತೆ ಭಾಸವಾಗುವ ಈ ಕಾಲಘಟ್ಟದಲ್ಲಿ ನಮಗೆ ರಾಜಕೀಯ, ಸಾಹಿತ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ ಹೊಸ ಚಿಂತನೆ ಪ್ರೇರಣೆಗಳನ್ನು ನೀಡಬಲ್ಲ ಹೊಸ ನಾಯಕತ್ವದ ಅಗತ್ಯವಂತೂ ಇದೆ. ಅಂತಾ ಅಗಾಧ ಸಾಧ್ಯತೆಗಳಿದ್ದ ಅನೇಕರು ಒಂದೋ ಅಕಾಲಿಕ ಸಾವಿಗೀಡಾಗಿದ್ದಾರೆ ಇಲ್ಲಾ ಜೈಲು ಸೇರಿದ್ದಾರೆ. ಇನ್ನು ಹಲವರು ಸರ್ಕಾರದ ದಮನಕಾರಿ ಧೋರಣೆಗಳಿಂದಾಗಿ ಭೂಗತರಾಗಿದ್ದಾರೆ.


ನಮ್ಮ ಸಂದರ್ಭಕ್ಕೆ ಮಾವೋ ಚಿಂತನೆಗಳೇನು ಅಪ್ರಸ್ತುತವಲ್ಲ, ಆದರೆ ಚೀನಾದಲ್ಲಿ ಅಳವಡಿಸಿದ ಕಾರ್ಯತಂತ್ರಗಳೇ ನಮ್ಮ ವಿಮೋಚನೆಯ ಹಾದಿಯೂ ಆಗಲಾರದು.

ಸಾಕೇತ್‌ಗೆ ಇದು ಮನವರಿಕೆಯಾಗಿದಿದ್ದರೆ ಕರ್ನಾಟಕದಲ್ಲಿ ಚಿಗುರೊಡೆದ ಹೋರಾಟಗಳು, ಸಮೂಹ ಸಂಘಟನೆಗಳೆಲ್ಲಾ ಇವತ್ತು ಇನ್ನಷ್ಟು ಬಲಿಷ್ಠಗೊಂಡಿರುತ್ತಿದ್ದವು ಎಂದಷ್ಟೇ ಈಗ ಹೇಳಲು ಸಾಧ್ಯ. ■

ಕೆರೆಗೆ ಬಿದ್ದ ಬೆಂಕಿ



...ಗ್ನಿ ಅನಾಹುತಗಳನ್ನು ತಡೆಯಲು ಅಗ್ನಿಶಾಮಕ ...ಎಂಬ ಸರ್ಕಾರಿ ಇಲಾಖೆ ಇದೆಯೆಂಬುದು ನಮಗೆಲ್ಲಾ ... ಸಂಗತಿ. ಆದರೆ ಇದೇ ಅಗ್ನಿಶಾಮಕ ದಳವನ್ನು ...ಕೊಂಡು ಜೀವನಾಡಿಯಾಗಿದ್ದ ಕೆರೆಯೊಂದಕ್ಕೆ ಬೆಂಕಿ ...ವ ಮನೆಹಾಳು ಕೆಲಸಕ್ಕೆ ಈ ಸರ್ಕಾರ ಕೈಹಾಕಿದೆ. ...ಪಾಪಕೃತ್ಯದಲ್ಲಿ ಸ್ಥಳೀಯ ಪುಢಾರಿಗಳಿಂದ ಹಿಡಿದು ...ಮಾನ್ಯರವರೆಗೂ, ಗ್ರಾಮ ಲೆಕ್ಕಾಧಿಕಾರಿಯಿಂದ ಹಿಡಿದು ...ಲ್ದಾರ್, ಜಿಲ್ಲಾಧಿಕಾರಿವರೆಗೂ ನಾನಾ ಅಧಿಕಾರಿಗಳ ... ಕೈವಾಡವಿರುವುದು ಅಂಗೈಹುಣ್ಣಿನಂತೆ ಸ್ಪಷ್ಟವಾಗಿದೆ. ...ಂಥಾ ಘೋರಕೃತ್ಯ ನಡೆದಿರುವುದು ಬೆಂಗಳೂರು ...ದ ಬುಡದಲ್ಲೇ. ಅದೂ ಬೆಂಗಳೂರು-ಮೈಸೂರು ...ರಿಗೆ ಅಂಟಿಕೊಂಡಿರುವ ಜಾಗದಲ್ಲೇ. ಮೈಸೂರು ...ಲ್ಲಿ ಕೆಂಗೇರಿ ದಾಟಿ 5-6 ಕಿಲೋಮೀಟರ್ ಸಾಗಿದರೆ ...ರಿಯ ಪಕ್ಕದಲ್ಲೇ ಕಣಿಮಿಣಿಕೆ ಎಂಬ ಗ್ರಾಮವಿದೆ. ...ೀಕರಣದ ಪ್ರಭಾವಕ್ಕೊಳಗಾಗಿರುವ ಈ ಗ್ರಾಮ ...ಳಗೋಡು ಪಂಚಾಯತಿ ವ್ಯಾಪ್ತಿಯಲ್ಲಿದೆ. ಈ ...ದಲ್ಲಿ ಅನಾದಿಕಾಲದಿಂದಲೂ ತಾರಿಕಟ್ಟೆ ಎಂಬ ...ೊಂದಿದೆ. ಕ್ಷಮಿಸಿ, ಒಂದು ವಾರದ ಹಿಂದೆ ಅಂಥಾ ... ಕೆರೆಯಿತ್ತು. ಆದರೆ ಈಗ ಆ ಸ್ಥಳದಲ್ಲಿ ಒಂದು ...ತ್ತು ಎಂಬುದರ ಕುರುಹೂ ಸಿಗದಂತೆ ಒಂದೇ



ರಾಮಾಂಜನೇಯ

...ದಲ್ಲಿ ಮುಚ್ಚಿಹಾಕಲಾಗಿದೆ.

ಈ ತಾರಿಕಟ್ಟೆ ಕೆರೆಗೆ ಒಂದು ವಿಶೇಷವಿತ್ತು. ...ನೆಂದರೆ ಎಂಥದೇ ಬರಗಾಲದಲ್ಲೂ ಈ ಕೆರೆ ಒಣಗಿದ ...ಹರಣೆ ಇಲ್ಲ. ಈ ವರ್ಷ ಅತ್ಯಂತ ಕಡಿಮೆ ಮಳೆ ...ವುದರಿಂದ ಬಹುತೇಕ ಕೆರೆಗಳು ಒಣಗಿದ್ದರೂ ಈ ...ಲ್ಲಿ ಇನ್ನೂ ನೀರಿತ್ತು. (ಫೋಟೋ ನೋಡಿ)

ಈ ಕೆರೆ ಇತ್ತು ಎಂಬುದಕ್ಕೆ, ಈಗ ...ಗುಳಿದಿರುವುದು ಹಳೆಯ ಸರ್ಕಾರಿ ದಾಖಲೆಗಳು ... ಅಕ್ಕಪಕ್ಕದ ಗ್ರಾಮಸ್ಥರು ಮಾತ್ರ. ಕಣಿಮಿಣಿಕೆ ಗ್ರಾಮದ ... ನಂಬರ್ 84ರಲ್ಲಿ ಒಂದು ಎಕರೆ ಹನ್ನೆರಡು ಗುಂಟೆ ...ದಲ್ಲಿ ತಾರಿಕಟ್ಟೆ ಎಂಬ ಕೆರೆಯಿದೆ ಎಂದು ನೂರಾರು ...ಗಳ ಸರ್ಕಾರಿ ದಾಖಲಾತಿಗಳು ಸಾರಿ ಹೇಳುತ್ತವೆ. ...ದ ನಕ್ಷೆ ಹಾಗೂ ಇನ್ನಿತರೆ ಸರ್ವೆ ರೆಕಾರ್ಡ್‌ಗಳಲ್ಲಿ ... ಪಹಣಿ ಮತ್ತಿತರ ರೆವಿನ್ಯೂ ರೆಕಾರ್ಡ್‌ಗಳಲ್ಲಿ ... ದಶಕಗಳಿಂದಲೂ ಈ ಕೆರೆಯ ಸ್ಪಷ್ಟ ದಾಖಲೆಗಳು ...ವೆ.

...ಳೆದ ವಾರ ಇದ್ದಕ್ಕಿದ್ದಂತೆ ಜೆಸಿಬಿ ಯಂತ್ರಗಳು ಕೆರೆಯ ...ಳಕ್ಕಿಳಿದಾಗ ಮೊದಲಿಗೆ ಗ್ರಾಮಸ್ಥರು ಕೆರೆಯ ಜೀರ್ಣೋದ್ಧಾರ ಕಾಮಗಾರಿ ಇರಬಹುದೆಂದು ಭಾವಿಸಿದರು. ಆದರೆ ಅಸಲಿ ಹಿಕಮತ್ತು ಬೇರೆಯೇ ಇತ್ತು. ಜೆಸಿಬಿ ಯಂತ್ರಗಳ ಬೆನ್ನ ಹಿಂದೆಯೇ ನಾಲ್ಕಾರು ಟಿಪ್ಪರ್ ಲಾರಿಗಳು ಬೇರೆಡೆಯಿಂದ ಮಣ್ಣು ತಂದು ಕೆರೆಗೆ ಸುರಿಯಲು ಪ್ರಾರಂಭಿಸಿದವು. ತಮ್ಮ ಕೆರೆಗಾದ ದುರ್ಗತಿಯನ್ನು ಕಂಡು ನೊಂದ ಸ್ಥಳೀಯ ನಿವಾಸಿಗಳು ಲಾರಿಗಳನ್ನು ತಡೆದು ನಿಲ್ಲಿಸಿದರು.

ಅಷ್ಟರಲ್ಲೇ ಯಾರ್ಯಾರ ಫೋನ್‌ಗಳಿಂದ ಯಾರ್ಯಾರಿಗೆ ಫೋನ್ ಕಾಲ್‌ಗಳು ಎಕ್ಸ್‌ಚೇಂಜ್ ಆದವೋ ಭಗವಂತನೇ ಬಲ್ಲ. ತಕ್ಷಣವೇ ಪೊಲೀಸರು ರಂಗಪ್ರವೇಶ ಮಾಡಿದರು. ಸರ್ಕಾರವೇ ಈ ಜಾಗವನ್ನು ಅಗ್ನಿಶಾಮಕ ದಳಕ್ಕೆ ಮಂಜೂರು ಮಾಡಿರುವುದರಿಂದ ಅಧಿಕೃತ ಸರ್ಕಾರಿ ಆದೇಶದ ಪ್ರಕಾರವೇ ಕೆರೆ ಮುಚ್ಚಲಾಗುತ್ತಿದೆ ಎಂಬುದು ಪೊಲೀಸರು ನೀಡಿದ ವಿವರಣೆ. ಇದು ಸರ್ಕಾರಿ ಕಾಮಗಾರಿ ಆಗಿರುವುದರಿಂದ ಯಾರಾದರೂ ಅಡ್ಡಿಪಡಿಸಿದರೆ ಅಂಥವರನ್ನು ಅರೆಸ್ಟ್ ಮಾಡಬೇಕಾಗುತ್ತದೆ ಎಂಬ ಪೊಲೀಸರ ವಾರ್ನಿಂಗ್ ಕೇಳಿದ ಜನರು ವಿಧಿಯಿಲ್ಲದೆ ವಾಪಸ್ಸಾದರು.

ತಮ್ಮ ತಾತ ಮುತ್ತಾತರ ಕಾಲದಿಂದಲೂ ಊರಿನ ದನಕರುಗಳಿಗೆ, ಪ್ರಾಣಿಪಕ್ಷಿಗಳಿಗೆ ಆಸರೆಯಾಗಿದ್ದ ಕೆರೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ತೀರ್ಮಾನಕ್ಕೆ ಬಂದ ಗ್ರಾಮಸ್ಥರು ಮರುದಿನವೇ ಬೆಂಗಳೂರು ಜಿಲ್ಲಾಧಿಕಾರಿ, ತಹಸೀಲ್ದಾರ್ ಮುಂತಾದವರಿಗೆ ತಮ್ಮ ಅಹವಾಲು ಸಲ್ಲಿಸಿದರೂ ಎಳ್ಳಷ್ಟೂ ಪ್ರಯೋಜನವಾಗಲಿಲ್ಲ.

ಹಠ ಬಿಡದ ಊರಿನ ಯುವಕರು ಶತಪ್ರಯತ್ನ ಮಾಡಿ ಕೆರೆಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಾಗ ಭಾರೀ ಶಾಕ್ ಕಾದಿತ್ತು. ಏನೆಂದರೆ ಸರ್ಕಾರದ ಪೂರ್ವಾನುಮೋದನೆ ಮೇರೆಗೆ, ಅಧಿಕೃತವಾಗಿ ವಿಶೇಷ ಜಿಲ್ಲಾಧಿಕಾರಿ ಎಚ್.ರಾಮಾಂಜನೇಯ ಎಂಬ ಪರಮ ಭ್ರಷ್ಟ ಅಧಿಕಾರಿ ಈ ಕೆರೆಗೆ ಮರಣದಂಡನೆ ವಿಧಿಸಿಬಿಟ್ಟಿದ್ದ.

"ಕಣಿಮಿಣಿಕೆ ಗ್ರಾಮದ ಸರ್ವೆ ನಂಬರ್ 84ರಲ್ಲಿ 1-00 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ಕಾಯ್ದೆಯ ಕಲಂ 71ರ ಅಡಿಯಲ್ಲಿ ಅಗ್ನಿಶಾಮಕ ಠಾಣೆಗೆ" ಮಂಜೂರು ಮಾಡಲಾಗಿತ್ತು. ಆದರೆ ಇಂಥಾ ವಿನಾಶಕಾರಿ ಆದೇಶದಲ್ಲಿ ಎಲ್ಲಿಯೂ ಕೆರೆಯ ಪ್ರಸ್ತಾಪವನ್ನೇ ಮಾಡಿಲ್ಲ; ಬದಲಿಗೆ ಸರ್ವೆ ನಂಬರ್ 84 ಎಂದಷ್ಟೆ ನಮೂದಿಸಲಾಗಿದೆ. ಈ ಕೆರೆನಾಶದ ಆದೇಶ ದಿನಾಂಕ: 26-11-2009ರಲ್ಲೇ ಸದ್ದಿಲ್ಲದೆ ಹೊರಬಿದ್ದಿದೆ. ಇದಕ್ಕೂ ಮುಂಚೆ ಈ ಕೆರೆಯನ್ನು ಹೆಲಿಪ್ಯಾಡ್ ನಿರ್ಮಾಣಕ್ಕಾಗಿ ಮೀಸಲಾಗಿರಿಸಲಾಗಿತ್ತಂತೆ. ಆ ಆದೇಶವನ್ನು ಬದಲಿಸಿ ಈಗ ಅಗ್ನಿಶಾಮಕ ದಳಕ್ಕೆ ಕೊಡಲಾಗಿದೆ.

ಇಲ್ಲಿ ಮತ್ತೊಂದು ಅಂಶವನ್ನೂ ಗಮನಿಸಬಹುದು. ಹೀಗೆ ಮಂಜೂರು ಮಾಡುವಾಗ ನಿಯಮಾವಳಿಯಂತೆ ಒಂದು ಷರತ್ತನ್ನು ವಿಧಿಸಲಾಗಿದೆ. ಆ ಷರತ್ತಿನ ಪ್ರಕಾರ "ಎರಡು ವರ್ಷಗಳ ಒಳಗಾಗಿ ಉದ್ದೇಶಿತ ಯೋಜನೆಗೆ ಬಳಕೆ ಮಾಡಿಕೊಳ್ಳತಕ್ಕದ್ದು. ... ಬಳಕೆಯಾಗದಿದ್ದಲ್ಲಿ ಕೂಡಲೇ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು." ಈ ಆದೇಶ ಹೊರಬಿದ್ದು ಮೂರು ವರ್ಷ ಮೀರಿದ ಮೇಲೆ ಈ ಕೆರೆಯನ್ನು ಮುಚ್ಚುವ ಕಾಮಗಾರಿ ಆರಂಭಿಸಿರುವುದು ಈ ಜಿಲ್ಲಾಧಿಕಾರಿಯ ಮನೆಹಾಳು ಆದೇಶವನ್ನೂ ಸ್ಪಷ್ಟವಾಗಿ ಉಲ್ಲಂಘಿಸಿದಂತಾಗಿದೆ.

ಇನ್ನೂ ಒಂದು ಅಂಶವನ್ನು ಗಮನಿಸುವುದಾದರೆ ಇದೇ ಗ್ರಾಮದಲ್ಲಿ ನೂರಾರು ಎಕರೆ ಸರ್ಕಾರಿ ಭೂಮಿಯಿದ್ದು ಅಗ್ನಿಶಾಮಕ ದಳಕ್ಕೆ ಬೇಕಾದ ಜಾಗವನ್ನು ಬೇರೆ ಕಡೆ ಮಂಜೂರು ಮಾಡಲು ಅವಕಾಶವಿದೆ. ಆದರೆ ಆ ಎಲ್ಲಾ ಸರ್ಕಾರಿ ಭೂಮಿಗಳಿಗೆ ಸರ್ಕಾರಿ ಅಧಿಕಾರಿಗಳ ಹಾಗೂ ಖಾಸಗಿ ತಿಮಿಂಗಿಲಗಳ ಜಂಟಿಕೂಟ ಬೇರೆಯದೇ ಸ್ಕೆಚ್ ಹಾಕಿ ಭೂಮಿ ನುಂಗುವ ಹುನ್ನಾರದಲ್ಲಿದ್ದಾರೆ. (ವಿವರಗಳಿಗೆ ಬಾಕ್ಸ್ ನೋಡಿ.)


ಈ ದೇಶದಲ್ಲಿ ಅಸ್ತಿತ್ವದಲ್ಲಿರುವ ಕಂದಾಯ ಇಲಾಖೆ, ಪರಿಸರ ಇಲಾಖೆ ಅಥವಾ ಅರಣ್ಯ ಇಲಾಖೆಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಪ್ರಕಾರವಾದರೂ ಕೆರೆ ಮುಚ್ಚಲು ಅವಕಾಶವಿಲ್ಲ. ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳ ಹತ್ತಾರು ಆದೇಶಗಳು ಕೆರೆಗಳ ಪ್ರದೇಶವನ್ನು ಇತರೆ ಉದ್ದೇಶಗಳಿಗಾಗಿ ಪರಭಾರೆ ಮಾಡುವಂತಿಲ್ಲ ಎಂದು ಸ್ಪಷ್ಟ ಆದೇಶ ನೀಡಿವೆ. ಹೀಗಿದ್ದರೂ ರಾಜ್ಯದ ಬಿಜೆಪಿ ಸರ್ಕಾರವೇ ಮುಂದೆ ನಿಂತು ಕೆರೆ ಮುಚ್ಚಲು ಹೊರಟಿದೆ. ಪ್ರಜೆಗಳಿಗೆ ಕಾನೂನು ಪಾಠ ಹೇಳಬೇಕಿರುವ ಸರ್ಕಾರ ಕಾನೂನು ಪಾಲಿಸುತ್ತಿರುವ ರೀತಿಯಿದು.

'ಕೆರೆ ಅಭಿವೃದ್ಧಿ ಪ್ರಾಧಿಕಾರ' ಎಂಬ ಪಾರ್ಶ್ವವಾಯುಪೀಡಿತ ಸರ್ಕಾರಿ ಸಂಸ್ಥೆಯೊಂದಿದೆ. ಕಣಿಮಿಣಿಕೆ ಗ್ರಾಮಸ್ಥರು ಬೇರೆ ದಾರಿಕಾಣದೆ ಈ ಪ್ರಾಧಿಕಾರಕ್ಕೆ ಮೊರೆ ಹೋಗಿ ತಮ್ಮ ಕೆರೆಯನ್ನು ಉಳಿಸಿಕೊಡುವಂತೆ ಮನವಿ ಸಲ್ಲಿಸಿದರು. ಭಾರೀ ಒತ್ತಾಯದ ನಂತರ ಸದರಿ ಪ್ರಾಧಿಕಾರ ಸರ್ಕಾರದ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿ ಹಾಗೂ ಅಗ್ನಿಶಾಮಕ ದಳಕ್ಕೆ ಪತ್ರ ಬರೆದು ಈ ಕೂಡಲೇ ಕಾಮಗಾರಿಯನ್ನು ನಿಲ್ಲಿಸಿ ಕೆರೆ ಜಾಗದಲ್ಲಿ ಯಥಾಸ್ಥಿತಿ ಕಾಪಾಡಬೇಕೆಂದು ತಿಳಿಸಿದ್ದಾರೆ. ಆದರೆ ಈ ಹಲ್ಲು ಕಿತ್ತ ಹಾವಿಗೆ ಯಾರೂ ಭಯಪಡುತ್ತಿಲ್ಲ.

ಇನ್ನು ಗ್ರಾಮದ ಯುವಕರು ಕೋರ್ಟ್‌ನ ಮೊರೆ ಹೋಗುವುದನ್ನು ಬಿಟ್ಟರೆ ಬೇರೆ ಮಾರ್ಗವೇ ಇರಲಿಲ್ಲ. ಹೀಗಾಗಿ ಗೋವಿಂದರಾಜ್ ಮತ್ತು ನರಸಿಂಹಮೂರ್ತಿ ಎಂಬ ಇಬ್ಬರು ಊರಿನ ಯುವಕರು ಕೆರೆ ಉಳಿಸಬೇಕೆಂದು ಕೋರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ



ನರಸಿಂಹಮೂರ್ತಿ



ಗೋವಿಂದರಾಜು

ಹೂಡಿದ್ದಾರೆ. ಕಾನೂನು ಪುಸ್ತಕದಲ್ಲಿರುವ ಕಾನೂನುಗಳು ನಿಜಕ್ಕೂ ಆಚರಣೆಗೆ ಬರುವುದಾದರೆ ತಪ್ಪಿತಸ್ಥರು ಜೈಲು ಸೇರಿ, ಕೆರೆ ಉಳಿಯುವುದು ನಿಶ್ಚಿತ. ನ್ಯಾಯಾಲಯವೂ ಕೆರೆಯನ್ನು ಉಳಿಸದೇ ಹೋದರೆ ಜನರಿಗೆ ಉಳಿದಿರುವ ಮಾರ್ಗವಾದರೂ ಏನು?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸರ್ಕಾರಿ ಭೂಗಳ್ಳತನ

ಕಣಿಮಿಣಿಕೆ ಎಂಬ ಒಂದೇ ಗ್ರಾಮದಲ್ಲಿದ್ದ ಸಾರ್ವಜನಿಕ ಭೂಮಿಯನ್ನು ಕಬಳಿಸಿರುವ ರೀತಿ ನೋಡಿ. ಇದೇ ಗ್ರಾಮದ ಸರ್ವೆ ನಂಬರ್ 41ರಲ್ಲಿ 25 ಎಕರೆ ಭೂಮಿಯನ್ನು ಮಾತಾ ಅಮೃತಾನಂದಮಯಿ ಆಶ್ರಮಕ್ಕೆ ನರ್ಸಿಂಗ್ ಕಾಲೇಜು ಕಟ್ಟಲಿಕ್ಕಾಗಿ ಮಂಜೂರು ಮಾಡಲಾಗಿದೆ. ಸರ್ವೆ ನಂಬರ್ 95ರಲ್ಲಿ 50 ಎಕರೆ ಗೋಮಾಳ ಭೂಮಿಯನ್ನು ಬಿಡಿಎಗೆ ವರ್ಗಾಯಿಸಲಾಗಿದೆ. ಆದರೆ ಅದೇ ಭೂಮಿಯನ್ನು ಸ್ಮಶಾನ, ಶಾಲೆ ಆಟದ ಮೈದಾನ ಮತ್ತು ಪಶು ವೈದ್ಯಶಾಲೆಗೆ ಮೀಸಲಿರಿಸಿ ಹೈಕೋರ್ಟ್ ಬಹಳ ಹಿಂದೆಯೇ ಆದೇಶ ಹೊರಡಿಸಿತ್ತು. ಮೈಸೂರು ರಸ್ತೆಯಲ್ಲೇ ಎದ್ದು ಕಾಣುವ ಕ್ರೈಸ್ಟ್ ಕಾಲೇಜಿನವರು ಈಗಾಗಲೇ ಸುಮಾರು 25 ಎಕರೆ ಭೂಮಿಯನ್ನು ಕಬಳಿಸಿದ್ದಾರೆ. ಅದರ ಪಕ್ಕದಲ್ಲೇ ಇರುವ ನಾರಾಯಣ ಇಂಟರ್‌ನ್ಯಾಷನಲ್ ಸ್ಕೂಲ್‌ನವರು ಕೆರೆ ಕೋಡಿಯನ್ನೇ ಮುಚ್ಚಿ ಆಟದ ಮೈದಾನ ಮಾಡಿಕೊಂಡಿದ್ದಾರೆ. ಈ ಮೇಲ್ಕಂಡ ಅಕ್ರಮಗಳಿಗೆ ಸಂಬಂಧಪಟ್ಟಂತೆ ಗ್ರಾಮಸ್ಥರು ವಿವಿಧ ನ್ಯಾಯಾಲಯದಲ್ಲಿ ಹೂಡಿರುವ ಕೇಸುಗಳ ವಿಚಾರಣೆ ಬಾಕಿಯಿದೆ.

ಇದು ಬಿಜೆಪಿ ಸರ್ಕಾರ ರಾಜ್ಯಾದ್ಯಂತ ಜಾರಿಗೆ ತಂದಿರುವ ಅಭಿವೃದ್ಧಿ ಮಾದರಿಯ ಒಂದು ಸಣ್ಣ ಸ್ಯಾಂಪಲ್ ಅಷ್ಟೆ.

...ನೊಬ್ಬ ಖಾನ್....

...ಧವಿಲ್ಲ. ಬೆಳಗ್ಗಿನ ಪ್ರಾರ್ಥನೆಗಾಗಿನ ಕರೆಯಾಗಲೀ, ...ಸ್ ಅವರ ಮಾತುಗಳಾಗಲಿ ಆ ಮನುಷ್ಯನ ಆತ್ಮದ ... ಪರಿಣಾಮವನ್ನೇ ಬೀರುವುದಿಲ್ಲ. ಯಾಕೆಂದರೆ ಆತನ ...ನ್ನು ಸೈತಾನ ಆಕ್ರಮಿಸಿಕೊಂಡಿರುತ್ತಾನೆ. ಅಂಥವ ...ರಿಗೆ ನನ್ನನ್ನು ಸಮೀಕರಿಸುವುದನ್ನು ನಾನೆಂದೂ ...ವುದಿಲ್ಲ.

...ನೊಬ್ಬ ಖಾನ್.

...ನು ಆರು ಅಡಿ ಎತ್ತರವೂ ಇಲ್ಲ, ಸುಂದರರೂಪಿಯೂ ...ಸಾಮಾನ್ಯವಾಗಿದ್ದೇನೆ ನಾನು), ಇತರೆ ಧರ್ಮಗಳನ್ನು ... ನೋಡುವ ಮುಸಲ್ಮಾನನೂ ನಾನಲ್ಲ. ನನ್ನ ಧರ್ಮದ ...ನನಗೆ ಹೇಳಿಕೊಟ್ಟಿದ್ದು ಆರಡಿ ಎತ್ತರವಿದ್ದ, ಪೇಶಾವರ ...ದವರಾದ, ಸುಂದರರೂಪಿಯಾಗಿದ್ದ ನನ್ನ ಪಠಾಣ್ ... ಇವತ್ತಿಗೂ ಅವರ ಮತ್ತು ನನ್ನ ಹೆಮ್ಮೆಯ ...ಧಿಕರು ಪೇಶಾವರದಲ್ಲಿ ನೆಲೆಸಿದ್ದಾರೆ. ನನ್ನ ತಂದೆ ...ರ ಅಹಿಂಸಾ ಚಳವಳಿಯಲ್ಲಿ ಭಾಗವಹಿಸಿದ್ದರಲ್ಲದೆ ...ತ್ಮ ಗಾಂಧಿ ಮತ್ತು ಗಡಿನಾಡಿನ ಗಾಂಧಿ ಎಂದೇ ...ತರಾಗಿದ್ದ ಖಾನ್ ಅಬ್ದುಲ್ ಗಫರ್ ಖಾನರ ...ಯಾಯಿಯಾಗಿದ್ದರು.

...ಸ್ಲಾಮ್ ಬಗೆಗಿನ ನನ್ನ ಅಪ್ಪ ನನಗೆ ಹೇಳಿಕೊಟ್ಟ ... ಪಾಠ ಮಹಿಳೆಯರನ್ನು ಮತ್ತು ಮಕ್ಕಳನ್ನು ...ಸುವುದು ಮತ್ತು ಎಲ್ಲ ಜನರ ಘನತೆಯನ್ನು ...ಯುವುದು. ಬೇರೆಯವರ ಆಸ್ತಿ ಮತ್ತು ಗಣ್ಯತೆ, ... ಅಭಿಪ್ರಾಯಗಳು, ನಂಬಿಕೆಗಳು, ತತ್ವಶಾಸ್ತ್ರಗಳು ಮತ್ತು ...ಗಳನ್ನು ಮುಕ್ತ ಮನಸ್ಸಿನೊಂದಿಗೆ ಸ್ವೀಕರಿಸುವುದು ... ನನ್ನ ಧರ್ಮದಷ್ಟೇ ಗೌರವವನ್ನು ಅವುಗಳಿಗೂ ಕೊಡುವುದು. ಅಲ್ಲಾಹುವಿನ ಶಕ್ತಿ ಮತ್ತು ದಯೆಯಲ್ಲಿ ನನಗೆ ನಂಬಿಕೆ ಇದೆಯಲ್ಲದೆ, ಇತರರೊಂದಿಗೆ ಸರಿಯಾಗಿ ನಡೆದುಕೊಳ್ಳುವುದು, ನನಗಿಂತ ದುರ್ಬಲರಾದವರಿಗೆ ನನ್ನನ್ನು ಅರ್ಪಿಸಿಕೊಳ್ಳುವುದು, ಜೀವನವನ್ನು ಬೇರೆಯವರ ಸ್ವಾತಂತ್ರ್ಯಕ್ಕೆ ಅಡಚಣೆ ಆಗದಂತೆ ಸಂತೋಷದಿಂದ ನಗುನಗುತ್ತಾ ಕಳೆಯುವುದೂ ಮುಖ್ಯ ಎಂಬುದು ನನ್ನ ನಂಬಿಕೆ.

ನಾನೊಬ್ಬ ಖಾನ್. ಹೌದು. ಆದರೆ ನಾನು ಯಾರೆಂಬುದರ ಬಗ್ಗೆ ಯಾವುದೋ ಸ್ಟೀರಿಯೋಟೈಪ್ ಪ್ರತಿಮೆಯನ್ನು ನನ್ನ ಮನಸ್ಸು ಒಪ್ಪುವುದಿಲ್ಲ. ಬದಲಾಗಿ ಲಕ್ಷಾಂತರ ಭಾರತೀಯರ ಪ್ರೀತಿ ನನ್ನ ಬದುಕನ್ನು ಆಳವಾಗಿ ಮುಟ್ಟಿದೆ. ನಾನು ಭಾರತದ ಅಲ್ಪಸಂಖ್ಯಾತ ಸಮುದಾಯದವನಾಗಿದ್ದರೂ ಕಳೆದ ಇಪ್ಪತ್ತು ವರ್ಷಗಳ ಕಾಲ ಈ ಪ್ರೀತಿ ನನಗೆ ವ್ಯಕ್ತವಾಗಿದೆ. ದೇಶದ ಮತ್ತು ಸಂಸ್ಕೃತಿಯ ಗಡಿಗಳನ್ನೂ ಮೀರಿ, ಸೂರಿನಾಮ್‌ನಿಂದ ಜಪಾನ್ ತನಕ, ಸೌದಿ ಅರೇಬಿಯಾದಿಂದ ಜರ್ಮನಿ ತನಕ ನಾನಾಡುವ ಭಾಷೆ ಅರ್ಥವಾಗದಿದ್ದರೂ ಜನ ನನ್ನ ಮೇಲೆ ಅಭಿಮಾನದ ಸುರಿಮಳೆಯನ್ನೇ ಹರಿಸಿದ್ದಾರೆ. ನನ್ನನ್ನು ಓರ್ವ ಮನೋರಂಜನೆಗಾರನಾಗಿ ಅವರೆಲ್ಲ ಇಷ್ಟಪಡುತ್ತಾರಷ್ಟೇ. ನಮ್ಮನ್ನು ಸೀಮಿತಗೊಳಿಸುವ ಭಾವನೆಗಳಿಂದ ಮುಕ್ತರಾದರೆ ನಾವು ನಮ್ಮ ರಕ್ಷಣೆಗೆ ಪುಟ್ಟ ಪೆಟ್ಟಿಗೆಗಳಲ್ಲಿ ಪ್ರತಿಮೆಗಳನ್ನು ಇಟ್ಟುಕೊಳ್ಳುವ ಪ್ರಮೇಯವೇ ಬರುವುದಿಲ್ಲ ಎಂದು ನಂಬಿರುವವ ನಾನು.

ನಾನು ಸೂಪರ್‌ಸ್ಟಾರ್ ಎಂಬ ಬಾಹ್ಯ ರೂಪದ ಅಡಿ ನಾನೋರ್ವ ಸಾಮಾನ್ಯ ಮನುಷ್ಯ. ನನ್ನ ಹಿಂದೂ ಮಡದಿಯೊಂದಿಗೆ ನಾನು ಮುಸಲ್ಮಾನ್ ಕುಲದವನು ಎಂಬುದು ಎಂದೂ ಸಂಘರ್ಷಕ್ಕೆ ಕಾರಣವಾಗಿಲ್ಲ. ನನ್ನ ಮತ್ತು ನನ್ನ ಮಡದಿ ಗೌರಿ ನಡುವಿನ ಭಿನ್ನಾಭಿಪ್ರಾಯಗಳು ಏನಿದ್ದರೂ ನಮ್ಮ ಮನೆ ಗೋಡೆಯ ಬಣ್ಣಕ್ಕೆ ಸಂಬಂಧಿಸಿದವೇ ಹೊರತು ಭಾರತದ ಯಾವ ಮಸೀದಿ ಮತ್ತು ದೇವಸ್ಥಾನಗಳ ನಡುವಿನ ಗೋಡೆಗಳನ್ನು ಕುರಿತದ್ದಲ್ಲ.

ನಮ್ಮ ಮಗಳು ಲಿಯೊಟಾರ್ಡ್ ತೊಟ್ಟು ತನ್ನದೇ ಬ್ಯಾಲೆ ನೃತ್ಯಗಳನ್ನು ರಚಿಸುತ್ತಾಳೆ. ನನ್ನ ಸಂವೇದನೆಗೆ ಸಿಲುಕದ ಪಾಶ್ಚಿಮಾತ್ಯ ಹಾಡುಗಳನ್ನು ಹಾಡುತ್ತಾಳೆ ಮತ್ತು ನಟಿ ಆಗಬೇಕೆಂಬ ಆಶೆಯನ್ನು ಹೊಂದಿದ್ದಾಳೆ. ಇಂತಹ ನನ್ನ ಮಗಳು ನಾವು ಮುಸಲ್ಮಾನರ ದೇಶಗಳಿಗೆ ಹೋದಾಗ ಅಲ್ಲಿನ ಸಂಪ್ರದಾಯದಂತೆ ತನ್ನ ತಲೆಕೂದಲಿನ ಮೇಲೆ ಬಟ್ಟೆಯನ್ನು ಹೊದ್ದಿಕೊಳ್ಳುತ್ತಾಳೆ. ಇಸ್ಲಾಮಿನ ಈ ಸುಂದರ ತತ್ವವನ್ನು ಬಹಳಷ್ಟು ಜನ ಅಪಾರ್ಥ ಮಾಡಿಕೊಂಡಿದ್ದಾರೆ.

ನಮ್ಮ ಮಗನ ಮುಖಲಕ್ಷಣದಲ್ಲಿ ಆತನ ಪಠಾಣ್ ತಳಿಯನ್ನು ಗುರುತಿಸಬಹುದಾದರೂ ಆತ ತನ್ನದೇ ಆದ ಧಾತುವನ್ನು ಹೊಂದಿದ್ದಾನೆ. ಫುಟ್ ಬಾಲ್ ಆಟದಲ್ಲಿ ಇತರರನ್ನು ನೂಕುತ್ತಾ, ಟೇಕ್ವಾಂಡೋದಲ್ಲಿ ಬೇರೆಯರ ಕುಂಡಿಗೆ ಒದೆಯುತ್ತಾ, ವೀಡಿಯೋ ಗೇಮ್ಸ್‌ನಲ್ಲಿ ಮುಖರಹಿತ ಅನಾಮಿಕರನ್ನು ವಿನಾಶಮಾಡುತ್ತಾ ನಮ್ಮ ಮಗ ಇಡೀ ದಿನವನ್ನು ಕಳೆಯುತ್ತಾನೆ. ಆದರೆ ಕಳೆದ ವರ್ಷ ಯಾವನೋ ಒಬ್ಬ ಮತಾಂಧ ಕ್ರಿಕೆಟ್ ಸ್ಟೇಡಿಯಂನಲ್ಲಿ ನಾನು ಖಾನ್ ಆಗಿರುವುದರಿಂದ ನನ್ನನ್ನು ಲೇವಡಿ ಮಾಡಿದ್ದರಿಂದ ನಾನು ಆತನೊಂದಿಗೆ ಜಗಳಕ್ಕೆ ಬಿದ್ದಾಗ ಈ ನನ್ನ ಮಗ ನನಗೇ ಬುದ್ಧಿ ಹೇಳಿದ್ದ.

ಪ್ರೀತಿಯನ್ನು ಪರಸ್ಪರ ಹಂಚಿಕೊಂಡಾಗ ಸಿಗುವಂತಹ ಸಂಸಾರ ನಮ್ಮ ನಾಲ್ವರದ್ದು.

ಧರ್ಮ ಎಂಬುದು ಅತಿ ಖಾಸಗಿ ವಿಚಾರವೇ ಹೊರತು ಸಾರ್ವಜನಿಕ ಪ್ರದರ್ಶನಕ್ಕಲ್ಲ. ಇಪ್ಪತ್ತು ವರ್ಷಗಳ ಹಿಂದೆ ಮಡಿದ ನನ್ನ ಅಪ್ಪ ನನಗೆ ಬಿಟ್ಟು ಹೋದ ಕನ್ನಡಕದಷ್ಟೇ ಖಾಸಗಿಯಾದದ್ದು ಧರ್ಮ. ನನ್ನ ಅಪ್ಪನ ನೆನಪು, ಬೋಧನೆ ಮತ್ತು ಆತನ ಪಠಾಣ್ ಮೂಲದ ಬಗೆಗಿನ ಹೆಮ್ಮೆಯ ಸಂಕೇತವೇ ಆತನ ಕನ್ನಡಕ. ಅದು ನನ್ನಲ್ಲಿರುವ ಅತಿ ಖಾಸಗಿ ಮತ್ತು ಅತಿ ಮೌಲ್ಯದ ವಸ್ತು. ನನ್ನಂತೆಯೇ ತಮ್ಮ ತಂದೆತಾಯಂದಿರ ಅಥವಾ ಅಜ್ಜ ಅಜ್ಜಿಯರ ವಸ್ತುಗಳನ್ನು ಇಟ್ಟುಕೊಂಡಿರುವ ಸ್ನೇಹಿತರೊಂದಿಗೆ ನಾನೆಂದೂ ಅಪ್ಪನ ಕನ್ನಡಕವನ್ನು ಹೋಲಿಸಿಲ್ಲ. ನಿನ್ನಲ್ಲಿರುವ ನಿನ್ನ ಅಮ್ಮನ ಸೀರೆಗಿಂತ ನನ್ನ ಅಪ್ಪನ ಕನ್ನಡಕ ಚೆಂದ ಎಂದಿಲ್ಲ. ಹಾಗಿರುವಾಗ, ನಮ್ಮ ಹಿರಿಯರ ನೆನಪುಗಳಷ್ಟೇ ಖಾಸಗಿಯೂ, ಮೌಲ್ಯಯುತವಾದವೂ ಆದ ಧರ್ಮಗಳನ್ನೇಕೆ ಹೋಲಿಸಬೇಕು? ನಮ್ಮ ಕೊನೆ ಹೆಸರಿಗಿಂತ ನಾವು ಪರಸ್ಪರ ಹಂಚಿಕೊಳ್ಳುವ ಪ್ರೀತಿ ಯಾಕೆ ಕೊನೆ ಮಾತಾಗಿರಬಾರದು? ಪ್ರೀತಿಯನ್ನು ಹಂಚಿಕೊಳ್ಳಲು ನೀವು ಸೂಪರ್‌ಸ್ಟಾರ್ ಆಗಬೇಕಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಪ್ರೀತಿ ಕೊಡಲು ಹೃದಯವೊಂದೇ ಸಾಕು ಮತ್ತು ಅದನ್ನು ಯಾರಿಂದಲೂ ಕಸಿದುಕೊಳ್ಳುವ ಶಕ್ತಿ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ.


ನಾನೊಬ್ಬ ಖಾನ್ ಆಗಿದ್ದು ನಾನು ಬದುಕಿನಲ್ಲಿ ಕಲಿತಿರುವ ಪಾಠಗಳು ಮುಖ್ಯವೇ ಹೊರತು ನನ್ನ ಸುತ್ತಲೂ ಇರುವ ಸ್ಟೀರಿಯೋಟೈಪ್ ಪ್ರತಿಮೆಯಲ್ಲ. ಖಾನ್ ಆಗಿರುವ ನಾನು ಪ್ರೀತಿಯನ್ನು ಪಡೆದಿದ್ದೇನೆ ಮತ್ತು ಪ್ರೀಯನ್ನು ಕೊಟ್ಟಿದ್ದೇನೆ. ಇದು ಮುಖ್ಯವೇ ಹೊರತು ಆ ಕಡೆ ಕನ್ಯೆಯರು ನನಗಾಗಿ ಕಾಯುತ್ತಿದ್ದಾರೆ ಎಂಬ ನಂಬಿಕೆಯಲ್ಲ.


- ಶಾರುಖ್ ಖಾನ್

(ಕನ್ನಡಕ್ಕೆ: ಗೌರಿ ಲಂಕೇಶ್)

* ಲೀ ಹಾರ್ವೆ ಆಸ್ವಾಲ್ಡ್ ಎಂಬುವವನು ಅಮೆರಿಕದ ಅಧ್ಯಕ್ಷ ಜಾನ್ ಕೆನಡಿಯನ್ನು ಕೊಂದ ಅಮೆರಿಕನ್ ಉಗ್ರವಾದಿ.

** ಟಿಮೋತಿ ಮೆಕ್‌ವೈ ಎಂಬ ಅಮೆರಿಕದ ಮಾಜಿ ಸೈನಿಕ ಓಕ್ಲಹೋಮಾ ಎಂಬ ನಗರದಲ್ಲಿ ಬಾಂಬ್ ಸ್ಫೋಟಿಸಿ 168 ಅಮೆರಿಕನ್ನರನ್ನು ಬಲಿಪಡೆದಿದ್ದ. ತನ್ನನ್ನು ಸೈನಿಕನನ್ನಾಗಿ ಬಳಸಿಕೊಂಡ ಅಮೆರಿಕನ್ ಸರ್ಕಾರ ತನ್ನಿಂದ ಅಮಾನುಷ ಕಾರ್ಯ ಮಾಡಿಸಿತೆಂಬುದು ಅವನ ಆಕ್ರೋಶಕ್ಕೆ ಕಾರಣವಾಗಿತ್ತು. ■





ಲೋಕಾಯುಕ್ತಕ್ಕೆ ದೂರು

ಚೆಡ್ಡಿ ಮಾಣಿ ಕಾಗೇರಿಯೂ ಕಳ್ಳ!!

ಸಕಲ ಗುಣಸಂಪನ್ನನ ಮೇಕಪ್‌ನಲ್ಲಿ ಕಂಗೊಳಿಸುವ ಉತ್ತರ ಕನ್ನಡದ ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಮುಖವಾಡ ಒಂದೊಂದಾಗಿ ಕಳಚಿ ಬೀಳಲಾರಂಭಿಸಿದೆ! ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿ ಮಾಂಡಲೀಕನೂ ಆಗಿರುವ ಈ ಅನಾಹುತಕಾರಿ ಚೆಡ್ಡಿ ಚತುರ ಉತ್ತರ ಕನ್ನಡದಲ್ಲಿ ಮತ್ತು ಶಿಕ್ಷಣ ಇಲಾಖೆಯಲ್ಲಿ ಭರ್ತಿ ಭೋಜನಕ್ಕೆ ಕುಂತಿರುವ ಭಂಗಿಯೇ ಎಂಥವರನ್ನೂ ದಂಗಾಗಿಸುವಂತಿದೆ!! "ನಂಗ್ಳ ಮಾಣಿ ಹಡಬೆ ಹಣಕ್ಕೆ ಕೈಹಾಕೋ ಹರಾಮಿ ಅಲ್ಲ..." ಎಂಬ ವಿಪರೀತ ಭ್ರಮೆ ಮೂಡಿಸಿಕೊಂಡಿದ್ದ ಕಾಗೇರಿಯ ಸ್ವ-ಜಾತಿ ಹೈಗರೂ ಆತನ ಹಪಾಹಪಿ ಕಂಡು ಕಂಗಾಲಾಗಿಹೋಗಿದ್ದಾರೆ. ಸದಾ ಪಾಪದ ಪ್ರಾಣಿಯಂತೆ ಜೋಲು ಮೋರೆ ಹಾಕಿಕೊಂಡಿರುವ ಕಾಗೇರಿ 'ಸೈಕಲ್ ಕಳ್ಳ' ಎಂಬ ಬೊಬ್ಬೆ ಬಿದ್ದಾಗಲೇ ಸಂಘ ಪರಿವಾರದಲ್ಲೂ ಸಂಚಲನ ಆಗಿತ್ತು.


ಕಾಗೇರಿ ಮಾಣಿ ಅಸಲಿ ಆರೆಸೆಸ್. ಹೇಳೋದು ಕಾಶಿಕಾಂಡ; ತಿನ್ನೋದು ಮಾತ್ರ ಮಶಿ ಕೆಂಡವೇ! ಹುಟ್ಟಾ ಹಣವಂತ ಹೈಗರ ಖಾನ್‌ದಾನ್‌ನ ಕಾಗೇರಿಯ ದುಡ್ಡಿನ ದಾಹ ಶಿರಸಿ ಸೀಮೆಯಲ್ಲಿ ಇವತ್ತು ಮನೆ ಮಾತಾಗಿ ಹೋಗಿದೆ. ಮಂತ್ರಿಯಾಗಿ ಜಿಲ್ಲೆಗೆ ಮೂರು ಬಿಲ್ಲಿ ಪ್ರಯೋಜನಕಾರಿ ಕೆಲಸ ಮಾಡದಿದ್ದರೂ ಅಧಿಕಾರಕ್ಕೇರಿದ ಮೂರೇ ದಿನದಲ್ಲಿ ಕಾಗೇರಿ ಅಕ್ರಮ ಲೇವಾದೇವಿ-ಬೇನಾಮಿ ದಂಧೆ ಸ್ಕೆಚ್ ಹಾಕಿಕೊಂಡು ಶ್ರೀಮಂತಿಕೆಯನ್ನು ಇನ್ನಷ್ಟು ವೃದ್ಧಿಸಿಕೊಂಡು ಬಿಟ್ಟಿದ್ದಾನೆ. ಈ ಕಾಗೇರಿ ಸೊಫೆಸ್ಟಿಕೇಟ್ ಕಳ್ಳನೆಂಬುದು ಹಳೇ ಸುದ್ದಿ. ಆದರೆ ಆ ಬಿರುದಿಗೆ ಈಗ ಅಧಿಕೃತ ಸಿಂಧುತ್ವ ಸಿಗುವ ಸಕಲ ಲಕ್ಷಣಗಳೂ ಗೋಚರಿಸಲಾರಂಭಿಸಿದೆ...

ಸ್ವಯಂಘೋಷಿತ ಸಂಭಾವಿತನೂ-ಚೆಡ್ಡಿ ಪ್ರಾಣೀತ ದೇಶ ಭಕ್ತಾಗ್ರೇಸನೂ ಆಗಿರುವ ಸದ್ರಿ ಶ್ರೀಮಾನ್ ಕಾಗೇರಿ ಸಾಹೇಬರ ಮೇಲೆ ಮೊನ್ನೆ (28-1-13) ಲೋಕಾಯುಕ್ತ ನ್ಯಾಯಾಲಯದಲ್ಲಿ ಭ್ರಷ್ಟಾಚಾರದ ದೂರೊಂದು ದಾಖಲಾಗಿದೆ. ಕಾಗೇರಿಯ ಶಿರಸಿ ಸೀಮೆಯವರೇ ಆಗಿರುವ ಮೂಡಿಗೇಸರ ಗ್ರಾಮದ ವಿನಾಯಕ ಹೆಗಡೆ ಎಂಬಾತ ಮಂತ್ರಿಜೀಯ ದಗಲುಬಾಜಿ ದಂಧೆಗಳ ಬಗ್ಗೆ ತನಿಖೆ ನಡೆಸುವಂತೆ ಲೋಕಾಯುಕ್ತ ನ್ಯಾಯಾಲಯವನ್ನು ಕೇಳಿಕೊಂಡಿದ್ದಾರೆ. ಈ ಕಂಪ್ಲೇಂಟು ವಿಚಾರಣೆಗೆ ಕೋರ್ಟ್ ಕೈಗೆತ್ತಿಕೊಳ್ಳುತ್ತಿದ್ದಂತೆಯೇ ಕಾಗೇರಿ ಮಂತ್ರಿಗಿರಿ ಬಲದಿಂದ ಭರ್ಜರಿ ಆಸ್ತಿ-ಹಣ ಗುಡ್ಡೆ ಹಾಕಿಕೊಂಡಿದ್ದಾನೆಂಬ ಹುಯಿಲು ತಾರ್ಕಿಕ ಅಂತ್ಯ ತಲುಪುವ ಕಾಲವೂ ಸನ್ನಿಹಿತವಾದಂತಾಗಿದೆ!

ಪ್ರವಾಸೋದ್ಯಮಿ ಮಾಣಿ

ಶಿರಸಿಯ 'ಕಳವೆ' ಗ್ರಾಮದಲ್ಲಿ 'ಬಕುಲ' ಎಂಬ ಹೆಸರಿನ ಹೋಂ ಸ್ಟೇ ಕಾಗೇರಿಯ ಅಳಿಯ ಸುಹಾಸ ಹೆಗಡೆ ನಡೆಸುತ್ತಿದ್ದಾನೆ. ಈ ಪ್ರವಾಸೋದ್ಯಮಕ್ಕಾಗಿ ಎಕರೆ ಗಟ್ಟಲೆ ಜಮೀನು ಖರೀದಿ ಮಾಡಲಾಗಿದೆ. ಜತೆಗೆ ಅರಣ್ಯವನ್ನೂ ಅಪಾರ ಪ್ರಮಾಣದಲ್ಲಿ ಅತಿಕ್ರಮಣ ಮಾಡಲಾಗಿದೆ. ಸದ್ರಿ ಹೋಮ್ ಸ್ಟೇ ದಂಧೆಗೆ ಪ್ರವಾಸೋದ್ಯಮ ಇಲಾಖೆಯಿಂದ ಹಣವೂ ಅನುಚಾನಾಗಿ ಬರುತ್ತಿದೆ. 'ಬಕುಲ'ದ ಉಸ್ತುವಾರಿ ಸುಹಾಸ ಹೆಗಡೆಯದಾದರೂ ಈ ಜಬರ್ದಸ್ತ್ ವ್ಯವಹಾರದ ಬೇನಾಮಿ ಬಾಸ್ ಮಂತ್ರಿ ಕಾಗೇರಿ. ಇದಿಷ್ಟು ಶಿರಸಿ ಪ್ರಾಂತ್ಯದಲ್ಲಿ ಎಲ್ಲರಿಗೂ ಗೊತ್ತಿರುವ ಸತ್ಯ.

ಕಾಗೇರಿ ಮಾಣಿಯ ಅಳಿಯ ಸುಹಾಸ ಹೆಗಡೆ ಪ್ರವಾಸೋದ್ಯಮ ಇಲಾಖೆಯಿಂದ ಹಣ ಹೊಡೆಯಲೆಂದೇ 'ಹೌರಾ' ಎಂಬ ಸ್ವಾಹಾ ಎನ್‌ಜಿಓ ಒಂದನ್ನು ರಾತ್ರೋರಾತ್ರಿ ಹುಟ್ಟುಹಾಕಿದ್ದಾನೆ. ಈತನ ಹೋಮ್ ಸ್ಟೇಗಾಗಿ ಹೆಂಗಸೊಬ್ಬಳಿಂದ ಒಟ್ಟು 4.35 ಎಕರೆ ಕೃಷಿ ಜಮೀನನ್ನು ಖರೀದಿಸಲಾಗಿದೆ. ಸರ್ವೆ ನಂಬರ್ 103 ರಲ್ಲಿ 2.18 ಎಕರೆ, ಸರ್ವೆ ನಂಬರ್ 106ರಲ್ಲಿ 2.1ಎಕರೆ ಮತ್ತು ಸರ್ವೆ ನಂಬರ್ 109 ರಲ್ಲಿ 16 ಗುಂಟೆ ಜಮೀನು ಖರೀದಿಸಲಾಗಿದೆ. ಪ್ರಕೃತಿ ಸೊಬಗಿನ ಕಳವೆ ಏರಿಯಾದಲ್ಲಿ ನದಿ-ಕೊಳ್ಳ-ಜಲಪಾತ -ತೋಟ-ಗದ್ದೆ-ದಟ್ಟಕಾಡು ಇದೆ.


ಸುಹಾಸ್ ಹೆಗಡೆ

ಹೀಗಾಗಿ ಕಾಗೇರಿ ಬಳಗಕ್ಕೆ ಈ ಹೋಮ್ ಸ್ಟೇ ದಂಧೆ ದೊಡ್ಡ ವರಮಾನ ತಂದುಕೊಡುತ್ತಿದೆ. ಜತೆಗೆ ಪ್ರವಾಸೋದ್ಯಮ ಇಲಾಖೆಯಿಂದಲೂ ಅಪಾರ ಸೌಲಭ್ಯ ಸವಲತ್ತುಗಳು ನಿರಾಯಾಸವಾಗಿ ಹರಿದುಬರುತ್ತಿದೆ.

ವಿಷಯ ಅದಲ್ಲ. ಪ್ರಾಮಾಣಿಕನೆಂಬ ಹುಸಿ ಇಮೇಜಿನ ಕಾಗೇರಿ ನಡೆಸುತ್ತಿರುವ ಹೋಮ್ ಸ್ಟೇ ದಂಧೆ ಅಕ್ರಮ. ಸರ್ಕಾರಿ ನಿಯಮ ಕಾನೂನುಗಳನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಧಿಕ್ಕರಿಸಿ ದುಡ್ಡು ಮಾಡುತ್ತಿದೆ ಕಾಗೇರಿ ಬಳಗ. ಹೋಮ್ ಸ್ಟೇ ನಡೆಯುತ್ತಿರುವುದು ಕೃಷಿ ಭೂಮಿಯಲ್ಲಿ. ಆದರೆ ಹೋಮ್ ಸ್ಟೇ ದಂಧೆ ಕೃಷಿಯೇತರ ಬಿಸಿನೆಸ್. ಹಾಗಂತ ಕಾಗೇರಿಯಾಗಲಿ ಆತನ ಬೇನಾಮಿ ಸುಹಾಸ್ ಹೆಗಡೆಯಾಗಲಿ ಈ ಕೃಷಿ ಜಮೀನನ್ನು ನಾನ್ ಎಗ್ರಿಕಲ್ಚರಲ್ ಭೂಮಿಯಾಗಿ ಪರಿವರ್ತಿಸಿಕೊಂಡಿಲ್ಲ. ತಮಗೆ ಈ ಭೂಮಿಯಿಂದ ಬರುತ್ತಿರುವುದು ಬರೀ ಕೃಷಿ ಉತ್ಪನ್ನ ಎಂದು ಕಾಗೇರಿ ಸುಳ್ಳು ಸಾಧಿಸುತ್ತಿದ್ದಾನೆ. ಹೋಮ್ ಸ್ಟೇನಿಂದ ಈ ಜಮೀನಿನಲ್ಲಿ ಬರುತ್ತಿರುವ ಆದಾಯ ಬೇಕೆಂತಲೇ ಕಾಗೇರಿ ಅಡಗಿಸಿಟ್ಟು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾನೆ. ಅಷ್ಟೇ ಅಲ್ಲ, ಹೋಮ್ ಸ್ಟೇ ಬಳಿಯ ಕಳವೆ ಸರ್ವೇ ನಂಬರ್ 79 ರಲ್ಲಿನ ಅರಣ್ಯ ಭೂಮಿಯನ್ನೂ 'ಬಕುಲ'ದ ಭೂಪರು ಕಬಳಿಸಿದ್ದಾರೆ. ಪ್ರವಾಸೋದ್ಯಮಕ್ಕೆ ಮೀಸಲಿರುವ ಲಕ್ಷಾಂತರ ರೂ. ಮೇಲೆ ಕಣ್ಣಿಟ್ಟು ಮಾಡಿರುವುದು ಕರಾಮತ್ತಿದು.

ಈ ಪಾತಕವನ್ನೆಲ್ಲ ಕಾಗೇರಿ ಮಂತ್ರಿಗಿರಿ ಮಹಿಮೆಯಿಂದ ಮಾಡಿಕೊಂಡಿದ್ದಾನೆಂದು ಲೋಕಾಯುಕ್ತ ನ್ಯಾಯಾಲಯಕ್ಕೆ ಕೊಡಲಾಗಿರುವ ದೂರಿನಲ್ಲಿ ಹೇಳಲಾಗಿದೆ. ಸರಿಯಾದ ತನಿಖೆ ನಡೆದರೆ ಕಾಗೇರಿ ಅಸಲಿ ಕಾಗೆಯೋ? ಕೋಗಿಲೆಯೋ? ಎಂಬುದು ಸಾಬೀತಾಗುತ್ತದೆ.

ಹಣ ಹೊಡೆವ 'ಹೌರಾ'

ಮಂತ್ರಿಯಾಗುತ್ತಿದ್ದಂತೆಯೇ ಕಾಗೇರಿ ಕಾಸು ಮಾಡುವ ಅಡ್ಡಕಸುಬಿಗೆ ನಿಂತುಬಿಟ್ಟಿದ್ದ. ಪ್ರತಿ ಮರ್ಗಾಮಾರ್ಗಿ ಸುಗ್ಗಿಯಲ್ಲಿ ಆತ ಬಡಿದ ಕುತ್ರಿಗಳಿಗೆ ಲೆಕ್ಕವೇ ಇಲ್ಲ. ಒಡಹುಟ್ಟಿದ ಕಾನೂನು ಪಂಡಿತ ತಮ್ಮನೇ ಈತನ ಲೇವಾದೇವಿ ಏಜೆಂಟ್. ಆಯಕಟ್ಟಿನ ಜಾಗಕ್ಕೆ ಗೋಲ್‌ಮಾಲ್ ಪ್ರವೀಣರಾದ ಅಧಿಕಾರಿ, ಅಭಿಯಂತರನ್ನೆಲ್ಲಾ ತಂದುಕೂರಿಸಿದ. 'ತಮ್ಮ' ಗೋಣಿಚೀಲದಲ್ಲೇ ದುಡ್ಡು ತುಂಬಿಕೊಂಡಿದ್ದಾನೆಂಬುದು ಶಿರಸಿಯಲ್ಲಿ ಜನಜನಿತ! ಶಿರಸಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಕುರ್ಚಿಯಲ್ಲಿ ವಿಜಯಕುಮಾರ್ ಎಂಬ ನಾಲಾಯಕ್ ನಾಜೂಕಯ್ಯನನ್ನು ಕೂದ್ರಿಸಿ ಕಾಗೇರಿ ಬಳಗ ಮಾಡಿರುವ ಲೂಟಿ ಹೇಳತೀರದು. ಈ ಪಿಡಬ್ಲ್ಯೂಡಿ ವಿಭಾಗಕ್ಕೆ ಬಂದಿರುವ ಅನುದಾನ ಅಪಾರ. ಅರ್ಥಾತ್ ಕಾಗೇರಿ ಪಟಾಲಮ್‌ಗೆ ಸಿಕ್ಕಿರುವ ಪರ್ಸೆಂಟೇಜೂ ಅಗಣಿತ!!

ಫಲವತ್ತಾದ ಎಲ್ಲ ಇಲಾಖೆಯಲ್ಲೂ ಕಾಗೇರಿಯ ತಮ್ಮ ಹೇಳಿದ್ದೇ ಅಂತಿಮ ವಾಣಿ. ಕಾಗೇರಿಯ ಕಾಸು ಮಾಡುವ ಖಯಾಲಿಯನ್ನು ಆತನದೇ ಪಕ್ಷದ- ಆತನದೇ ಜಾತಿಯ ಸಂಸದ ಅನಂತಕುಮಾರ್ ಹೆಗಡೆಯೇ ಒಮ್ಮೆ ಬಹಿರಂಗ ಪಡಿಸಿದ್ದರು. ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ; ಸರ್ವ ಶಿಕ್ಷಣ ಅಭಿಯಾನ ಸ್ಕೀಮಿನಲ್ಲಿ ಕಾಗೇರಿ ಕರಾಮತ್ತು ಮಾಡಿದ್ದಾರೆಂದು ಅನಂತ್ಮಾಣಿ ಬೊಬ್ಬೆ ಹೊಡೆದಿದ್ದ. ಸಿಬಿಐ ತನಿಖೆಗೆ ಕೊಡುವಂಥ ಕರ್ಮಕಾಂಡ ಈ ಕೇಂದ್ರ ಸರ್ಕಾರದ ಕೋಟ್ಯಂತರ ರೂ. ಅನುದಾನದ ಯೋಜನೆಯಲ್ಲಿ ಆಗಿದೆ. ನಿರ್ಮಿತಿ ಕೇಂದ್ರ, ಲ್ಯಾಂಡ್ ಆರ್ಮಿ, ಆದಿರು ಅವ್ಯವಹಾರದಿಂದ ಕಾಗೇರಿ ಸಾಹೇಬರಿಗೆ ದೊಡ್ಡ ಮೊತ್ತ ಆಮದನಿ ಬರುತ್ತಿದೆಯೆಂಬ ಗುಲ್ಲು ಇವತ್ತಿಗೂ ಹರಿದಾಡುತ್ತಿದೆ.

ಹೀಗೆ ಅನಾಯಾಸವಾಗಿ ಬಂದುಬೀಳುತ್ತಿದ್ದ ಕೋಟಿ-ಕೋಟಿ ಶ್ರೀಮಂತ ಬ್ರಾಹ್ಮಣ ಮನೆತನದ ಕಾಗೇರಿ ಇಡೋದಾದರೂ ಎಲ್ಲಿ? ಈ ದೋ ನಂಬರ್ ದುಡ್ಡನ್ನು ಬೇನಾಮಿ ಭೂಮಿ-ಕಟ್ಟಡಗಳ ಖರೀದಿಯಲ್ಲಿ ತೊಡಗಿಸಲಾಗುತ್ತಿದೆ ಎಂಬ ಚರ್ಚೆ ಎರಡು ವರ್ಷದ ಹಿಂದೆಯೇ ಜಿಲ್ಲೆಯಾದ್ಯಂತ ಶುರುವಾಗಿತ್ತು. 'ಕಳವೆ' ಎಂಬಲ್ಲಿ ಮಂತ್ರಿ ಬಳಗದವರು ತೋಟ-ತೊರೆ-ಜಲಪಾತವಿರುವ ಸೊಬಗಿನ ಭೂಮಿಯನ್ನು ಬರೋಬ್ಬರಿ ಒಂದೂವರೆ ಕೋಟಿಗೆ ಖರೀದಿಸಿದ್ದಾರೆಂದು ಜನ ಮಾತಾಡಿಕೊಂಡಿದ್ದರು. ಇಲ್ಲೊಂದು ಆಕರ್ಷಕ ರೆಸಾರ್ಟ್ ಕಟ್ಟಿ ನಿಲ್ಲಿಸುವ ಕನಸು ಕಾಗೇರಿಯದಾಗಿತ್ತು.

ಸಚಿವ ಸ್ಥಾನದ ಶಕ್ತಿ, ಸರ್ಕಾರಿ ಸೌಲತ್ತು, ಪ್ರಕೃತಿ ಸಂಪತ್ತು ಬಳಸಿಕೊಂಡು ಏನೇನು ಉದ್ಯಮ ಮಾಡಲು ಸಾಧ್ಯವೋ ಅದೆಲ್ಲಾ ಮಾಡಿ ಧನವಂತನಾಗುವ ಧಾವಂತಕ್ಕೆ ಕಾಗೇರಿ ಮಂತ್ರಿಯಾದ ಮರುಗಳಿಗೆಯಲ್ಲೇ ಬಿದ್ದಿದ್ದ. ಉತ್ತರ ಕನ್ನಡ ಪ್ರವಾಸೋದ್ಯಮಕ್ಕೆ ಹೇಳಿಮಾಡಿಸಿದ ಸುಂದರ ಜಿಲ್ಲೆ; ಜತೆಗೆ ಪ್ರವಾಸೋದ್ಯಮಕ್ಕಿದ್ದ ಆಕರ್ಷಕ ಪ್ರೋತ್ಸಾಹ-ಲಕ್ಷಗಟ್ಟಲೆ ಸಬ್ಸಿಡಿ, ಅನುದಾನ, ಬೀಜ ಧನ, ಬಂಡವಾಳ ಮೀಸಲಿಟ್ಟದ್ದು ಕಾಗೇರಿ ಗ್ಯಾಂಗಿನ ಬಾಯಲ್ಲಿ ನೀರೂರಿಸಿತ್ತು. ಕಾಗೇರಿಗೆ ತಾನೇ ಏಕೆ ಬೇನಾಮಿ ಪ್ರವಾಸೋದ್ಯಮಿ ಆಗಬಾರದೆಂಬ ತೆವಲು ಶುರುವಾಗಿತ್ತು.

ಕಳವೆಯಲ್ಲಿ ಕೊಂಡಿದ್ದ 4.35 ಎಕರೆ ಜಮೀನು, ಅದರ ಸುತ್ತಲಿನ ಅರಣ್ಯ ಭೂಮಿಯಲ್ಲಿ ರೆಸಾರ್ಟ್ ಸ್ಥಾಪಿಸಲು ಕಾಗೇರಿ ಮೊದಲು ಸ್ಕೆಚ್ ಹಾಕಿದ್ದರು. ಆದರೆ ರೆಸಾರ್ಟ್‌ಕ್ಕಿಂತಲೂ ಹೋಮ್ ಸ್ಟೇ ಲಾಭದಾಯಕ ಎಂದು ಆತನ ಆಪ್ತ ಪರಿಸರ ಪಂಡಿತ ಕಳಪೆ ಶಿವಾನಂದ ಮತ್ತಿತರರು ಸಲಹೆ ನೀಡಿದರು. ಪೆದ್ದು ಮಂತ್ರಿ ಗೋಣಾಡಿಸಿದ್ದ. ಪ್ರವಾಸೋದ್ಯಮ ಇಲಾಖೆಯ ಹಣ ಹೊಡೆಯುವ ಸ್ವಾಹಾ ಸ್ವಯಂಸೇವಾ ಸಂಸ್ಥೆ ಶುರು ಮಾಡುವ ಪ್ಲಾನ್ ರೆಡಿಯಾಗೇ ಬಿಟ್ಟಿತು. ಕಾಗೇರಿಯ ಅಳಿಯ ಸುಹಾಸ್ ಹೆಗಡೆಯೇ 'ಹೌರಾ' ಎಂಬ ಎನ್‌ಜಿಓದ ಮಾಲೀಕ.

ಲಕ್ಷಾಂತರ ಲೂಟಿ!

ಪ್ರವಾಸೋದ್ಯಮ ಇಲಾಖೆಯಿಂದ ಹಣ ಬಿಡುಗಡೆ ಮಾಡಿಕೊಳ್ಳಲು 'ಹೌರಾ' ಹರಾಮಿಗಳಾದ ಕಳಪೆ-ಹೆಗಡೆ 'ಸಂಸ್ಕೃತಿ ಸಂಚಯ' ಎಂಬ ದೋಖಾ ಪ್ರಾಜೆಕ್ಟ್‌ವೊಂದನ್ನು ತಯಾರು ಮಾಡಿದ್ದರು. ಮಂತ್ರಿ ಕಾಗೇರಿ ತನ್ನ ಬಂಧು-ಬಾಂಧವರ ಈ ನೀಲನಕ್ಷೆ ಹಿಡಿದುಕೊಂಡು ಬೆಂಗಳೂರಲ್ಲಿ ಕಾರ್ಯಾಚರಣೆ ನಡೆಸಿದರು. ತಕ್ಷಣವೇ ಪ್ರವಾಸೋದ್ಯಮದ ಬಗ್ಗೆ ಅರಿವು, ಜಾಗೃತಿ ಮೂಡಿಸುವ ಉಪನ್ಯಾಸ-ಸಭೆ, ಪ್ರವಾಸಿತಾಣ ಪರಿಚಯಿಸುವ ಕಾರ್ಯಕ್ರಮಕ್ಕೆಂದು 'ಹೌರಾ ಫೌಂಡೇಷನ್'ಗೆ ಬರೋಬ್ಬರಿ 20 ಲಕ್ಷ ಜಿಲ್ಲಾಧಿಕಾರಿ ಕೊಟ್ಟು ಬಿಟ್ಟರು! ಇದು ಪಕ್ಕಾ ಬೋಗಸ್ ಯೋಜನೆ ಸರ್ಕಾರಿ ಹಣ ಲಪಟಾಯಿಸಲೆಂದೇ ಮಾಡಿದ ಮಸಲತ್ತು. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಪ್ರವಾಸಿತಾಣಗನ್ನು ಪರಿಚಯಿಸುವ, ಪ್ರವಾಸಿತಾಣದಲ್ಲಿ ಹೇಗೆ ವರ್ತಿಸಬೇಕೆಂದು ಉಪದೇಶಿಸುವ ಬಂಡಲ್ ಕಾರ್ಯಕ್ರಮಕ್ಕೆಂದೇ 20 ಲಕ್ಷ ಮಂಜೂರಿ ಆಗಿತ್ತು. ಆ ಬಳಿಕ ಮತ್ತೆ 30 ಲಕ್ಷ ಸ್ಯಾಂಕ್ಷನ್ ಮಾಡಲಾಯ್ತು.

ಈ ಸರ್ಕಾರಿ ಹಣವೇ ಕಾಗೇರಿ ಬಳಗದ 'ಹೋಮ್ ಸ್ಟೇ' ಉದ್ಯಮಕ್ಕೆ ಬಂಡವಾಳವಾಗಿದೆ. ಸದ್ರಿ 50 ಲಕ್ಷದಿಂದ ಕಳವೆಯಲ್ಲಿ ಹೋಮ್ ಸ್ಟೇ ಗುಡಿಸಲುಗಳನ್ನು ನಿರ್ಮಿಸಲಾಗಿತ್ತು. ಅಂದರೆ ಪುಕ್ಕಟೆಯಾಗಿ ಕಾಟೇಜ್ ಕಟ್ಟಿಸಿಕೊಂಡ ಕಾಗೇರಿ ಬಳಗ ಆ ಬಳಿಕ ಪ್ರತಿ ವರ್ಷ 30 ಲಕ್ಷ ಪ್ರವಾಸೋದ್ಯಮ ಇಲಾಖೆಯಿಂದ ಪಡೆದುಕೊಂಡಿದೆ. ಉತ್ತರ ಕನ್ನಡಕ್ಕೆ ಪ್ರವಾಸೋದ್ಯಮ ಎಂಬುದು ಮರೀಚಿಕೆ ಆದರೆ, ಕಾಗೇರಿ ಗ್ಯಾಂಗಿಗೆ ಮಾತ್ರ ಈ ಪ್ರವಾಸೋದ್ಯಮ ಭಾಗ್ಯದ ಬಾಗಿಲನ್ನೇ ತೆರೆದಿದೆ. 'ಬಕುಲ' ಕಾಟೇಜ್‌ನಲ್ಲಿ ಕಾಗೇರಿ ಪರಿವಾರಕ್ಕೆ ಬಿಸಿ-ಬಿಸಿ ಬಿಸಿನೆಸ್. ಸರ್ಕಾರಿ ದುಡ್ಡು; ಕಾಗೇರಿಯಪ್ಪನ ಜಾತ್ರೆ!! ಚೆಡ್ಡಿ ಕೇಡರಿನ ಕಾಗೇರಿಯ ಪರಿಶುದ್ಧತೆ-ದೇಶ ಭಕ್ತಿಯ ಒಂದು ಸ್ಯಾಂಪಲ್ ಇದಷ್ಟೇ.

ಈ 'ಬಕುಲ' ಭಾನ್ಗಡಿ ಈಗ ಲೋಕಾಯುಕ್ತ ನ್ಯಾಯಾಲಯದ ಕಟ್ಟೆಯೇರಿದೆ. 'ಮಿಸ್ಟರ್ ಕ್ಲೀನ್' ಸೋಗಿನ ಕಾಗೇರಿ 'ಮಿಸ್ಟರ್ ಡರ್ಟಿ' ಎಂಬುದೀಗ ಜನರಿಗಂತೂ ಖಾತ್ರಿಯಾಗಿ ಹೋಗಿದೆ!!

● ನಹುಷ


ಮೈಸೂರು: ವಿಕ್ರಮ್ ಆಸ್ಪತ್ರೆಯ ಕಿಡ್ನಿ ದುರಂತ

Humble, humane, honest

...ದು ತನ್ನನ್ನು ಪ್ರತಿಷ್ಠಿತ ಅಂತ ಕರೆದುಕೊಳ್ಳುವ ...ಮ್ ಆಸ್ಪತ್ರೆಯ ಟ್ಯಾಗ್‌ಲೈನ್. ಆದರೆ ಅಲ್ಲಿನ ಧನದಾಹ, ...ರ ನಿರ್ಲಕ್ಷ್ಯತೆ, ಆಡಳಿತ ಮಂಡಳಿಯ ನಯವಂಚಕತೆ ...ಹತ್ತಿರದಿಂದ ಗಮನಿಸಿದರೆ ಈ ಮೂರೂ ಪದಗಳು ...ಹೀನ ಎನ್ನುವುದು ಖಾತ್ರಿಯಾಗುತ್ತದೆ.

ಮೈಸೂರು ಮಾತ್ರವಲ್ಲದೆ ಬೆಂಗಳೂರು ಮತ್ತು ...ದಲ್ಲೂ ಶಾಖೆಗಳನ್ನು ಹೊಂದಿರುವ ಈ ಆಸ್ಪತ್ರೆ ...ಗಳ ಜೀವದ ಜೊತೆ ಆಟವಾಡುವುದನ್ನೆ ಬಿಜಿನೆಸ್ ...ಕೊಂಡಂತಿದೆ. ಮೈಸೂರಿನ ಯಾದವಗಿರಿಯಲ್ಲಿರುವ ...ಮ್ ಆಸ್ಪತ್ರೆಯು ವೃದ್ಧ ದಂಪತಿಗಳಿಬ್ಬರ ಕಿಡ್ನಿಗಳ ... ಚೆಲ್ಲಾಟವಾಡಿದ ವಿದ್ರಾವಕ ಪ್ರಸಂಗ ಇಡೀ ವಿಕ್ರಮ್ ...ದ ಪರಾಕ್ರಮವನ್ನು ಬಿಚ್ಚಿಡುತ್ತದೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ವಾಸವಿರುವ ...ಗೌಡ ಮತ್ತು ಧನಲಕ್ಷ್ಮಿ ದಂಪತಿಗಳು ಸದರಿ ಆಸ್ಪತ್ರೆಯ ...ತುರ್ಯದಿಂದಾಗಿ ತಮ್ಮ ಎರಡೆರಡು ಕಿಡ್ನಿಗಳನ್ನೂ ...ಕೊಂಡು ಈಗ ಅಸಹಾಯಕರಾಗಿ ಮಲಗಿದ್ದಾರೆ. ... ಮಗ ದೇವರಾಜ್ ಆಸ್ಪತ್ರೆಯವರ ಸುಳ್ಳು ಕೇಸಿನ ...ಕ್ಕೆ ಸಿಲುಕಿ, ವಿಪರೀತ ಸಾಲಗಾರನಾಗಿ ನರಳಾಡುತ್ತಿದ್ದಾನೆ. ...ರಾಜ್ ಅಲ್ಲದೆ ಈ ದಂಪತಿಗಳಿಗೆ ಮತ್ತೊಬ್ಬ ಮಗಳಿದ್ದು ...ಯ ಮಂದಿ ತನ್ನ ಕುಟುಂಬಕ್ಕೆ ಮಾಡಿರುವ ...ಸದಿಂದಾಗಿ ಆಕೆ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸಿ ...ಯಲ್ಲಿದ್ದಾಳೆ. ಇಷ್ಟಕ್ಕೆಲ್ಲ ಆಸ್ಪತ್ರೆಯ ಮ್ಯಾನೇಜಿಂಗ್



ನತದೃಷ್ಟ ತಿಬ್ಬೇಗೌಡ–ಧನಲಕ್ಷ್ಮಿ ದಂಪತಿ

...ಕ್ಟರ್ ಡಾ.ಎಸ್.ಬಿ.ವಿಕ್ರಮ್, ಮುಖ್ಯ ಆಡಳಿತಾಧಿಕಾರಿ ...ಶಂಕರ್ ರಾವ್, ಡಾ. ಕೆ.ಸಿ.ಗುರುದೇವ್ ಮತ್ತು ...ಎಂ.ಎಸ್.ರಂಗನಾಥ್‌ರೇ ಪ್ರತ್ಯಕ್ಷ ಕಾರಣ.


...ತಿಬ್ಬೇಗೌಡ ಬಾಬುರಾಯನಕೊಪ್ಪಲಿನಲ್ಲಿ ಸಣ್ಣದೊಂದು ... ಅಂಗಡಿ ಹೊಂದಿದ್ದು, ಮಗ ದೇವರಾಜ್ ಬಿ.ಕಾಂ. ...ಸಿ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ...ಟೆಂಟ್ ಆಗಿ ಕೆಲಸ ಮಾಡುತ್ತಿದ್ದಾನೆ. ಇವರದ್ದು ...ಮವರ್ಗದ ಕುಟುಂಬ. ಈಗ್ಗೆ ಒಂದೆರಡು ವರ್ಷಗಳ ... ತಿಬ್ಬೇಗೌಡನ ಪತ್ನಿ ಧನಲಕ್ಷ್ಮಿಗೆ ಮೂತ್ರಕೋಶದಲ್ಲಿ ...ದರೆ ಕಾಣಿಸಿಕೊಂಡಿತು. ಆಗ ಅವರು ಮೊರೆ ...ಗಿದ್ದು ಇದೇ ವಿಕ್ರಮ್ ಆಸ್ಪತ್ರೆಯ ಡಾ. ...ಗುರುದೇವ್‌ರ ಬಳಿ. ಅಷ್ಟರಲ್ಲಾಗಲೇ ...ಕ್ಷ್ಮಿಯವರ ಎರಡೂ ಕಿಡ್ನಿಗಳು ಗಂಭೀರವಾಗಿ ...ಯಾಗಿದ್ದರಿಂದ ಬದಲೀ ಮೂತ್ರಪಿಂಡ ...ಡಣೆ ಮಾಡದೆ ಬೇರೆ ವಿಧಿಯಿಲ್ಲ ಎಂದು ...ರು ತಿಳಿಸಿದರು. ಪಕ್ಕಾ ಪ್ಯಾಕೇಜ್ ವ್ಯವಹಾರದ ...ಮ್ ಆಸ್ಪತ್ರೆಯಲ್ಲಿ ಇಡೀ ಶಸ್ತ್ರಚಿಕಿತ್ಸೆಗೆ ನಾಲ್ಕು ...ತಗುಲಲಿದ್ದು ತದನಂತರ ಔಷಧೋಪಚಾರಕ್ಕೆ ...ಲ್ಲವೆಂದರೂ 15 ರಿಂದ ಇಪ್ಪತ್ತು ಸಾವಿರ ...ತ್ತದೆಂದು ತಿಬ್ಬೇಗೌಡರಿಗೆ ತಿಳಿಸಿದರು. ಅಷ್ಟು ... ಹೊಂದಿಸಲಾಗದ ಆ ಬಡ ಕುಟುಂಬ ...ೇಷನ್ ಆಲೋಚನೆಯಿಂದ ಹಿಂದೆ ಸರಿದಿತ್ತು. ..., ಬದಲಾಗಿ ಪ್ರತಿ ತಿಂಗಳು ಎರಡು ಬಾರಿ ...ಲಕ್ಷ್ಮಿಯವರಿಗೆ ಇದೇ ಆಸ್ಪತ್ರೆಯ ...ಯೊಂದರಲ್ಲಿ ಡಯಾಲಿಸಿಸ್ ಮಾಡಿಸಲಾಗುತ್ತಿತ್ತು. ...ಡಯಾಲಿಸಿಸ್‌ನಿಂದಾಗಿ ಪ್ರತಿ ತಿಂಗಳು ಏನಿಲ್ಲವೆಂದರೂ ...ದು ಸಾವಿರ ಖರ್ಚು ಬರುತ್ತಿದ್ದನ್ನು ಕಂಡ ಪತಿ ...ಗೌಡ ಕೊನೆಗೊಂದು ದಿನ ತನ್ನ ಎರಡು ಕಿಡ್ನಿಗಳಲ್ಲಿ ...ನ್ನು ಹೆಂಡತಿಗೆ ಕೊಟ್ಟು ಆಪರೇಷನ್ ಮಾಡಿಸುವುದೇ ...ವೆನ್ನುವ ತೀರ್ಮಾನಕ್ಕೆ ಬಂದರು. ಇದನ್ನು ...ಸಿ.ಗುರುದೇವ್‌ಗೆ ತಿಳಿಸಿದಾಗ ಆತನೂ ಗಂಡ ತನ್ನ ...ತಿಗೆ ಒಂದು ಕಿಡ್ನಿ ಕೊಡುವುದನ್ನು ಒಪ್ಪಿದ. ...ನ್ಯವಾಗಿ ಯಾವುದೇ ಅಂಗವನ್ನು ಕಸಿ ಮಾಡುವಾಗ ... ಮತ್ತು ರೋಗಿಗಳಿಬ್ಬರ ರಕ್ತ, ಅಂಗಾಂಶಗಳ ...ದಾಣಿಕೆಯ ಕುರಿತು ಪರೀಕ್ಷೆಗಳನ್ನು ನಡೆಸಲಾಗುತ್ತೆ. ... ಯಾವುದೇ ತೊಂದರೆ ಇಲ್ಲವೆಂಬ ಫಲಿತಾಂಶ ...ನಷ್ಟೆ ನಂತರದ ವೈದ್ಯಕೀಯ ಕ್ರಮಕ್ಕೆ ಮುಂದಾಗಬೇಕು.

ಕಿಡ್ನಿ ವಿಚಾರದಲ್ಲಿ ಕ್ರಾಸ್ ಮ್ಯಾಚಿಂಗ್ ಎನ್ನುವ ಪರೀಕ್ಷೆ ತುಂಬಾ ಮುಖ್ಯ. ಆ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದರೆ (ದಾನಿ ಮತ್ತು ರೋಗಿಯ ಅಂಗಾಂಶಗಳು ಪರಸ್ಪರ ಯಾವುದೇ ಪ್ರತಿಕ್ರಿಯೆ ತೋರುತ್ತಿಲ್ಲ) ಮಾತ್ರ ಕಿಡ್ನಿ ಕಸಿಗೆ ಅವಕಾಶವಿರುತ್ತದೆ. ಈ ಫಲಿತಾಂಶ ಬಂದ 72 ಗಂಟೆಯ ಒಳಗಾಗಿ ಆಪರೇಷನ್ ಮಾಡಬೇಕು. ಇಲ್ಲವೆಂದಾದಲ್ಲಿ ಈ ಫಲಿತಾಂಶ ಬದಲಾಗುತ್ತದೆ. ಮತ್ತೆ ನೆಗೆಟಿವ್ ಫಲಿತಾಂಶ ಬರುವವರೆಗೂ ಕಾಯಬೇಕು. ಅಲ್ಲಿಗೆ ಈ ಪರೀಕ್ಷೆಗಳಿಗೆ ಅಂತ ಖರ್ಚು ಮಾಡಿದ ಹಣವೆಲ್ಲ ವೇಸ್ಟ್ ಆಗಿಬಿಡುತ್ತದೆ. ಈ ಎಲ್ಲ ಕಾರಣಕ್ಕೆ ವೈದ್ಯರು ಸರಿಯಾಗಿ ಪ್ಲ್ಯಾನ್ ಮಾಡಿಕೊಂಡು ಪರೀಕ್ಷೆಗಳನ್ನು ವ್ಯವಸ್ಥೆ ಮಾಡಿಕೊಂಡ ನಂತರವಷ್ಟೆ ಆಪರೇಷನ್‌ಗೆ ಮುಂದಾಗುತ್ತಾರೆ.

ಅದರಂತೆಯೇ ತಿಬ್ಬೇಗೌಡರನ್ನು 12.02.2012ರಂದು ಪರೀಕ್ಷೆಗೊಳಪಡಿಸಿದ ಡಾ.ಗುರುದೇವ್ ಬೆಂಗಳೂರಿನ ಆನಂದ್ ಡಯಾಗ್ನಿಸ್ಟಿಕ್ ಲ್ಯಾಬೊರೇಟರಿಗೆ ಪರೀಕ್ಷೆಗೆ ಕಳುಹಿಸಿದಾಗ ಮೊದಲ ಎರಡು ಬಾರಿ ಪಾಸಿಟಿವ್ ರಿಪೋರ್ಟ್ ಬಂದಿತ್ತು, ಮೂರನೇ ಬಾರಿ ನೆಗೆಟಿವ್ ರಿಪೋರ್ಟ್ ಬರುತ್ತಿದ್ದಂತೆಯೇ ತರಾತುರಿಯಲ್ಲಿ 03.08.2012ಕ್ಕೆ ಆಪರೇಷನ್‌ಗೆ ಡೇಟ್ ಫಿಕ್ಸ್ ಮಾಡಿದ. ಇನ್ನುಳಿದ ಪರೀಕ್ಷೆಗಳನ್ನು ನಡೆಸುವಂತೆಯೂ ಕುಟುಂಬಕ್ಕೆ ತಿಳಿಸಿದ. ಇದಕ್ಕೆಲ್ಲ ಸೇರಿ ಎಪ್ಪತ್ತರಿಂದ ಎಂಬತ್ತು ಸಾವಿರ ಖರ್ಚಾಗಿತ್ತು. ನಿಯಮದ ಪ್ರಕಾರ ಕೊನೇ ಗಳಿಗೆಯ ಪರೀಕ್ಷೆ ಎಂಬಂತೆ ಟಿ.ಟಿ.ಕೆ ಲ್ಯಾಬರೇಟರಿಗೆ ಕ್ರಾಸ್ ಮ್ಯಾಚಿಂಗ್‌ಗೆ ಕಳುಹಿಸಿದಾಗ ರಿಪೋರ್ಟ್ ಅದಾಗಲೆ ಪಾಸಿಟಿವ್‌ಗೆ ಬದಲಾಗಿತ್ತು. ಅಂದರೆ ಆ ಪರಿಸ್ಥಿತಿಯಲ್ಲಿ ಅವರಿಬ್ಬರ ಅಂಗಾಂಶಗಳು ಪರಸ್ಪರ ಪ್ರತಿಕ್ರಿಯಿಸುವ ಲಕ್ಷಣವಿದ್ದರಿಂದ ಆಪರೇಷನ್ ಅನ್ನು ಕೊನೇ ಗಳಿಗೆಯಲ್ಲಿ ಮುಂದೂಡಬೇಕಾಗಿತ್ತು.

ಆಗ ಹೊಸ ವರಾತ ತೆಗೆದ ವೈದ್ಯ ಗುರುದೇವ್ "ಪ್ಲಾಸ್ಮಾಫೆರೆಸಿಸ್ ಚಿಕಿತ್ಸೆ ನೀಡಿದರೆ ರಿಪೋರ್ಟ್ ನೆಗೆಟಿವ್ ಆಗಿ ಬದಲಾಗುತ್ತದೆ, ಆಗ ಶಸ್ತ್ರಚಿಕಿತ್ಸೆ ಮಾಡಬಹುದು" ಎಂದು ಹೇಳಿದ. ಜೀವದ ಬೆದರಿಕೆಗೆ ಸಿಲುಕಿದ ದಂಪತಿಗಳ ಮಗ ದೇವರಾಜ್ ಡಾಕ್ಟರ್ ಹೇಳಿದಂತೆ ಲಕ್ಷಾಂತರ ರೂಪಾಯಿ ಸುರಿದು ಆ ಚಿಕಿತ್ಸೆಯನ್ನೂ ಕೊಡಿಸಿದ. ಕೊನೆಗೆ 18.08.2012ರಂದು ಚೈನ್ನೈನ ಪ್ರತಿಷ್ಠಿತ ಲ್ಯಾಬ್‌ಗೆ ಸ್ಯಾಂಪಲ್ ಕಳುಹಿಸಿ ಅಲ್ಲಿಂದ ನೆಗೆಟಿವ್ ವರದಿ ಬರುತ್ತಿದ್ದಂತೆಯೇ 21.08.2012ಕ್ಕೆ ಆಪರೇಷನ್‌ಗೆ ಇಬ್ಬರನ್ನೂ ಅಣಿ ಮಾಡಿದರು. ಅದರ ಹಿಂದಿನ ದಿನವೇ ದೇವರಾಜ್‌ನಿಂದ 2,10,000 ರೂಪಾಯಿಗಳನ್ನು ಕಟ್ಟಿಸಿಕೊಂಡರು. ಆತನ ಕಷ್ಟ ನೋಡಲಾಗದೆ ಆತನ 20 ಜನ ಸ್ನೇಹಿತರು ತಲಾ ಹತ್ತು ಸಾವಿರದಂತೆ ನೀಡಿದ ಹಣವನ್ನೆ ದೇವರಾಜ್ ಅವತ್ತು ಆಸ್ಪತ್ರೆಗೆ ಕಟ್ಟಿದ.

ಆಪರೇಷನ್ ದಿನದ ಬೆಳಗ್ಗೆ 8 ಗಂಟೆ ಸುಮಾರಿಗೆ ಗಂಡಹೆಂಡತಿಯರನ್ನು ಥಿಯೇಟರ್ ಒಳಗೆ ಕರೆದೊಯ್ದವರು ಮಧ್ಯಾಹ್ನ 3.30ರ ವೇಳೆಗೆ ಪತಿ ತಿಬ್ಬೇಗೌಡನನ್ನು ಹೊರತಂದರು. ಅದಾದ ಸುಮಾರು ಒಂದು ಗಂಟೆಯ ನಂತರ ಪತ್ನಿ ಧನಲಕ್ಷ್ಮಿಯನ್ನೂ ಹೊರತಂದರು. ಅವತ್ತು ಡಾ.ಗುರುದೇವ್ ಜೊತೆಗೆ ನೆಫ್ರಾಲಜಿ ಸ್ಪೆಷಲಿಸ್ಟ್ ಡಾ.ಎಂ.ಎಸ್.ರಂಗನಾಥ್ ಶಸ್ತ್ರಚಿಕಿತ್ಸೆಯ ಸಾರಥ್ಯ ವಹಿಸಿದ್ದರು. ಆದರೆ ಥಿಯೇಟರ್‌ನಿಂದ ಹೊರಬಂದ ಇಬ್ಬರು ವೈದ್ಯರ



VIKRAM

VIKRAM HOSPITAL PRIVATE LIMITED

To, Date: 27.09.12

Mr. Devaraju

Mysore.

Dear Sir,

This has reference to your letter of request today requesting for free dialysis including disposables to Mr. Dhanalakshmi (Your Mother) [illegible] Mr. Tibbe Gowda (Your father) as and when required.


We hereby wish to inform you that your above request is acceptable to us.

Thanking you

Yours truly,

Chief of hospital administration

ಆಸ್ಪತ್ರೆಯವರು ಬರೆದುಕೊಟ್ಟ ಉಚಿತ ಚಿಕಿತ್ಸೆಯ ಕರಾರು ಪತ್ರ



ಯಾದವಗಿರಿಯ ವಿಕ್ರಮ್ ಆಸ್ಪತ್ರೆಯ ಕಟ್ಟಡ

ಮುಖದಲ್ಲೂ ಆತಂಕ, ಪಾಪಪ್ರಜ್ಞೆಗಳು ಎದ್ದು ಕಾಣುವಂತಿದ್ದವು. ಮಗ ದೇವರಾಜ್‌ನನ್ನು ರೂಮಿಗೆ ಕರೆಸಿಕೊಂಡ ವೈದ್ಯರು "ನಿಮ್ಮ ತಂದೆಯ ಕಿಡ್ನಿಯನ್ನು ತೆಗೆಯುವಾಗ 'ಸರ್ಜಿಕಲ್ ಮಿಸ್ಟೇಕ್'ನಿಂದಾಗಿ ಮತ್ತೊಂದು ಕಿಡ್ನಿಗೂ ಡ್ಯಾಮೇಜ್ ಆಗಿದೆ. ಹಾಗಾಗಿ ಅವರೂ ಇನ್ನು ಮುಂದೆ ಕಿಡ್ನಿ ತೊಂದರೆಯಿಂದ ಬಳಲಿದ್ದಾರೆ" ಎಂದು ಹೇಳಿ ದೇವರಾಜ್‌ಗೆ ದೊಡ್ಡ ಶಾಕ್ ನೀಡಿದರು. ಆದರೆ ಅಪ್ಪಿತಪ್ಪಿಯೂ ಆ ಸರ್ಜಿಕಲ್ ಮಿಸ್ಟೇಕ್ ಏನೆಂದು ಅವರ ಬಾಯಿ ಬಿಡಲಿಲ್ಲ.

ಅವರ ವರ್ತನೆಯಿಂದ ದೇವರಾಜ್‌ಗೆ ಅನುಮಾನ ಬಂದು ಸಾಹಸಪಟ್ಟು ಶಸ್ತ್ರಚಿಕಿತ್ಸೆಯ ಸಿಡಿ ಪಡೆದು ನೋಡಿದಾಗಲೆ ವೈದ್ಯರ ನಿರ್ಲಕ್ಷ್ಯ ಸ್ಪಷ್ಟವಾಗಿದ್ದು. ಅಂಗವನ್ನು ಕತ್ತರಿಸಿ ತೆಗೆಯುವಾಗ ಇತರೆ ಅಂಗ ಮತ್ತು ಆಸುಪಾಸಿನಲ್ಲಿರುವ ಪ್ರಮುಖ ರಕ್ತನಾಳಗಳಿಗೆ ಡ್ಯಾಮೇಜ್ ಆಗದಿರಲೆಂದು ಕ್ಲಿಪ್‌ಗಳನ್ನು ಹಾಕಿ ತಾವು ಆಪರೇಷನ್ ಮಾಡಬೇಕಾದ ಜಾಗವನ್ನು ಪ್ರತ್ಯೇಕಿಸಿ ಇಟ್ಟುಕೊಂಡಿರುತ್ತಾರೆ. ಇಲ್ಲಿ ಆಪರೇಷನ್ ಮಾಡುವಾಗ ಅಂತಹ ಕ್ಲಿಪ್‌ಗಳನ್ನು ಸರಿಯಾಗಿ ಹಾಕಿಯೇ ಇರಲಿಲ್ಲ. ಶಸ್ತ್ರ ಚಿಕಿತ್ಸೆಯ ಮಧ್ಯದಲ್ಲಿ ಅಂತಹ ಒಂದು ಕ್ಲಿಪ್ ಕೆಳಗೆ ಜಾರಿತ್ತು. ಅದನ್ನು ಸರಿಯಾಗಿ ಗಮನಿಸದ ವೈದ್ಯರು ಕ್ಲಿಪ್‌ಗೂ ಮೇಲಿದ್ದ ಪ್ರಮುಖ ರಕ್ತನಾಳವೊಂದನ್ನು ಕತ್ತರಿಸಿಬಿಟ್ಟಿದ್ದರು. ಹಾಗಾಗಿ ಆಪರೇಷನ್ ಮಾಡುತ್ತಿದ್ದ ಭಾಗ ಕೆಲವೇ ಸೆಕೆಂಡುಗಳಲ್ಲಿ ರಕ್ತಮಯವಾಗಿ ಕತ್ತರಿಯಾಡಿಸಲೂ ಅಡ್ಡಿಯಾಗಿತ್ತು. ಹೀಗೆ ಏಕಾಏಕಿ ರಕ್ತ ಸೋರಿ ಹೋಗಿದ್ದರಿಂದ ಮತ್ತೊಂದು ಕಿಡ್ನಿಗೆ ಸಮರ್ಪಕ ರಕ್ತವಿಲ್ಲದಂತಾಗಿ ಅದು ischemic attackಗೆ ಒಳಗಾಗಿ ಶಾಶ್ವತವಾಗಿ ಘಾಸಿಯಾಗಿ ಹೋಗಿತ್ತು.


ಆಪರೇಷನ್ ನಡೆದ ದಿನ ವೈದ್ಯರು ಇದ್ಯಾವುದನ್ನೂ ದೇವರಾಜ್‌ಗೆ ವಿವರಿಸಿರಲಿಲ್ಲ. ಒಂದೆರಡು ದಿನ ತಿಬ್ಬೇಗೌಡನನ್ನು ಐ.ಸಿ.ಯುನಲ್ಲಿಟ್ಟು ತಮ್ಮ ತಪ್ಪು ಮುಚ್ಚಿಕೊಳ್ಳಲು ಹವಣಿಸಿದರು. ಆದರೆ ಒಂದು ಕಿಡ್ನಿಯನ್ನು ಹೆಂಡತಿಗೆ ಕೊಟ್ಟು, ಮತ್ತೊಂದು ಕಿಡ್ನಿಯನ್ನು ವೈದ್ಯರ ನಿರ್ಲಕ್ಷ್ಯದಿಂದಾಗಿ ಕಳೆದುಕೊಂಡಿದ್ದ ಆತನ ಸ್ಥಿತಿ ದಿನದಿಂದ ದಿನಕ್ಕೆ ಗಂಭೀರವಾಯಿತು.

ಇತ್ತ ಗಂಡನಿಂದ ಕಿಡ್ನಿ ಪಡೆದ ಹೆಂಡತಿ ಧನಲಕ್ಷ್ಮಿ ನಿಧಾನಕ್ಕೆ ಚೇತರಿಸಿಕೊಳ್ಳುತ್ತಿರುವಾಗಲೇ ವಿಕ್ರಮ್ ಆಸ್ಪತ್ರೆಯ ವೈದ್ಯರು ಮತ್ತೊಂದು ಯಡವಟ್ಟು ಮಾಡಿದರು. ಮತ್ತೆ ದೇವರಾಜ್‌ನನ್ನು ಕರೆಸಿಕೊಂಡ ಗುರುದೇವ್ "ನಿನ್ನ ತಂದೆಯ ಸ್ಥಿತಿ ಗಂಭೀರವಾಗಿದ್ದು ಅವರಿಗೆ ಎರಡೂ ಮೂತ್ರಪಿಂಡಗಳು ಇಲ್ಲದಂತಾಗಿರುವುದರಿಂದ ನಿಮ್ಮ ತಾಯಿಗೆ ಹಾಕಿರುವ ಕಿಡ್ನಿಯನ್ನು ವಾಪಸ್ ತೆಗೆದು ನಿಮ್ಮ ತಂದೆಗೆ ಕಸಿ ಮಾಡಲೇಬೇಕು. ಇಲ್ಲವಾದರೆ ಅವರು ಉಳಿಯುವುದೇ ಕಷ್ಟ" ಎಂದು ಹೆದರಿಸಿದ. ಗಾಬರಿಗೆ ಬಿದ್ದ ದೇವರಾಜ್ ಏನೊಂದು ಯೋಚಿಸಲಾಗದೆ ಅದಕ್ಕೂ ಸಮ್ಮತಿ ನೀಡಿದ. ಅದರಂತೆ 24.08.2012 ರಂದು ಮತ್ತೊಂದು ಆಪರೇಷನ್ ಮಾಡಿ ಹೆಂಡತಿಯಿಂದ ಕಿಡ್ನಿ ತೆಗೆದು ವಾಪಸ್ ತಿಬ್ಬೇಗೌಡನಿಗೆ ಹಾಕಿದರು. ಮೊದಲನೇ ಆಪರೇಷನ್‌ನಲ್ಲೆ ಜಖಂ ಆಗಿದ್ದ ಕಿಡ್ನಿ ಮೂರೇ ದಿನದ ಅಂತರದಲ್ಲಿ ಮತ್ತೊಮ್ಮೆ ಶಸ್ತ್ರಚಿಕಿತ್ಸೆಗೆ ಗುರಿಯಾಗಿದ್ದರಿಂದ ಅದೂ ಕ್ರಮೇಣ ವೈಫಲ್ಯಕ್ಕೆ ತುತ್ತಾಯಿತು. ಗಂಡನ ಕಿಡ್ನಿಯಿಂದಾಗಿ ಚೇತರಿಸಿಕೊಳ್ಳುತ್ತಿದ್ದ ಧನಲಕ್ಷ್ಮಿ ಕೂಡಾ ಮತ್ತೆ ವಿಪರೀತ ಅನಾರೋಗ್ಯಕ್ಕೆ ತುತ್ತಾದರು.

ಹೀಗೆ ವೈದ್ಯರ ಬೇಜವಾಬ್ದಾರಿಯಿಂದಾಗಿ ಗಂಡ ಹೆಂಡಿರಿಬ್ಬರೂ ಕಿಡ್ನಿ ಸಮಸ್ಯೆ ಅನುಭವಿಸುವಂತಾಗಿದೆ. ಕಡೇ ಪಕ್ಷ ಹೆಂಡತಿಗೆ ಹಾಕಿದ್ದ ಕಿಡ್ನಿಯನ್ನು ತೆಗೆಯದೆ ತಿಬ್ಬೇಗೌಡನಿಗೆ ಬದಲೀ ವ್ಯವಸ್ಥೆ ಅಥವಾ ಡಯಾಲಿಸಿಸ್‌ನ ಮೊರೆ ಹೋಗಿದ್ದಾರೆ. ಒಬ್ಬರಾದರೂ ನಿಟ್ಟುಸಿರು ಬಿಡಬಹುದಿತ್ತು. ಆದರೆ ವೈದ್ಯರ ಅವಿವೇಕತನ ಇಬ್ಬರನ್ನೂ ಸಂಕಷ್ಟಕ್ಕೆ ದೂಡಿದೆ. ಅಲ್ಲದೆ ಆಪರೇಷನ್‌ಗಿಂತ ಮೊದಲು ತಿಂಗಳಿಗೆ ಎರಡು ಬಾರಿ ಮಾತ್ರ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದ ಧನಲಕ್ಷ್ಮಿ ಈಗ ಮೂರು ಬಾರಿ ಮಾಡಿಸಿಕೊಳ್ಳಬೇಕಿದೆ. ಮೊದಲು ಗಟ್ಟಿಮುಟ್ಟಾಗಿದ್ದ ತಿಬ್ಬೇಗೌಡ ಹೆಂಡತಿಗೆ ಕಿಡ್ನಿ ದಾನ ಮಾಡಲು ಹೋಗಿ ತನ್ನೆರಡೂ ಕಿಡ್ನಿಗಳನ್ನು ಕಳೆದುಕೊಂಡು ನರಳಾಡುವಂತಾಗಿದೆ.

ಆಸ್ಪತ್ರೆಯ ಕಣ್ಣೊರೆಸುವ ನಾಟಕ

ತಮ್ಮ ತಪ್ಪಿನ ಬಗ್ಗೆ ಖಾತ್ರಿಯಾಗುತ್ತಿದ್ದಂತೆಯೇ ಅದನ್ನು ಮುಚ್ಚಿಹಾಕಲು ಎರಡನೇ ಬಾರಿಗೆ ಮಾಡಿದ ಆಪರೇಷನ್‌ಗೆ ಹಣ ನೀಡುವ ಅಗತ್ಯವಿಲ್ಲ, ಆಸ್ಪತ್ರೆಯೇ ಸಂಪೂರ್ಣ ಖರ್ಚು ಭರಿಸುತ್ತದೆ ಎಂದು ತಿಳಿಸಿದರು. ಕುಟುಂಬದವರಿಗೆ ಬಲವಾದ ಅನುಮಾನ ಶುರುವಾದದ್ದೇ ಆಗ. ನಂತರ ಸಿಡಿ ಪಡೆದು ವೀಕ್ಷಿಸಿದಾಗ ವೈದ್ಯರ ಯಡವಟ್ಟು ಬಯಲಾಗಿತ್ತು. ಆಗ ದೇವರಾಜ್‌ನ ಸಂಬಂಧಿಕರು, ಸ್ನೇಹಿತರೆಲ್ಲ ಸೇರಿ ಗಲಾಟೆ ಮಾಡಲು ಮುಂದಾದಾಗ **compensation** ನೆಪದಲ್ಲಿ ಒಪ್ಪಂದವೊಂದನ್ನು ಮಾಡಿಕೊಂಡರು. ಅದರಂತೆ ಚಿಕಿತ್ಸೆಯ ಸಂಪೂರ್ಣ



ಆಸ್ಪತ್ರೆಯ ಎಂ.ಡಿ. ಡಾ.ಎಸ್.ಬಿ.ವಿಕ್ರಮ್

ವೆಚ್ಚವನ್ನು ಆಸ್ಪತ್ರೆಯೇ ಭರಿಸಬೇಕು, ಈಗಾಗಲೇ ಕಟ್ಟಿರುವ 2,10,000 ಹಣವನ್ನು ವಾಪಸ್ ಮಾಡಬೇಕು, ಧನಲಕ್ಷ್ಮಿಗೆ ಜೀವನಪರ್ಯಂತ ಉಚಿತ ಡಯಾಲಿಸಿಸ್ ಮಾಡಬೇಕು ಮತ್ತು ಸೂಕ್ತ ದಾನಿಗಳು ಸಿಕ್ಕಾಗ ಯಾವುದೇ ಹಣ ಅಪೇಕ್ಷಿಸದೆ ಉಚಿತವಾಗಿ ಆಪರೇಷನ್ ಮಾಡಬೇಕು, ತಿಬ್ಬೇಗೌಡನ ಸಂಪೂರ್ಣ ಆರೋಗ್ಯದ ಜವಾಬ್ದಾರಿಯನ್ನು ಆಸ್ಪತ್ರೆಯೇ ಹೊತ್ತುಕೊಳ್ಳಬೇಕೆಂಬ ಮಾತುಕತೆ ನಡೆದಿತ್ತು. ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ದಯಾಶಂಕರ್ ಮತ್ತು ಗುರುದೇವ್ ಇಬ್ಬರೂ 27.09.2012 ರಂದು ಇದಕ್ಕೆ ಸಹಿ ಹಾಕಿದರು. ಆದರೆ ಆಡಿಟ್‌ಗೆ ತೊಂದರೆಯಾಗುತ್ತದೆಂದು ಹಣ ವಾಪಸ್ ಮಾಡುವ ಕರಾರನ್ನು ಒಪ್ಪಂದದಲ್ಲಿ ಸೇರಿಸಲಾಗುವುದಿಲ್ಲ ಎಂಬ ಚಾಣಾಕ್ಷ ನೆಪ ನೀಡುವುದನ್ನು ಅವರು ಮರೆಯಲ್ಲ. ಈ ನಡುವೆ ಒಮ್ಮೆ ಮಾತ್ರ ದೇವರಾಜ್‌ರನ್ನು ಭೇಟಿ ಮಾಡಿದ್ದ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ಬಿ. ವಿಕ್ರಮ್ ಆಸ್ಪತ್ರೆ ಕಡೆಯಿಂದ ತಪ್ಪಾಗಿರುವುದನ್ನು ಒಪ್ಪಿಕೊಂಡು ಸೂಕ್ತ ಸೌಲಭ್ಯ ಒದಗಿಸುವುದಾಗಿ ಮಾತು ಕೊಟ್ಟ.

ಇದನ್ನು ನಂಬಿದ ಕುಟುಂಬಕ್ಕೆ ಈಗ ಭಾರೀ ಮೋಸವಾಗುತ್ತಿದೆ. ಒಪ್ಪಂದದ ನಂತರ ಒಂದೆರಡು ದಿನ ಐ.ಸಿ.ಯುನಲ್ಲಿದ್ದ ತಿಬ್ಬೇಗೌಡನನ್ನು ತರಾತುರಿಯಲ್ಲಿ ಡಿಸ್‌ಚಾರ್ಜ್ ಮಾಡಿ ಯಾವುದೇ ದಾಖಲೆ ನೀಡದೆ ಮನೆಗೆ ಕಳುಹಿಸಿದರು. ಆದರೆ ಮನೆಗೆ ಹೋದ ಕೆಲ ಗಂಟೆಗಳಲ್ಲೆ ತಿಬ್ಬೇಗೌಡನ ಆರೋಗ್ಯ ಹದಗೆಟ್ಟಿತು. ಬೆಳಗ್ಗಿನ ಜಾವ ನಾಲ್ಕು ಗಂಟೆಯಲ್ಲೆ ಆತನನ್ನು ಮತ್ತೆ ಅದೇ ಆಸ್ಪತ್ರೆಗೆ ತಂದು ಸೇರಿಸಲಾಯಿತು. ಈ ಮೊದಲು ಉಚಿತ ಚಿಕಿತ್ಸೆ ನೀಡುತ್ತೇವೆಂದು ಮಾತು ಕೊಟ್ಟಿದ್ದ ಆಸ್ಪತ್ರೆಯವರು ಈಗ ಉಲ್ಟಾ ಹೊಡೆದು ಹಳೆಯ ಆಪರೇಷನ್ ಖರ್ಚು, ಈಗಿನ ಚಿಕಿತ್ಸೆ ಎಲ್ಲಾ ಸೇರಿ 8,77,537 ರೂಪಾಯಿಗಳನ್ನು ಪಾವತಿಸಿ ತಂದೆಯನ್ನು ಕರೆದುಕೊಂಡುಹೋಗಿ ಬೇರೆ ಆಸ್ಪತ್ರೆಗೆ ದಾಖಲು ಮಾಡುವಂತೆ ಇಲ್ಲವೇ ಆಯುರ್ವೇದಿಕ್ ಚಿಕಿತ್ಸೆ ಕೊಡಿಸುವಂತೆ ದೇವರಾಜ್ ಮೇಲೆ ಒತ್ತಡ ಹಾಕಲು ಶುರು ಮಾಡಿದರು. ಅದಾಗಲೇ ಕೈಯಲ್ಲಿದ್ದ ಹಣವನ್ನೆಲ್ಲ ಇದೇ ಆಸ್ಪತ್ರೆಯ ಬೊಕ್ಕಸಕ್ಕೆ ಸುರಿದು ಬರಿಗೈಯಾಗಿದ್ದಲ್ಲದೆ, ವೈದ್ಯರ ಬೇಜವಾಬ್ದಾರಿತನದಿಂದ ಹೆತ್ತವರು ನರಳುತ್ತಿದ್ದನ್ನು ಕಂಡು ಆರ್ಥಿಕವಾಗಿ, ಮಾನಸಿಕವಾಗಿ ಜರ್ಝರಿತನಾಗಿದ್ದ ದೇವರಾಜ್ ಇದನ್ನು ಕೇಳಿ ಅಕ್ಷರಶಃ ಕುಸಿದುಹೋದ.


ಆಸ್ಪತ್ರೆಯವರ ಈ ಅನ್ಯಾಯವನ್ನು ಪ್ರಶ್ನಿಸಿ ವಿ.ವಿ.ಪುರಂ ಪೊಲೀಸ್ ಸ್ಟೇಷನ್‌ಗೆ ದೂರು ನೀಡಲು ಹೋದರೆ ಅಲ್ಲಿನ ಎಸ್.ಐ ಪ್ರಕಾಶ್ ಆಸ್ಪತ್ರೆಯವರ ವಿರುದ್ಧ ದೂರು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಹೇಳಿಕಳುಹಿಸಿದ.


ಇದಾದ ಎರಡೇ ದಿನಕ್ಕೆ ವಿಕ್ರಮ್ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ದಯಾಶಂಕರ್ ಅದೇ ಪೊಲೀಸ್ ಠಾಣೆಯಲ್ಲಿ ತಿಬ್ಬೇಗೌಡ ಮತ್ತು ಅವನ ಮಗ ದೇವರಾಜ್ ವಿರುದ್ಧ 'ಆಸ್ಪತ್ರೆಯ ಬಿಲ್ ಕಟ್ಟಲಾಗದೆ ಏನೇನೊ ನೆಪ ಹೇಳಿ ನಮ್ಮ ಮೇಲೇ ಆರೋಪ ಮಾಡುತ್ತಿದ್ದಾರೆ. ನಮ್ಮ ಅನುಮತಿಯಿಲ್ಲದೆ ತಿಬ್ಬೇಗೌಡನನ್ನು ರಾತ್ರೋರಾತ್ರಿ ಆಸ್ಪತ್ರೆಗೆ ತಂದುಹಾಕಿ ಈಗ ನಕರಾ ಮಾಡುತ್ತಿದ್ದಾರೆ' ಎಂಬ ಅರ್ಥ ಬರುವ ಸುಳ್ಳು ದೂರೊಂದನ್ನು ನೀಡಿದ. ಆ ಕಂಪ್ಲೇಂಟಿಗೆ ತತ್‌ಕ್ಷಣವೇ ಪ್ರತಿಕ್ರಿಯಿಸಿದ ಠಾಣಾಧಿಕಾರಿ ಪ್ರಕಾಶ್ ದೇವರಾಜ್‌ನನ್ನು ಕರೆಸಿ "ನಿನ್ನ ತಂದೆಯನ್ನು ಮನೆಗೆ ಕರೆದುಕೊಂಡು ಹೋಗು ಇಲ್ಲವೇ ಬೇರೆಡೆ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊ. ಇಲ್ಲವಾದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ" ಎಂಬ ಬುದ್ಧಿ ಮಾತು (!?) ಹೇಳಿ ಕಳುಹಿಸಿದ.

ಈಗ ನೀವೇ ಯೋಚಿಸಿ, **Humble, humane, honest** ಎಂಬ ಮೂರು ಪದಗಳಿಗೂ ವಿಕ್ರಮ್ ಆಸ್ಪತ್ರೆಯವರ ನಡವಳಿಕೆಗಳಿಗೂ ಏನಾದರು ಹೋಲಿಕೆಯಿದೆಯೇ?

● ಗಿರೀಶ್ ತಾಳಿಕಟ್ಟೆ

ಯಡ್ಡಿಯ ಸಂಖ್ಯಾಜಾಲದ ಮರ್ಮವೇನು?





ಗುರುವಾರದ ಅಪಾಯದಿಂದ ಶೆಟ್ಟರ್ ಪಾರಾಗಿದ್ದಾರೆ.


ಜನವರಿ 31 ಕ್ಕೆ ಕನಿಷ್ಠ ಮೂರು ಮಂದಿಯಾದರೂ ರಾಜೀನಾಮೆ ಕೊಟ್ಟೇ ತೀರುತ್ತಾರೆ. ತರೀಕೆರೆ ಶಾಸಕ ಸುರೇಶ್, ಗದಗದ ಶ್ರೀಶೈಲಪ್ಪ ಬಿದರೂರು ಮತ್ತು ಗುಲ್ಬರ್ಗಾ ಗ್ರಾಮಾಂತರದ ಪಶು ಸಂಗೋಪನಾ ಸಚಿವ ಬೆಳಮಗಿ; ಈ ಮೂವರೂ ರಾಜೀನಾಮೆ ಇತ್ತರೆಂದರೆ, ಅಲ್ಲಿಗೆ ಶೆಟ್ಟರ್ ಸರ್ಕಾರದ ಆಯಸ್ಸು ಮುಗಿದಂತೆಯೇ. ಹೆಚ್ಚೆಂದರೆ ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮತ್ತು ಕಡೂರಿನ ವಿಶ್ವನಾಥ್ ಕೂಡ ಇವರ ಜೊತೆ ಕೈಜೋಡಿಸಿಬಿಟ್ಟರೆ ಶೆಟ್ಟರ್ ಕತೆ ಮುಗಿದಂತೆಯೆ.

ಗುರುವಾರ ಅಪರಾಹ್ನ ಹೇಗೂ ಸಚಿವ ಸಂಪುಟದ ಸಭೆ ಸೇರುತ್ತದೆಯಾದ್ದರಿಂದ ಶೆಟ್ಟರ್ ಅವತ್ತೇ ವಿಧಾನಸಭೆ ವಿಸರ್ಜಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸುತ್ತಾರೆ. ಬಿಜೆಪಿ ಸರ್ಕಾರದ ಕಟ್ಟಕಡೆಯ ಬಜೆಟ್ ಮಂಡಿಸುವ ಶೆಟ್ಟರ್ ಕನಸಿಗೂ ಕಲ್ಲು ಬೀಳುವುದು ಶತಸ್ಸಿದ್ಧ...!

-ಇಂಥದೊಂದು ಲೆಕ್ಕಾಚಾರ ಇದ್ದಕ್ಕಿದ್ದಂತೆ ತಲೆಕೆಳಗಾಗಿದೆ. ಜನವರಿ 31 ರ ಬುಡುಮೇಲು ಕಾರ್ಯಾಚರಣೆ ಏಕಾಏಕಿ ಸ್ಥಗಿತಗೊಂಡಿದ್ದೇಕೆ? ಅದು ಯಡ್ಡಿಗಾದ ಹಿನ್ನಡೆಯೆ? ಒಂದಾನೊಂದು ಕಾಲಕ್ಕೆ ಅರವತ್ತೋ ಎಪ್ಪತ್ತೋ ಶಾಸಕರ ಬೆಂಬಲವಿದ್ದ ಯಡಿಯೂರಪ್ಪ ಬೆಂಬಲಿಗರ ಸಂಖ್ಯೆ ಹದಿ ಮೂರಕ್ಕೇ ಸುಸ್ತು ಹೊಡೆಯಿತೆ? ಕಟ್ಟರ್ ಬೆಂಬಲಿಗರಂತಿದ್ದ ನಿರಾಣಿ, ಬಸವರಾಜ್ ಬೊಮ್ಮಾಯಿ, ಸೋಮಣ್ಣ, ಬೆಳಮಗಿ, ರೇಣುಕಾಚಾರ್ಯ ಇನ್ನೇನು ತಮ್ಮ ಮಂತ್ರಿ ಪದವಿ ಕೈಬಿಡಲಿದೆ ಎನ್ನುವಾಗಲೇ ಗುರು ಯಡ್ಡಿಯ ಕೈಬಿಟ್ಟರೆ? ಏಕೆ ಯಡ್ಡಿ ಪರ ರಾಜೀನಾಮೆಗೆ ನಿಂತವರ ಸಂಖ್ಯೆ ಹದಿಮೂರಕ್ಕೇ ಪರಿಸಮಾಪ್ತಿಯಾಯ್ತು? ಶೆಟ್ಟರ್ ಸರ್ಕಾರ ಉರುಳಿಸುವ ಯಡ್ಡಿಯ ದಿಢೀರ್ ಕಾರ್ಯಾಚರಣೆ ಇದ್ದಕ್ಕಿದ್ದಂತೆ ಸ್ಥಗಿತಗೊಂಡಿದ್ದೇಕೆ?

ಮನಸ್ಸು ಮಾಡಿದರೆ ಯಡ್ಡಿಗೆ ಶೆಟ್ಟರ್ ಸರ್ಕಾರ ಬೀಳಿಸುವುದು ಕಷ್ಟವೇನಲ್ಲ, ಸುಮ್ಮನೆ ಸಿಗ್ನಲ್ ಕೊಟ್ಟರೆ ಸಾಕು ಚಂದ್ರಕಾಂತ್ ಬೆಲ್ಲದ್ ಕಣ್ಣುಮುಚ್ಚಿ ರಾಜೀನಾಮೆ ಕೊಡುತ್ತಾರೆ. ಜಗಳೂರು ಶಾಸಕ ರಾಮಚಂದ್ರ, ನರಗುಂದದ ಸಿ.ಸಿ. ಪಾಟೀಲ್, ಶಿರಹಟ್ಟಿಯ ರಾಮಣ್ಣ ಲಮಾಣಿ, ತರೀಕೆರೆಯ ಡಿ.ಎಸ್. ಸುರೇಶ್ ಹೀಗೆ ಯಡ್ಡಿ ನಿಷ್ಠ ಯಾವುದೇ ಶಾಸಕನಿಗಾದರೂ ರಾಜೀನಾಮೆ ಕೊಡುವುದು ಕಷ್ಟವಾಗಲಿ, ಅಳುಕಾಗಲಿ ಇಲ್ಲ.


ಹಾಗಂತ ಶೆಟ್ಟರ್ ಸರ್ಕಾರವನ್ನು ಬೀಳಿಸುವುದು ಯಡ್ಡಿಗೇ ಇಷ್ಟವಿಲ್ಲ, ಕೊನೇ ಗಳಿಗೆಯಲ್ಲಿ ಸುತ್ತೂರು ದೇಶೀಕೇಂದ್ರ ಸ್ವಾಮಿ ಮತ್ತು ಸಿದ್ಧಗಂಗೆಯ ಸ್ವಾಮಿಗಳು ಬುದ್ಧಿ ಹೇಳಿದ್ದರಿಂದಲೇ ಯಡ್ಡಿ ತಣ್ಣಗಾದರೆಂದೂ, ಎಲ್ಲಿ ಲಿಂಗಾಯತ ಮುಖ್ಯಮಂತ್ರಿಯೊಬ್ಬನನ್ನು ಕೆಡವಿದ ಕಳಂಕ ತಟ್ಟುತ್ತೋ ಎಂದು ಕೊನೇ ಗಳಿಗೆಯಲ್ಲಿ ರಾಜೀನಾಮೆ ಪ್ರಹಸನಕ್ಕೆ ಯಡ್ಡಿಯೇ ಬ್ರೇಕ್ ಹಾಕಿದರೆಂದೂ ಕೆಲ ರಾಜಕೀಯ ಪಂಡಿತರು ವ್ಯಾಖ್ಯಾನಿಸುತ್ತಿದ್ದಾರೆ.



ಇದು ಯಡ್ಡಿಗೆ ಮೊದಲೇ ಗೊತ್ತಿರಲಿಲ್ಲವೆ? ಗೊತ್ತಿದ್ದೂ ಹದಿಮೂರು ಮಂದಿಯನ್ನಷ್ಟೇ ರಾಜೀನಾಮೆಗೆ ಛೂಬಿಟ್ಟು ಮಿಕ್ಕ ಬೆಂಬಲಿಗರನ್ನು ಬಿಜೆಪಿ ಸರ್ಕಾರದಲ್ಲೇ ಮುಂದುವರಿಯುವಂತೆ ನೋಡಿಕೊಂಡ ಯಡ್ಡಿಯ ಹುನ್ನಾರವೇನು?

ಸುತ್ತೂರು ಸ್ವಾಮಿಗಳಾಗಲಿ, ಸಿದ್ಧಗಂಗೆ ಶ್ರೀಗಳಾಗಲಿ ಏಕಾಏಕಿ ಶೆಟ್ಟರ್ ಬೆಂಬಲಕ್ಕೆ ನಿಂತ ಮಾತ್ರಕ್ಕೆ ಯಡ್ಡಿ ತನ್ನ ಕಾರ್ಯಾಚರಣೆ ನಿಲ್ಲಿಸುವ ಹಾಗಿದ್ದರೆ ಆ ಕೆಲಸಕ್ಕೆ ಕೈಹಾಕುವ ಮೊದಲೇ ಸೂಕ್ತ ಬಂದೋಬಸ್ತು ಮಾಡಿಕೊಂಡಿರ ಬೇಕಿತ್ತಲ್ಲವೆ?

ಪ್ರಶ್ನೆ ಅದಲ್ಲ, ಸರ್ಕಾರಕ್ಕೆ ಬೆಂಬಲ ವಾಪಸ್ಸು ತಗೋ



ಬೇಕಾಗುತ್ತೆ ಕೆಜೆಪಿ ಶಾಸಕರು ರಾಜೀನಾಮೆ ಕೊಡೋದು ಗ್ಯಾರಂಟಿ ಎಂದೆಲ್ಲ ಬ್ಲಾಕ್‌ಮೇಲ್ ಮಾಡಿಕೊಂಡೇ ಬಂದ ಯಡ್ಡಿಗೆ ತಾನೇ ನಿಂತು ಪಟ್ಟಕಟ್ಟಿದ ತನ್ನದೇ ಜಾತಿಯ ಮುಖ್ಯಮಂತ್ರಿಯ ವಿರುದ್ಧ ಸಿಟ್ಟು ಶುರುವಾಗಿದ್ದು ಇಲ್ಲಿಗೆ ತಿಂಗಳ ಹಿಂದಿನಿಂದಲೇ. ಪ್ರಾರಂಭದಲ್ಲಿ ಸದಾನಂದ ಗೌಡರನ್ನು ಉಪಾಯವಾಗಿ ಯಡ್ಡಿಯ ವಿರುದ್ಧ ತಿರುಗಿಬೀಳುವಂತೆ ಎತ್ತಿಕಟ್ಟಿದ್ದೇ ಅನಂತ್‌ಕುಮಾರ್. ಅನಂತ್ ಜೊತೆ ಒಳಗೊಳಗೇ ಸದಾನಂದ ಗೌಡ ಕೈಜೋಡಿಸಿದ್ದು ಯಡ್ಡಿಗೆ ಅಕ್ಷಮ್ಯ ಅಪರಾಧವೆನಿಸಿತ್ತು. ತದನಂತರ ಶೆಟ್ಟರ್‌ರನ್ನು ಪಟ್ಟಕ್ಕೆ ತಂದರೆ ಮತ್ತೆ ಅನಂತ್ ಆಟವೇ ಮೇಲಾಗಿ ಶೆಟ್ಟರ್ ಕೂಡ ಸದ್ದಿಲ್ಲದೆ ಅನಂತ್ ಜೊತೆ ಕೈಜೋಡಿಸಿದ್ದು ಯಡ್ಡಿಗಾದ ಮಹಾಘಾತ!

ಪ್ರತಿಯೊಂದಕ್ಕೂ ಅನಂತ್‌ಕುಮಾರ್ ಮಾತೇ ಈ ಮನುಷ್ಯನಿಗೆ ವೇದವಾಕ್ಯ ಆಗೋದಾದರೆ, ಅನಂತ್ ಮಾತಿಗೆ ಮಣಿದು ನನ್ನ ಬೆಂಬಲಿಗರನ್ನೇ ತುಳಿಯಲೆತ್ನಿಸಿದರೆ ಇದು ಹೇಗೆ ಲಿಂಗಾಯತರ ಸರ್ಕಾರವಾಗ್ತದೆ. ಈ ಪುರುಷಾರ್ಥಕ್ಕೆ ಶೆಟ್ಟರ್ ಬೆನ್ನಿಗೇಕೆ ಲಿಂಗಾಯತರು ನಿಲ್ಲಬೇಕು?

ಇಂಥ ಬೇಗುದಿಗೆ ಬಿದ್ದೇ ಯಡ್ಡಿ ಪದೇಪದೇ ಶೆಟ್ಟರ್ ಸರ್ಕಾರ ಉರುಳಿಸುವ ಮಾತಿಗಿಳಿದದ್ದು. ಇದೇ ಹೊತ್ತಿಗೆ ಅನಂತ್‌ಕುಮಾರ್ ಶೆಟ್ಟರ್‌ಗೆ ಮಸ್ಕಾ ಹೊಡೆದು ಸದಾನಂದ ಗೌಡರ ಜೊತೆ ದೋಸ್ತಿ ಕುದುರಿಸಿಕೊಟ್ಟಿದ್ದನ್ನು ಯಡ್ಡಿ ಗಪ್‌ಚುಪ್ಪಾಗೇ ಗ್ರಹಿಸಿದ್ದರು. ಈಶ್ವರಪ್ಪ, ಅನಂತ್, ಸದಾನಂದಗೌಡ, ಶೆಟ್ಟರ್, ಅಶೋಕ್ ಮುಂತಾದವರನ್ನೆಲ್ಲ ಯಡ್ಡಿ ವಿರುದ್ಧ ಒಳಗೊಳಗೇ ಅನಂತ್ ಒಟ್ಟುಗೂಡಿಸುತ್ತಿರುವುದೂ ಯಡ್ಡಿಗೆ ಗೊತ್ತಾಗುತ್ತಿತ್ತು. ಇದರ ಪರಿಣಾಮವೆಂಬಂತೆ ಯಡ್ಡಿ ನಿಷ್ಠ ಶಾಸಕರು-ಮಂತ್ರಿಗಳನ್ನು ಶೆಟ್ಟರ್ ತುಳಿಯಲಾರಂಭಿಸಿದ್ದು ಕೆಜೆಪಿ ಪಾಳಯದಲ್ಲಿ ಮತ್ತಷ್ಟು ಅಸಹನೆಗೆ ಕಾರಣವಾಗಿತ್ತು.

ಇದೆಲ್ಲಕ್ಕೂ ಒಂದು ಗತಿ ಕಾಣಿಸಬೇಕೆಂದರೆ ಶೆಟ್ಟರ್ ಬುಡಕ್ಕೇ ಕೈಹಾಕಬೇಕು. ಆದರೆ ಸರ್ಕಾರವನ್ನು ಉರುಳಿಸಿದ ಕಳಂಕ ತಟ್ಟಕೂಡದು. ಬರೋಬ್ಬರಿ 13 ಮಂದಿ ರಾಜೀನಾಮೆ ಕೊಟ್ಟರೆಂದರೆ ಸದನದಲ್ಲಿ ಬಿಜೆಪಿಯ ಬಲ 104 ಕ್ಕೆ ಕುಸಿಯುತ್ತದೆ. ಅದು ಪತನಕ್ಕೆ ಕೂದಲೆಳೆಯ ಅಂತರ ಮಾತ್ರ. ಕಾಂಗ್ರೆಸ್ಸಿನ 71, ಜೆಡಿಎಸ್‌ನ 26 ಮತ್ತು 7 ಮಂದಿ ಪಕ್ಷೇತರರು ಸೇರಿ ಬಿಟ್ಟರೆ ವಿರೋಧ ಪಕ್ಷಗಳ ಸಂಖ್ಯೆಯೂ 104 ಆಗುತ್ತದೆ. ಆಗ ಸಹಜವಾಗಿ ಶೆಟ್ಟರ್ ಪಕ್ಷೇತರರಿಗೆ ಮಣೆ ಹಾಕಲೇಬೇಕು.

ಪತನದ ಅಂಚಿಗೆ ತಂದು ನಿಲ್ಲಿಸಿದಾಕ್ಷಣ ಸರ್ಕಾರವನ್ನು ಬೀಳಿಸಿದ ಹಾಗಲ್ಲವಲ್ಲ. ಆಗ ಸಹಜವಾಗೇ ಕಾಂಗ್ರೆಸ್ ಅವಿಶ್ವಾಸ ನಿರ್ಣಯಕ್ಕೆ ಕೈಹಾಕುತ್ತದೆ. ಆ ಹಂತದಲ್ಲಿ ಕೆಜೆಪಿಗೆ ನಿಷ್ಠರಾದ ಹತಕ್ಕೂ ಅಧಿಕ ಶಾಸಕರು ಇನ್ನೆಲ್ಲಿ ಕೈಕೊಡುತ್ತಾರೋ ಎಂದು ಭೀತಿಗೆ ಬಿದ್ದ ಶೆಟ್ಟರ್ ವಿಧಿಯಿಲ್ಲದೆ ಜೆಡಿಎಸ್ ಬೆಂಬಲಕ್ಕಾಗಿ ಅಂಗಲಾಚಲೇಬೇಕು. ಹಾಗಂತ ಕಾಂಗ್ರೆಸ್ ಸುಮ್ಮನಿರುತ್ತಾ? ಒಂದಷ್ಟು ಪಕ್ಷೇತರರನ್ನು ತನ್ನ ಪಾಳಯಕ್ಕೆ ಸೆಳೆಯಲೆತ್ನಿಸುತ್ತದೆ. ವಿಧಿಯಿಲ್ಲದೆ ಶೆಟ್ಟರ್ ಜೆಡಿಎಸ್ ಬೆಂಬಲಕ್ಕಾಗಿ ಸದಾನಂದ ಗೌಡರನ್ನು ಮುಂದಿಟ್ಟುಕೊಂಡು ಕಾರ್ಯಾಚರಣೆಗಿಳಿಯುತ್ತಾರೆ.

ಹೇಗಾದರೂ ಬಜೆಟ್ ಮಂಡಿಸಲೇಬೇಕೆಂಬ ಶೆಟ್ಟರ್ ಕೊನೆಯಾಸೆಗೆ ಜೆಡಿಎಸ್ ಕೈಜೋಡಿಸಿತೆಂದರೆ-ದೇವೇಗೌಡರ ಜಾತ್ಯತೀತ ಮುಖವಾಡ ಕಳಚಿಬೀಳುತ್ತದೆ. ಬಿಜೆಪಿಯ ಬಣ್ಣವೂ ಬಯಲಾಗುತ್ತದೆ. ಚುನಾವಣೆಯ ನಂತರ ಪರಸ್ಪರ ಕೈಜೋಡಿಸಬೇಕಿದ್ದ ಜೆಡಿಎಸ್ ಮತ್ತು ಬಿಜೆಪಿಯ ಲೆಕ್ಕಾಚಾರ ಚುನಾವಣೆಗೂ ಮೊದಲೇ ಬಯಲಾಗುವುದರಿಂದಾಗಿ ವಿಧಿಯಿಲ್ಲದೆ ಕಾಂಗ್ರೆಸ್ ಕೆಜೆಪಿಯತ್ತ ಕೈಚಾಚುತ್ತದೆ. ಒಮ್ಮೆ ಬಿಜೆಪಿ ಮತ್ತು ಜೆಡಿಎಸ್ ಕೈಮಿಲಾಯಿಸಿದರೆಂದರೆ ಕಾಂಗ್ರೆಸ್ ಪಾಲಿಗೆ ಕೆಜೆಪಿಯ ಹೊರತಾಗಿ ಬೇರೆ ಗತಿಯೇ ಇಲ್ಲ!

ಇಂಥದೊಂದು ಲೆಕ್ಕ ಹಾಕಿಯೇ ಯಡ್ಡಿ ಜನವರಿ 28 ರ ರಾಜೀನಾಮೆ ರಣತಂತ್ರಕ್ಕೆ ಕೈಯಿಟ್ಟರು. ಉದಾಸಿ, ಕರಂದ್ಲಾಜೆ, ಆಟ್ಟೂರ್, ಓಲೇಕಾರ್ ಸೇರಿದಂತೆ ಒಟ್ಟು 13 ಮಂದಿ ಯಡ್ಡಿ ನಿಷ್ಠರು ರಾಜೀನಾಮೆ ಇತ್ತರಾದರೂ ಸ್ಪೀಕರ್ ಬೋಪಯ್ಯ ಅದಕ್ಕೊಂದು ಸಣ್ಣ ತಿರುಗೇಟು ಕೊಟ್ಟರು. ಅದು ತಾಂತ್ರಿಕ ದೋಷದ ನೆಪವೊಡ್ಡಿ ನಾಗ ಠಾಣಾ ಶಾಸಕ ಕಟಕದೊಂಡನ ರಾಜೀನಾಮೆಯನ್ನು ಸ್ವೀಕರಿಸದೇ ಬಿಟ್ಟದ್ದು!

ಸರ್ಕಾರವೀಗ ಪತನದ ಅಂಚಿಗೆ ಬಂದು ನಿಂತಿದೆಯಾದರೂ ಬೀಸೋ ದೊಣ್ಣೆಯಿಂದ ಬಚಾವಾದಂತಾಗಿದೆ. ಬಹುಶಃ ಶೆಟ್ಟರ್ ಬಜೆಟ್ ಮಂಡಿಸುವ ತನಕ ಯಡ್ಡಿ ಕಾಯಬಹುದು ಅಥವಾ ಬಜೆಟ್ ಮಂಡಿಸಿದ ಮರುಗಳಿಗೆಗೇ ತನ್ನ ಕಡೆಯ ಹತ್ತು ಮಂದಿಯಿಂದ ರಾಜೀನಾಮೆ ಕೊಡಿಸಲೂಬಹುದು. ಆಗ ವಿಧಿಯಿಲ್ಲದೆ ಜೆಡಿಎಸ್ ಮತ್ತು ಬಿಜೆಪಿ ಕೈಜೋಡಿಸಲೇಬೇಕು.

ಯಡ್ಡಿಯ ನಿರೀಕ್ಷೆಯೂ ಇದೇ ತಾನೆ!


ಅನಂತ್‌ನ ಷಡ್ಯಂತ್ರಕ್ಕೆ ಯಡ್ಡಿಯ ಪ್ರತಿತಂತ್ರದ ಅಂತಿಮ ಪರಿಣಾಮ ಮಾತ್ರ ಅಂದಾಜಿಗೆ ಸಿಲುಕುತ್ತಿಲ್ಲ. ಸದ್ಯ ಯಡ್ಡಿ ನಿಷ್ಠ ಶಾಸಕರಿಗಾಗಿ ಶೆಟ್ಟರ್ ಪಡೆ ಏನೇನೋ ಆಮಿಷಗಳಿಗೆ ಕೈಯಿಟ್ಟಿದೆ. ಬಿದರೂರ್‌ರನ್ನು ಫಾರಿನ್ನಿಗೆ ಕಳಿಸಿ, ತರೀಕೆರೆ ಸುರೇಶ್‌ರನ್ನು ಶಿರಡಿಗೆ ಸಾಗ ಹಾಕಿ, ಕಟಕದೊಂಡ್‌ಗೆ ಕ್ಷೇತ್ರಾಭಿವೃದ್ಧಿ ಫಂಡು ಕೊಡಿಸಿ ಏನೇ ಗಾಳ ಹಾಕಿದರೂ ಲಾಭ ಮಾತ್ರ ಯಡ್ಡಿಗೇ.

ಯಡ್ಡಿ ವಿರುದ್ಧ ಅನಂತ್‌ರನ್ನು ಕಟ್ಟಿಕೊಂಡು ಶೆಟ್ಟರ್ ನೆಮ್ಮದಿಯಾಗಿರುವುದಂತೂ ಮರೀಚಿಕೆಯೇ.

● ರಾ. ಸೋಮನಾಥ್

...ಮಖಂಡಿ: ಸಿದ್ದು ಸವದಿಗೆ ಕೀಚಕನೇ ಪಿಎ


...ಮಲದ ಕಂಪೋ, ಕೇಸರಿಯ ತಂಪೋ, ಬಿಜೆಪಿಯ ಸೌಭಾಗ್ಯವೋ ...ಲ್ಲಿ, ನರ್ಸ್ ಪೀಡಕ ರೇಣುಕ, ಕೀಚಕ ನಿರಾಣಿ, ರೇಪ್ ಕೇಸ್ ಹಾಲಪ್ಪ, ...ಫಿಲ್ಮ್ ಲಕ್ಷ್ಮಣ ಸವದಿ ಮತ್ತು ಕಾರಜೋಳರ ಮಗನ ಕಾಮದ ಸೋಂಕು ...ನಸಭೆಯ ಮುಖ್ಯ ಸಚೇತಕ ಸಿದ್ದು ಸವದಿಯತ್ತ ...ದಿರುತ್ತಾ?


ಸಿದ್ದು ಸವದಿ

...ಾಗಲಕೋಟೆ ಜಿಲ್ಲೆ ತೆರದಾಳದ ಬಿಜೆಪಿ ಶಾಸಕ ... ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕ ಸಿದ್ದು ...ಗೊಬ್ಬ ಪಿಎ ಕಂ ಆಪ್ತ ಸಹಾಯಕನಿದ್ದಾನೆ. ಆತನ ... ಬಸವರಾಜ್ ಹನಗಂಡಿ. ವಯಸ್ಸಿನ್ನೂ ಮೂವತ್ತೈದು, ...ುವೆಯಾಗಿದೆ. ಪಾಪದ ಫಲವೋ ಪೌರುಷ ...ೀತವೋ ಇನ್ನೂ ಮಕ್ಕಳಿಲ್ಲ. ಆದರೆ ಬಿಜೆಪಿಯ ...ಾರ, ಧಣಿ ಸಿದ್ದು ಸವದಿಯ ಎಮ್ಮೆಲ್ಲೆಗಿರಿ ಮತ್ತು ...ಳದ ಜನರ ಮುಗ್ಧಾಚಾರಗಳ ಮುಂದೆ ವಿಕೃತಿ ಕೆರಳದೇ ...ೇಕಲ್ಲ!

...ಈತನ ಕಾಟ ತಾಳಲಾರದೆ ರೋಸತ್ತ ಜಮಖಂಡಿಯ ... ಹೆಣ್ಣು ಮಗಳೊಬ್ಬಳು ಆತ್ಮಹತ್ಯೆಗೆ ಯತ್ನಿಸಿದ್ದು, ಈಕೆಯಂತೆ ಇನ್ನೂ ...ಕ ಹೆಣ್ಣು ಮಕ್ಕಳು ಈತನ ಹಾವಳಿಗೆ ಸಿಲುಕಿ ಗೋಳಾಡುತ್ತಿರುವುದು ... ಒಂದೆರಡು ಸಂಸಾರಗಳಿಗೆ ಬೆಂಕಿ ಬಿದ್ದಿರುವುದು ಈಗ ಜಗಜ್ಜಾಹೀರಾಗಿದೆ.

...ಜಮಖಂಡಿಯ ತಾಲ್ಲೂಕು ಪಂಚಾಯ್ತಿ ಕಚೇರಿಯಲ್ಲಿರುವ ಸಿದ್ದು ಸವದಿಯ ...ರ ಕಚೇರಿಗೆ ಹನಗಂಡಿ ಬೆಳಗ್ಗೆ ಕಾಲಿಟ್ಟನೆಂದರೆ ತನ್ನ ಮೊಬೈಲ್ ...ತ್ತಿಕೊಂಡಿದ್ದೇ ಕಂಡ ಕಂಡ ಹೆಂಗಸರಿಗೆಲ್ಲಾ ಹಲ್ಕಟ್ ಮೆಸೇಜು ...ವುದೊಂದೇ ಫುಲ್‌ಟೈಂ ಕೆಲಸ. ಅಲ್ಲಿಂದ ಬನಹಟ್ಟಿಯ ಆಸುಂಡಿ ... ಪಕ್ಕದ ಸಿದ್ದು ಸವದಿಯ ಮನೆಗೆ ಹೋದರೂ ಸಿಕ್ಕಸಿಕ್ಕ ಹೆಂಗಸರೊಂದಿಗೆ ...ರೋಪವಾಗಿ ತನ್ನ ಮೊಬೈಲ್ ಕಿವಿಗೊತ್ತಿದ್ದೇ ...ಬಿಗಿಳಿಯುತ್ತಾನೆ. ಸಿದ್ದು ಸವದಿಗೆ ಇದಕ್ಕೂ ಮುನ್ನ ...ನ್ನ ಕಾಸರ್ ಎಂಬ ಶಾಲಾ ಮಾಸ್ತರನೊಬ್ಬ ಪಿಎ ಆಗಿದ್ದ. ... ಶಿಕ್ಷಕರನ್ನು ಬೇರೆ ಉದ್ದೇಶಕ್ಕೆ ಬಳಸಕೂಡದೆಂಬ ...ಶ ಹೊರಬಿದ್ದ ನಂತರ ವಕ್ಕರಿಸಿದವನು ಕೀಚಕ ಹನಗಂಡಿ.


ಬಸವರಾಜ್ ಹನಗಂಡಿ

...ಜಮಖಂಡಿ ತಾಲ್ಲೂಕು ಅಲಗೂರು ಗ್ರಾಮದ ರಾಮಪ್ಪ ...ಂಡಿಯ ನಾಲ್ವರು ಮಕ್ಕಳ ಪೈಕಿ ಕಿರಿಯನಾದ ಬಸವರಾಜ ...ುತಃ ಮೀನುಗಾರಿಕೆ ಇಲಾಖೆಯ ಬೆಳಗಾವಿ ಕಚೇರಿಯಲ್ಲಿ ...ಾಸ್ತನಾಗಿದ್ದ. ತನ್ನ ಅಕ್ಕನ ಮಗಳನ್ನೇ ಮದುವೆಯಾದ. ... ಗೆದ್ದು ಪಿಎ ಆಗಿದ್ದ ಕಾಸರ್ ಮಾಸ್ತರ್ ವಾಪಸ್ಸಾಗಿದ್ದೇ ...ಡೆಪ್ಯೂಟೇಶನ್ನಿನ ಮೇಲೆ ಜಮಖಂಡಿಗೆ ಬಂದವ ಬಸವರಾಜ ಹನಗಂಡಿ ...ಗೆ ಪಿಎ ಆಗಿಬಿಟ್ಟ.

...ಅದೇ ಹೊತ್ತಿಗೆ ಅಂದರೆ 2009-10ರ ಹೊತ್ತಿಗೆ ಬನಹಟ್ಟಿಯ ದಲಿತರ ...ುವತಿಯೊಬ್ಬಳು ಲಿಂಗಾಯತ ಯುವಕನೊಬ್ಬನನ್ನು ಪ್ರೀತಿಸಿ ಮದುವೆಯಾಗಿ ... ಜಮಖಂಡಿಯ ಮೈಗೂರು ರಸ್ತೆ ಮಸೀದಿ ಪಕ್ಕ ಮನೆ ಮಾಡಿಕೊಂಡಿದ್ದಳು. ...ು ಹೆಸರು ಕಾವ್ಯ (ಹೆಸರು ಬದಲಿಸಿದೆ). ಗಂಡನಿಗೆ ಎಲ್‌ಐಸಿಯಲ್ಲಿ ...ವಿತ್ತು. ದೌರ್ಭಾಗ್ಯವೆಂದರೆ ಅದ್ಹೇಗೋ ಈಕೆ ಹನಗಂಡಿಯ ಕಣ್ಣಿಗೆ ...ಾಳೆ ಮತ್ತು ಈಕೆ ಜಮಖಂಡಿಯಲ್ಲಿ ಕಾಲೇಜು ಓದುತ್ತಿದ್ದಾಗ ಹನಗಂಡಿಯೂ ಅದೇ ಕಾಲೇಜಿನಲ್ಲಿ ಓದುತ್ತಿದ್ದು ಹಳೇ ಪರಿಚಯವಿತ್ತು.

ಯಾವತ್ತು ಜಮಖಂಡಿಯ ಬೀದಿಯಲ್ಲಿ ಕಾವ್ಯ ಕಣ್ಣಿಗೆ ಬಿದ್ದಳೋ ಹನಗಂಡಿಯ ತಲೆತಿರುಗಿದೆ. ತಾನು ಎಮ್ಮೆಲ್ಲೆಗೆ ಆಪ್ತ ಸಹಾಯಕನೆಂದೂ, ಏನೇ ತೊಂದರೆಯಿದ್ದರೂ ನಿಕಾಲಿ ಮಾಡುತ್ತೇನೆಂದೂ, ಬೇಕಿದ್ದರೆ ಸರ್ಕಾರಿ ಕೆಲಸವನ್ನೇ ಕೊಡಿಸುತ್ತೇನೆಂದೂ ನಂಬಿಸಿದ್ದಾನೆ. ಉಪಾಯವಾಗಿ ಆಕೆಯ ಮೊಬೈಲ್ ನಂಬರನ್ನು ಸಂಪಾದಿಸಿದ್ದಾನೆ. ಅಲ್ಲಿಂದಾಚೆಗೆ ಪ್ರತಿನಿತ್ಯ ಶುರುವಾಗಿದೆ ಹನಗಂಡಿಯ ಪೋಲಿ ಮೆಸೇಜುಗಳ ಹಾವಳಿ.


ಮೊದಮೊದಲು ಡಬ್ಬಲ್ ಮೀನಿಂಗ್ ಮೆಸೇಜುಗಳನ್ನು ರವಾನಿಸುತ್ತಿದ್ದವನು ಬರಬರುತ್ತ **u r mixcher bauty n intelegence, yavaga barthiya, thank u sweety,** ಎಲ್ಲಾ ನಿನ್ನ ಹುಚ್ಚು ನೀ ನನಗೆ ಹುಚ್ಚು ಹಿಡಿಸಿದ್ದೀಯ, ನಿನ್ನ ಜೊತೆ ರೋಮಾನ್ಸ್ ಮಾಡಬೇಕು ಅನ್ನಿಸ್ತಿದೆ, ಮತ್ತೆ ಚಳಿ ಅನ್ನಿಸ್ತಿದೆ, ದೂರವಿದ್ದಷ್ಟೂ ಲವ್ ಹೆಚ್ಚಾಗುತ್ತೆ ಎಂದೆಲ್ಲಾ ಮೆಸೇಜು ಕಳಿಸಲಾರಂಭಿಸಿದ್ದಾನೆ. ಹನಗಂಡಿ ಬಳಸುತ್ತಿದ್ದ **9880418284** ಮತ್ತು **9620118407** ಎಂಬ ಎರಡೂ ನಂಬರುಗಳಿಂದ ಪೋಲಿ ಮೆಸೇಜುಗಳ ಹಾವಳಿ ಶುರುವಾಗಿದೆ.

ಇನ್ನೇನು ಕಾಟ ಕೊಟ್ಟಾನೋ ಎಂದು ಭೀತಿಗೆ ಬಿದ್ದ ಆ ಹುಡುಗಿ ತನಗೆ ಮದುವೆಯಾಗಿದ್ದನು, ತನ್ನ ಪಾಡಿಗೆ ಬಿಟ್ಟು ಬಿಡು ಎಂದು ಪದೇಪದೇ ಗೋಗರೆದರೂ ಹನಗಂಡಿಯ ಕೀಚಕ ಚೇಷ್ಟೆ ನಿಲ್ಲಲಿಲ್ಲ. ಪದೇ ಪದೇ ಬಸವ ಸಮಿತಿ ಬೋರ್ಡಿಂಗಿಗೆ ಕರೆಸಿಕೊಂಡು ಚಕ್ಕಂದಕ್ಕೆ ಯತ್ನಿಸಿದ. ಮಲ್ಲಿಕಾರ್ಜುನ ರಸ್ತೆಯ ಮಲ್ಲಿಕಾರ್ಜುನ ದೇವಸ್ಥಾನ ಮತ್ತು ಕುನ್ನೂರಿನ ಲಕ್ಷ್ಮಿ ದೇವಸ್ಥಾನಕ್ಕೆ ಕರೆಸಿಕೊಂಡು ಪೀಡಿಸಿದ. ತನ್ನ ಜೊತೆಗಿರುವ ಆಕೆಯ ಮೊಬೈಲ್ ವೀಡಿಯೋ ಕೂಡ ಚಿತ್ರಿಸಿದ್ದಾನೆ. ಕೊನೆಕೊನೆಗೆ ಹನಗಂಡಿ ಯಾವ ಮಟ್ಟಕ್ಕೆ ಬಂದನೆಂದರೆ, ಒಂದೇ ದಿನಕ್ಕೆ 28 ಬಾರಿ ಫೋನ್ ಮಾಡಿ ಪೀಡಿಸುವುದು, ಅದೇ ವೇಳೆ ಹದಿನೈದಿಪ್ಪತ್ತು ಪೋಲಿ ಮೆಸೇಜು ಕಳಿಸುವಷ್ಟು ಹಾವಳಿಯಿಟ್ಟಿದ್ದಾನೆ. ಇದು ಆಕೆಯ ಪತಿಗೆ ಗೊತ್ತಾಗಿ ಪ್ರತಿನಿತ್ಯ ಜಗಳ ಶುರುವಾಗಿದೆ.

ಇದೆಲ್ಲದರ ದುಷ್ಪರಿಣಾಮವಾಗಿದ್ದು ಜನವರಿ 6 ರಂದು ಕಾವ್ಯ ಆತ್ಮಹತ್ಯೆಗೆ ಯತ್ನಿಸಿದಾಗಲೆ. ಮಾನಕ್ಕಂಜಿ ಪೊಲೀಸರಿಗೆ ದೂರು ಕೊಡುವಂತಿಲ್ಲ. ಎಮ್ಮೆಲ್ಲೇ ಪಿಎ ಆದ್ದರಿಂದ ಪೊಲೀಸರು ದೂರು ಪಡೆಯುವುದೇ ಇಲ್ಲ. ಇನ್ನು ಯಾರಿಗಾದರೂ ಹೇಳಿಕೊಳ್ಳಬೇಕೆಂದರೆ ಶಾಸಕ ಪಿಎ ವಿರುದ್ಧ ಯಾರು ತಾನೇ ನ್ಯಾಯ ಕೊಡಿಸಲು ಸಾಧ್ಯ? ಸದ್ಯ ಹನಗಂಡಿಯ ಕೀಚಕ ಬುದ್ಧಿಗೆ ಸಿಲುಕಿ ಒಂದು ಕುಟುಂಬವಂತೂ ಬೀದಿಗೆ ಬಿದ್ದಿದೆ.

ಇದು ಕೇವಲ ಜಮಖಂಡಿಯ ದಲಿತ ಯುವತಿ ಕಾವ್ಯಳ ದುರಂತ ಮಾತ್ರವಲ್ಲ, ಜಮಖಂಡಿ, ತೆರದಾಳ, ಅಲಗೂರು, ಬನಹಟ್ಟಿ ಸುತ್ತಮುತ್ತಲ ಅನೇಕ ಗೃಹಿಣಿಯರು, ಯುವತಿಯರಿಗೆ ಸಿದ್ದು ಪಿಎ ಬಸವರಾಜ ಹನಗಂಡಿಯ ಮೊಬೈಲುಗಳಿಂದ ಪೋಲಿ ಮೆಸೇಜುಗಳು ಬರುತ್ತಲೇ ಇವೆ. ಹೆಣ್ಣುಮಕ್ಕಳು ಮಾನಕ್ಕಾಗಿ ಬೀದಿಗಿಳಿಯುವ ಈ ಕಾಲದಲ್ಲೂ ಹನಗಂಡಿ ತರಹದ ಕೀಚಕರಿಗೆ ಬುದ್ಧಿ ಬರುತ್ತಿಲ್ಲ ಎಂದರೆ ಏನರ್ಥ? ■

ಕಾರ್ನಾಡರಿಗೆ ಕಡೆಗೂ ತಪ್ಪಿನ ಅರಿವಾಯ್ತಂತಲ್ಲಾ!



ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿದ ಭಾಗ್ಯಶಾಲಿಗಳೆಲ್ಲಾ ಭಾಷಣ ಮಾಡಿ, ಭಾಷಣ ಕೇಳಿ, ಉಂಡು ತಿಂದು ಉಲ್ಲಾಸಭರಿತರಾಗಿ ಊರ ಕಡೆಗೆ ಹೋದರಂತಲ್ಲ, ಇದನ್ನು ನೋಡಿದ ಧಾರವಾಡ ಮಂದಿ, "ಇಲ್ಲೇನು ನಡಿತ್ರಿ ಸರ? ದರವೊಬ್ಬರೂ ನಕ್ಕೊಂತು ಹೊಂಟಾರಲ್ಲ?" ಎಂದು ಬೆಳಗಾಂವ ಕಡೆಯಿಂದ ಬಂದಿದ್ದ ಚೌಗಲೆ ಎಂಬ ಪೈಲವಾನರನ್ನು ಕೇಳಿದರಂತಲ್ಲಾ, "ಅಲ್ರಿಪ್ಪಾ, ನಿಮ್ಮೂರಾಗ ನಡದ ಸಭಿ ನಿಮಗೊತ್ತಿಲ್ಲೇನ್? ನಾಡಿನ ಸಾಹಿತಿಗೋಳೆಲ್ಲಾ ಒಂದ ಕಡಿ ಸೇರಿ, ತಾವು ಬರದಿದ್ದ, ತಮ್ಮ ಅಪ್ಪದೀರು ಬರದಿದ್ದ, ಆ ನಂತರ ತಮ್ಮಗೋಳು, ಅಣ್ಣಗೋಳು, ಅಕ್ಕಂದಿರು ಬರದಿದ್ದ ಓದಿಕೊಂಡು, ಚರ್ಚೆ ಮಾಡಿಕೊಂಡು, ಉಂಡುಕೊಂಡು ಹೊಂಟಾರ" ಎಂದರಂತಲ್ಲಾ, ಆಗ ಧಾರವಾಡ ಮಂದಿ "ಭಾಳ ಬೇಸದಾರ ಬಿಡ್ರಪ್ಪ, ಅವನೌನ. ಅಲ್ರೀ ಸರ, ಮಳಿ ಇಲ್ಲ, ಬೆಳಿ ಇಲ್ಲ, ಮುಂದ ನಮ್ಮ ಭಾಳೇವು ಹ್ಯಾಂಗೂ ಶಿವನಾ ಅಂತ ನಾವು ಚಿಂತಿ ಮಾಡಾಕ ಹತ್ತಿದ್ರಾ, ಈ ಸಾಯಿತಿಗೋಳು ಕಂಡವರ

ಥೂತ್ತೇರಿ

ಕಾಸಿನಾಗ ಉಣಕೋತ, ತಿನಕೋತ, ನಕ್ಕೊಂಡು ಹೊಂಟಾರ ಅಂದ್ರ ಏನ ಹಲಕಟ್ಟ ಸೂಳಿ ಮಕ್ಕಳದಾರ್ರಿ ಇವುರು" ಎಂದರಂತಲ್ಲಾ, ಅದನ್ನು ಕೇಳಿ ಬೆಚ್ಚಿ ಬಿದ್ದ ಚೌಗಲೆ "ಅಂಗನ್ನಾಕ ಹೋಗ ಬ್ಯಾಡ್ರಪ್ಪ, ನಾನೂ ಕತಿ ಬರಿಯವ" ಎಂದು ಪರಾರಿಯಾದರಂತಲ್ಲಾ, ಥೂತ್ತೇರಿ!

*****

ಧಾರವಾಡದ ಸಾಹಿತ್ಯ ಸಂಭ್ರಮ ಸುಮ್ಮಸುಮ್ಮನೆ ನಡೆಯುವಂತದ್ದಲ್ಲ, ಅದಕ್ಕೆ ಐತಿಹಾಸಿಕ ಕಾರಣಗಳೂ ಇವೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈಗ ಸಂಭವಿಸಿದ ಸಂಭ್ರಮವನ್ನು ಕುರಿತು ಧ್ಯಾನಿಸಿದ್ದಾದರೆ ಇದು ಹಿಂದಿನಿಂದಲೂ ನಡೆದು ಬಂದಿದೆ. ವಿದೇಶೀಯರೆಲ್ಲಾ ಭಾರತದ ಗೇಟಿಲ್ಲದ ದೊಡ್ಡಿಯೊಳಕ್ಕೆ ನುಗ್ಗಿ ಬರುತ್ತಿರುವಾಗ ಅಲ್ಲೊಂದಿಷ್ಟು ಜನ ಪುರೋಹಿತರು ಬೆಂಕಿ ಹಾಕಿಕೊಂಡು, ಭಜನೆ ಮಾಡಿಕೊಂಡು, ನಂತರ ಊಟಭಾರಿ ಸುತ್ತಿದ್ದರಂತೆ. ಒಂದೆಡೆ ದಾಳಿ, ಇನ್ನೊಂದೆಡೆ ಭಜನೆ ಜೊತೆಜೊತೆಯಲ್ಲೇ ನಡೆದುಬಂದ ಪರಂಪರೆ ನಮ್ಮ ಬೆನ್ನಿಗಿರುವುದರಿಂದ ಧಾರವಾಡದ ಸಂಭ್ರಮದ ನಡುವೆ ಕೆಟ್ಟು ಕೆರ ಹಿಡಿದು ಹೋದ ಸರಕಾರದ ಸುದ್ದಿ, ಬತ್ತಿ ಹೋದ ಕೆರೆಗಳ ಸುದ್ದಿ, ಬರಿದಾದ ಕನ್ನಂಬಾಡಿ ಸುದ್ದಿ, ಕೋಮುವಾದಿಗಳ ಮೂಲವ್ಯಾಧಿ ಸುದ್ದಿ ಬರಲಿಲ್ಲವಂತಲ್ಲಾ, ಥೂತ್ತೇರಿ!

*****


ಇದರ ನಡುವೆ ಒಂದೇ ಒಂದು ಸಮಾಧಾನಕರ ಸುದ್ದಿಯೆಂದರೆ ಗಿರೀಶ್ ಕಾರ್ನಾಡರು ತಮ್ಮ ತಪ್ಪು ಒಪ್ಪಿಕೊಂಡಿರುವುದು. ಆದರೆ ಮಾಡಿದ ತಪ್ಪಿನ ಅರಿವು ಮೂರು ದಶಕಗಳ ನಂತರ ಆಗಿದೆ. ಎಪ್ಪತ್ತರ ದಶಕದಲ್ಲಿ ಎತ್ತಿನಷ್ಟು ಒಳ್ಳೆಯವರಾಗಿ ಕಂಡ ಭೈರಪ್ಪನವರ ಕಾದಂಬರಿಗಳಾದ 'ತಬ್ಬಲಿ ನೀನಾದೆ ಮಗನೆ' ಮತ್ತು 'ವಂಶವೃಕ್ಷ' ಎಂಬ ವಿಕೃತ ಕಗ್ಗಗಳಿಗೆ ತಮ್ಮ ಪ್ರಾಯವನ್ನೆಲ್ಲಾ ಬಸಿದು, ಸಿನಿಮಾ ಮಾಡಿದ ಈ ಕಾರ್ನಾಡರು ಅದಕ್ಕೆ ಬದಲು ತೇಜಸ್ವಿ, ಶಾಂತಿನಾಥ ದೇಸಾಯಿ ಇಂತವರ ಕೃತಿಗಳನ್ನ ಸಿನಿಮಾ ಮಾಡಿದ್ದರೆ ಇವತ್ತಿನಂತಹ ಪಶ್ಚಾತ್ತಾಪದ ಅಗತ್ಯವಿರಲಿಲ್ಲ. ಸದರಿ ಕಾರ್ನಾಡರ ಕ್ಷಮಿಸಲಾರದ ಇನ್ನೊಂದು ಅಪರಾಧವೆಂದರೆ 'ಕಾನೂರು ಹೆಗ್ಗಡತಿ' ಎಂಬ ಮಹಾ ಕಾದಂಬರಿಯನ್ನು ಮನಸೊ ಇಚ್ಛೆ ಹಾಳು ಮಾಡಿರುವುದು. ಚಿತ್ರವನ್ನು ವ್ಯಂಗ್ಯಮಿಶ್ರಿತ ನಗುವಿನಿಂದಲೇ ನೋಡಿದ ತೇಜಸ್ವಿ, "ಹೂವಯ್ಯನ ಪಾತ್ರ ಮಾಡಿರೊನ್ನ ನೋಡಿದ್ರೆ ನಮ್ಮ ಕೋಣಂದೂರು ಲಿಂಗಪ್ಪನೇ ಪರವಾಗಿಲ್ಲ ಕಂಡ್ರೀ. ಸೀತೆಯಂತೂ ಕೇಳಲೇ ಬೇಡಿ" ಎಂದು ನಕ್ಕಿದ್ದರಂತಲ್ಲಾ, ಥೂತ್ತೇರಿ!

*****

ಈ ರಾಜಕಾರಣಿಗಳು ಮೂಲತಃ ಭ್ರಷ್ಟರು, ತಿಳಿಗೇಡಿಗಳು, ವ್ಯಭಿಚಾರಿಗಳು, ಅಪ್ರಮಾಣಿಕರು. ಆದ್ದರಿಂದ ಅಭಿವೃದ್ಧಿಗಳು ಕಳಪೆಯಾಗಿರುತ್ತದೆ. ಇಂತಹ ರಾಜಕಾರಣಿಗಳನ್ನ ನಚ್ಚಿಕೊಂಡ ದೇಶ ಅಧೋಗತಿಗಿಳಿಯುತ್ತದೆ- ಇಂತಹ ಮಾತುಗಳು ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ ಒಂದು ಗೋಷ್ಠಿಯಾಗಿ ಬಿತ್ತರಗೊಳ್ಳಬೇಕಿತ್ತಲ್ಲವೆ? ಆದರೆ ಅದಾಗಿಲ್ಲ. ಬದಲಿಗೆ, ಶಿವಮೊಗ್ಗದ ಜಿಲ್ಲಾಧಿಕಾರಿಗಳಾದ ವೇದಮೂರ್ತಿಯವರು ಸಾರ್ವಜನಿಕ ಸಭೆಯೊಂದರಲ್ಲಿ ಗುಡುಗಿದ್ದಾನೆ. ಕೇಳಿಸಿಕೊಂಡ ಜನ "ಗಂಡು ಎಂದರೆ ವೇದಮೂರ್ತಿ. ಎಷ್ಟೇ ಆಗಲಿ, ವಕೀಲರಾಗಿದ್ದವರು, ಉಪನ್ಯಾಸಕರಾಗಿದ್ದವರು, ಆದ್ದರಿಂದ ಒಳಗಿನ ಕಿಚ್ಚನ್ನು ಹತ್ತಿಕ್ಕಲು ಸಾಧ್ಯವೇ" ಎಂದು ಮಾತನಾಡಿಕೊಂಡರಂತಲ್ಲ. "ಈ ತರಹ ಭಾಷಣ ಮಾಡುವ ಜಿಲ್ಲಾಧಿಕಾರಿಗೆ ಏನೋ ಕಾದಿದೆ" ಎಂದುಕೊಂಡು ಸಾರ್ವಜನಿಕರು ಮನೆಗೆ ಮರಳುವಷ್ಟರಲ್ಲಿ ವೇದಮೂರ್ತಿಯವರಿಗೆ ವರ್ಗಾವಣೆಯಾಗಿದೆಯಂತಲ್ಲಾ, ಮತ್ತೆ ವಿನಾಕಾರಣ ಬೈಸಿಕೊಂಡ ಸತ್ಯವಂತರು, ಧರ್ಮವಂತರು, ನೀತಿವಂತರು, ಸುಮ್ಮನೆ ಬಿಟ್ಟಾರೆಯೇ? ಬೀದಿ ಬೈಗುಳವನ್ನೆಲ್ಲಾ ತಮ್ಮನ್ನ ಕುರಿತ ಬೈಗುಳವೆಂದು ಭಾವಿಸಿರುವ ಬೆಪ್ಪಗಳು ಇನ್ನೆಷ್ಟು ಕೆಟ್ಟಿರಬಹುದೆಂದು ಶಿವಮೊಗ್ಗದ ಕಡೆಯ ಬುದ್ಧಿಜೀವಿಗಳು, ಯಾರಿಗೂ ಕೇಳದಂತೆ ಗುಸುಗುಡುತ್ತಿದೆಯಂತಲ್ಲಾ, ಥೂತ್ತೇರಿ!! ■

...ದೇವರಿಗೆ ಹೆಣ್ಣುಮಕ್ಕಳಿಲ್ಲ; ಗಂಡಿಗೆ ಪಾವಿತ್ರ್ಯ ಭಂಗವಿಲ್ಲ?

...ಶೀಲ-ಮಾನ-ಲಕ್ಷ್ಮಣರೇಖೆ ಎಂಬುದು ...ಲ ಹೆಣ್ಣುಗಳಿಗೆ ಮಾತ್ರವಲ್ಲ, ಇವು ...ಪರಿಗೂ ಅನ್ವಯ, ಗಂಡಸರಿಗೂ ಹೆಣ್ಣಿನಂತೆ ... ಎಂಬುದಿದೆ, ಅದನ್ನು ಗಂಡಸರೂ ಕಾಪಾಡಿ ...ವುದು ಸ್ತ್ರೀಯರಷ್ಟೇ ಮುಖ್ಯ ಎಂಬುದನ್ನು ...ತ್ತಿಗೆ ಮೊಟ್ಟಮೊದಲು ಸಾರಿದ್ದು ಭಾರತೀಯ ...ಜ್ಞಾನಿಗಳೇ. ಆದರೆ ನಂತರ ಹುಟ್ಟಿಕೊಂಡ ...ಕ ಚಿತ್ರ-ವಿಚಿತ್ರ ಪೌರಾಣಿಕ ಕಥೆಗಳಲ್ಲಿ ಸ್ವತಃ ...ರೇ ಪತಿವ್ರತೆಯ (ತುಳಸಿಯ) ಶೀಲಭಂಗ ...ದ ಬಗ್ಗೆ ಉಲ್ಲೇಖವಿದೆಯಾದರೂ ಇದರಿಂದ ...ಂದು ದೇವರದ್ದೂ ಒಟ್ಟಿಗೇ ಶೀಲಭಂಗವಾಗಿ ...ಕ ಪವಿತ್ರತೆಗೆ ಹಾಗೂ ದೈವತ್ವಕ್ಕೆ ಧಕ್ಕೆಯಾ...ಂದು ಹೇಳಲಾಗಿಲ್ಲ.



...ಗಂಧರ್ವ ಜೋಡಿಯ ರಾಸಕ್ರೀಡೆ ದೂರದಿಂದ ...ಡಿದ ಮಾತ್ರಕ್ಕೆ ರೇಣುಕಾದೇವಿಯ ಶೀಲಭಂಗ ...ುತೆಂದು ಅವಳ ತಲೆ ಕಡಿದುಕೊಳ್ಳುವ ...ುನ್ನು ಅವಳ ಗಂಡ ಋಷಿ ಜಮದಗ್ನಿ ...ುತ್ತಾನೆ. ಆದರೆ ಜಮದಗ್ನಿಯ ಸಮಕಾಲೀನ ಋಷಿಯಾಗಿದ್ದ ವಿಶ್ವಾಮಿತ್ರನು ...ಲೋಕದ ವೇಶ್ಯೆಯಾದ ಮೇನಕೆಯನ್ನು ಭೋಗಿಸಿ ಮಗು ...ಪಾಲಿಸಿದರೂ ಅವನ ಋಷಿತ್ವಕ್ಕೆ ಯಾವುದೇ ಧಕ್ಕೆ ...ವುದಿಲ್ಲ, ಮೇಲಾಗಿ ಈ ಕಳಂಕಿತ ಋಷಿ ಬರೆದ 'ಗಾಯತ್ರಿ ...ತ್ರ' ಇಂದಿಗೂ ಅತ್ಯಂತ ಪವಿತ್ರವಂತೆ!

...ಮಹಿಳೆಯ ಮೇಲಿನ 'ಸರಣಿ 'ಅತ್ಯಾಚಾರದ ಧಾರಾವಾಹಿ ...ನಾದ ಮಹಾಭಾರತವನ್ನು ಬರೆದ ವೇದವ್ಯಾಸ ಮುನಿಯೇ ... ತನ್ನ ಮೃತ ಮಲತಮ್ಮನ ವಿಧವೆಯರಾದ ಅಂಬಿಕೆ, ...ಾಲಿಕೆ ಇಬ್ಬರನ್ನೂ ಬಲಾತ್ಕಾರದಿಂದ ಭೋಗಿಸಿ ಕುರುಡ ...ರಾಷ್ಟ್ರ ಮತ್ತೂ ರೋಗಿಷ್ಟ ಪಾಂಡುವನ್ನು ಹುಟ್ಟಿಸಿದರೂ ವ್ಯಾಸನ ಋಷಿತ್ವಕ್ಕೆ ...ವುದೇ ಧಕ್ಕೆ ಬರಲಿಲ್ಲ! ವ್ಯಾಸ ಕ್ಷತ್ರಿಯನಲ್ಲದಿದ್ದರೂ ಅವನು ಹುಟ್ಟಿಸಿದ ಮಕ್ಕಳು ಕ್ಷತ್ರಿಯರೆನಿಸಿದರು. ತನ್ನ ಭರತ ವರ್ಷದಲ್ಲಿ ಹೆಣ್ಣಿನ ದುಸ್ಥಿತಿ ಗೊತ್ತಿದ್ದೇ ವ್ಯಾಸನು ಹೆಣ್ಣು ಮಗು ಬಹುಶಃ ಹುಟ್ಟಿಸಲಿಲ್ಲ.

ಅದೇರೀತಿ ಎಲ್ಲಾ ದೇವರೂ ಗಂಡು ಮಕ್ಕಳಿಗೆ ಮಾತ್ರ ಜನ್ಮ ಕೊಟ್ಟಿದ್ದಲ್ಲದೇ ಯಾವುದೇ ದೇವರಿಗೂ ಹೆಣ್ಣು ಮಕ್ಕಳಾಗಲಿಲ್ಲ, ಕಾರಣ ತಮ್ಮ ಸೃಷ್ಟಿಯಾದ ತ್ರಿಲೋಕದಲ್ಲಿ ಹೆಣ್ಣುಗಳಿಗೆ ಭದ್ರತೆಯಿಲ್ಲವೆಂದು ಅಂತರ್ ಜ್ಞಾನಿಗಳಾದ ದೇವರಿಗೆಲ್ಲ ಗೊತ್ತಿರ ಬಹುದು. ದೇವರಾಜ ಇಂದ್ರನ ಲಂಪಟತನದ ಹಲವಾರು ಕಥೆಗಳಿದ್ದರೂ, ರಂಭೆ-ಊರ್ವಶಿಯರಂತಹ ವೇಶ್ಯೆಯರನ್ನು ಅವನು ಇಟ್ಟುಕೊಂಡಿದ್ದರೂ, ಇಂದ್ರನ ಶೀಲಭಂಗವಾಗಿದ್ದರೂ ಅವನ ದೇವೇಂದ್ರ ಸ್ಥಾನಕ್ಕೆ ಕುತ್ತು ಬರಲಿಲ್ಲ, ಭಸ್ಮಾಸುರ-ಮೋಹಿನಿ ಕಥೆಯಲ್ಲಿ ಒಟ್ಟೊಟ್ಟಿಗೇ ಎರಡು ದೇವರುಗಳ ಶೀಲಭಂಗವಾದರೂ ಅವರ ಪವಿತ್ರತೆಗೆ ಭಂಗ ಬರಲಿಲ್ಲ, ಅಷ್ಟೇ ಅಲ್ಲ, ಈ ಅಪ್ರಾಕೃತಿಕ ಮಿಲನದಿಂದ ಗಂಡು ಮಗುವೂ ಹುಟ್ಟಿ ಅದೂ ದೈವತ್ವಕ್ಕೆ ಏರುತ್ತದೆ.

ಒಂದು ಪತ್ರ


ಇಂತಹ ತಪ್ಪು ಸಂದೇಶ ಸಾರುವ ವೈರುಧ್ಯಮಯ ಪೌರಾಣಿಕ ಕಥೆಗಳಿಂದಾಗಿ ಭಾರತೀಯರ ಮನಸ್ಸಿನಲ್ಲಿ ಗಂಡು ಜಾತಿ ಏನೇ ಮಾಡಿದರೂ ಅದು ತಪ್ಪಲ್ಲ, "ಇದಕ್ಕೆ ಧರ್ಮದ ಸಮ್ಮತಿಯಿದೆ" ಎಂಬ ತಪ್ಪು ಭಾವನೆ ಆಳವಾಗಿ ಬೇರೂರಿರುವುದರಿಂದಾಗಿ ಮಹಿಳೆಯರ ಮೇಲಿನ ಅತ್ಯಾಚಾರ ಹೆಚ್ಚುತ್ತಿದೆ.

ಹೆಣ್ಣಿನಷ್ಟೇ ಗಂಡಿಗೂ ಶೀಲ ಪವಿತ್ರವಾದುದು ಎಂಬ ಸಾತ್ವಿಕ ನಂಬಿಕೆಯನ್ನು ಸಮಾಜದಲ್ಲಿ ಆಳವಾಗಿ ಹುಟ್ಟಿಸಿದರೆ ಮಾತ್ರ ಹೆಣ್ಣಿನ ಸ್ಥಿತಿ ಭಾರತದಲ್ಲಿ ಸುಧಾರಿಸಲು ಸಾಧ್ಯ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



ಗೃಹಮಂತ್ರಿ ಅಶೋಕ್



ಎಸ್.ಐ. ವಿಜಯಕುಮಾರ್

ಪೊಲೀಸ್ ವ್ಯವಸ್ಥೆಗೇ ಕ್ಯಾನ್ಸರ್!

ಕ್ರುದ್ಧ ಪೇದೆ ಗುಂಡಿಟ್ಟ: ದಿಟ್ಟ ಎಸ್‌ಐ ಪ್ರಾಣ ತೆಗೆದ!

ಕುಲಕ್ಕೆ ಮೂಲ ಕೊಡಲಿ ಕಾವು ಎಂಬಂತೆ ಖಾಕಿಗೆ ಖಾಕಿಯೇ ಮೂಲವಾಗುವ ಕಾಲ ಸನ್ನಿಹಿತವಾಗುತ್ತಿದೆ. ಬೆಂಗಳೂರು ಗ್ರಾಮಾಂತರ ರಾಜಾನುಕುಂಟೆ ಪೊಲೀಸ್ ಠಾಣೆಯ ಎಸ್.ಐ. ವಿಜಯ್‌ಕುಮಾರ್ ಅದೇ ಠಾಣೆಯ ಪೇದೆ ಆನಂದ್‌ಕುಮಾರ್‌ನ ಗುಂಡೇಟಿಗೆ ಬಲಿಯಾಗಿದ್ದಾರೆ. ಇದು ಮೊದಲ ಪ್ರಕರಣವಾಗಿದ್ದರೆ ಆ ಮಾತು ಬೇರೆ...

ಇಲ್ಲಿಗೆ ಮೂರೂ ಮುಕ್ಕಾಲು ವರ್ಷದ ಹಿಂದೆ ಅಂದರೆ 2009 ಫೆಬ್ರವರಿಯಲ್ಲಿ ಮೈಸೂರಿನ ಕೆಎಸ್‌ಆರ್‌ಪಿ ಪೇದೆ ಶಿವಕುಮಾರ್ ತನ್ನ ಮೇಲಧಿಕಾರಿ ಇನ್ಸ್‌ಪೆಕ್ಟರ್ ನಾಗೇಗೌಡನನ್ನು ತನ್ನದೇ ಸರ್ವೀಸ್ ರೈಫಲ್‌ನಿಂದ ಅಟ್ಟಾಡಿಸಿ ಗುಂಡಿಟ್ಟು ಕೊಂದ. ಅದಕ್ಕೂ ಮುನ್ನ ಶಿವಮೊಗ್ಗದ ಎಸ್.ಐ. ಓರ್ವ ಎಸ್‌ಪಿಯ ಮೇಲೇ ಗುಂಡು ಹಾರಿಸಿದ್ದ ಪೆರುಮಾಳ್ ಎಂಬ ಎಸ್‌ಐ ಆ ಕಾಲಕ್ಕೇ ರಾಯಚೂರು ಎಸ್‌ಪಿಯನ್ನು ಗುಂಡಿಟ್ಟು ಕೊಂದಿದ್ದು ಕರ್ನಾಟಕದ ಇತಿಹಾಸದಲ್ಲಿ ಪೊಲೀಸ್ ಅಂತಃಕ್ಷೋಭೆಗೆ ಸ್ಫೋಟಿಸಿದ ಮೊದಲ ಪ್ರಕರಣವಾಗಿತ್ತು. ಕರ್ನಾಟಕ ಏಕೀಕರಣಕ್ಕೂ ಮುನ್ನ ಮೈಸೂರು ರಾಜ್ಯವಾಗಿದ್ದ ಕಾಲದಲ್ಲಿ ನಡೆದ ಘಟನೆಯಿದು.

ಜನತಾದಳ ಸರ್ಕಾರವಿದ್ದಾಗ ಮಂತ್ರಿಯಾಗಿದ್ದ ಡಿ.ಟಿ. ಜಯಕುಮಾರ್ ತನ್ನ ಮೇಲಧಿಕಾರಿಯೊಬ್ಬನಿಗೆ ರಿವಾಲ್ವರ್ ತೋರಿಸಿ ಕೊಲ್ಲಲೆತ್ನಿಸಿದ್ದರಿಂದಾಗಿಯೇ ಸಬ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ತೊರೆಯಬೇಕಾಯ್ತು. ಕೆಲವರ್ಷಗಳ ಹಿಂದೆ ಯಲಹಂಕದ ಸಿಆರ್‌ಪಿಎಫ್ ಪೇದೆ ರಾಮಕೃಷ್ಣ ಯಾದವ್ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ. ತನ್ನ ಮೇಲಧಿಕಾರಿ ಎಂ.ಕೆ. ಝಾ ಎಂಬಾತನ ಕಿರುಕುಳವೇ ಇದಕ್ಕೆ ಕಾರಣ ಎಂದಿದ್ದ ಯಾದವ್.

ಖಾಕಿ ರಕ್ತ

ಈಗಲೂ ಅಷ್ಟೇ, ಕೊಲೆಯಾದ ಸಬ್ ಇನ್ಸ್‌ಪೆಕ್ಟರ್ ವಿಜಯಕುಮಾರ್ ಓರ್ವ ಪ್ರಾಮಾಣಿಕ ಮತ್ತು ದಿಟ್ಟ ಅಧಿಕಾರಿ. ಕೊಂದ ಆನಂದಕುಮಾರ್ ಕೂಡ ಅಷ್ಟೇ ಸಭ್ಯ ಮತ್ತು ನಿರುಪದ್ರವಿ ಪೇದೆ. ಇಬ್ಬರೂ ಒಟ್ಟೊಟ್ಟಿಗೆ ಪೊಲೀಸ್ ಪೇದೆಗಳಾಗಿ ತರಬೇತಿಯಲ್ಲಿದ್ದವರು. ಪರಸ್ಪರ ಪರಿಚಯ ಒಡನಾಟವಿದ್ದವರು. ಪೊಲೀಸ್ ಪೇದೆಗಳಾಗಿ ಮೇಲಧಿಕಾರಿಗಳ ದರ್ಪ, ದೌಲತ್ತು, ಅಟ್ಟಹಾಸದ ಬಗ್ಗೆ ಇಬ್ಬರಿಗೂ ಅರಿವಿತ್ತು. ಆದರೆ ಎಸ್.ಐ. ಆದದ್ದೇ ವಿಜಯ್ ಕುಮಾರ್‌ಗೆ ಅದೆಲ್ಲ ಹೇಗೆ ಮರೆತುಹೋಯಿತು ಮತ್ತು ತನ್ನದೇ ಒಡನಾಡಿಯನ್ನು ಅಷ್ಟೊಂದು ಅಮಾನವೀಯವಾಗಿ ನಡೆಸಿಕೊಳ್ಳುವ ಕ್ರೌರ್ಯ ಹುಟ್ಟಿದ್ದಾದರೂ ಹೇಗೆ?

ರಾಜಾನುಕುಂಟೆ ಎಸ್.ಐ. ವಿಜಯ್‌ಕುಮಾರ್ ಹತ್ಯೆಗೆ ಸಂಬಂಧಪಟ್ಟಂತೆ ಮೊದಲು ತಲೆಎತ್ತುವ ಪ್ರಶ್ನೆ ಇದೇ ತಾನೆ?

ಇಲ್ಲಿ ಪೇದೆ ಆನಂದ್‌ಕುಮಾರ್ ಇಡೀ ಪೊಲೀಸ್ ವ್ಯವಸ್ಥೆಯ ಅಂತಃಕ್ರೌರ್ಯದ ವಿರುದ್ಧ ಸಿಡಿದೆದ್ದ ಕಿಡಿಯಂತೆ ಕಂಡರೆ ಎಸ್.ಐ. ವಿಜಯ್‌ಕುಮಾರ್ ಅದೇ ವ್ಯವಸ್ಥೆಗೆ ಸಿಲುಕಿ ಬಲಿಯಾದ ಮುಗ್ಧ ಅಧಿಕಾರಿಯಂತೆ ಕಾಣಿಸುತ್ತಾರೆ. ಡಿಸಿಎಂ ಅಶೋಕ್ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಗೃಹಖಾತೆಯನ್ನೇ ತನ್ನ ಜಹಗೀರಿನಂತೆ ಆಳುತ್ತಿದ್ದಾರೆ. ಜನರ ಮಾನ-ಪ್ರಾಣದ ಬಗ್ಗೆ, ಅಸಹಾಯಕರ ಆಸ್ತಿ ರಕ್ಷಣೆ ಬಗ್ಗೆ, ಜನಸಾಮಾನ್ಯರಿಗೆ ನ್ಯಾಯ ಕಲ್ಪಿಸುವ ಬಗ್ಗೆ ಬಿಜೆಪಿಯ ಅಧಿಪತಿಗಳಾಗಲಿ, ಗೃಹಮಂತ್ರಿ ಅಶೋಕ್ ಆಗಲಿ ಯಾವತ್ತಾದರೂ ತಲೆಕೆಡಿಸಿಕೊಂಡಿದ್ದರೆ ಇವತ್ತು ಪೇದೆ ಆನಂದ್ ಜೈಲು ಪಾಲಾಗುವುದಾಗಲಿ, ಎಸ್.ಐ. ವಿಜಯ್‌ಕುಮಾರ್ ಠಾಣೆಯಲ್ಲೇ ಗುಂಡೇಟಿಗೆ ಬಲಿಯಾಗುವುದಾಗಲಿ ಸಂಭವಿಸುತ್ತಿತ್ತೆ?

ಇಡೀ ಪ್ರಕರಣದ ವಿಕಟವೆಂದರೆ ಬಲಿಯಾದ ವಿಜಯ್ ಕುಮಾರ್ ಪೊಲೀಸ್ ಇಲಾಖೆಗಾಗಲಿ, ಖಾಕಿ ಕಾಯಕಕ್ಕಾಗಲಿ ಹೊಸಬರೇನಲ್ಲ. ಮೂಲತಃ ಚನ್ನಪಟ್ಟಣ ತಾಲ್ಲೂಕು ಬಳ್ಳಾಪಟ್ಣ ಗ್ರಾಮದ ಶಿವಬೀರಯ್ಯ ಎಂಬ ನಿವೃತ್ತ ಎಸ್.ಐ.ನ ನಾಲ್ವರು ಮಕ್ಕಳ ಪೈಕಿ ಕೊನೆಯವರೇ ವಿಜಯ್‌ಕುಮಾರ್. ಇವರ ಮಲ ಅಣ್ಣ ಶಾಂತಕುಮಾರ್ ಸದ್ಯ ರಾಜ್ಯ ಗುಪ್ತವಾರ್ತೆಯ ಡಿವೈಎಸ್‌ಪಿ. ವಿಜಯ್‌ಕುಮಾರ್ ಚಿಕ್ಕಪ್ಪ ಬಿ.ಎಸ್. ಪುಟ್ಟಸ್ವಾಮಿ ಆ ಕಾಲಕ್ಕೆ ರಾಜ್ಯ ಕುರುಬರ ಸಂಘದ ನಿರ್ದೇಶಕರಾಗಿ ದ್ದರು. ಅರಸು ಅಳಿಯ ಎಂ.ಡಿ. ನಟರಾಜ್‌ಗೆ ಪರಮಾಪ್ತರಾಗಿದ್ದವರು. ಹಿರಿಯ ಐಪಿಎಸ್ ಅಧಿಕಾರಿ ಕೆಂಪಯ್ಯನವರನ್ನೇ ತಮ್ಮ ಗುರು ಎಂದು ಭಾವಿಸಿಕೊಂಡು ಅವರಷ್ಟೇ ದಿಟ್ಟತನವನ್ನು ಮೈಗೂಡಿಸಿಕೊಂಡು ಖಾಕಿ ಕಾಯಕಕ್ಕೆ ನಿಂತ ಒಂದು ಗುಂಪಿನ ಪೊಲೀಸ್ ಅಧಿಕಾರಿಗಳ ಪೈಕಿ ವಿಜಯ್‌ಕುಮಾರ್ ಅತ್ಯಂತ ಕಿರಿಯ.



ರಾಜಾನುಕುಂಟೆ ಪೊಲೀಸ್ ಠಾಣೆ...

ಭೂ ಮಾಫಿಯಾ ಹಾವಳಿ

1996 ರ ಬ್ಯಾಚನಲ್ಲಿ ಪೊಲೀಸ್ ಪೇದೆಯಾಗಿ ಇಲಾಖೆ ಸೇರಿಕೊಂಡ ವಿಜಯ್‌ಕುಮಾರ್ ತನ್ನ ಛಲ ಮತ್ತು ಶ್ರದ್ಧೆಯಿಂದಾಗಿಯೇ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ಎಸ್.ಐ. ಹುದ್ದೆಗೇರಿದವರು. ಸ್ವಾಮಿ ನಿತ್ಯಾನಂದನ ಸೆಕ್ಸ್ ಟೇಪ್ ಕಾಮಕಾಂಡ ಬಯಲಾದಾಗ ಆತನ ಆಶ್ರಮವುಳ್ಳ ಬಿಡದಿ ಪೊಲೀಸ್ ಠಾಣೆಯಲ್ಲಿ ವಿಜಯ್‌ಕುಮಾರ್ ಪ್ರೊಬೇಷನರಿ ಎಸ್.ಐ. ಆಗಿದ್ದರು. ಅಲ್ಲಿಂದ ವರ್ಗಾವಣೆಗೊಂಡು ದೊಡ್ಡಬಳ್ಳಾಪುರದ ರಾಜಾನುಕುಂಟೆ ಪೊಲೀಸ್ ಠಾಣೆಗೆ ಅವರು ಎಸ್.ಐ. ಆಗಿ ಚಾರ್ಜ್ ವಹಿಸಿಕೊಂಡಿದ್ದೇ ಅವರ ಮೊಟ್ಟ ಮೊದಲ ಸ್ವತಂತ್ರ ಎಸ್.ಐ.ಗಿರಿಯ ಆರಂಭವಾಗಿತ್ತು.

ಮೊನ್ನೆ 2012 ರ ಡಿಸೆಂಬರ್ 5 ಕ್ಕೆ ವಿಜಯ್‌ಕುಮಾರ್ ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದು ಚಾರ್ಜ್ ವಹಿಸಿಕೊಂಡ ನಂತರ ನಡೆಸಿದ ಕಾರ್ಯಾಚರಣೆ, ದಿಟ್ಟತನ ಮತ್ತು ಪ್ರಾಮಾಣಿಕತೆಗಳೇ ಐಪಿಎಸ್ ಕೆಂಪಯ್ಯನವರ ಕಾಲವನ್ನು ನೆನಪಿಸುವಂತಿತ್ತು. ಬಂದು ಬಂದಿದ್ದೇ ರಾಜಾನುಕುಂಟೆ ಸುತ್ತಮುತ್ತಲ ಏರಿಯಾದ ನಾಗರಿಕರ ಸಭೆ ಕರೆದು ಜನರ ದುಃಖ ದುಮ್ಮಾನದ ಬಗ್ಗೆ ಅಹವಾಲು ಕೇಳಿದ ವಿಜಯ್‌ಕುಮಾರ್ ಎದುರು ಸುತ್ತಮುತ್ತಲ ರೈತಾಪಿಗಳು ತೋಡಿಕೊಂಡಿದ್ದು ಒಂದೇ.



ಗುಂಡಿಟ್ಟ ಪೇದೆ ಆನಂದಕುಮಾರ್...

ಯಲಹಂಕ ಶಾಸಕ ವಿಶ್ವನಾಥ್ ಹುಟ್ಟು ಹಾಕಿದ ರಿಯಲ್ ಎಸ್ಟೇಟ್ ರೌಡಿಗಳಿಂದ ನಮ್ಮ ಆಸ್ತಿಪಾಸ್ತಿಯನ್ನು ಕಾಪಾಡುತ್ತೀರಾ?

ಅಲ್ಲಿಗೆ ಬೆಂಗಳೂರಿನ ಯಲಹಂಕ ಮತ್ತು ದೊಡ್ಡಬಳ್ಳಾಪುರ ಮಧ್ಯದ ರಾಜಾನುಕುಂಟೆ ಎಂಬ ಊರಿನ ಸುತ್ತ ಹೆಡೆಯೆತ್ತಿದ ರಿಯಲ್ ಎಸ್ಟೇಟ್ ಹಾವಳಿ ಯಾವ ಮಟ್ಟದ್ದೆಂಬ ಸಣ್ಣದೊಂದು ಅಂದಾಜು ಎಸ್.ಐ. ವಿಜಯ್‌ಕುಮಾರ್‌ಗೆ ಸಿಕ್ಕಾಗಿತ್ತು, ಅತ್ತ ಬೆಂಗಳೂರಿಗೂ ಸೇರದೆ ಇತ್ತ ದೊಡ್ಡಬಳ್ಳಾಪುರಕ್ಕೂ ನಿಲುಕದೆ ನಡುವಿರುವ ರಾಜಾನುಕುಂಟೆ ಪೊಲೀಸ್ ಠಾಣೆಯ ಮುಖ್ಯ ಆದಾಯವೇ ರಿಯಲ್ ಎಸ್ಟೇಟ್. ಇದಲ್ಲದೆ ಆಟೋ ತಿಮ್ಮ ಎಂಬ ರೌಡಿಯೊಬ್ಬ ಆರಕೆರೆ ಸುತ್ತಮುತ್ತಲ ತೋಪುಗಳಲ್ಲಿ ಪ್ರತಿನಿತ್ಯ ಇಸ್ಪೀಟ್ ಜುಗಾರಿ ಜಾತ್ರೆ ನಡೆಸುತ್ತಾನೆ. ಒಂದಾನೊಂದು ಕಾಲಕ್ಕೆ ಆಟೋ ಚಾಲಕನಾಗಿದ್ದು ಕ್ರಮೇಣ ಪೊಲೀಸ್ ಇನ್ಫಾರ್ಮೆಂಟ್ ಆಗಿ ತದನಂತರ ಇಸ್ಪೀಟ್ ಕೂಟಗಳನ್ನು ಶುರು ಹಚ್ಚಿಕೊಂಡ ಆಟೋ ತಿಮ್ಮನ ಮೈಮೇಲೆ ಕೇಜಿಗಟ್ಟಲೇ ಚಿನ್ನಾಭರಣಗಳಿರುತ್ತವೆ. ಬೆಂಗಳೂರಿನಿಂದು ಹಿಡಿದು ದೇವನಹಳ್ಳಿ, ದೊಡ್ಡ ಬಳ್ಳಾಪುರ, ಗೌರಿಬಿದನೂರಿನ ತನಕ ಪ್ರತಿನಿತ್ಯ ಜೂಜುಕೋರರ ಸಂತೆ ಸೇರುತ್ತದೆ.

ಎಮ್ಮೆಲ್ಲೇ ತಮ್ಮನಿಗೇ....!

ಇದಲ್ಲದೆ ಸದ್ಯ ಜೈಲಿನಲ್ಲಿರುವ ದೊಡ್ಡಬಳ್ಳಾಪುರದ ರೌಡಿ ಯಲ್ಲಪ್ಪನ ಸಂಬಂಧಿಗಳ ಮೀಟರ್ ಬಡ್ಡಿ ದಂಧೆಯೂ ಇಲ್ಲಿ ಬಿರುಸಾಗೇ ಇದೆ. ಇಂಥ ಅಕ್ರಮ ದಂಧೆಗಳ ಬಗ್ಗೆ ಹೊಸದಾಗಿ ಬಂದ ಎಸ್.ಐ.ಗೆ ಮಾಹಿತಿ ಕೊಡಬೇಕಿದ್ದದ್ದು ಎಸ್.ಬಿ. ಡ್ಯೂಟಿಯಲ್ಲಿದ್ದ ಪೇದೆ ಆನಂದ್‌ಕುಮಾರ್.

ಪೊಲೀಸ್ ಪೇದೆಗಳ ನಿಕೃಷ್ಟ ಬದುಕು...

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ರೈತರಾಗಲಿ, ದಲಿತ, ಕೂಲಿ ಕಾರ್ಮಿಕರಿಗಾಗಲಿ ನೆಮ್ಮದಿ ಸಿಗದಿರಬಹುದು. ಕನಿಷ್ಠ ಗಣಿಕಳ್ಳರು, ಲ್ಯಾಂಡ್ ಮಾಫಿಯಾಗಳು, ರೌಡಿಗಳು, ಪೊಲೀಸರಾದರೂ ನೆಮ್ಮದಿಯಿಂದಿದ್ದಾರಲ್ಲ ಎಂದು ಲೆಕ್ಕಹಾಕಿದವರುಂಟು. ಈಗಿನ ಘಟನೆ ನೋಡಿದರೆ ಪೊಲೀಸರದ್ದೂ ನಾಯಿಪಾಡೇ!

ಪೊಲೀಸ್ ಇಲಾಖೆಯ ಮೇಲಧಿಕಾರಿಗಳನ್ನು ಬಿಟ್ಟರೆ ಬಹುತೇಕ ಹೆಡ್‌ಕಾನ್ಸ್‌ಟೇಬಲ್‌ಗಳು, ಪೇದೆಗಳು, ಮಹಿಳಾ ಪೇದೆಗಳ ಬದುಕು ಯಾವುದೇ ಗುಲಾಮರಿಗಿಂತ ಭಿನ್ನವೇನಲ್ಲ. ಮನೆ ತಲುಪುವ ಹೊತ್ತಿಗೆ ನಡುರಾತ್ರಿ ಸಮೀಪಿಸುತ್ತದೆ. ಮತ್ತೆ ಮರುದಿನ ಬೆಳಿಗ್ಗೆ 8ಕ್ಕೆ ಡ್ಯೂಟಿಗೆ ಹಾಜರಾಗಬೇಕೆಂದರೆ ನಸುಕಿನ ಐದಕ್ಕೇ ಎದ್ದು ರೆಡಿಯಾಗಬೇಕು. ಇನ್ನು ಮಂತ್ರಿಗಳ ಕಾರ್ಯಕ್ರಮ, ಪ್ರತಿಭಟನೆಯ ಬಂದೋಬಸ್ತು ಎಂದರೆ ಅಕ್ಷರಶಃ ಶಿಕ್ಷೆಯೆ. ಬೆಳಿಗ್ಗೆ 11 ಕ್ಕೋ 12 ಕ್ಕೋ ಕಾರ್ಯಕ್ರಮ ಇತ್ತೆಂದರೆ ಬೆಳಿಗ್ಗೆ 8 ಕ್ಕೇ ಬಂದು ರೋಲ್‌ಕಾಲ್‌ಗೆ ನಿಲ್ಲಬೇಕು.

ಅಂದರೆ ಕಾರ್ಯಕ್ರಮಕ್ಕಿಂತ ಮೂರು ಗಂಟೆ ಮೊದಲೇ ಸ್ಥಳದಲ್ಲಿ ಗುಸ್ತಿಗೆ ನಿಲ್ಲಬೇಕು. ರಣಬಿಸಿಲು, ಹೊಟ್ಟೆ ತಾಳ ಹಾಕುತ್ತಿರುತ್ತದೆ. ಮೇಲಧಿಕಾರಿ ಜೀಪಿನಲ್ಲಿ ಕೂತು ನಿದ್ದೆ ಹೊಡೆಯುತ್ತಿದ್ದರೆ ಇವರು ಬಿಸಿಲಲ್ಲಿ ನಿಂತೇ ಇರಬೇಕು. ಜಾಗತಿಕವಾಗಿ ಒಪ್ಪಿತವಾದ ಕಾರ್ಮಿಕ ಕಾನೂನಿನ ಪ್ರಕಾರ ಯಾವುದೇ ಕಾರ್ಮಿಕನೊಬ್ಬನ ಕೆಲಸದ ಅವಧಿ ಎಂಟು ಗಂಟೆಗಿಂತ ಹೆಚ್ಚಿರಕೂಡದು. ಆದರೆ ಕರ್ನಾಟಕದ ಪೊಲೀಸ್ ಪೇದೆಗಳು ದಿನಕ್ಕೆ 10 ರಿಂದ 14 ಗಂಟೆಗಳ ಕಾಲ ಹೆಣಗಲೇಬೇಕು. ಬೆಂಗಳೂರಿನ ಶೇ. 32 ರಷ್ಟು ಪೊಲೀಸರಿಗೆ ಮಾತ್ರವೇ ಕ್ವಾಟ್ರಸ್ಸುಗಳನ್ನು ಒದಗಿಸಲಾಗಿದೆ. ಕ್ವಾಟ್ರಸ್ ಸಿಗದವರಿಗೆ ಸಿಟಿ ಲಿಮಿಟ್ಟಿನಲ್ಲಿ ದುಬಾರಿ ಬಾಡಿಗೆಗೆ ಮನೆ ಹಿಡಿಯುವಷ್ಟು ಸಂಬಳವಿಲ್ಲ.

ನಗರದ ಹೊರಭಾಗದ ಇನ್ನೂ ನೀರು, ರಸ್ತೆಯ ಸೌಲಭ್ಯವಿಲ್ಲದ ಏರಿಯಾಗಳಲ್ಲಿ ಮನೆ ಮಾಡಿ ಅಲ್ಲಿಂದ ಠಾಣೆಗೆ ಬರಬೇಕೆಂದರೆ ಎರಡು ಗಂಟೆ ಹಿಡಿಯುತ್ತದೆ. ಮತ್ತೆ ಡ್ಯೂಟಿಯ ನಂತರ ಎರಡು ಗಂಟೆ ಪ್ರಯಾಣಿಸಬೇಕು. ಪ್ರಯಾಣದ ಜಂಜಾಟ, ಕೆಲಸದ ಭಾರ, ಹಿರಿಯ ಅಧಿಕಾರಿಗಳ ದಬ್ಬಾಳಿಕೆಯನ್ನು ಒಟ್ಟೊಟ್ಟಿಗೆ ಅನುಭವಿಸುವ ಪೇದೆಗಳಿಗೆ ಮನೆಮಂದಿಯೊಂದಿಗೆ ಆರಾಮ ಕೂತು ಹಗುರಾಗುವ ಅವಕಾಶವೇ ಇಲ್ಲ.

ಬಿಎಂಟಿಸಿ ಬಸ್ಸುಗಳಲ್ಲಿ ಪೇದೆಗಳಿಗೆಂದೇ ಉಚಿತ ಪ್ರಯಾಣದ ಸೌಲಭ್ಯವಿದೆಯಾದರೂ ಅದಕ್ಕೆ ಯೂನಿಫಾರ್ಮ್ ಹಾಕಿಕೊಂಡಿರಬೇಕು. ದಿನವಿಡೀ ಯೂನಿಫಾರ್ಮ್ ತೊಟ್ಟು ಹೈರಾಣಾದ ಪೇದೆ ಇನ್ನು ಬಸ್ ಪ್ರಯಾಣಕ್ಕೆಂದೇ ಮತ್ತೆ ಯೂನಿಫಾರ್ಮ್ ತೊಟ್ಟು ಬಸ್ಸಲ್ಲಿ ಬೆವರಬೇಕಾದ ದುಸ್ಥಿತಿಗೆ ಹೇಗೇ ತಾನೇ ಅಣಿಯಾಗುತ್ತಾನೆ?

ಇನ್ನು ಮಹಿಳಾ ಪೇದೆಗಳ ಸ್ಥಿತಿ ಇದಕ್ಕಿಂತಲೂ ಹೀನಾಯ. 25 ವರ್ಷಗಳ ಮೇಲ್ಪಟ್ಟು ಸೇವೆ ಸಲ್ಲಿಸಿದ ಮಹಿಳಾ ಪೇದೆಗೆ ಬರುವ ಸಂಬಳ ಕೇವಲ 20 ಸಾವಿರ ಮಾತ್ರ. ಕನಿಷ್ಠ ಮಹಿಳಾ ಪೇದೆಗಳಿಗಾದರೂ ಕಡ್ಡಾಯವಾಗಿ ಕ್ವಾಟ್ರಸ್ ಕಲ್ಪಿಸಬೇಕೆಂಬ ಮಾನವೀಯತೆ ಹಿರಿಯ ಅಧಿಕಾರಿಗಳಿಗಿಲ್ಲ. ಬಹುತೇಕ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಪೇದೆಗಳಿಗೆ ಶೌಚಾಲಯದ ವ್ಯವಸ್ಥೆಯೇ ಇಲ್ಲ. ಸಮೀಪದ ಸಾರ್ವಜನಿಕ ಶೌಚಾಲಯಗಳಿಗೋ ಅಥವಾ ಅಕ್ಕಪಕ್ಕದ ನಿವಾಸಿಗಳ ಮನೆಗೋ ಹೋಗಿ ದೇಹಬಾಧೆ ತೀರಿಸಿಕೊಳ್ಳಬೇಕು. ಕೆಲವೊಮ್ಮೆ ರಾತ್ರಿ 9 ರವರೆಗೂ ಠಾಣೆಯಲ್ಲಿ ಹೆಣಗಾಡಬೇಕು. ರಾತ್ರಿ ಲೇಟಾಯಿತೆಂದು ಅವರನ್ನು ಮನೆತನಕ ಡ್ರಾಪ್ ಮಾಡುವಷ್ಟು ಕನಿಷ್ಠ ಸೌಜನ್ಯ ಕೂಡ ಇಲಾಖೆಗಿಲ್ಲ.



ಐಟಿ-ಬಿಟಿ, ಸರ್ಕಾರಿ ಕೆಲಸ, ಖಾಸಗಿ ನೌಕರಿಗೆ ಹೋಲಿಸಿದರೆ ಪೊಲೀಸರು ದೇಶದ ದ್ವಿತೀಯ ದರ್ಜೆ ನಾಗರಿಕರಂತೆ ಕತ್ತೆ ದುಡಿದಂಗೆ ದುಡಿದರೆ ಮಹಿಳಾ ಪೇದೆಗಳು ಇವತ್ತಿಗೂ ಮೂರನೇ ದರ್ಜೆಯ ಪ್ರಜೆಗಳಂತೆ ನಿಕೃಷ್ಟ ಬದುಕು ಬದುಕುತ್ತಿದ್ದಾರೆ. ಎಸ್.ಐ. ವಿಜಯ್‌ಕುಮಾರ್ ಮೇಲೆ ಒಂದಲ್ಲ ಮೂರು ಬಾರಿ ಗುಂಡು ಹಾರಿಸಿಯೂ ತೃಪ್ತನಾಗದ ಪೇದೆ ಆನಂದ್‌ನ ರೋಷಾವೇಷದ ಹಿಂದೆ ಇಂಥ ಅದೆಷ್ಟು ಕಾರಣಗಳಿವೆಯೋ?

...ಂದ ಪೇದೆಯ ಪೈಶಾಚಿಕತೆ ಎಂಥಾದ್ದು

...ಐ. ವಿಜಯ್‌ಕುಮಾರ್‌ರನ್ನು ಗುಂಡಿಟ್ಟು ಕೊಂದ ಪೇದೆ ಆನಂದ್‌ಕುಮಾರ್‌ನ ವರ್ತನೆ ಮಾತ್ರ ಯಾವ ...ರ ಲೆಕ್ಕಾಚಾರಕ್ಕೂ ನಿಲುಕುತ್ತಿಲ್ಲ. ಜನವರಿ 26ರ ಶನಿವಾರ ಗಣರಾಜ್ಯೋತ್ಸವ ಇತ್ತಾದ್ದರಿಂದ ಸಹಜವಾಗೇ ...ದಿನವಿಡೀ ಸೆಂಟ್ರಿ ಕಾಯುವ ಡ್ಯೂಟಿ ವಹಿಸಲಾಗಿತ್ತು. ಗಣರಾಜ್ಯೋತ್ಸವದ ಪರೇಡಿಗೆಂದು ಅನೇಕ ...ನ್ನು ನಿಯೋಜಿಸಿದ್ದರಿಂದ ಅನಿವಾರ್ಯವಾಗಿ ಮಾರನೇ ದಿನವೂ ಪೇದೆಗಳ ಕೊರತೆಯಾಗಿತ್ತು.

ಆನಂದನ ಪತ್ನಿ ಸುಜಾತ ಹೇಳುವುದೇ ಬೇರೆ. ಭಾನುವಾರ ಜನವರಿ 27 ರಂದು ಆನಂದ್‌ನ ಕೈಗೆ ...ತ್ತಂತೆ. ಅದಕ್ಕೆ ರಜೆ ಕೇಳಲು ಹೋದರೆ ವಿಜಯ್‌ಕುಮಾರ್ ಬಯ್ದುಬಿಟ್ಟರಂತೆ. ಆನಂತರ ಪತ್ನಿಗೆ ...ಮಾಡಿದ ಆನಂದ್ ನೀನೇ ಒಂದು ರಜೆ ಕೇಳು ಅಂದಿದ್ದಾನೆ. ಹತ್ತೂವರೆಯ ಹೊತ್ತಿಗೆ ಆನಂದ್‌ನ ತಂದೆ ...ಜಾತಳ ಮಾವ ಮತ್ತು ಮಕ್ಕಳ ಸಮೇತ ಠಾಣೆಗೆ ಬಂದ ಆನಂದ್‌ನ ಪತ್ನಿ ಎಸ್.ಐ. ವಿಜಯ್‌ಕುಮಾರ್‌ರನ್ನು ...ಜೆಗಾಗಿ ಪ್ರಾರ್ಥಿಸಿದ್ದಾಳೆ. ಇದರಿಂದ ಸಿಟ್ಟಿಗೆದ್ದ ಎಸ್.ಐ. 'ಯಾಕಯ್ಯಾ ಹೆಂಡ್ತಿ ಮಕ್ಕಳನ್ನೆಲ್ಲ ಸ್ಟೇಷನ್ನಿಗೆ ... ಬರ್ತೀಯಾ' ಎಂದು ರೇಗಿದ್ದಾರೆ.


...ಮೆದುರೇ ಆನಂದ ಮತ್ತು ವಿಜಯ್‌ಕುಮಾರ್ ಮಧ್ಯೆ ಜಗಳವಾಗಿದೆ. ಕೋಪದಲ್ಲಿ 'ಮಗನೇ ಗುಂಡು ...!' ಅಂತಲೂ ವಿಜಯ್‌ಕುಮಾರ್ ಸಿಡುಕಿದ್ದಾರೆ. ಅಷ್ಟಕ್ಕೇ ತಲೆಕೆಡಿಸಿಕೊಂಡ ಆನಂದ್ ಹೋಗಿದ್ದೇ ...ಗೆ ಗುಂಡು ತುಂಬಿಸಿ ತನ್ನ ಪಾಡಿಗೆ ಕೂತಿದ್ದ ಎಸ್.ಐ. ಮೇಲೆ ಗುಂಡು ಹಾರಿಸಿಬಿಟ್ಟಿದ್ದ.

...ವರಿಗೂ ಇದು ಪೇದೆಯ ಅತಿರೇಕದಂತೆ ಕಾಣಿಸದಿರದು. ಆನಂದ್ ನಿನ್ನೆ ಮೊನ್ನೆ ಪೊಲೀಸ್ ಇಲಾಖೆಗೆ ...ಲ್ಲ. ಕಾನೂನಿನ ಪರಿಜ್ಞಾನವಿದೆ. ಶಿಕ್ಷೆಯ ತಿಳಿವಳಿಕೆಯಿದೆ. ರಜೆ ಕೊಡಲಿಲ್ಲ ಎಂದರೆ ಬಟ್ಟೆ ಕಳಚಿ ...ಠಾಣೆಯಿಂದ ಹೊರನಡೆಯಬಹುದಿತ್ತು. ಕೆಲಸಕ್ಕೇ ಗುಡ್‌ಬೈ ಹೇಳಬಹುದಿತ್ತು. ಅಥವಾ ಮೇಲಧಿಕಾರಿಗೆ ...ೀಡಬಹುದಿತ್ತು. ಅದೆಲ್ಲಾ ಬಿಟ್ಟು ಓರ್ವ ಕ್ರಿಮಿನಲ್‌ಗಿಂತಲೂ ಭಯಾನಕವಾಗಿ ಎಸ್.ಐ ಮೇಲೆ ಗುಂಡು ...ನೆ. ಕನಿಷ್ಠ ಒಂದು ಗುಂಡಿಗಾದರೂ ತೃಪ್ತಿಯಾಗಬೇಕಿತ್ತು. ಭಯ ಕಾಡಬೇಕಿತ್ತು. ಆದರೆ ಒಂದರ ...ದಾಗಿ ಮೂರು ಸುತ್ತು ಗುಂಡು ಹಾರಿಸುತ್ತಾನೆಂದರೆ ಆತನ ಮನಸ್ಥಿತಿ ಹೇಗಿರಬೇಡ? ಬಿಡುವೇ ಇಲ್ಲದ ... ಜಂಜಾಟಕ್ಕೆ ಇದಕ್ಕಿಂತ ಬೇಕೆ?





...ಶ್ವನಾಥ್



ಇ. ಕೃಷ್ಣಪ್ಪ

...ಹೊರೆ ಆಟೋ ತಿಮ್ಮ ಮತ್ತು ರೌಡಿ ಯಲ್ಲಪ್ಪನ ...ನನ್ನು ಎಳೆತಂದು ರಿಪೇರಿ ಮಾಡಲು ಎಸ್.ಐ. ...ಕುಮಾರ್ ಬೆನ್ನತ್ತಿದ್ದೇ ತಡ ಎಸ್.ಬಿ. ಪೇದೆ ...ಸಪ್‌ಚುಪ್ಪಾಗಿ ಖದೀಮರಿಗೆ ಮಾಹಿತಿ ಕೊಟ್ಟು ...ಗುವಂತೆ ನೆರವಾಗುತ್ತಿದ್ದಾನೆಂಬ ಗುಮಾನಿ ಶುರುವಾಗಿದೆ. ತಡಮಾಡದೆ ಎಸ್.ಬಿ. ...ಲ್ಲಿದ್ದ ಆನಂದ್‌ನನ್ನೇ ಬದಲಾಯಿಸಿ ಆತನನ್ನು ...ಟ್ಯೂಟಿಗೆ ನೇಮಿಸಿಬಿಟ್ಟರು.


... ಪೇದೆ ಆನಂದ್‌ಗಾದ ದೊಡ್ಡ ಅವಮಾನ. ...ಡ್ಯೂಟಿಯೆಂದರೆ ಪೇದೆಗಳ ಮಟ್ಟಿಗೆ ಪ್ರತಿಷ್ಠಿತ, ...ತ, ಯೂನಿಫಾರ್ಮ್ ಧರಿಸದೆಯೇ ಪೊಲೀಸ್‌ಗಿರಿ ...ಯುದ್ದೆ. ಏಕಾಏಕಿ ಅದನ್ನು ಕಿತ್ತು ಸೆಂಟ್ರಿ ಡ್ಯೂಟಿಗೆ ...ಆತನ ಪಾಲಿಗೆ ಶಿಕ್ಷೆಯಂತೆ, ಅವಮಾನದಂತೆ ...ತ್ತು. ಹೊಸದಾಗಿ ಬಂದ ಎಸ್.ಐ. ವಿರುದ್ಧ ...ೇ ಹಲ್ಲು ಮಸೆದ!

...ಧ್ಯೆ ವಿಜಯ್‌ಕುಮಾರ್ ತಾಲ್ಲೂಕು ಜೆಡಿಎಸ್ ...ರಸಂದ್ರದ ಮುದ್ದುರಂಗೇಗೌಡನನ್ನು ಆತನ ...ಸುಗ್ಗಿ ಎಳೆದು ತಂದು ಲಾಕಪ್ಪಿಗೆ ಹಾಕಿದ್ದು ...ತು ಜೆಡಿಎಸ್ ನಾಯಕ ಮುಂಗಾರು ಮಳೆ ...ಕೆರಳಿಸಿತು. ನೇರವಾಗಿ ವಿಜಯ್‌ಕುಮಾರ್‌ಗೇ ...ಿಸಿದ ಎಮ್ಮೆಲ್ಸಿ ಕೃಷ್ಣಪ್ಪ ಮುದ್ದುರಂಗೇಗೌಡನನ್ನು ...ಸುವಂತೆ ಧಮಕಿ ಕೊಟ್ಟ. ದಲಿತ ಯುವಕನೊಬ್ಬನ ...ಮುದ್ದುರಂಗ ಹಲ್ಲೆ ನಡಸಿದ್ದ.

... ಬೆನ್ನಲ್ಲೇ ರಾಜಾನುಕುಂಟೆಯ ನಡುರಸ್ತೆಯಲ್ಲಿ ಗುಂಪು ಕಟ್ಟಿಕೊಂಡು ಪೋಜು ಕೊಡುತ್ತಿದ್ದ ಕಾಂಗ್ರೆಸ್ ಲೀಡರ್ ಚೊಕ್ಕನಹಳ್ಳಿ ವೆಂಕಟೇಶನಿಗೂ ವಿಜಯ್‌ಕುಮಾರ್ ತಪರಾಕಿ ಕೊಟ್ಟರು. ಹೀಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಲೋಕಲ್ ಲೀಡರುಗಳನ್ನು ಮಟ್ಟಾ ಹಾಕಿದಂತೆ ಮಾಡಿ ಶಾಸಕ ವಿಶ್ವನಾಥ್ ಕಿವಿಗದು ಬೀಳುವಂತೆಯೂ ನೋಡಿಕೊಂಡ ವಿಜಯ್‌ಕುಮಾರ್‌ರ ಅಸಲೀ ತಂತ್ರ ಗೊತ್ತಾಗಿದ್ದು ಎಮ್ಮೆಲ್ಲೇ ವಿಶ್ವನಾಥ್‌ರ ನೆಲಕಂಟಕ ತಮ್ಮ ಸೋಮಶೇಖರ್ ರೆಡ್ಡಿಯನ್ನು ಠಾಣೆಗೆ ಕರೆಸಿ ಬಡಬಗ್ಗರ ಭೂಮಿಗೆ ಹಾಕಿಸಿದ್ದ ಬೇಲಿ ಕಿತ್ತು ಹಾಕುವಂತೆ ಎಚ್ಚರಿಕೆ ಕೊಟ್ಟ ನಂತರವೇ!

ಯಲಹಂಕ ಶಾಸಕ ವಿಶ್ವನಾಥ್ ತಮ್ಮ ಸೋಮಶೇಖರ್ ರೆಡ್ಡಿ ಮೂಲತಃ ರಾಜಾನುಕುಂಟೆಯವನೆ. ಹುಟ್ಟಾ ಭೂಗಳ್ಳ. ಅಸಹಾಯಕ ದಲಿತರು, ಬಡರೈತರ ಬೆದರಿಸಿ ಅವರ ಆಸ್ತಿ ದೋಚುವುದೇ ಈತನ ಫುಲ್ ಟೈಂ ದಂಧೆ. ಯಾವತ್ತು ಎಮ್ಮೆಲ್ಲೇ ತಮ್ಮನನ್ನೇ ಠಾಣೆಗೆ ಕರೆಸಿಕೊಂಡು ವಿಜಯ್‌ಕುಮಾರ್ ಬೆವರಿಸಿದರೋ ಠಾಣೆಯ ಮಿಕ್ಕೆಲ್ಲ ಪೊಲೀಸರಿಗದು ದುಸ್ಸಾಹಸವಾಗಿ ಕಂಡಿದೆ. ಎಮ್ಮೆಲ್ಲೇಯ ಬೆಂಬಲವಿಲ್ಲದ ಮೇಲೆ ಹೊಸ ಎಸ್.ಐ ಮಾತಿಗೆ ಆಪಾಟಿ ಕಿಮ್ಮತ್ತು ನೀಡಬೇಕಿಲ್ಲ ಎಂಬ ಅಸಡ್ಡೆಯೂ ಪೊಲೀಸರಲ್ಲಿ ಮನೆ ಮಾಡಿದೆ. ಇದೇ ಪೇದೆ ಆನಂದ್‌ನನ್ನು ಎಸ್.ಐ. ವಿರುದ್ಧ ತಿರುಗಿ ಬೀಳುವಂತೆ ಪ್ರಚೋದಿಸಿತೆ?

ಪೇದೆಯ ದುರ್ಗತಿ



ಅಷ್ಟಕ್ಕೂ ಪೇದೆ ಆನಂದ್‌ಕುಮಾರ್ ದುಷ್ಟನಾಗಿರಲಿಲ್ಲ. ತಾನಾಯಿತು ತನ್ನ ಡ್ಯೂಟಿಯಾಯಿತು ಎಂಬಂತೆ ಇದ್ದುಬಿಟ್ಟಿದ್ದ. ರಾಜಾನುಕುಂಟೆ ಮತ್ತು ಸುತ್ತಮುತ್ತಲ ಗ್ರಾಮಸ್ಥರ ಜೊತೆ ವಿನಯವಾಗೇ ಇದ್ದ. ಗೌರಿಬಿದನೂರು ತಾಲ್ಲೂಕು ಚೌಡರೆಡ್ಡಿ ಪಾಳ್ಯದ ಆತನಿಗೆ ವಿಜಯ್‌ಕುಮಾರ್ ಪೇದೆಯಾಗಿದ್ದಾಗ ಬ್ಯಾಚ್‌ಮೇಟ್ ಆಗಿದ್ದ ಇಬ್ಬರು ಮಕ್ಕಳಿದ್ದಾರೆ. ತನಗಿದ್ದ ಎಸ್.ಬಿ. ಡ್ಯೂಟಿಯನ್ನು ಕಿತ್ತುಕೊಂಡು ಶಿಕ್ಷಾರ್ಥವೆಂಬಂತೆ ಸೆಂಟ್ರಿ ಡ್ಯೂಟಿಗೆ ಹಾಕಿದಾಗಲೂ ಗೊಣಗಿದನೇ ಹೊರತು ತಲೆಕೆಡಿಸಿಕೊಂಡಿರಲಿಲ್ಲ. ಇತ್ತೀಚೆಗೆ ಸಂಕ್ರಾಂತಿ ಹಬ್ಬದಂದೂ ರಜೆ ಸಿಗದ ಕಾರಣ ಆನಂದ್ ಕೆರಳಿದ್ದ. ತನ್ನನ್ನು ಉದ್ದೇಶಪೂರ್ವಕವಾಗಿಯೇ ಎಸ್.ಐ. ಅವಮಾನಿಸುತ್ತಿದ್ದಾರೆಂಬ ಸಂಶಯ ಆತನಿಗಿತ್ತು.

ತನ್ನ ಜೊತೆಗೇ ಪೇದೆಯಾಗಿದ್ದರಿಂದ ತನ್ನ ಅಂತಸ್ತು ಮರೆಯಲು ವಿಜಯಕುಮಾರ್ ತನ್ನನ್ನು ಮತ್ತಷ್ಟು ಅವಮಾನಿಸಿ ಹಿಂಸಿಸುತ್ತಿದ್ದಾರೆಂದೇ ಆನಂದ್ ಲೆಕ್ಕ ಹಾಕಿದ್ದ. ಇದಕ್ಕೆ ಸೊಪ್ಪು ಹಾಕಿದ್ದು ದೊಡ್ಡಬಳ್ಳಾಪುರದ ಪೊಲೀಸ್ ಇನ್ಸ್‌ಪೆಕ್ಟರ್. ರಾಜಾನುಕುಂಟೆ ಸುತ್ತಮುತ್ತಲ ಜುಗಾರಿ ಅಡ್ಡೆಗಳಿಂದ ಇಲಾಖೆಯ ಕೈಸೇರುವ ಉತ್ಪತ್ತಿಯ ಹಂಚಿಕೆ ಕುರಿತಂತೆ ಇನ್ಸ್‌ಪೆಕ್ಟರ್‌ಗೂ ಡಿವೈಎಸ್‌ಪಿಗೂ ಕಳೆದೊಂದು ವರ್ಷದಿಂದ ಲಟಾಪಟಿ ನಡೆಯುತ್ತಲೇ ಇದೆ. ಹೊಸದಾಗಿ ಬಂದ ವಿಜಯ್‌ಕುಮಾರ್ ಇತ್ತ ಇನ್ಸ್‌ಪೆಕ್ಟರ್‌ಗೂ ಜಗ್ಗದೆ ಅತ್ತ ಡಿವೈಎಸ್‌ಪಿಗೂ ಬಗ್ಗದೆ ಗೊಂದಲದಲ್ಲೇ ಹೈರಾಣಾದರು. ಈ ಮಧ್ಯೆ ತನ್ನ ವಿರುದ್ಧ ಯಾವುದೋ ಪತ್ರಿಕೆಯೊಂದರಲ್ಲಿ ಮಾನಹಾನಿಯ ವರದಿ ಬರೆಸಿದರೆಂದು ಡಿವೈಎಸ್‌ಪಿ ಇನ್ಸ್‌ಪೆಕ್ಟರ್‌ನನ್ನು ವಾಚಾಮಗೋಚರ ಬಯ್ದುಬಿಟ್ಟರು.

ಇದಾಗಿದ್ದು ಜನವರಿ 26 ರಂದು. ಅಂದರೆ ವಿಜಯ್‌ಕುಮಾರ್ ಕೊಲೆಯಾಗುವ ಹಿಂದಿನ ದಿನ. ಇದು ಹೇಗೋ ಪೇದೆ ಆನಂದ್‌ಗೆ ಗೊತ್ತಾಗಿದೆ. ಅಷ್ಟಕ್ಕೂ ಪೇದೆ ಆನಂದ ಶುರುವಿನಿಂದಲೂ ಇನ್ಸ್‌ಪೆಕ್ಟರ್‌ಗೆ ಪರಮಾಪ್ತ. ಹೊಸದಾಗಿ ಬಂದ ಎಸ್.ಐ. ತನಗಿಂತಲೂ ಡಿವೈಎಸ್‌ಪಿಗೇ ಹೆಚ್ಚು ಮಣಿಯುತ್ತಾನೆಂಬ ಸಿಟ್ಟು ಇನ್ಸ್‌ಪೆಕ್ಟರ್‌ಗಿತ್ತೋ, ಅದನ್ನು ತನ್ನ ಜೊತೆ ಸಲಿಗೆಯಿಂದಿದ್ದ ಪೇದೆ ಆನಂದನ ಮುಂದೆ ವ್ಯಕ್ತಪಡಿಸಿದ್ದರೋ, ಹೇಗೊ ಇನ್ಸ್‌ಪೆಕ್ಟರ್ ಬೆಂಬಲ ತನಗಿರುವುದರಿಂದ ಎಸ್.ಐ.ಗೆ ಏನು ಮಾಡಿದರೂ ನಡೆಯುತ್ತದೆ ಎಂಬ ಧೈರ್ಯ ಪೇದೆಗೆ ಬಂತೋ, ಅಂತೂ ಜನವರಿ 27 ರ ಮಧ್ಯಾಹ್ನದ ಹೊತ್ತಿಗೆ ವಿಜಯ್‌ಕುಮಾರ್ ಕೊಲೆ ನಡೆದೇ ಬಿಟ್ಟಿದೆ.

ಭ್ರಷ್ಟ ಪೊಲೀಸ್ ವ್ಯವಸ್ಥೆ ಇಲಾಖೆಯ ಅಂತಃಕ್ಷೋಭೆ, ಪಾಪದ ದುಡ್ಡಿನ ಹಪಾಹಪಿ ಮತ್ತು ಪೇದೆಗಳ ಬಿಡುವಿಲ್ಲದ ಹೈರಾಣಿಗೆ ದಿಟ್ಟ ಎಸ್.ಐ. ವಿಜಯ್‌ಕುಮಾರ್ ಬಲಿಯಾಗಿದ್ದಾರೆ. ಗೃಹಮಂತ್ರಿ ಅಶೋಕ್ ಎಸ್.ಐ. ಶವದೆದುರು ಎಷ್ಟೇ ಮೊಸಳೆ ಕಣ್ಣೀರಿಟ್ಟರೂ ಏನು ಪ್ರಯೋಜನ? ಎಸ್.ಐ. ವಿಜಯ್‌ಕುಮಾರ್ ಪತ್ನಿ ಮಕ್ಕಳ ಆಕ್ರಂದನಕ್ಕೆ ಸರ್ಕಾರದ ಬಳಿ ಉತ್ತರವೆಲ್ಲಿದೆ? ಉತ್ತರಿಸಲು ನೈತಿಕತೆಯಾದರೂ ಇದೆಯೇ?

ಇಷ್ಟಾದ ನಂತರವಾದರೂ ಪೊಲೀಸ್ ವ್ಯವಸ್ಥೆಗೆ ಕಾಯಕಲ್ಪ ಮಾಡುವ ಬಗ್ಗೆ ಅಶೋಕ್ ಆಗಲಿ, ಮುಖ್ಯಮಂತ್ರಿಯಾಗಲಿ ತುಟಿಪಿಟಿಕ್ಕೆತ್ತಿಲ್ಲ. ಅದೇ ಅಸಲೀ ದುರಂತ.

● ರಾ.ಸೋಮನಾಥ್





ನವೀನ್ ಸೂರಿಂಜೆಗೆ ಬಿಡುಗಡೆ

ಮೇಘರಾಜ್‌ಗೆ ಬಂಧನ!

ಟಿವಿ ಪತ್ರಕರ್ತ ನವೀನ್ ಸೂರಿಂಜೆಯ ವಿರುದ್ಧ ಹಾಕಲಾಗಿದ್ದ ಕೇಸ್ ಅನ್ನು ಹಿಂತೆಗೆದುಕೊಳ್ಳಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಮಂಗಳೂರಿನ ಹೋಂ ಸ್ಟೇ ಮೇಲಿನ ಕೋಮುವಾದಿಗಳ ದಾಳಿಗೆ ಸಂಬಂಧಿಸಿದಂತೆ ಪತ್ರಕರ್ತ ನವೀನ್‌ರನ್ನು ಪ್ರಕರಣದಲ್ಲಿ ಬೇಕಂತಲೇ ಸಿಲುಕಿಸಿ ಕಳೆದ ಎಪ್ಪತ್ತೈದು ದಿನಗಳಿಂದ ಜೈಲಿನಲ್ಲಿರುವಂತೆ ಮಾಡಲಾಗಿತ್ತು.

ಕರಾವಳಿಯ ಹಿಂದೂತ್ವವಾದಿ ಪುಂಡರು, ಪೊಲೀಸರು ಹಾಗೂ ಬಿಜೆಪಿ ರಾಜಕಾರಣಿಗಳ ಒಂದು ಜಂಟಿ ಸಂಚಿನ ಭಾಗವಾಗಿಯೇ ನವೀನ್ ಸೂರಿಂಜೆಯನ್ನು ಈ ಕೇಸ್‌ನಲ್ಲಿ ಫಿಕ್ಸ್ ಮಾಡಲಾಯಿತೆಂಬುದು ಇಡೀ ರಾಜ್ಯದ ಜನತೆಗೆ ತಿಳಿದಿದೆ. ಸಂಘ ಪರಿವಾರ ಹಾಗೂ ಬಿಜೆಪಿ ಸರ್ಕಾರದ ಮುಖವಾಡಗಳನ್ನು expose ಮಾಡುವ ಮಾಧ್ಯಮದವರಿಗೆ ಪಾಠ ಕಲಿಸಲೆಂದೇ ಈ ಸಂಚು ಹೆಣೆಯಲಾಗಿತ್ತು.

ಕ್ರಿಯಾಶೀಲ ಪತ್ರಕರ್ತರಾದ್ದ ನವೀನ್ ಬಿಜೆಪಿಗಳ ಈ ಕಿರುಕುಳವನ್ನು ದಿಟ್ಟತನದಿಂದಲೇ ಎದುರಿಸಿದ್ದಾರೆ. ಈ ಸಂದರ್ಭದಲ್ಲಿ ನಾಡಿನ ಮಾಧ್ಯಮ ಮಿತ್ರರು ನವೀನ್ ಬೆಂಬಲಕ್ಕೆ ನಿಂತು ಸರ್ಕಾರದ ವಿರುದ್ಧ ಪ್ರತಿಭಟಿಸಿ, ನವೀನ್‌ಗೆ ನೈತಿಕ ಬೆಂಬಲ ನೀಡಿದ್ದು ಸೂಕ್ತವಾಗಿತ್ತು. ಆದರೆ ಒಂದೆರಡು ಸಂದರ್ಭದಲ್ಲಿ ಟಿವಿ ಚಾನಲ್‌ಗಳ ಕೆಲವರು ಗೃಹ ಸಚಿವ ಅಶೋಕರ ಜೊತೆ ನವೀನ್ ಪರವಾಗಿ ವಾದಿಸುವ ಬದಲಾಗಿ ಗೋಗರೆಯುವಂತೆ ವರ್ತಿಸಿದ್ದು ಪತ್ರಕರ್ತರ ಘನತೆಗೆ ಹಾಗೂ fourth estate ನ ನಿಯಮಗಳಿಗೆ ಹೊಂದುವಂತಿರಲಿಲ್ಲ. ಮಾಧ್ಯಮ ಜಗತ್ತಿನ ಪ್ರತಿನಿಧಿಯೊಬ್ಬರ ಕಷ್ಟದ ಪರಿಸ್ಥಿತಿಗೆ ಪ್ರತಿಸ್ಪಂದಿಸಿ ಪ್ರತಿಭಟನೆಗಳನ್ನು ಆಯೋಜಿಸಿದ ಬರಹಗಾರ ರವಿ ಕೃಷ್ಣಾರೆಡ್ಡಿ, ಸಂವಾದ ಜರ್ನಲಿಸಂ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ರಾಜ್ಯಾದ್ಯಂತ ನವೀನ್ ಬೆಂಬಲಕ್ಕೆ ನಿಂತ ಪತ್ರಕರ್ತರೆಲ್ಲಾ ಈ ಹೋರಾಟದ ಗೆಲುವಿನ ರೂವಾರಿಗಳಾಗಿದ್ದಾರೆ.

ಈ ನಡುವೆ ಇಂತದ್ದೇ ಇನ್ನೊಂದು ಘಟನೆಯಾಗಿದೆ.

ನಮ್ಮ 'ಲಂಕೇಶ್' ವಾರಪತ್ರಿಕೆಯ ಬಾಗಲಕೋಟೆ ಜಿಲ್ಲಾ ವರದಿಗಾರರಾಗಿರುವ ಮೇಘರಾಜ್‌ರನ್ನು ಅಸ್ಪೃಶ್ಯತಾ ಆಚರಣೆ ತಡೆ ಕಾಯ್ದೆಯಡಿ ಮೊನ್ನೆ ಜನವರಿ 28 ರಂದು ಪೊಲೀಸರು ಬಂಧಿಸಿ ಜೈಲಿಗೆ ಹಾಕಿದ್ದಾರೆ.

ಇದರ ಹಿನ್ನೆಲೆ ಹೀಗಿದೆ.

ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಸಚಿವ ಗೋವಿಂದ ಕಾರಜೋಳರ ಮಗನ ಪ್ರೇಮಪ್ರಕರಣವೊಂದು ರಾದ್ಧಾಂತ ಹುಟ್ಟಿಸಿರುವ ಬಗ್ಗೆ ವರದಿ ಪ್ರಕಟವಾಗಿತ್ತು. ಅದಕ್ಕೂ ಮುನ್ನ ಜಿಲ್ಲಾ ಬಿಜೆಪಿ ರಾಜಕಾರಣಿಗಳ ಭ್ರಷ್ಟಾಚಾರ ಕುರಿತಂತೆ ಲಂಕೇಶ್‌ನಲ್ಲಿ ಕೆಲ ವರದಿಗಳು ಪ್ರಕಟಗೊಂಡಿದ್ದವು. ಇದನ್ನೆಲ್ಲ ಅಸಹನೆಯಿಂದ ನೋಡುತ್ತಿದ್ದ ಬಿಜೆಪಿ ನಾಯಕರು ದಲಿತ ವರ್ಗದ ವ್ಯಕ್ತಿಯೋರ್ವರಿಂದ 28 ರ ರಾತ್ರಿ ಜಾತಿನಿಂದನೆಯ ಸುಳ್ಳು ದೂರು ಕೊಡಿಸಿದ್ದಾರೆ. ಬಾಗಲಕೋಟೆಯ ಗ್ರಾಮಾಂತರ ಪೊಲೀಸರು ದೂರಿನ ಸತ್ಯಾಸತ್ಯತೆಯನ್ನು ಪರಿಶೀಲಿಸದೆ, primafacie ಏನೆಂತಲೂ ವಿಚಾರಿಸದೆ ಕ್ಷಣಾರ್ಧದಲ್ಲಿ ದೂರು ದಾಖಲಿಸಿಕೊಂಡು ಅದೇ ದಿನ ರಾತ್ರಿ ಮೇಘರಾಜ್‌ರನ್ನು ಅರೆಸ್ಟ್ ಮಾಡಿದ್ದಾರೆ.

ಕಳೆದ ಒಂದು ದಶಕದಿಂದಲೂ ಕೋಮು ಸೌಹಾರ್ದ ವೇದಿಕೆ ಹಾಗೂ ಪ್ರಗತಿಪರ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ದಮನಿತ ವರ್ಗಗಳ ಪರವಾಗಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಮೇಘರಾಜ್ ಭ್ರಷ್ಟ ಬಿಜೆಪಿಗಳ ವಿರುದ್ಧವೂ ದನಿ ಎತ್ತುತ್ತಿದ್ದರು. ನವೀನ್ ಸೂರಿಂಜೆಗೆ ಮಾಡಿದಂತೆ ಈಗ ಮೇಘರಾಜ್‌ರಿಗೂ ತಕ್ಕ ಪಾಠ ಕಲಿಸಬೇಕೆಂಬ ದುರುದ್ದೇಶದಿಂದ ಬಾಗಲಕೋಟೆಯ ಬಿಜೆಪಿ ನಾಯಕರು ಜಾತಿನಿಂದನೆಯ ಸುಳ್ಳು ಆರೋಪ ಹೊರಿಸಿ ಪ್ರಕರಣ ದಾಖಲಿಸಿರುವುದು ಖಂಡನೀಯ.

ನಾಡಿನ ಮಾಧ್ಯಮ ಮಿತ್ರರು ಹಾಗೂ ಪ್ರಗತಿಪರರು ನಮ್ಮ ತಂಡದ ಮೇಘರಾಜ್ ಪರ ನಿಲ್ಲಬೇಕೆಂದು ಕೋರುತ್ತಿದ್ದೇವೆ.

● ಲಂಕೇಶ್ ಬಳಗ

ಹುಬ್ಬಳ್ಳಿ: ಶಾಸಕ ಹಾಲಹರವಿಗೆ ಸೋಲಿನ ನಡುಕ



ಹುಬ್ಬಳ್ಳಿ ಮಹಾನಗರ ಪಾಲಿಕೆಯ ಕಾರ್ಪೊರೇಟರಾಗಿಯೂ ಆಯ್ಕೆಯಾಗದೆ, ಸಣ್ಣದೊಂದು ಚುನಾವಣೆಯಲ್ಲೂ ಹೀನಾಯವಾಗಿ ಸೋತು ಮನೆ ಸೇರಿದ್ದ ವೀರಭದ್ರಪ್ಪ ಹಾಲಹರವಿ ಎಂಬ ಅಬ್ಬೇಪಾರಿ ಮನುಷ್ಯ ಕಳೆದ ಬಾರಿ ಅಚಾನಕ್ಕಾಗಿ ಶಾಸಕನಾದ.

ತಾನು ಗೆದ್ದಿದ್ದು ಜನರ ಸೇವೆಗೆ ಎಂಬುದನ್ನು ಮರೆತ ಹಾಲಹರವಿ ತನ್ನ ನಾಲ್ಕೂವರೆ ವರ್ಷ ಶಾಸಕನ ಅವಧಿಯನ್ನು ಅಕ್ರಮ ಕುಳಗಳ ಗಾಡ್‌ಫಾದರ್‌ನಂತೆ ಕಳೆದ. ಪರಿಣಾಮವಾಗಿ ಈ ಬಾರಿಯ ಚುನಾವಣೆಯಲ್ಲಿ ಹಾಲಹರವಿ ತನ್ನ ಠೇವಣಿಯನ್ನೂ ಉಳಿಸಿಕೊಳ್ಳುವುದು ಕಷ್ಟದ ಕೆಲಸವಾಗಲಿದೆ.

ಟ್ಯಾಕ್ಸಿ ಏಜೆಂಟ್ ಆಗಿದ್ದ

ಹಾಲಹರವಿ ಹುಟ್ಟುತ್ತಲೇ ಬಂಗಾರದ ಸ್ಪೂನನ್ನು ಬಾಯಲ್ಲಿಟ್ಟುಕೊಂಡು ಹುಟ್ಟಿದವನೇನಲ್ಲ, ಬಡತನದಲ್ಲೇ ಬೆಳೆದ ಈತ ಹುಬ್ಬಳ್ಳಿ ಶಹರದಲ್ಲಿರುವ ಖಾಸಗಿ ವಾಹನಗಳ ಸ್ಟ್ಯಾಂಡ್ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಕ್ರಮೇಣ ಬಿಜವಾಡ ಫ್ಯಾಮಿಲಿಯೊಂದಿಗೆ ಸಖ್ಯ ಬೆಳೆಸಿಕೊಂಡಿದ್ದರಿಂದ ಹಾಲಹರವಿಗೆ ಕಲಘಟಗಿ ಹಾಗೂ ಶಿಗ್ಗಾಂವಿಯ ಟ್ಯಾಕ್ಸಿ ಏಜೆಂಟ್‌ಗಿರಿಯೂ ಸಿಕ್ಕಿದವು. ಹೀಗೆ ಜನರೊಂದಿಗೆ ಸಂಪರ್ಕಕ್ಕೆ ಪಡೆದ ಈತ ನಾಲ್ಕಾರು ಪುಡಿ ರೌಡಿಗಳನ್ನು ತನ್ನ ಬೆನ್ನಿಗೆ ಇಟ್ಟುಕೊಂಡು ಸಣ್ಣಪುಟ್ಟ ಲ್ಯಾಂಡ್ ಡೀಲು ಮತ್ತು ಜಗಳಗಳನ್ನು ಬಗೆಹರಿಸಲು ಮುಂದಾದ.

ಇವನ ಕೈಯಲ್ಲಿ ನಾಲ್ಕು ಕಾಸು ಓಡಾಡಲು ಪ್ರಾರಂಭಿಸಿದಾಗ ಬಿಜವಾಡರ ಫ್ಯಾಮಿಲಿಯೊಂದಿಗಿನ ದೋಸ್ತಿ ಮುರಿದುಕೊಂಡು ಅವರ ಸಮನಾಗಿ ಬೆಳೆಯಬೇಕೆಂಬ ಕನಸು ಕಾಣಲಾರಂಭಿಸಿದ. ಆ ನಿಟ್ಟಿನಲ್ಲಿ ಬಿಜೆಪಿಯನ್ನು ಸೇರಿಕೊಂಡ.

ಕಾರ್ಪೊರೇಷನ್ ಚುನಾವಣೆಯಲ್ಲಿ ಸೋತಿದ್ದ

ಯಾವಾಗ ಹಾಲಹರವಿಗೆ ಹುಬ್ಬಳ್ಳಿ ಚಿಡ್ಡಿಗಳೊಂದಿಗೆ ದೋಸ್ತಿ ಹೆಚ್ಚಾಯಿತೋ ಆಗ ದೋನಂಬರ್ ದಂಧೆ ಕುಳಗಳ ನಂಟೂ ಹೆಚ್ಚಾಯಿತು. ಹುಬ್ಬಳ್ಳಿಯ ಬಹುತೇಕ ಅಕ್ರಮ ದಂಧೆಗಳು ಚಿಡ್ಡಿ ಪುಢಾರಿಗಳ ಹಿಡಿತದಲ್ಲೇ ಇರುವುದರಿಂದ ಹಾಲಹರವಿಯ ಅಕ್ರಮ ಆದಾಯವೂ ಹೆಚ್ಚಾಯಿತು. ಹೀಗೆ ಗಳಿಸಿದ ಹಣದಲ್ಲೇ ಕಾರ್ಪೊರೇಟರ್ ಆಗುವ ಕನಸು ಕಂಡ ಹಾಲಹರವಿ ಜಗದೀಶ ಶೆಟ್ಟರ್ ಅವರ ಕಟ್ಟಾ ಅನುಯಾಯಿ ಆದ.

ಪರಿಣಾಮವಾಗಿ ಈತನಿಗೆ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಬಿ. ಫಾರ್ಮ್ ಕೂಡ ಸಲೀಸಾಗೇ ಸಿಕ್ಕಿತು. ಆದರೆ ಆ ಕ್ಷೇತ್ರದಲ್ಲಿರುವ ಜನರಿಗೆ ತನ್ನ ಮುಖ ತೋರಿಸದ, ಯಾರೊಂದಿಗೂ ಬೆರೆಯದ ಹಾಲಹರವಿಗೆ ಸೋಲು ಕೂಡ ಅಷ್ಟೇ ಸುಲಭದಲ್ಲೇ ಸಿಕ್ಕಿತ್ತು. ಹೊಸೂರಿನ ಹಿರೇಕೆರೂರು ಫ್ಯಾಮಿಲಿಯ ಜೆಡಿಎಸ್‌ನ ಯಲ್ಲವ್ವ ಲಕ್ಷ್ಮಣ ಹಿರೇಕೆರೂರು ವಿರುದ್ಧ ಹೀನಾಯವಾಗಿ ಸೋತದ್ದಲ್ಲದೆ ಕೈಯಲ್ಲಿದ್ದ ಹಣವನ್ನೆಲ್ಲ ಕಳೆದುಕೊಂಡ ಹಾಲಹರವಿ ಆಗ ವಿಧಿ ಇಲ್ಲದೆ ಮತ್ತೆ ಟ್ಯಾಕ್ಸಿ ಸ್ಟ್ಯಾಂಡಿನತ್ತ ಮುಖ ಮಾಡಿದ್ದ.

ಇದ್ದಕ್ಕಿದ್ದಂತೆ ಶಾಸಕನಾದ


ಹೀಗೆ ಕಾರ್ಪೊರೇಷನ್ ಚುನಾವಣೆಯಲ್ಲಿ ಸೋತ ನಂತರ ತನಗೆ ರಾಜಕೀಯವೇ ಬೇಡ ಎನ್ನುವಮಟ್ಟಕ್ಕೆ ಹಾಲಹರವಿ ಬಂದು ನಿಂತ. ಅದೇ ಸಮಯಕ್ಕೆ ಕ್ಷೇತ್ರ ಮರುವಿಂಗಡಣೆಯಾಗಿ ಹುಬ್ಬಳ್ಳಿ ಶಹರ ಕ್ಷೇತ್ರ ಹಿಂದುಳಿದ ವರ್ಗಕ್ಕೆ ಮೀಸಲಾಯಿತು. ಅಲ್ಲಿಯತನಕ ಮೇಲ್ವರ್ಗದ ಜನರ ಹಿಡಿತದಲ್ಲೇ ಇದ್ದ ಈ ಕ್ಷೇತ್ರದಲ್ಲಿ ಬಿಜೆಪಿಗೆ ಒಬ್ಬ ಹಿಂದುಳಿದ ವರ್ಗದ ಅಭ್ಯರ್ಥಿಯೇ ಇಲ್ಲದಂತಾಯಿತು. ಆಗ ಮಾಜಿ ಶಾಸಕ ಅಶೋಕ್ ಕಾಟ್ವೆ ಮತ್ತು ಜಗದೀಶ್ ಶೆಟ್ಟರ್ ಅವರ ಕಣ್ಣಿಗೆ ಬಿದ್ದದ್ದೇ ಈ ಹಾಲಹರವಿ. ಹಾಲಹರವಿಗೆ ಶೆಟ್ಟರ್ ಬಿಜೆಪಿಯ ಬಿ ಫಾರ್ಮ್ ಕೊಡಿಸಿದರು ನಿಜ. ಆದರೆ ಆತ ಗೆಲ್ಲುವುದಿರಲಿ, ಠೇವಣಿಯನ್ನೂ ಉಳಿಸಿಕೊಳ್ಳುವುದಿಲ್ಲ ಎಂಬ ಇರಾದೆ ಅವರಿಗೆ ಆಗ ಇದ್ದಿರಲಿಕ್ಕೂ ಸಾಕು.

ಇದಲ್ಲದೆ ಹಾಲಹರವಿಯನ್ನು ನಾಲ್ಕು ಜನರಿಗೆ ಪರಿಚಯಿಸಿದ್ದ ಬಿಜವಾಡ ಫ್ಯಾಮಿಲಿಯ ದುರ್ಗಪ್ಪ ಬಿಜವಾಡ ಪಕ್ಷೇತರ ಅಭ್ಯರ್ಥಿಯಾಗಿ ಈತನ ವಿರುದ್ಧ ಸ್ಪರ್ಧಿಸಿದರು. ಜೊತೆಗೆ ಕಾಂಗ್ರೆಸ್‌ನಿಂದ ಎಫ್.ಹೆಚ್.ಜಕ್ಕಪ್ಪನವರ ಹಾಗೂ ಜೆಡಿಎಸ್ ಪಕ್ಷದಿಂದ ಶಿವು ಹಿರೇಕೆರೂರು ಕೂಡ ಚುನಾವಣಾ ಕಣಕ್ಕಿಳಿದರು.


ಜನರ ದುರಾದೃಷ್ಟಕ್ಕೆ, ಹಾಲಹರವಿಯ ಅದೃಷ್ಟಕ್ಕೆ ಆಗ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ನಾಯಕ ಎಂದು ಬಿಂಬಿಸಿಕೊಂಡ ಬಿಜೆಪಿಯ ಯಡಿಯೂರಪ್ಪನವರ ಪರ ಅಲೆ ಎದ್ದಿತು. ಜೊತೆಗೆ ಹುಬ್ಬಳ್ಳಿಯ ಅಕ್ರಮ ದಂಧೆಕೋರರೆಲ್ಲ



ಹಾಲ್ಕೋಡ್ ಹನುಮಂತಪ್ಪ



ಶಂಕ್ರಣ್ಣ ಬಿಜವಾಡ



ಜಕ್ಕಪ್ಪನವರ್

ಹಾಲಹರವಿಯ ಬೆನ್ನಿಗೆ ನಿಂತರು. ಈ ಎರಡು ಅಂಶಗಳಿಂದಾಗಿ ಹಾಲಹರವಿ ಅಚಾನಕ್ಕಾಗಿ ಗೆದ್ದು ಶಾಸಕನಾಗಿಯೇ ಬಿಟ್ಟ.

ಶಾಸಕನಾಗಿ ಗೆದ್ದಾಗ ಹಾಲಹರವಿ ನವನಗರದ ಸಣ್ಣ ಮನೆಯೊಂದರಲ್ಲಿ ವಾಸಿಸುತ್ತಿದ್ದ. ಆದರೀಗ ಆತ ಹುಬ್ಬಳ್ಳಿಯ ಮಧ್ಯಭಾಗದಲ್ಲಿರುವ 'ಹಾಟ್ಸ್ ಏರಿಯಾ' ಎನಿಸಿಕೊಂಡಿರುವ ದೇಶಪಾಂಡೆ ನಗರದಲ್ಲಿ ಭವ್ಯ ಮನೆಯಲ್ಲಿ ವಾಸಿಸುತ್ತಿದ್ದಾನೆ ಎಂದರೆ ಈಗ 'ಬೆಳೆದಿರುವ ಪರಿ'ಯನ್ನು ಲೆಕ್ಕಹಾಕಬಹುದು. ಈತ ಬೇನಾಮಿ ಹೆಸರಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಮಾಡಿದ್ದಾನೆಂಬ ಗುಸುಗುಸು ಹುಬ್ಬಳ್ಳಿಯಲ್ಲಿ ಈಗ ಹಬ್ಬಿದೆ.

ಶಾಸಕನಾಗಿ ಹಾಲಹರವಿ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಕೆಲಸವನ್ನೇನೂ ಮಾಡಿಲ್ಲ. ಕ್ಷೇತ್ರಕ್ಕೆ ಬಂದ ಅನುದಾನ ಕೂಡ ಸರಿಯಾಗಿ ಬಳಕೆಯಾಗಿಲ್ಲ. ನಾಲ್ಕು ವರ್ಷಗಳ ಹಿಂದೆ ಹಾಲಹರವಿ ಇಲ್ಲಿನ ಜನರಿಗೆ ನೀಡಿದ್ದ ಭರವಸೆಗಳೆಲ್ಲ ಹುಸಿಯಾಗಿವೆ. ಶೆಟ್ಟರ್ ಸೇರಿದಂತೆ ಅವಳಿನಗರದ ಬಿಜೆಪಿ ಲೀಡರ್‌ಗಳ ಹಿಂದೆ ಸುತ್ತಾಡುತ್ತಾ ಮಾಧ್ಯಮಗಳಿಗೆ ಪೋಜು ಕೊಟ್ಟದ್ದೇ ಈತ ಮಾಡಿದ ಮಹಾನ್ ಸಾಧನೆ ಎಂಬಂತಾಗಿದೆ. ಈ ಕಾರಣಕ್ಕಾಗಿ ಆತನಿಗೆ ಬರುವ ಚುನಾವಣೆಯಲ್ಲಿ ಸೋಲು ಭೀತಿ ಹುಟ್ಟುಕೊಂಡಿದೆ.

ಶಂಕ್ರಣ್ಣ ಕಣಕ್ಕೆ

ಕಳೆದ ಬಾರಿ ಇಲ್ಲಿ ಬಿಜೆಪಿ ಪರ ಇದ್ದ ವಾತಾವರಣ ಈ ಬಾರಿ ಇಲ್ಲ. ಹಾಲಹರವಿಯ ಬೇಜವಾಬ್ದಾರಿತನದಿಂದ ಬೇಸತ್ತಿರುವ ಕ್ಷೇತ್ರದ ಜನತೆ ಪರ್ಯಾಯ ನಾಯಕನಿಗಾಗಿ ಹುಡುಕುತ್ತಿದ್ದಾರೆ. ಇದನ್ನ ಅರ್ಥಮಾಡಿಕೊಂಡೇ ಬಿಜವಾಡ ಫ್ಯಾಮಿಲಿಯ ಶಂಕ್ರಣ್ಣ ಬಿಜವಾಡ ಈ ಬಾರಿ ಸ್ಪರ್ಧಿಸುವ ಇರಾದೆ ತೋರುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಬಿಜವಾಡ ಫ್ಯಾಮಿಲಿ ತನ್ನದೇ ಆದ ಪ್ರಭಾವವನ್ನು ಹೊಂದಿದೆ. ಜೊತೆಗೆ ಎಪಿಎಂಸಿಯ ಮಾಜಿ ಅಧ್ಯಕ್ಷ ಮತ್ತು ಹಾಲಿ ಸದಸ್ಯರಾದ ಶಂಕ್ರಣ್ಣ ಬಿಜವಾಡ ಆ ಎಪಿಎಂಸಿಯನ್ನು ಸಮರ್ಥ ಮಾರುಕಟ್ಟೆಯನ್ನಾಗಿ ಪರಿವರ್ತಿಸಿದವರು. ಅದನ್ನು ಸಾಲದ ಹೊರೆಯಿಂದ ಮುಕ್ತರಾಗಿಸಿದ್ದರಲ್ಲದೆ ಎಪಿಎಂಸಿ ಆವರಣದಲ್ಲಿ ಬಸವೇಶ್ವರ ಮತ್ತು ಅಂಬೇಡ್ಕರರ ಮೂರ್ತಿಗಳನ್ನು ಸ್ಥಾಪಿಸಿ ಆರಣ್ಯದಂ[...] ಪರಿಸರವನ್ನು ಸುಧಾರಿಸಿದ್ದರು. ಈ ಹಿಂದೆ ಶಂಕ್ರಣ್ಣ ಬಿ[...] ಅಮರಗೋಳ ಮತ್ತು ಇನ್ನೊಮ್ಮೆ ಬಳಗಲಿ ಕ್ಷೇತ್ರದಿಂ[...] ಸಲೀಸಾಗಿ ಗೆದ್ದಿದ್ದರು.

ಇತ್ತೀಚಿನ ತನಕ ಕಾಂಗ್ರೆಸ್ ಪಕ್ಷದಲ್ಲಿದ್ದ ಶಂಕ್ರ[...] ಬಿಜವಾಡ "ಕಾಂಗ್ರೆಸ್‌ನಲ್ಲಿ ನನಗೆ ಸೂಕ್ತ ಸ್ಥಾನಮಾ[...] ನೀಡುತ್ತಿಲ್ಲ, ಜೊತೆಗೆ ನನ್ನ ರಾಜಕೀಯ ಭವಿಷ್ಯವ[...] ಹಾಳುಮಾಡಲೆಂದೇ ಕೆಲವರು ನನ್ನ ಹೆಸರನ್ನು ಕೊ[...] ಪ್ರಕರಣವೊಂದರಲ್ಲಿ ಸಿಲುಕಿಸಿ ಜೈಲು ಸೇರುವಂ[...] ಮಾಡಿದ್ದಾರೆ" ಎಂದು ಆರೋಪಿಸಿ ಯಡಿಯೂರಪ್ಪ[...] ಕೆಜೆಪಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗಾ[...] ಶಂಕ್ರಣ್ಣ ಬಿಜವಾಡ ಕೆಜೆಪಿ ಪಕ್ಷದ ಅಭ್ಯರ್ಥಿಯಾ[...] ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಈಗ ಶಂಕ್ರಣ್ಣ ಬಿಜವಾಡರ ಸಹೋದರಿ [...] ಬಿಜವಾಡ ಕಾರ್ಪೊರೇಟರ ಆಗಿದ್ದಾರೆ. ಜೊತೆಗೆ ಹಿಂದಿ[...] ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ ಮಾ[...] ಕಾರ್ಪೊರೇಟರ್ ದುರ್ಗಪ್ಪ ಬಿಜವಾಡ ಅವರ ಬೆಂಬಲವ[...] ಶಂಕ್ರಣ್ಣನಿಗಿದೆ. ಇದೆಲ್ಲ ಹಾಲಹರವಿಗೆ ನಡುಕ ಹುಟ್ಟಿಸಿ[...]

ಕಾಂಗ್ರೆಸ್‌ನಿಂದ ಕಳೆದ ಬಾರಿ ಪರಾಭವಗೊಂಡಿ[...] ಎಫ್.ಹೆಚ್.ಜಕ್ಕಪ್ಪನವರ ಮತ್ತು ಪ್ರಸಾದ ಅಬ್ಬಯ್ಯ ಮ[...] ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆದಿದೆ. ಜೆಡಿಎಸ್‌ನಿಂ[...] ಕಳೆದಬಾರಿ ಶಿರಹಟ್ಟಿ ಕ್ಷೇತ್ರದಲ್ಲಿ ಸೋತು ಠೇವ[...] ಕಳೆದುಕೊಂಡಿದ್ದ ಮಾಜಿ ಮಂತ್ರಿ ಅಲ್ಕೋಡ ಹನುಮಂ[...] ಅಭ್ಯರ್ಥಿಯಾಗುವುದು ಬಹುತೇಕ ನಿಶ್ಚಿತವಾಗಿದೆ.

ವಿಚಿತ್ರ ಸಂಗತಿಯಾವುದೆಂದರೆ ಹಾಲಹರವಿ[...] ಬಿಜೆಪಿಯಲ್ಲೇ ಪ್ರತಿಸ್ಪರ್ಧಿಯೊಬ್ಬ ಜನ್ಮವೆತ್ತಿರುವುದು. ಶಿ[...] ಹಿರೇಕೆರೂರು ಕಳೆದ ತಿಂಗಳು ಬಿಜೆಪಿ ಸೇರುವ ಮೂಲ[...] ಹಾಲಹರವಿಯ ಟಿಕೆಟ್‌ಗೆ ಕತ್ತರಿ ಹಾಕುವ ಸೂಚ[...] ನೀಡಿದ್ದಾರೆ.

ಒಟ್ಟಿನಲ್ಲಿ ಎತ್ತಿಂದೆತ್ತ ನೋಡಿದರೂ ಹಾಲಿ ಬಿಜ[...] ಶಾಸಕ ಹಾಲಹರವಿಗೆ ಚುನಾವಣಾ ಪೂರ್ವದಲ್ಲೇ ಸೋಲಿ[...] ಭೀತಿ ಕಾಡಲಾರಂಭಿಸಿದೆ.

● ಹುರಳಿಕುಪ್ಪಿ ವಿನಯ

ಮಂಡ್ಯದಲ್ಲೊಂದು ಉದ್ಯೋಗ ವಂಚಕರ ಜಾಲ

ಸಿಟಿಜನ್ ಫ್ಯೂಚರ್ ಟ್ರಸ್ಟ್

ಕೆಲಸ ಕೊಡಿಸುವ ನೆಪದಲ್ಲಿ ನಿರುದ್ಯೋಗಿಗಳಿಗೆ ಮೋಸ ಮಾಡುವವರ ಸಂಖ್ಯೆಯೇನು ಕಡಿಮೆ ಇಲ್ಲ. ಈ ವಂಚನೆಯ ಪ್ರಪಂಚಕ್ಕೆ ಅತೀ ಬುದ್ಧಿವಂತರು ಕಾಲಿಟ್ಟರೆ ಹೇಗೆಲ್ಲ ಉಪಾಯ ಹುಡುಕುತ್ತಾರೆ ಎನ್ನುವುದಕ್ಕೆ ಪ್ರಜಾವಾಣಿ ದಿನಪತ್ರಿಕೆಯ ದಿನಾಂಕ 30.01.2013ರ ಸಂಚಿಕೆಯಲ್ಲಿ ಪ್ರಕಟವಾದ 'ಸಿಟಿಜನ್ ಫ್ಯೂಚರ್ ಟ್ರಸ್ಟ್' ಹೆಸರಿನ ಜಾಹೀರಾತು ತಾಜಾ ಸಾಕ್ಷಿ.

ಸದರಿ ಸಂಸ್ಥೆ ಅವತ್ತಿನ ಜಾಹೀರಾತಿನಲ್ಲಿ ತನಗೆ ಕೆಲಸಗಾರರು ಬೇಕಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಹೇಳಿತ್ತು, ಅದರಲ್ಲಿ ಗುಮಾಸ್ತ, ನಿರ್ವಾಹಕ, ಫೀಲ್ಡ್ ವರ್ಕರ್, ಚಾಲಕರು, ಸೆಕ್ಯೂರಿಟಿ ಗಾರ್ಡ್, ಡಾಟಾ ಎಂಟ್ರಿ ಆಪರೇಟರ್‌ಗಳು, ಪ್ರಾಥಮಿಕ ಶಿಕ್ಷಕರು, ಪ್ರೌಢಶಾಲಾ ಮುಖ್ಯಶಿಕ್ಷಕರು, ವೃದ್ಧಾಶ್ರಮ ನಿರ್ವಾಹಕರು, ಕೃಷಿ ಮಾರ್ಗದರ್ಶಿಗಳು- ಹೀಗೆ ಒಂದಕ್ಕೊಂದು ಸಂಬಂಧವೇ ಇಲ್ಲದ ಹುದ್ದೆಗಳ ಲಿಸ್ಟ್ ಇತ್ತು, ಜೊತೆಗೆ www.citizenfuturetrust.com ಹೆಸರಿನ ವೆಬ್‌ಸೈಟ್ ವಿಳಾಸವೂ ಇತ್ತು, ಕುತೂಹಲದಿಂದ ವೆಬ್‌ಸೈಟ್ ಹೊಕ್ಕರೆ, ಅದು ವಂಚನೆ ಮಾಡಲೆಂದೇ ಸಿದ್ಧಪಡಿಸಿದ್ದು ಎನ್ನುವುದು ಖಾತ್ರಿಯಾಗುವಂತಿತ್ತು ಅಲ್ಲಿನ ವಿನ್ಯಾಸ, ವಿಷಯಗಳು.

ಇಡೀ ವೆಬ್‌ಸೈಟ್ ತಡಕಾಡಿದರೂ ಅದು ಯಾವ ಕಂಪನಿ, ಅದರ ಕೆಲಸ ಎಂತದ್ದು ಎನ್ನುವುದರ ಸುಳಿವೇ ಇಲ್ಲ, ಹೋಗಲಿ ಆ ಕಂಪನಿಗೆ ಒಂದು ಕಚೇರಿ, ಆ ಕಚೇರಿಗೆ ಒಂದು ಅಡ್ರೆಸ್ ಅಂತಾದರು ಇರಬೇಕಲ್ಲವೆ, ಅದೂ ಸಹ ಇರಲಿಲ್ಲ, contact ಎನ್ನುವ ಲಿಂಕ್ ತೆರೆದರೆ ಸಿಟಿಜನ್ ಫ್ಯೂಚರ್ ಟ್ರಸ್ಟ್ ಮಂಡ್ಯ, ಮೈಸೂರು, ಬೆಂಗಳೂರು ಎಂಬ ಅರೆಬರೆ ಮಾಹಿತಿ ಬಿಟ್ಟರೆ ಅಲ್ಲೇನೂ ಇರಲಿಲ್ಲ. ಈ ವೆಬ್‌ಸೈಟ್‌ನಲ್ಲಿ ಸದರಿ ನೇಮಕಾತಿಯ ಅಧಿಸೂಚನೆ, ಬ್ಯಾಂಕ್ ಚಲನ್‌ಗಳು ಮಾತ್ರವೇ ಅಲ್ಲಿ ಇದ್ದುದ್ದು. ಕೇವಲ ಈ ನೇಮಕಾತಿಗೆ ಮಾತ್ರವೇ ಅದನ್ನು ಸೃಷ್ಟಿಸಲಾಗಿದೆ ಎನ್ನುವುದು ಖಾಯಂ. ಅಲ್ಲದೆ ಎರಡು ಇ-ಮೇಲ್ ವಿಳಾಸ ಕೊಟ್ಟು, ವಿಚಾರಣೆ ಮಾಡಬೇಕಾದರೆ, ಅಲ್ಲಿಗೆ ಮೇಲ್ ಮಾಡಿ, ನಾವು ಮೇಲ್‌ನಲ್ಲೆ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತೇವೆಂಬ ಬುದ್ಧಿವಂತಿಕೆಯೂ ಅಲ್ಲಿದೆ. ಆ ಮೂಲಕ ತಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಸನ್ನಿವೇಶದಿಂದ ನಯವಾಗಿ ಜಾರಿಕೊಂಡಿದ್ದಾರೆ.

ಇದೆಲ್ಲಕ್ಕೂ ಮಿಗಿಲಾದ ಚಾಣಾಕ್ಷತೆ ಇರುವುದು ಅವರು ಜಾಹಿರಾತಿನ ಅಧಿಸೂಚನೆಯನ್ನು ಸಿದ್ಧಪಡಿಸಿರುವ ರೀತಿಯಲ್ಲಿ. ಎಂತವರಿಗೂ ಒಂದೇ ನೋಟಕ್ಕೆ ನಂಬಿಕೆ ಮೂಡುವಂತೆ ಥೇಟ್ ಸರ್ಕಾರಿ ನೇಮಕಾತಿ ಅಧಿಸೂಚನೆಗಳ ಶೈಲಿಯನ್ನೇ ಭಟ್ಟಿ ಇಳಿಸಿದ್ದಾರೆ. ಅದಕ್ಕಾಗಿ ಅವರು ಬಳಸಿಕೊಂಡಿರುವುದು ತೀರಾ ಇತ್ತೀಚೆಗೆ ಕೆ.ಎಸ್.ಆರ್.ಟಿ.ಸಿ ಹೊರಡಿಸಿದ್ದ ನೇಮಕಾತಿ ಅಧಿಸೂಚನೆಯನ್ನು. ತಮಗೆ ಬೇಕಾದ ಕಡೆ ಅನುಕೂಲವಾಗುವಂತೆ ಒಂದಷ್ಟು ಬದಲಾವಣೆಗಳನ್ನು ಮಾಡಿ ವೆಬ್‌ಸೈಟ್‌ನಲ್ಲಿ ಬಿತ್ತರಿಸಿದ್ದಾರೆ. ಯಾರಿಗೇ ಆದರೂ ಇದು ಸರ್ಕಾರದ್ದೇ ನೇಮಕಾತಿ ಇರಬೇಕೆನ್ನುವ ಭ್ರಮೆ ಮೂಡುವಂತಿದೆ ಅದು.

ನಿಜವಾದ ದೋಖಾ ಶುರುವಾಗುವುದು ಶುಲ್ಕ ಪಾವತಿಯ ವಿಷಯಕ್ಕೆ ಬಂದಾಗ. ಇಲ್ಲಿಯೂ ಒಂದು ಮಸ್ತ್ ಪ್ಲ್ಯಾನ್ ಮಾಡಿದ್ದಾರೆ, ಅದೂ ಸಹ ಸರ್ಕಾರದ್ದೇ ಯಥಾವತ್ ರೂಪ. ಚಲನ್ ಅನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಎಸ್.ಬಿ.ಐ ಇಲ್ಲವೇ ವಿಜಯಾ ಬ್ಯಾಂಕ್‌ನಲ್ಲಿ ಪಾವತಿಸಬೇಕಂತೆ. ಆ ಚಲನ್‌ನಲ್ಲಿ ಇವರ ಅಕೌಂಟ್ ನಂಬರ್ ಅದಾಗಲೇ ಮುದ್ರಿತವಾಗಿರುತ್ತಾದ್ದರಿಂದ ಅನಾಯಾಸವಾಗಿ ಹಣ ಬಂದು ಅವರ ಅಕೌಂಟ್‌ಗೆ ಬೀಳುತ್ತೆ, ಅಲ್ಲಿಗೆ ಅರ್ಜಿ ಸಲ್ಲಿಸಿದವರಿಗೂ, ಆಹ್ವಾನಿಸಿದವನಿಗೂ ಯಾವ ಸಂಪರ್ಕವೂ ಇಲ್ಲದಂತೆ ವ್ಯವಹಾರ ಕುದುರಿಹೋಗಿರುತ್ತೆ, ಅಲ್ಲಿಂದಾಚೆಗೆ ಜಪ್ಪಯ್ಯ ಎಂದರೂ ಅವರನ್ನು ಕಾಂಟ್ಯಾಕ್ಟ್ ಮಾಡಲು ಸಾಧ್ಯವೇ ಇರಲಿಲ್ಲ, ಯಾಕೆಂದರೆ ಅದಕ್ಕೆ ಬೇಕಾದ ವಿಳಾಸವನ್ನೇ ಅವರು ಎಲ್ಲೂ ಬಹಿರಂಗಪಡಿಸಿರಲಿಲ್ಲ, ಕೊಟ್ಟವ ಕೋಡಂಗಿ, ಈಸ್ಕೊಂಡವ ಈರಭದ್ರ ಅಷ್ಟೆ!

ಇದೆಲ್ಲ ಆದಮೇಲೆ, ಅಭ್ಯರ್ಥಿಗಳಿಗೆ ಉಳಿಯಬಹುದಾದ ಸಣ್ಣಪುಟ್ಟ ಅನುಮಾನಗಳನ್ನೂ ದೂರಮಾಡಿ, ಅರ್ಜಿ ಸಲ್ಲಿಕೆಯ ನೆಪದಲ್ಲಿ ಇವರ ಅಕೌಂಟ್‌ಗೆ ಹಣ ಹಾಕುವುದನ್ನು provoke ಮಾಡಲು ಹೆಲ್ಪ್‌ಲೈನ್ ಹೆಸರಿನಲ್ಲಿ ಒಂದು ಮೊಬೈಲ್ ನಂಬರ್ ಸಹ ನೀಡಲಾಗಿದೆ, ನಾವು ಅಲ್ಲಿಗೆ ಕರೆ ಮಾಡಿದಾಗ ಗೊಗ್ಗರ ಧ್ವನಿಯ ಆಸಾಮಿಯೊಬ್ಬ ಅತ್ತಲಿಂದ ರಿಸೀವ್ ಮಾಡಿದ. ಅರ್ಜಿ ಸಲ್ಲಿಸುವುದು ಹೇಗೆ, ಹಣ ತುಂಬುವುದು ಹೇಗೆ ಎನ್ನುವ ಲಾಭದಾಯಕ ಪ್ರಶ್ನೆಗಳಿಗೆ ಉತ್ಸಾಹದಿಂದಲೇ ಉತ್ತರಿಸಿದ ಆತ ನಿಮ್ಮ ಕಂಪನಿ ಎಲ್ಲಿದೆ, [...] ಕಂಪನಿಯ ಕೆಲಸ ಏನು, ವಿಳಾಸವೇನು ಎನ್ನುವ ಪ್ರಶ್ನೆಗಳಿಗೆ ತೊದಲ[...] ಶುರು ಮಾಡಿದ. ವಿಪರೀತ ಒತ್ತಡ ಹೇರಿದ ಮೇಲೆ, ಇಲ್ಲಿ ಏನಿದ್ದರು ಅರ್ಜಿ ಸಲ್ಲಿಕೆಗೆ ಸಂಬಂಧಿಸಿದಂತೆ ಮಾತ್ರ ಪ್ರಶ್ನೆ ಕೇಳಬೇಕು, ಬೇರೆ ವಿಚಾರಣೆ ಇದ್ದ[...] ನಾವು ನೀಡಿರುವ ವಿಳಾಸಕ್ಕೆ ಮೇಲ್ ಮಾಡಿ ಎಂದುಸುರಿದ. ಕರೆ ಮಾಡಿರುವು[...] ಲಂಕೇಶ್ ಪತ್ರಿಕೆಯಿಂದ ಎಂಬ ಸತ್ಯ ಹೇಳುತ್ತಿದ್ದಂತೆ ಸ್ವಲ್ಪ ಗಾಬರಿ ಬಿದ್ದವನಂ[...] ಹೆಲ್ಪ್‌ಲೈನ್ ವಿಷಯದ ಹೊರತಾಗಿ ತನಗೇನೂ ಗೊತ್ತಿಲ್ಲವೆಂದು ಗೊಣಗಾಡಲ[...] ಆರಂಭಿಸಿದ. ವಿಳಾಸವನ್ನೇಕೆ ನೀವು ಪ್ರಕಟಿಸಿಲ್ಲ ಎನ್ನುವ ಪ್ರಶ್ನೆಗೆ ಈಗಲ[...] ಅಡ್ರೆಸ್ ಹಾಕಿದರೆ ಅಭ್ಯರ್ಥಿಗಳು ಇಲ್ಲಿಗೇ ಬಂದು ವಿಚಾರಣೆ ನೆಪದ[...] ಗಲಾಟೆ ಮಾಡುತ್ತಾರೆ ಹಾಗಾಗಿ ನಾವು ಹಾಕಿಲ್ಲ ಎಂದು ಎಳೆ ಮಕ್ಕಳ[...] ನಂಬದ ಸುಳ್ಳೊಂದನ್ನು ಹೇಳಿ ಸುಮ್ಮನಾದ. ಅಲ್ಲಿಗೆ ಇದು ವಂಚನೆಯ ಜಾಲ ಎನ್ನುವ ಅನುಮಾನ ನಮಗೆ ದೃಢವಾಗಿತ್ತು, ತಾವು ಎಕ್ಸ್‌ಪೋಸ್ ಆಗುತ್ತಿರುವುದು ಆತನಿಗೂ ಖಾತ್ರಿಯಾಗಿತ್ತು. ಹಾಗಾಗಿ ನಮ್ಮ ಅಂದಾಜಿನಂ[...] ಮರುಕ್ಷಣವೇ ಲೈನ್ ಕಟ್! ಇತ್ತ ಮತ್ತೊಮ್ಮೆ ವೆಬ್‌ಸೈಟ್ ನೋಡೋಣವೆಂದ[...] Server is too busy ಹೆಡ್‌ಲೈನ್‌ನೊಂದಿಗೆ ಅದೂ ಸಹ ಅಕ್ಷರಶ[...] ನಾಪತ್ತೆಯಾಗಿತ್ತು, ಒಂದು ದಿವಸದ ನಂತರ ಮತ್ತೆ ಜೀವ ಪಡೆದುಕೊಂ[...] ವೆಬ್‌ಸೈಟ್‌ನಲ್ಲಿ ತಾವು ಮೊದಲು ಮಾಡಿದ್ದ ದೋಷಗಳನ್ನೆಲ್ಲ ಅವರು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದ್ದರು. ವಿಳಾಸ ಹಾಕಿರದ ಪ್ರಮಾದ ಮರೆಮಾಚಲ[...] ಎ.ಪಿ.ಎಂ.ಸಿ. ರೋಡ್, ವಿ.ವಿ.ಪುರಂ, ಮಂಡ್ಯ ಎನ್ನುವ ಮೊದಲಿಗಿಂತಲ[...] ಸ್ವಲ್ಪ ಉದ್ದನೆಯ, ಆದರೆ ಸಂಪರ್ಕಿಸಲು ಪರಿಪೂರ್ಣವಿಲ್ಲದ ವಿಳಾಸವೊಂದನ್ನು ತೇಲಿಬಿಟ್ಟಿದ್ದರು. ಇದು ಸಹ ಬೋಗಸ್ ವಿಳಾಸವೇ ಇದ್ದರೂ ಇರಬಹುದು.

ಪ್ರಜಾವಾಣಿಯಂತಹ ಪತ್ರಿಕೆಯಲ್ಲಿ ಜಾಹಿರಾತು ಅಚ್ಚಾಗಿದ್ದರಿಂದ ಸಹಜವಾಗಿ ಅಭ್ಯರ್ಥಿಗಳು ಅರ್ಧದಷ್ಟು ನಂಬಿಕೆ ಬೆಳೆಸಿಕೊಂಡಿರುತ್ತಾರೆ, ಇನ್ನು ತಮ್ಮ ಅಧಿಸೂಚನೆ ವಿನ್ಯಾಸ, ನೇಮಕಾತಿಯ ವಿಧಾನ ಗಮನಿಸಿದರೆ ಸಂಪೂರ್ಣವಾಗಿ ಹಳ್ಳಕ್ಕೆ ಬಿದ್ದೇ ಬೀಳುತ್ತಾರೆ ಎನ್ನುವುದು ಅವರ ಲೆಕ್ಕಾಚಾರವಿರಬೇಕು. ಯಾವುದಕ್ಕೂ ಅಭ್ಯರ್ಥಿಗಳು ಈ ಸಂಸ್ಥೆಯ ಪೂರ್ವಾಪರ ತಿಳಿಯದ ಹೊರತು, ಸಂಪೂರ್ಣ ವಿಳಾಸ ಬಯಲಾಗದ ಹೊರತು, ನೇರ ಸಂಪರ್ಕ ಖಾತ್ರಿಯಾಗದ ಹೊರತು ಹಣ ತುಂಬುವಂತಹ ವಂಚನೆಗೆ ಒಳಗಾಗಬಾರದೆನ್ನುವುದು ಪತ್ರಿಕೆಯ ಕಳಕ[...]

● ಪತ್ರಿಕಾ ತಂ[...]

ಟಿಪ್ಪು ಸುಲ್ತಾನ್‌ರನ್ನು ವಿರೋಧಿಸಲು ಈ ಕಾರಣಗಳೂ ಇವೆ



...ೀರಂಗಪಟ್ಟಣದಲ್ಲಿ ಅಲ್ಪಸಂಖ್ಯಾತ ವಿಶ್ವವಿದ್ಯಾಲ ...ಸ್ಥಾಪಿಸಲು ಉದ್ದೇಶಿಸಿದೆ. ಅದಕ್ಕೆ ಟಿಪ್ಪು ಸುಲ್ತಾನ್ ...ಾಗುವುದೆಂದು ಹೇಳಲಾಗಿದೆ. ಸಾಚಾರ್ ...ನ್ನು ಉಲ್ಲೇಖಿಸಿದ್ದರೂ ಕಾಂಗ್ರೆಸ್ ಸರ್ಕಾರಕ್ಕಿರುವ ...ಾರಣ ಮುಸ್ಲಿಂ ಓಟ್ ಬ್ಯಾಂಕಿನ ಮೇಲಿರುವ ...ಆಗಿದೆ. ವಿರೋಧಿಸುತ್ತಿರುವ ಬಿಜೆಪಿ, ಆರೆಸ್ಸೆಸ್‌ನ ...ವಾರಕ್ಕೆ ಮೇಲ್ನೋಟಕ್ಕೆ ಕಾಣುತ್ತಿರುವುದಕ್ಕಿಂತ ...ಶವಾದ ಕಾರಣಗಳೇ ಇವೆ.

...ಸುಲ್ತಾನ್ ಹಾಗೂ ಹೈದರ್‌ಅಲಿಯವರ ...ು, ಮಿಲಿಟರಿ ನೈಪುಣ್ಯ ನೇರವಾಗಿ ಯುದ್ಧದಲ್ಲಿ ...ದ್ದು, ನೀರಾವರಿ ವಿಸ್ತರಣೆಗೆ ಪ್ರಯತ್ನಿಸಿದ್ದು, ಅತಿ ...ದ ಮಟ್ಟಕ್ಕೆ ವ್ಯಾಪಾರವನ್ನು ಬೆಳೆಸಿದ್ದು, ಕೃಷಿಯಲ್ಲಿ ...ೀತಿಯ ವೈಜ್ಞಾನಿಕ ಆವಿಷ್ಕಾರಗಳಿಗೆ ನಾಂದಿ ...ಸೇಂದಿ ನಿಷೇಧಿಸಿದ್ದು, ಇಂತಹ ನೂರಾರು ...ನ್ನು ಕೈಗೊಂಡಿದ್ದ ಈ ಈರ್ವರು ನಾಡಿನ ...ದಲ್ಲಿ ವಿಶಿಷ್ಟವಾಗಿ ಮಿನುಗುವ ನಕ್ಷತ್ರಗಳು ...ದಲ್ಲಿ ಸಂಶಯವೇ ಇಲ್ಲ.

ಸಂಘಪರಿವಾರ ಇವರನ್ನು ದ್ವೇಷಿಸುವುದಕ್ಕೆ ...ುಸ್ಲಿಮರಾಗಿದ್ದರು ಎಂಬುದು ಮಾತ್ರ ಕಾರಣವಲ್ಲ. ...ಮತ್ತು ಟಿಪ್ಪು ತಂದ ಕೆಲವು ಸುಧಾರಣೆಗಳು ...ವಾರ ಪ್ರತಿಪಾದಿಸುವ ವೈದಿಕ ಮೇಲ್ಮೆಗೆ ...ಘಾತ ನೀಡುವ ಕ್ರಮಗಳನ್ನೂ ನಿಷ್ಠುರವಾಗಿ ...ಯು ಎಂಬುದೂ ಕಾರಣವಾಗಿದೆ. ಅದು ಹಳೇ ...ದ ವೈದಿಕರ ಸ್ಮೃತಿಗಳಲ್ಲಿ ಗಾಢವಾಗಿ ಉಳಿದು ... ಹಾಗಾಗಿಯೇ ಎಸ್.ಎಲ್.ಭೈರಪ್ಪ, ...ುಸೂದನ್, ಚಿದಾನಂದ ಮೂರ್ತಿಗಳಂತಹವರು ...ವ್ರವಾಗಿ ಟಿಪ್ಪುವನ್ನು ವಿರೋಧಿಸುತ್ತಾರೆ.

... ಜೊತೆಗೆ ಇವರ ತುಂಡುಗಳಂತಿರುವ ...್, ಶ್ಯಾಂಭಟ್‌ಥರದವರೂ ಈಗ ಎಲ್ಲೆಡೆ ...ವಾಗಿ ಬೈದುಕೊಂಡು ಓಡಾಡುತ್ತಿದ್ದಾರೆ. ...ನೆಟ್ ಸೇರಿದಂತೆ ಹಲವೆಡೆ ಇವರು ...ತ್ತಿರುವ ವಾದಗಳಲ್ಲಿ ಬಲವಂತದ ಮತಾಂತರದ್ದು, ...ಗಳ ವಿರುದ್ಧ ದೌರ್ಜನ್ಯವೆಸಗಿದ್ದು ಇತ್ಯಾದಿಗಳು ...ುತ್ತವೆ. ಅದರ ಜೊತೆಗೆ 'ಮೇಲುಕೋಟೆ ...ು ಇವತ್ತಿಗೂ ಏಕೆ ದೀಪಾವಳಿ ಆಚರಿಸುವುದಿಲ್ಲ

ಎಂದು ಕೇಳಿ ಹೋಗಿ, ನಿಮಗೇ ಗೊತ್ತಾಗುತ್ತದೆ ಟಿಪ್ಪು ಎಂತಹವನು ಎಂದು' ಎಂದು ಅಬ್ಬರಿಸುತ್ತಾರೆ. ಟಿಪ್ಪು ಇವರಿಗೆಲ್ಲಾ ಅಂತಹದ್ದೇನು ಮಾಡಬಾರದ್ದು ಮಾಡಿದ್ದು ಎಂದು ಹೊರಟರೆ ಕೆಲವು ಐತಿಹಾಸಿಕ ಸಂಗತಿಗಳು ಕಾಣಸಿಗುತ್ತವೆ.

ಐತಿಹಾಸಿಕ ಎಂದು ಹೇಳುವಾಗ, ಅದಕ್ಕೆ ವೈಜ್ಞಾನಿಕವಾದ ಆಧಾರಗಳಿವೆ ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಮಾತಾಡಬೇಕು. ಏಕೆಂದರೆ ಟಿಪ್ಪು ಬಗ್ಗೆ ಬಾಯಿಗೆಬಂದಂತೆ ಮಾತಾಡುತ್ತಿರುವವರೆಲ್ಲರೂ ಯಾವ ಆಧಾರಗಳೂ ಇಲ್ಲದೇ ತಾವು ಹೇಳಿದ್ದೇ ಇತಿಹಾಸ ಎಂದು ಪ್ರತಿಪಾದಿಸುತ್ತಿದ್ದಾರೆ; ಇದರಲ್ಲಿ ಟಿಪ್ಪುವನ್ನು ವೈಭವೀಕರಿಸುತ್ತಿರುವವರೂ ಕೆಲವರಿದ್ದಾರೆ.



ಪ್ರಾಂಕ್ಸ್ ಫರ್ನಾಂಡಿಸ್ ಎಂಬ ಇತಿಹಾಸಕಾರನು ಮೈಸೂರು ರಾಜ್ಯದ ಆಡಳಿತದಡಿ ಬರುತ್ತಿದ್ದ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳ ದೇಶಮುಖರ ಕುರಿತಂತೆ ಹೀಗೆ ಬರೆಯುತ್ತಾನೆ: "ಮರಾಠರ ರಾಜ್ಯದ ದಕ್ಷಿಣದಲ್ಲಿ ಟಿಪ್ಪುಸುಲ್ತಾನನು ಹಲವೆಡೆ ಭೂಮಿಯ ಮೇಲಿದ್ದ ಅವರ ಹಕ್ಕನ್ನು ಕಿತ್ತುಕೊಂಡನು."

ಎಚ್.ಜೆ.ಸ್ಟೋಕ್ಸ್ ಎಂಬ ಮತ್ತೊಬ್ಬ ಇತಿಹಾಸಕಾರನು '1787ರಿಂದ 1790ರ ನಡುವಿನ ಮೂರು ವರ್ಷಗಳಲ್ಲಿ ಟಿಪ್ಪುವಿನ ಸೇನೆಯ ಅಧಿಕಾರಿಯಾಗಿದ್ದ ಬದ್ರ್ ಉಲ್ ಜಮಾನ್ ಖಾನನು ದೇಸಾಯರ ಕೈಲಿದ್ದ ಜಾಗೀರು ಭೂಮಿಗಳನ್ನು ವಶಪಡಿಸಿಕೊಂಡು ಅವರು ಬದುಕಲು ಬೇಕಾಗುವಷ್ಟನ್ನು ಮಾತ್ರ ಅವರ ಬಳಿ ಬಿಟ್ಟನು" ಎಂದು ಹೇಳುತ್ತಾರೆ.

ಟಿಪ್ಪುವು ತನ್ನ ತಂದೆಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಬ್ರಾಹ್ಮಣ ಮಠಗಳು ಹೊಂದಿದ್ದ ಅಪಾರ ಭೂಒಡೆತನವನ್ನು ಇಲ್ಲವಾಗಿಸಿದನು ಮತ್ತು ಅದನ್ನು ಶೂದ್ರ ರೈತಾಪಿಗೆ ಹಂಚಿದನು. ಟಿಪ್ಪುವಿನ ಬಗ್ಗೆ ಪೂರ್ವಗ್ರಹ ಹೊಂದಿದ್ದ ಫ್ರಾನ್ಸಿಸ್ ಬುಕಾನನ್ ಎಂಬ ಬ್ರಿಟಿಷ್ ಇತಿಹಾಸಕಾರನು ಇಂತಹ ಹಲವು ಉದಾಹರಣೆಗಳನ್ನು ನಮಗೆ ನೀಡುತ್ತಾನೆ. ಟಿಪ್ಪುವಿನ ಭೂ ಕಂದಾಯ ನಿಯಮಗಳ ಕಲಂ 63ರಲ್ಲಿ ದೇವಸ್ಥಾನಗಳ ಭೂಮಿಯ ಕುರಿತು ಇರುವ ಇಂತಹ ನಿಯಮಗಳನ್ನು ಬುಕಾನನ್ ಉದಾಹರಿಸುತ್ತಾನೆ. ಟಿಪ್ಪುವಿನ ಮರಣಾನಂತರದ ಕೆಲವೇ ತಿಂಗಳಲ್ಲಿ ಮಂಡ್ಯ ಜಿಲ್ಲೆಗೆ ಭೇಟಿ ನೀಡುವ ಬುಕಾನನ್ ಈ ರೀತಿ ಬರೆದಿದ್ದಾನೆ" "ಈ ಭಾಗವೆಲ್ಲವೂ ಬ್ರಾಹ್ಮಣರಿಗೆ ದತ್ತಿಯಾಗಿ ನೀಡಲಾಗಿದ್ದ ಅಗ್ರಹಾರವಾಗಿತ್ತು, ಆದರೆ ಟಿಪ್ಪು ಅವೆಲ್ಲವನ್ನೂ ಸರ್ಕಾರಕ್ಕೆ, ಸಾರ್ವಜನಿಕರ (ಈ ಪದವೂ ಬುಕಾನನ್‌ದೇ) ಪಾಲಿನದ್ದೆಂದು ವಶಪಡಿಸಿಕೊಂಡ."


ಶ್ರೀ ವೈಷ್ಣವ ಬ್ರಾಹ್ಮಣರ ಕೇಂದ್ರವಾಗಿದ್ದ ಮೇಲುಕೋಟೆಯ ಬಗ್ಗೆ ಬುಕಾನನ್ ಹೀಗೆ ಬರೆಯುತ್ತಾನೆ: "ಹೈದರ್ ಇಲ್ಲಿನ ಬ್ರಾಹ್ಮಣರ ವಶದಲ್ಲಿದ್ದ ಭೂಮಿಯನ್ನು ಸಂಪೂರ್ಣ ಅನುಭವಿಸಲು ಬಿಟ್ಟಿದ್ದ. ಆದರೆ ಆತನ ಮಗ ಅವರು ಪಡೆಯುತ್ತಿದ್ದ ಆದಾಯವನ್ನು ಮೊದಲು ವಾರ್ಷಿಕ 60,000 ಪಗೋಡಾಗಳಿಗೆ ಇಳಿಸಿದ. ನಂತರ ನಾಲ್ಕು ಸಾವಿರಕ್ಕೆ, ಆನಂತರ 2 ಸಾವಿರಕ್ಕೆ ಮತ್ತು ಒಂದಷ್ಟು ಕಾಲದ ನಂತರ ಒಂದು ಸಾವಿರಕ್ಕೆ ಸೀಮಿತಗೊಳಿಸಿದ. ಕೊನೆಯಲ್ಲಿ ಇಡೀ ಭೂಮಿಯನ್ನು ವಶಕ್ಕೆ ತೆಗೆದುಕೊಂಡು, ವಾರ್ಷಿಕ 1000 ಪಗೋಡಾಗಳ ಗೌರವಧನವನ್ನು ನೀಡಲಾರಂಭಿಸಿದ."

ಇದೇ ರೀತಿಯಲ್ಲಿ ಪಿರಿಯಾಪಟ್ಟಣದ ಎಷ್ಟೋ ಹಳ್ಳಿಗಳು ಸಂಪೂರ್ಣ ಬ್ರಾಹ್ಮಣರ ಒಡೆತನದಲ್ಲಿದ್ದುದನ್ನು ಟಿಪ್ಪು ಬದಲಿಸಿದ. ನಂಜನಗೂಡಿನ 300 ಬ್ರಾಹ್ಮಣ ಕುಟುಂಬಗಳು ನಂದಿರಾಯನೆಂಬುವನ ನೇತೃತ್ವದಲ್ಲಿ 700 ಶೂದ್ರ ಕುಟುಂಬಗಳನ್ನು ಓಡಿಸಿ ಭೂಮಿಯನ್ನೂ ವಶಪಡಿಸಿಕೊಂಡಿದ್ದರು. ಆದರೆ ಟಿಪ್ಪು ಸುಲ್ತಾನನು ಇವರಿಂದ ಭೂಮಿ ಕಿತ್ತುಕೊಂಡು ಮಾಸಿಕ 100 ಪಗೋಡಾಗಳ ಮಾಸಾಶನ ನಿಗದಿಪಡಿಸಿದ್ದ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ದೇವಸ್ಥಾನಗಳ ದತ್ತಿ ಭೂಮಿಗಳಿಗೆ ಇದೇ ಗತಿಯಾಗಿದ್ದನ್ನೂ ಬುಕಾನನ್ ಬರೆದಿದ್ದಾನೆ.

ಇದರರ್ಥ ಟಿಪ್ಪು ಸುಲ್ತಾನ್ ಬ್ರಾಹ್ಮಣರ ವಿರುದ್ಧ ಸಿಕ್ಕ ಸಿಕ್ಕಲ್ಲಿ ದಾಳಿ ನಡೆಸಿದ ಎಂದಲ್ಲ. ಟಿಪ್ಪು ವೈದಿಕ ಬ್ರಾಹ್ಮಣರು ಮತ್ತು ಲೋಕಿಕ (ಲೌಕಿಕ) ಬ್ರಾಹ್ಮಣರೆಂದು ಎರಡು ವಿಭಾಗ ಮಾಡಿದ್ದ. ತಮ್ಮ ಶ್ರಮದ ಮೂಲಕ ಸಮಾಜದ ಬೆಳವಣಿಗೆಗೆ ಕೊಡುಗೆ ಕೊಡುತ್ತಿದ್ದ ಬ್ರಾಹ್ಮಣರಿಗೆ ಆತನೆಂದೂ ತೊಂದರೆ ಕೊಡಲಿಲ್ಲ. ಸ್ವತಃ ಆತನ ಮಂತ್ರಿಮಂಡಲದಲ್ಲೇ ಆರು ಜನ ಬ್ರಾಹ್ಮಣರಿದ್ದುದು ಎಲ್ಲಾ ಇತಿಹಾಸಕಾರರು ತೋರಿರುವ ಸತ್ಯವಾಗಿದೆ. ಆದರೆ ಪರೋಪಜೀವಿಗಳಾಗಿ ಬದುಕುತ್ತಿದ್ದ, ತಮ್ಮ ಭೂಮಿಗೆ ಕಂದಾಯದಿಂದಲೂ ವಿನಾಯಿತಿ ಪಡೆದುಕೊಂಡು, ಜಮೀನುದಾರಿಕೆಯನ್ನು ಅನುಭವಿಸುತ್ತಿದ್ದವರನ್ನು ಟಿಪ್ಪು ಸುಮ್ಮನೆ ಬಿಡಲಿಲ್ಲ.

ಎಡ್ಗರ್ ಥರ್ಸ್ಟನ್ ಎಂಬ ಮತ್ತೊಬ್ಬ ಇತಿಹಾಸಕಾರ ಆ ಕಾಲದ ದಕ್ಷಿಣ ಭಾರತದ ಅಧ್ಯಯನ ನಡೆಸಿದ್ದ. ಆತ ಹೇಳುವ ಮತ್ತೊಂದು ಅಂಶ ಇನ್ನೂ ಮಹತ್ವದ್ದು: "ಚಿಂಗಲ್‌ಪೇಟ್ ಅಥವಾ ಮದ್ರಾಸ್‌ಗಳಿಗಿಂತ ಭಿನ್ನವಾಗಿ ಮೈಸೂರು ಪದ್ಧತಿಯಲ್ಲಿ ಹೊಲೆಯ ಮತ್ತು ಮಾದಿಗರಿಗೆ ಭೂಮಿಯ ಮೇಲೆ ಹಕ್ಕನ್ನು ಹೊಂದಲು ಅವಕಾಶವಿತ್ತು. ಗೇಣಿದಾರರಾಗಿಯಂತೂ ಅವರು ರಾಜ್ಯದೆಲ್ಲೆಡೆ ಕಂಡುಬರುತ್ತಿದ್ದರು. ಒಬ್ಬ ಹೊಲೆಯನು ಕಟ್ಟುತ್ತಿದ್ದ ಭೂ ಕಂದಾಯವು ಬೆಂಗಳೂರು ಜಿಲ್ಲೆಯಲ್ಲಿ 279 ರೂ.ಗಳಾಗಿದ್ದರೆ, ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅದು 6 ಪೈಸೆಯಷ್ಟು ಕಡಿಮೆಯಿತ್ತು. ಅಸ್ಪೃಶ್ಯರು ಭೂ ಕಂದಾಯದ ರೂಪದಲ್ಲಿ ಕಟ್ಟುತ್ತಿದ್ದ ಒಟ್ಟು ರಾಜ್ಯಾದಾಯವು 3 ಲಕ್ಷ ರೂ.ಗಳಿಗಿಂತ ಕಡಿಮೆಯಿರಲಿಲ್ಲ. ಇದರಲ್ಲಿ ಮೂರನೇ ಎರಡು ಭಾಗವನ್ನು ಹೊಲೆಯರೂ, ಉಳಿದಿದ್ದನ್ನು ಮಾದಿಗರೂ ಕಟ್ಟುತ್ತಿದ್ದರು." ಈ ಸಂಖ್ಯೆಯು ಅಸ್ಪೃಶ್ಯರು ಯಾವ ಪ್ರಮಾಣಕ್ಕೆ ಭೂಮಿಯನ್ನು ಹೊಂದಿದ್ದರೆಂಬುದನ್ನು ತೋರಿಸುತ್ತದೆ. ಸಾಮಾನ್ಯವಾಗಿ ನೀರಗಂಟಿಯು ಹೊಲೆಯ ಜಾತಿಗೆ ಸೇರಿದ್ದು, ಆತನಿಗೆ ಕೆರೆ ನೀರಾವರಿಯಾಗುವ ಜಾಗದಲ್ಲೇ ಭೂಮಿಯನ್ನು ನೀಡಲಾಗುತ್ತಿತ್ತು.

ಮಾಲ್ಕಂ ಎಂಬ ಇತಿಹಾಸಕಾರನನ್ನು ಉಲ್ಲೇಖಿಸಿ, ಎಂ.ಎಚ್.ಗೋಪಾಲ್ ಎಂಬುವರು ಹೀಗೆ ಹೇಳಿದ್ದಾರೆ: "ಸೈನಿಕರಿಗೆ ಭೂಮಿಯನ್ನು ನೀಡಿದ್ದು ಮೈಸೂರು ಕಂದಾಯ ಪದ್ಧತಿಯು ತಂದ ದೊಡ್ಡ ಬದಲಾವಣೆಯಾಗಿದೆ." ಇದರಿಂದ ಬೇಡರು, ಕುರುಬರು, ಈಡಿಗರು, ಒಕ್ಕಲಿಗರು ಮತ್ತು ಲಿಂಗಾಯತರಲ್ಲಿ ಯಾರು ಸೈನ್ಯದಲ್ಲಿದ್ದರೋ ಅವರೆಲ್ಲರ ಪಾಲಿಗೆ ಭೂಮಿ ಸಿಕ್ಕಿತ್ತು.



ಅಪಾರ ಪ್ರಮಾಣದಲ್ಲಿ ಕೆರೆ ನೀರಾವರಿಯನ್ನು ಅಭಿವೃದ್ಧಿಪಡಿಸಿದ, ಕಾವೇರಿ ನದಿಯಿಂದ ನೀರಾವರಿಯನ್ನು ಯೋಜಿಸಿದ, ಬ್ರಾಹ್ಮಣೇತರರಿಗೆ ಭೂಮಿ ದೊರಕುವಂತೆ ಮಾಡಿದ, ಲೌಕಿಕ ಬ್ರಾಹ್ಮಣರಿಗೆ ತೊಂದರೆ ಕೊಡದ ಟಿಪ್ಪುವಿನ ಕೊಡುಗೆ ಮೈಸೂರು ರಾಜ್ಯಕ್ಕೆ ಯಾವ ತೆರನಾದ್ದು? ವೈದಿಕ ಬ್ರಾಹ್ಮಣರ ಪಾಲಿಗೆ ಇದು ನುಂಗಿಕೊಳ್ಳಲಾಗದಂತಹದ್ದು. ಹಾಗಿದ್ದ ಮೇಲೆ ಟಿಪ್ಪುವಿನ ಹೆಸರಿನಲ್ಲಿ ವಿಶ್ವವಿದ್ಯಾಲಯ ಮಾಡಿದರೆ ಅವರ ಉತ್ತರಾಧಿಕಾರಿಗಳನ್ನು ಸುಮ್ಮನಿರಿ ಎಂದರೆ ಹೇಗೆ ಸುಮ್ಮನಿದ್ದಾರು?

(ಮೇಲಿನ ಲೇಖನದ ಬಹುಭಾಗವು ಸಾಕೇತ್ ರಾಜನ್‌ರವರ 'ಮೇಕಿಂಗ್ ಹಿಸ್ಟರಿ'ಯ ಆಯ್ದ ಭಾಗವಾಗಿದೆ. ತಾವು ಬರೆದಿರುವ ಪ್ರತೀ ಅಂಶಕ್ಕೂ ಲೇಖಕರು ಐತಿಹಾಸಿಕ ದಾಖಲೆಯನ್ನು ಅಡಿಟಿಪ್ಪಣಿಯಾಗಿ ಒದಗಿಸಿದ್ದಾರೆ) ■

...ನತೆಯತ್ತ ಸಾಹಿತ್ಯ... ...ರಿವ ವಿನಯದತ್ತ...

...ರವಾಡದ ಸಾಹಿತ್ಯ ಸಂಭ್ರಮದ ಸಂಘಟಕರು ಜನಪರ ಸಾಹಿತಿಗಳ ...ವಾಗಿ ತಾವು ನಡೆಸಲಿಚ್ಛಿಸಿದ್ದ ಸಾಹಿತ್ಯ ಸಮ್ಮೇಳನದ ಅಸಂಬದ್ಧ ...ಳನ್ನು ಹಿಂತೆಗೆದುಕೊಂಡಿದ್ದು ಸಂತೋಷ.

ಈ ಅಸಂಬದ್ಧ ನಮ್ಮವರೇ ಆದ ಈ ಸಾಹಿತಿಗಳ ತಲೆಯೊಳಗೆ ...ಕ್ಕಿತು ಎಂಬ ಬಗ್ಗೆ ಕನ್ನಡದ ಮನಸ್ಸು ಮತ್ತು ಅಂತಸ್ಸಾಕ್ಷಿ ...ರ್ಶೆ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಗಿರಡ್ಡಿಯವರು ...ಧನೆಗಳನ್ನು ಹಿಂತೆಗೆದುಕೊಂಡ ಹೇಳಿಕೆಯಲ್ಲಿ ಔಪಚಾರಿಕತೆ ... ಹೊರತು ಮುಜುಗರವಾಗಲೀ ಲಜ್ಜೆಯಾಗಲೀ ಇದ್ದಂತಿಲ್ಲ. ...ಅನುಕರಣೆಯ ಹಾಸ್ಯಾಸ್ಪದ ಚರ್ಯೆಯನ್ನು ಜಾಗತೀಕರಣದ ...ಲ್ಲಿ ಗಮನಿಸಬೇಕು. ಪಡ್ಡೆ ಯುವಕರು ಈ ರೀತಿಯ ...ಯಲ್ಲಿ ತೊಡಗುವುದನ್ನು ನಗರಗಳಲ್ಲಿ ಗಮನಿಸಿದ್ದೇವೆ. ...ಪ್ರಖರ ಸೆಳೆಪಿನಲ್ಲಿ ಸಿಲುಕಿ ಮಿಮಿಕ್ರಿ ಮಾಡುವ ಬಗೆ ...ತೇಜಸ್ವಿಯವರ 'ಕಾಳಪ್ಪನ ಕೋಬ್ರಾ'ದಲ್ಲಿ ಬರುವ ...ಯನ್ನು ನೆನಪಿಸಿಕೊಳ್ಳಿ.


...ಪರ್ಯಾಯವಾಗಿ ಸಮ್ಮೇಳನ ಮಾಡಬೇಕೆನ್ನುವ ಗೆಳೆಯರ ...ನನ್ನ ಸಂಪೂರ್ಣ ಸಹಮತವಿದೆ. ಆದರೆ ಅದು ...ತ್ಮಕವಾದರೆ ನಮ್ಮ ಸೃಜನಶೀಲತೆ ಮತ್ತು ಕ್ರಿಯಾಶೀಲತೆಗೆ ...ಡಿದಿದೆ ಎಂದರ್ಥ.

...ದೃಷ್ಟಿಯಿಂದ, ಧಾಸಾಸಂ ಅನ್ನು ಅದರ ಪಾಡಿಗೆ ಬಿಟ್ಟು, ನಾವು ... ಜನಪರ ರೂಪಿನ ಬಗ್ಗೆ ಚರ್ಚಿಸಬೇಕು. ತಿರುಮಲೇಶರು ಹೇಳಿದಂತೆ ...ಪ ಸಮ್ಮೇಳನಗಳು ಅದರ ಎಲ್ಲಾ ಪೆಕರುತನಗಳ ಹೊರತಾಗಿಯೂ ... ಆದರೆ ಅದು ನಮ್ಮ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯ ...ಗಿಯೇ ಇಲ್ಲ, ಆಗುವುದು ಸಾಧ್ಯವೂ ಇಲ್ಲ.

...ದು ಈ ಜನಪರ ಪರಿಕಲ್ಪನೆಯನ್ನು, ನಿರ್ದಿಷ್ಟ ಪಂಕ್ತಿ ಸ್ಪಷ್ಟತೆಯ ...ಸ್ಪಷ್ಟಪಡಿಸಬೇಕಾದ ಪ್ರಯೋಜನವೇನೂ ಇಲ್ಲ. ಅದೊಂದು ಸಾಪಯವ ...ಅರೆ ಅರಾಜಕ ರೂಪಿನ ಕ್ರಿಯೆ ಎಂದೇ ನನ್ನ ಭಾವನೆ.

ಕೇರಳದಲ್ಲೊಂದು ಮಾದರಿ ಇದೆ. ಅಲ್ಲಿ ಅಕ್ಷರಶಃ ಸಂತೆಮಾಳದಂತೆ ಜನ ನೆರೆಯುತ್ತಾರೆ, ಅಲ್ಲಲ್ಲಿ ಜನ ಸೇರಿ ಚರ್ಚಿಸುತ್ತಾರೆ, ಬೇಕೆಂದಲ್ಲಿ ಇಷ್ಟವಾದವರನ್ನು ಕೂರಿಸಿ ಮಾತಾಡಿಸುತ್ತಾರೆ. ಕಾವ್ಯ ಓದಿಸುತ್ತಾರೆ. ಸಂತೆಯಂತೇ ಅದಕ್ಕೆ ಅದರದ್ದೇ ಆದ ಸ್ವಯಂನಿಯಂತ್ರಣದ ಗ್ಲಾಮರ್ ಇದೆ. ನಾವು ಸಂಘಟಿಸಬೇಕಾದ್ದು ಅಂಥಾ ಒಂದು ಮೇಳವನ್ನು.

ಕನ್ನಡದ ಸಮಸ್ಯೆಯೆಂದರೆ ನಾವು ಸದಾ ನಿರ್ದಿಷ್ಟ genreಗಳ, ಮಾದರಿಗಳ ಹಂಗಿನಲ್ಲಿ ಇದ್ದು ಸೃಜನಶೀಲತೆಯ ಆಯಾಮಗಳನ್ನು ಶೋಧಿಸಲು ಹಿಂಜರಿದಿದ್ದೇವೆ. ಎಲ್ಲೋ ಯಾರೋ ಅದನ್ನು ಮುರಿದಾಗ ನಾವು ಬಾಲ ಹೆಜ್ಜೆಗಳಲ್ಲಿ ಅದನ್ನು ಅನುಕರಿಸಿ ನಮ್ಮಲ್ಲೂ ಸೃಷ್ಟಿಗೆ ತೊಡಗಿದ್ದೇವೆ. ನಮ್ಮ


ಧಾರವಾಡ ಸಾಹಿತ್ಯ ಸಂಭ್ರಮದ ಒಂದು ದೃಶ್ಯ

ಕಥೆ, ಕಾದಂಬರಿ ಪ್ರಬಂಧ ಅಷ್ಟೇಕೆ ನಮ್ಮ ವಿಮರ್ಶೆಯೂ ಈ ರೀತಿಯ ಬೌದ್ಧಿಕ ಅನುಕರಣೆ/ಅನುಸರಣೆಯ ಕಥೆ. (ಸಂಕಥನ ಅನ್ನುತ್ತಾರಲ್ಲಾ..!!!)

ಈ ದೃಷ್ಟಿಯಿಂದ ನಮಗೊಂದು ಬಿಡುಗಡೆಯ ವೇಗೋತ್ಕರ್ಷ ಬೇಕಾಗಿದೆ. ಒಂದು ಪರಮ ಪ್ರಾಮಾಣಿಕತೆಯ ಆತ್ಮವಿಮರ್ಶೆ– ಜಗಳದ ವೇಟಕೆ– ಅನಿವಾರ್ಯವಾಗಿ ನಾವು ಒಂದು ಮುಕ್ತ ಸಮಾವೇಶವನ್ನು ಹಮ್ಮಿಕೊಳ್ಳಬೇಕು.

ಕಳೆದ ದಶಕದಿಂದ ನಮ್ಮಲ್ಲಿ ಒಂದು ಬೌದ್ಧಿಕ ಗೊಂದಲವಿದೆ. ಶ್ರೇಷ್ಠತೆಯ ಪರಿಕಲ್ಪನೆ, ಅನುಭವ ವ್ಯಾಪ್ತಿಯ ಪರಿಕಲ್ಪನೆ, ಭಾಷೆಯಲ್ಲಿ ಅದು ರೂಪು ತಳೆದದ್ದನ್ನು ಮಾನ್ಯ ಮಾಡಬೇಕೋ ಅಥವಾ ಅದರ ಬೌದ್ಧಿಕ ಐಡಿಯಾಗಳನ್ನು ಮಾನ್ಯ ಮಾಡಬೇಕೋ– ಹೀಗೆ.

ಧಾಸಾಸಂ ಈ ಗೊಂದಲದ ಕ್ರೂಡ್ ರೂಪ ಅಷ್ಟೇ. ಈ ಮಂದಿ ಜೈಪುರದ ಮಾದರಿ ಅನುಕರಿಸಿದ ಪರಿ ಕನ್ನಡದ ಬೌದ್ಧಿಕ ಸಾಂಗಿತ್ಯದ ಸಂಕೇತ ಕೂಡಾ. ನಮ್ಮಲ್ಲೇ ಜರುಗಿರುವ, ಜರುಗುತ್ತಿರುವ ಹತ್ತಾರು ಯುಜಿಸಿ ಸೆಮಿನಾರುಗಳು, ಈ ಧಾಸಾಸಂ ಪರಿಕಲ್ಪನೆಗಿಂತ ಭಿನ್ನವೇನೂ ಅಲ್ಲ. (ಪುಣ್ಯಾವಶಾತ್ ಅವು ಇಷ್ಟು ಇಮೆಚೂರ್ ಆಗಿ ನಡೆದುಕೊಂಡಿಲ್ಲದ ಕಾರಣ ನಮ್ಮ ಗಮನ ಸೆಳೆದಿಲ್ಲ ಮತ್ತು ಅದರಲ್ಲಿ ಶೇ. 10ರಷ್ಟು ಕೂಡಾ ನಮ್ಮ ಅರಿವನ್ನೂ ಹಿಗ್ಗಿಸಿ, ಒಳನೋಟಗಳನ್ನು ಚೂಪುಗೊಳಿಸಿದ ಉದಾಹರಣೆಯಿಲ್ಲ.)

ಇನ್ನು ಐಟಿ/ಕಾರ್ಪೊರೇಟ್ ಜಗತ್ತಿನ ಸಾಹಿತಿಗಳಷ್ಟೇ ಅಲ್ಲ, ನಮ್ಮ ಕ್ರಾಂತಿ ಉಗುಳುವ ಸಾಹಿತಿಗಳಲ್ಲೂ ಒಂದು ಮಟ್ಟದ ಆಂಟಿ ಇಂಟೆಲೆಕ್ಚುಯಲ್ ಧೋರಣೆ ಇದೆ. ತಾವು ಬರೆದದ್ದನ್ನು ಬ್ರಹ್ಮಲಿಖಿತವೆಂಬಂತೆ ಪತ್ರಿಕೆಗಳಿಗೆ ಕಳಿಸುವುದನ್ನು ನೋಡಿ ನಾನು ಚಕಿತನಾಗಿದ್ದೇನೆ. ಹಾಗೆ ಸರೀಕರ, ಹಿಂದಿನವರ ಸಾಹಿತ್ಯದ ಚರ್ಚೆಯ ಗೊಡವೆಯೇ ಇಲ್ಲದೇ ಬರವಣಿಗೆಯಲ್ಲಿ ತೊಡಗಿರುವ ಹೊಸ ತಲೆಮಾರಿನ ಬರಹಗಾರರನ್ನು ಕಂಡಿದ್ದೇನೆ.


ಧಾಸಾಸಂ ನಮ್ಮ ಬೌದ್ಧಿಕ ಸಾಂಗಿತ್ಯ ಗೊಂದಲಗಳ ಪ್ರತೀಕ. ಅದಕ್ಕೆ ಪ್ರತಿಕ್ರಿಯಿಸುವ ರೀತಿಯೂ ಅದೇ ಸ್ಯಾಂಗಿತ್ಯದ ಮಾದರಿಯದ್ದಾದರೆ ಅದೊಂದು ಕಬಡ್ಡಿ ಆಟದ ಥರ ಕಂಡೀತು ಅಷ್ಟೇ.

ಅಲ್ಲಿನ ಮೊದಲ ದಿನದ ವರದಿ ನೋಡಿದರೆ ಅದೊಂದು ಹೊಸ ದಾರಿ ಶೋಧಿಸುವ ಹೆಜ್ಜೆಯಾಗಿ ಏನೂ ಕಾಣಿಸಿಲ್ಲ.

ಈ ಹಿನ್ನೆಲೆಯಲ್ಲಿ ನಾವು ಜನತೆಯತ್ತ ಸಾಹಿತ್ಯದ ಪರಿಕಲ್ಪನೆಯನ್ನು ಚರ್ಚಿಸಬೇಕು. ಅದು ಒಳಗೊಳ್ಳಬೇಕಾದ ಆಶಯಗಳ ಬಗ್ಗೆ ರೆಟೋರಿಕಲ್ ಭಾಷೆಯಲ್ಲಿ ಮಾತಾಡಿದರೆ ಸಾಲದು.. ಅದರ ಸತ್ವ ಪೂರಣಗಳು ಕನ್ನಡಕ್ಕೊಂದು ಹೊಸ ತೇಜಸ್ಸನ್ನೂ ನೀಡುವಂತಾಗಬೇಕು. ನಾವು ಗಮನಿಸದ ಮೌಖಿಕ ಸಂಪ್ರದಾಯಗಳನ್ನು, ಲೇಖಕರನ್ನು, ಸಂಸ್ಕೃತಿಯ ಸಣ್ಣ ವಿವರಗಳನ್ನು ಒಳಗೊಳ್ಳುವ ಹೆಜ್ಜೆಯಾಗಬೇಕು.

ಪಡೆವ ವಿನಯ, ಪಡೆದ ಸಂಭ್ರಮ ಇಲ್ಲಿ ಕಾಣಸಿಗದರೆ ಬೇಕಾಗಿಯಿತು. ಮಾರ್ಚ್‌ನಲ್ಲಿ ಸಂಘಟಿಸಬೇಕೆಂದಿರುವ ಜನತೆಯತ್ತ ಸಾಹಿತ್ಯ ಸಮಾವೇಶ ತೇಗಿರಬೇಕೆಂಬ ಕುರಿತೇ ಹೆಚ್ಚು ಚರ್ಚೆ ಮುಂದುವರಿಯಬೇಕು ಎಂಬ ಅಪೇಕ್ಷೆ ನನ್ನದು.

● ಕೆ.ಪಿ.ಸುರೇಶ



'ವಿಶ್ವರೂಪಂ' ತಿರಸ್ಕಾರಕ್ಕೆ ಯೋಗ್ಯ, ಆದರೆ ನಿಷೇಧ ಸಲ್ಲದು

ಕಮಲ ಹಾಸನ್ ಅವರ ಚಲನಚಿತ್ರ 'ವಿಶ್ವರೂಪಂ' ತಮಿಳುನಾಡಿನಲ್ಲಿ ಬಿಡುಗಡೆಗೊಳ್ಳುವ ಮೊದಲೇ ನಿಷೇಧಿಸಲ್ಪಟ್ಟಿತ್ತು (ಈಗ ನಿಷೇಧವನ್ನು ನ್ಯಾಯಾಲಯ ತೆರವುಗೊಳಿಸಿದೆ). ಕರ್ನಾಟಕದಲ್ಲಿ ಭದ್ರಾವತಿ, ಮೈಸೂರು, ಬೆಂಗಳೂರು, ರಾಯಚೂರು ಮುಂತಾದೆಡೆಗಳಲ್ಲಿ ಮುಸ್ಲಿಮರು ಚಲನಚಿತ್ರದ ವಿರುದ್ಧ ಪ್ರತಿಭಟನೆ ನಡೆಸಿ ಇಲ್ಲಿಯೂ ಅದನ್ನು ನಿಷೇಧಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. 'ವಿಶ್ವರೂಪಂ' ಮುಸ್ಲಿಮರ ಮನನೋಯಿಸುವಂತೆ ಇರುವುದು ನಿಜ; ಮುಸ್ಲಿಮರು ಮಾತ್ರವಲ್ಲ ಸಮಾನತೆ, ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮತ್ತು ಭ್ರಾತೃತ್ವದ ಮೌಲ್ಯಗಳಲ್ಲಿ ನಂಬಿಕೆ ಇರಿಸಿಕೊಂಡ ಎಲ್ಲರನ್ನೂ ಆ ಚಲನಚಿತ್ರ ಕೆರಳಿಸುವಂತಿದೆ.

'ವಿಶ್ವರೂಪಂ'ನಲ್ಲಿ ಅಮೆರಿಕದಲ್ಲಿರುವ ಮುಸ್ಲಿಂ ತಂಡದ ಭಯೋತ್ಪಾದಕ ಚಟುವಟಿಕೆ ಮತ್ತು ಆ ತಂಡದವರು ತಪ್ಪದೇ ಮಾಡುವ ನಮಾಜ್ ಜೊತೆ ಜೊತೆಗೇ ಕಾಣಿಸಿಕೊಳ್ಳುತ್ತವೆ. ಆದರೆ ಅಮೆರಿಕ ಜಗತ್ತಿನಾದ್ಯಂತ ಕಳೆದ ನೂರು ವರ್ಷಗಳಲ್ಲಿ ನಡೆಸಿರುವ ಹಿಂಸೆಯ ಒಂದು ಸಣ್ಣ ವಿವರವನ್ನೂ ಅದು ಒಳಗೊಂಡಿಲ್ಲ, ಸಾಲದ್ದಕ್ಕೆ ಅಮೆರಿಕವೇ ಆಕ್ರಮಣದ ಭೀತಿಯಲ್ಲಿ ಸಿಕ್ಕಿಕೊಂಡಿರುವಂತೆ ಚಿತ್ರದಲ್ಲಿ ನಿರೂಪಿಸಲಾಗಿದೆ. ಹಾಗಾಗಿ ಈ ಚಲನಚಿತ್ರದಲ್ಲಿ ಭಯೋತ್ಪಾದನೆ ಮತ್ತು ಅದರ ರಾಜಕೀಯವನ್ನು ಚಿತ್ರೀಕರಿಸಿರುವ ಬಗೆಯೇ ಪೂರ್ವಗ್ರಹದಿಂದ ಕೂಡಿದ್ದಾಗಿದೆ; ಮಾತ್ರವಲ್ಲ, ಇಡೀ ಚಲನಚಿತ್ರ ಅಮೆರಿಕದ ಪರ ವಕಾಲತ್ತು ವಹಿಸುವಂತಿದೆ. ಆದಾಗ್ಯೂ 'ವಿಶ್ವರೂಪಂ' ಅಷ್ಟೇ ಯಾಕೆ, ಯಾವುದೇ ಚಲನಚಿತ್ರ, ಪುಸ್ತಕ, ವರ್ಣಚಿತ್ರ ಅಥವಾ ತತ್ವಪ್ರಣಾಳಿಕೆಯನ್ನೂ ನಿಷೇಧಿಸಿ ಎಂದು ಒತ್ತಾಯಿಸುವುದು ಪ್ರಜಾಪ್ರಭುತ್ವದಲ್ಲಿ ಸಲ್ಲದು. 'ನಿನ್ನ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ; ಆದರೆ ಅದನ್ನು ಹೇಳುವ ನಿನ್ನ ಹಕ್ಕನ್ನು ನನ್ನ ಕೊನೆಯ ಉಸಿರಿನವರೆಗೆ ರಕ್ಷಿಸುತ್ತೇನೆ' (ವಾಲ್ಟೇರ್) ಎಂಬುದೇ ಪ್ರಜಾಪ್ರಭುತ್ವದ ಮೂಲಾಧಾರ ತತ್ವ. ಹಾಗಾಗಿ 'ವಿಶ್ವರೂಪಂ' ಕುರಿತ ಅಸಮಾಧಾನ, ಆಕ್ರೋಶ ಏನೇ ಇರಲಿ, ಅದು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ವಿಧಾನದಲ್ಲಿ ವ್ಯಕ್ತವಾಗಬೇಕು. ಇಸ್ಲಾಂ ಧರ್ಮವೇ ಪ್ರಜಾಪ್ರಭುತ್ವದ ತತ್ವಗಳಿಗೆ ವಿರೋಧಿಯಾದದ್ದು ಎಂಬ ಪೂರ್ವಗ್ರಹ ಈಗ ಎಲ್ಲೆಡೆ ಹಬ್ಬಿದೆ. 'ವಿಶ್ವರೂಪಂ' ಪ್ರದರ್ಶನವನ್ನು ನಿಷೇಧಿಸಿ ಎಂಬ ಮುಸ್ಲಿಮರ ಒತ್ತಾಯ ಅದನ್ನು ಇನ್ನಷ್ಟು ಬಲಪಡಿಸುತ್ತದೆ.

ಆದರೆ ಮುಸ್ಲಿಮರ ಧಾರ್ಮಿಕ ಶ್ರದ್ಧೆಯನ್ನು ಕಮಲ ಹಾಸನ್ ಚಿತ್ರಿಸಿದ ಬಗೆಯನ್ನು ಮಾತ್ರ ನಾವು ಪ್ರಶ್ನಿಸಲೇಬೇಕು. 'ವಿಶ್ವರೂಪಂ' ಭಯೋತ್ಪಾದಕರ ಭೂಗತ ಚಟುವಟಿಕೆಗಳ ಕುರಿತ ಚಲನಚಿತ್ರ. ಅದರಲ್ಲಿ ಬರುವ ಎಲ್ಲ ಭಯೋತ್ಪಾದಕರೂ ಮುಸ್ಲಿಮರು. ಮುಸ್ಲಿಮರಲ್ಲಿ ಯಾರೂ ಭಯೋತ್ಪಾದಕರಿಲ್ಲ ಎಂಬುದು ಯಾರ ವಾದವೂ ಅಲ್ಲ; ಅಷ್ಟೇ ಯಾಕೆ, ಸ್ವತಃ ಮುಸ್ಲಿಮರೇ ಹಾಗೆ ವಾದಿಸುವುದಿಲ್ಲ. ಆದರೆ ಚಲನಚಿತ್ರವೊಂದರಲ್ಲಿ ಭಯೋತ್ಪಾದಕ ಮುಸ್ಲಿಮನೆಂದು ಸೂಚಿಸಲು ಆತ ಪ್ರಾರ್ಥನೆ ಮಾಡುತ್ತಿರುವುದನ್ನೇ ತೋರಿಸಬೇಕೆ? ದಿನಕ್ಕೆ ಐದು ಬಾರಿ ನಮಾಜ್ ಮಾಡುವುದು ಮುಸ್ಲಿಮರ ವ್ಯಕ್ತಿತ್ವದ ಏಕೈಕ ಗುರುತಲ್ಲ, ಪಾತ್ರಗಳ ಭಾಷೆ, ಉಡುಪುತೊಡಪು, ಗಂಡಸರ ಗಡ್ಡ ಮೀಸೆ, ಹೆಂಗಸರ ಬುರ್ಖಾ ಮುಂತಾದ ನೂರೆಂಟು ವಿವರಗಳಿಂದ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯ ಮಾಡಿಕೊಡಲು ಸಾಧ್ಯವಿದೆ. 'ವಿಶ್ವರೂಪಂ'ನಲ್ಲಿ ಕಮಲ ಹಾಸನ್ ಅವನ್ನೆಲ್ಲ ಬಳಸಿಕೊಂಡೂ ನಮಾಜ್‌ನ ದೃಶ್ಯಗಳನ್ನು ಹಲವು ಬಾರಿ ತೋರಿಸುತ್ತಾರೆ. ಹೀಗೆ ಚಲನಚಿತ್ರದಲ್ಲಿ ಭಯೋತ್ಪಾದನೆ ಇಸ್ಲಾಂನ ಗುರುತು ಚಹರೆಗಳನ್ನು ಪಡೆದುಕೊಳ್ಳುತ್ತದೆ. ಆದರೆ ತನ್ನ ಎ.ಕೆ.47 ಬಂದೂಕನ್ನು ಬದಿಯಲ್ಲಿರಿಸಿ ನಮಾಜಿನಲ್ಲಿ ತೊಡಗುವ ಪ್ರತಿಯೊಬ್ಬ ಮುಸ್ಲಿಮ್ ಭಯೋತ್ಪಾದಕನಿಗೂ, ಎ.ಕೆ.47 ಅಂದರೆ ಏನು ಎಂದು ಸಹ ಗೊತ್ತಿಲ್ಲದ ಆದರೆ ಶ್ರದ್ಧೆಯಲ್ಲಿ ದಿನಕ್ಕೆ ಐದು ಬಾರಿ ನಮಾಜು ಮಾಡುವ ಕೋಟ್ಯಂತರ ಮುಸ್ಲಿಮರಿದ್ದಾರೆ. ಈ ವಾಸ್ತವಕ್ಕೆ ಚಲನಚಿತ್ರದಲ್ಲಿ ಸ್ಥಾನವೇ ಇಲ್ಲ.


'ವಿಶ್ವರೂಪಂ'ನಲ್ಲಿ ಭಯೋತ್ಪಾದನೆಗೆ ಇಸ್ಲಾಂನ ಗುರುತು ಚಹರೆಗಳು ಇರುವಂತೆ ಒಂದು ಸಂದರ್ಭವೂ ಇದೆ. ಅದನ್ನು ಸೂಚಿಸಲು ಅಫಘಾನಿಸ್ತಾನ, ಅಲ್ ಕಾಯಿದಾ, ತಾಲಿಬಾನ್‌ಗಳನ್ನೆಲ್ಲ ಚಲನಚಿತ್ರದಲ್ಲಿ ಎಳೆದು ತರಲಾಗಿದೆ. ಆದರೆ ಈ ಭಯೋತ್ಪಾದನೆಯನ್ನು ಎದುರಿಸುತ್ತಿರುವ ಅಮೆರಿಕದ ವ್ಯವಸ್ಥೆಗೆ ಮಾತ್ರ ಸಂದರ್ಭವೂ ಇಲ್ಲ; ಚರಿತ್ರೆಯೂ ಇಲ್ಲ, ಬದಲಾಗಿ ಚಿತ್ರದ ಪ್ರಕಾರ ಅದು ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ಮತ್ತು ನಾಗರಿಕತೆಗಳನ್ನು ರಕ್ಷಿಸಲೆಂದೇ ಇರುವಂತಹದ್ದು ಮತ್ತು ಈಗ ಮುಸ್ಲಿಮ್ ಭಯೋತ್ಪಾದಕರ ಆಕ್ರಮಣಕ್ಕೆ ಅದು ಒಳಗಾಗಿದೆ.

'ವಿಶ್ವರೂಪಂ'ನ ನಿರೂಪಣೆ ಪ್ರಕಾರ ಮುಸ್ಲಿಮ್ ಭಯೋತ್ಪಾದಕರು ತಮ್ಮ ಮನೆಯ ಹೆಂಗಸರನ್ನೂ ಸಹ ಕ್ರೂರವಾಗಿ ನಡೆಸಿಕೊಳ್ಳುವವರು; ಅವರು ಸ್ವತಃ ತಮ್ಮ ಮಕ್ಕಳಿಗೇ ವಿದ್ಯಾಭ್ಯಾಸ ಕೊಡಿಸುವ ಬದಲು ಶಸ್ತ್ರಾಸ್ತ್ರ ತರಬೇತಿ ನೀಡುತ್ತಾರೆ. ಆದರೆ ಅಮೆರಿಕದ ವ್ಯವಸ್ಥೆ ಮಾತ್ರ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ಪ್ರಾರಂಭಿಸುವ ಮೊದಲು ಅವರು ಅಡಗಿಕೊಂಡಿರುವ ಶಾಲೆಯೊಂದರ ಆವರಣದಿಂದ ವಿದ್ಯಾರ್ಥಿಗಳನ್ನು ತೆರವುಗೊಳಿಸುವಷ್ಟು ಅಂತಃಕರಣ ಉಳ್ಳದ್ದು! 1991ರಿಂದ ಅಮೆರಿಕ ಇರಾಕ್ ವಿರುದ್ಧ ಸತತವಾಗಿ ಯುದ್ಧ ನಡೆಸಿ 10 ಲಕ್ಷಕ್ಕೂ ಹೆಚ್ಚು ಜನರನ್ನು ಕೊಂದಿದೆ. ಅದು ವಿಧಿಸಿದ ಆರ್ಥಿಕ ದಿಗ್ಬಂಧನದಿಂದಾಗಿ ಔಷಧ ಸಾಮಗ್ರಿಗಳ ಆಮದು ಸ್ಥಗಿತಗೊಂಡು ಸುಮಾರು ಐದು ಲಕ್ಷ ಮಕ್ಕಳು ಇರಾಕ್‌ನಲ್ಲಿ ಸಾವಿಗೀಡಾದರು. ಈ ವಿವರಗಳು ಮಾತ್ರ ಚಲನಚಿತ್ರದಲ್ಲಿ ನಾಪತ್ತೆ! 2001ರ ಸೆಪ್ಟೆಂಬರ್ 11ರಂದು ಅಮೆರಿಕದ ನ್ಯೂಯಾರ್ಕ್ ನಗರದ ವಾಣಿಜ್ಯ ಕೇಂದ್ರ ಹಾಗು ಇತರೆಡೆಗಳ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಸುಮಾರು 5000 ಜನ ಮೃತರಾದರು. ಅದಕ್ಕೆ ಪ್ರತೀಕಾರವಾಗಿ ಅಮೆರಿಕ ಅಫಘಾನಿಸ್ಥಾನದ ಮೇಲೆ ನಡೆಸಿದ ಯುದ್ಧದಲ್ಲಿ ಈವರೆಗೆ ಒಂದೂವರೆ ಲಕ್ಷದಷ್ಟು ಜನ ಸಾವಿಗೀಡಾಗಿದ್ದು, 70 ಲಕ್ಷಕ್ಕೂ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ. 'ವಿಶ್ವರೂಪಂ'ನ ಕತೆ ನಡೆಯುವುದು ಅಮೆರಿಕದ ರಾಜಧಾನಿ ಮತ್ತು ಅಫಘಾನಿಸ್ತಾನದ ಪರ್ವತ ಶ್ರೇಣಿಗಳಲ್ಲಿ. ಆದರೆ ಇಡೀ ಚಲನಚಿತ್ರದಲ್ಲಿ ಎಲ್ಲಿಯೂ ಅಮೆರಿಕ ಅಫಘಾನಿಸ್ತಾನದಲ್ಲಿ ನಡೆಸಿದ ಕಗ್ಗೊಲೆಗಳ ಪ್ರಸ್ತಾಪವೇ ಇಲ್ಲ.

'ವಿಶ್ವರೂಪಂ'ನಲ್ಲಿ ಅಫಘಾನಿಸ್ತಾನದ ಭಯೋತ್ಪಾದಕ ಸಂಘಟನೆ ಅಲ್ ಕಾಯಿದಾ ಅಮೆರಿಕದ ಮೇಲೆ ಅಣುಸಮರಕ್ಕೆ ತಯಾರಿ ನಡೆಸುವಂತಹ ದೃಶ್ಯವೊಂದಿದೆ. ಹಾಲಿವುಡ್‌ನ ನಾಲ್ಕನೆ ದರ್ಜೆಯ ಸಿನಿಮಾಗಳಲ್ಲಿ ಕಾಣಿಸುವಂತಹ ಹುಸಿ ವೈಜ್ಞಾನಿಕ ತಾಂತ್ರಿಕತೆಯನ್ನು ಇದರಲ್ಲಿ ಯಥಾವತ್ತಾಗಿ ನಕಲು ಮಾಡಲಾಗಿದೆ. ಈ ಹಾಸ್ಯಾಸ್ಪದ ದೃಶ್ಯ ಮರೆಮಾಚಿರುವ ವಾಸ್ತವ ಏನು? ಅನ್ಯ ರಾಷ್ಟ್ರವೊಂದರ ನಾಗರಿಕರ ಮೇಲೆ ಕಾರಣವಿಲ್ಲದೆ ಅಣುಅಸ್ತ್ರ ಪ್ರಯೋಗಿಸಿದ ಏಕೈಕ ರಾಷ್ಟ್ರ ಅಮೆರಿಕ. ಜಪಾನ್‌ನ ಹಿರೋಶಿಮಾ ಮತ್ತು ನಾಗಸ[...] ನಗರಗಳ ಮೇಲೆ 1945ರಲ್ಲಿ ಅಮೆರಿಕ ಪ್ರಯೋಗಿ[...] ಅಣುಬಾಂಬಿನಿಂದ ಇದುವರೆಗೆ ಒಂದು ಲಕ್ಷ ಇಪ್ಪ[...] ಸಾವಿರ ಜನ ಸಾವಿಗೀಡಾಗಿದ್ದಾರೆ. ಈಗಲೂ ಜಗತ್ತಿ[...] ಅಣು ಅಸ್ತ್ರಗಳ ಅತಿದೊಡ್ಡ ದಾಸ್ತಾನು ಹೊಂದಿರು[...] ರಾಷ್ಟ್ರವೆಂದರೆ ಅಮೆರಿಕವೇ. ಜಗತ್ತಿನಾದ್ಯಂತ ಮಿಲಿ[...] ನೆಲೆಗಳನ್ನು ಹೊಂದಿರುವ ರಾಷ್ಟ್ರವೂ ಅಮೆರಿಕವೇ.

'ಜಗತ್ತಿನ ಹಿರಿಯಣ್ಣ' ಅಮೆರಿಕ ತನಗೆ ಅಡಿಯಾ[...] ಆಗಲೂ ಒಲ್ಲದ ಹಲವು ದೇಶಗಳ ಚುನಾಯಿ[...] ಸರಕಾರಗಳನ್ನು ಒಳಸಂಚಿನಿಂದ ಉರುಳಿಸಿದೆ. ಪಶ್ಚಿ[...] ವಿಷ್ಯಾದ ತೈಲ ಸಂಪತ್ತನ್ನು ತನ್ನ ಬಿಗಿಮುಷ್ಟಿಯ[...] ಇರಿಸಿಕೊಳ್ಳಲು ಅಲ್ಲಿನ ಯಾವ ಇಸ್ಲಾಮಿಕ್ ದೇಶದಲ್ಲಿ[...] ಪ್ರಜಾಪ್ರಭುತ್ವ ತಲೆಯೆತ್ತದಂತೆ ಅಮೆರಿಕ ನೋಡಿಕೊಂಡಿ[...] ಅಮೆರಿಕವೇ ಜಗತ್ತಿನ ಅತ್ಯಂತ ದೊಡ್ಡ ಆಕ್ರಮಣಕಾ[...] ಹಾಗು ಭಯೋತ್ಪಾದಕ ರಾಷ್ಟ್ರ. ಆದರೆ 'ವಿಶ್ವರೂಪಂ'ನ[...] ಮಾತ್ರ ಅದು ಮುಸ್ಲಿಮ್ ಭಯೋತ್ಪಾದನೆಯ ಎದು[...] ಕಂಗಾಲಾಗಿದೆ!

ಭಯೋತ್ಪಾದನೆ ಮತ್ತು ಆಕ್ರಮಣಗಳನ್ನು 'ವಿಶ್ವರೂಪ[...] ನಿರೂಪಿಸಿದ ವಿಧಾನದಲ್ಲಿ ಹೊಸತೇನೂ ಇಲ್ಲ. ಅದ[...] ಕಥನದ ಮೂಲ ಮಾದರಿ ನಮಗೆ ದೊರೆಯುವುದ[...] ಹಾಲಿವುಡ್‌ನ ರಾಂಬೋ ಸರಣಿಯ ಚಲನಚಿತ್ರಗಳ[...] ಅವುಗಳಲ್ಲಿ ರಾಂಬೋ (ಸಿಲ್ವೆಸ್ಟರ್ ಸ್ಟಾಲೋನ್) ವಿಯೆಟ್ನಾ[...] ಥಾಯ್ಲೆಂಡ್ ಮುಂತಾದೆಡೆಗಳಲ್ಲಿ ಕಮ್ಯುನಿಸ್ಟರನ್[...] ಏಕಾಂಗಿಯಾಗಿ ಹಿಮ್ಮೆಟ್ಟಿಸಿ ಅಮೆರಿಕಾದ ಧ್ವಜವನ್ನ[...] ಪ್ರಜಾಪ್ರಭುತ್ವವನ್ನೂ ಸ್ಥಾಪಿಸುತ್ತಾನೆ. ಆದರೆ ಆ ಸಿನಿಮಾಗಳ[...] ಎಲ್ಲಿಯೂ ವಿಯೆಟ್ನಾಂ ಮತ್ತು ಕಾಂಬೋಡಿಯಾಗಳ ವಿರು[...] ನಡೆಸಿದ ಯುದ್ಧದಲ್ಲಿ ಅಮೆರಿಕ ಸುಮಾರು 21 [...]



ನಾಗರಿಕರನ್ನು ಕೊಂದುಹಾಕಿದ್ದರ ಪ್ರಸ್ತಾಪವೇ ಬರುವುದಿ[...] ಥೇಟು ರಾಂಬೋನ ತರಹವೇ 'ವಿಶ್ವರೂಪಂ'ನಲ್ಲಿ ಕಮ[...] ಹಾಸನ್ 'ವಿಶ್ವ'ನಾಗಿ ಮುಸ್ಲಿಂ ಭಯೋತ್ಪಾದಕರನ[...] ಹಿಮ್ಮೆಟ್ಟಿಸಿ ಅಮೆರಿಕಕ್ಕೆ ಜೈ ಎನ್ನುತ್ತಾರೆ! ಭಯೋತ್ಪಾದ[...] ಹಿಂಸೆ ಮತ್ತು ಆಕ್ರಮಣಗಳ ಕುರಿತು ಅಮೆರಿಕ[...] ಯಜಮಾನ ಸಂಕಥನಗಳನ್ನೇ ಕಮಲ ಹಾಸನ್ ಸ್ವಂತದ[...] ಎಂದು ಹೇಳಿಕೊಂಡು ಪ್ರದರ್ಶಿಸುತ್ತಿದ್ದಾರೆ. ಹಾಗಾ[...] 'ವಿಶ್ವರೂಪಂ' ನಮ್ಮ ತಿರಸ್ಕಾರಕ್ಕೆ ಮಾತ್ರ ಯೋಗ್ಯವಾಗಿ[...] ಹಾಗೆಂದು ಅದನ್ನು ನಿಷೇಧಿಸಬೇಕೆಂದು ಒತ್ತಾಯಿಸುವುದ[...] ಸಲ್ಲದು.


● ಜೆ.ರಾಜಶೇಖ[...]

ರೈತರ ಸಮಸ್ಯೆಗಳ ಕುರಿತು ಡಾಕ್ಟರೊಬ್ಬರ ಪ್ರಣಾಳಿಕೆ

'ರೈತರ ಮತ್ತು ಕಾರ್ಮಿಕರ ಆರೋಗ್ಯ ಸಮಸ್ಯೆಗಳು' ಎಂಬ ಕೃತಿಯೊಂದನ್ನು ಬೆಂಗಳೂರು ಮೆಡಿಕಲ್ ಕಾಲೇಜಿನ ಸಮುದಾಯ ಆರೋಗ್ಯ ವಿಭಾಗದ ಅಧ್ಯಾಪಕರಾದ ಡಾ.ಎಂ.ಬಿ.ರಾಮಮೂರ್ತಿಯವರು ಬರೆದಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರವು ಈ ಪುಸ್ತಕವನ್ನು ಹೊರತಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ವೃತ್ತಿಜನ್ಯ (occupational diseases) ಕಾಯಿಲೆಗಳು ಎಂದು ಕರೆಯಲ್ಪಡುವ ಒಂದು ವಿಭಾಗವೇ ಇದೆ. ಅದು ಆ ನಿರ್ದಿಷ್ಟ ವೃತ್ತಿಯ ಕಾರಣಕ್ಕೇ ತಲೆದೋರುವ ಕಾಯಿಲೆಗಳ ಕುರಿತಾದವು. ಆದರೆ ರಾಮಮೂರ್ತಿಯವರ ಪುಸ್ತಕ ಆ ರೀತಿಯದ್ದಲ್ಲ, ಅವರು ಸಾಮಾನ್ಯ ಮನುಷ್ಯರಾಗಿಯೂ ರೈತ-ಕಾರ್ಮಿಕರಿಗೆ ತಲೆದೋರುವ ಎಲ್ಲಾ ಆರೋಗ್ಯದ ಸಮಸ್ಯೆಗಳ ಕುರಿತಾಗಿಯೂ ಬರೆದಿದ್ದಾರೆ. ಇದೇ ಈ ಪುಸ್ತಕದ ವಿಶೇಷತೆ ಮತ್ತು ಮಿತಿ ಎರಡೂ ಆಗಿದೆ.

ಏಕಕಾಲದಲ್ಲಿ ಈ ಪುಸ್ತಕವು ರೋಗ ಬಾರದಂತೆ ತಡೆಯುವ ಮುನ್ನೆಚ್ಚರಿಕೆ ಕ್ರಮಗಳನ್ನು ಸೂಚಿಸುತ್ತದೆ; ರೋಗಗಳ ಕಾರಣಗಳು ಹಾಗೂ ಪರಿಹಾರೋಪಾಯಗಳನ್ನೂ ಹೇಳುತ್ತದೆ. ರೈತಾಪಿ ಕುಟುಂಬವೊಂದು ಇಂತಹ ಪುಸ್ತಕವನ್ನು ಮನೆಯಲ್ಲಿಟ್ಟುಕೊಂಡರೆ ಶೇ.98ರಷ್ಟು ರೋಗಗಳ ಕುರಿತಾಗಿ ಅಗತ್ಯವಿರುವಷ್ಟು ತಿಳಿವಳಿಕೆಯನ್ನು ಸಂಪಾದಿಸಲು ಆಗುವಷ್ಟು ಮಾಹಿತಿ ಹಾಗೂ ವಿಶ್ಲೇಷಣೆ ಇದರಲ್ಲಿದೆ. ಆರೋಗ್ಯದ ಕುರಿತಾಗಿ ನಮ್ಮ ರೈತ ಕುಟುಂಬಗಳಲ್ಲಿರುವ ಮೂಢನಂಬಿಕೆಗಳ ಕುರಿತಾಗಿಯೂ ಲೇಖಕರು ಬರೆದಿದ್ದಾರೆ. ಒಂದು ಪ್ರಥಮ ಚಿಕಿತ್ಸಾ ಕೈಪಿಡಿಯಾಗಿಯೂ ಪುಸ್ತಕ ಕೆಲಸ ಮಾಡುತ್ತದೆ.

ಆದರೆ ಪುಸ್ತಕದ ಶೀರ್ಷಿಕೆಯನ್ನು ನೋಡಿದರೆ,



ರೈತ-ಕಾರ್ಮಿಕರು ತಮ್ಮ ವೃತ್ತಿಯ ಕಾರಣಕ್ಕೆ ಎದುರಿಸುವ ನಿರ್ದಿಷ್ಟ ಆರೋಗ್ಯದ ಸಮಸ್ಯೆಗಳ ಕುರಿತು ಇರಬಹುದೇನೋ ಎಂಬ ಅನಿಸಿಕೆ ಹುಟ್ಟುತ್ತದೆ. ಅದರ ಕುರಿತು ವಿಶೇಷ ಫೋಕಸ್ ಈ ಪುಸ್ತಕದಲ್ಲಿಲ್ಲ.

ಈ ಪುಸ್ತಕದಲ್ಲಿನ ಹೆಚ್ಚಿನ ಅಧ್ಯಾಯಗಳನ್ನು ಸ್ವತಃ ಡಾ.ಎಂ.ಬಿ.ರಾಮಮೂರ್ತಿಯವರೇ ಬರೆದಿದ್ದರಾದರೂ, ಬೇರೆಯವರ ಕೆಲವು ಲೇಖನಗಳನ್ನೂ ಬಳಸಿಕೊಂಡಿದ್ದಾರೆ. ಅಂತಹ ಲೇಖಕರ ಹೆಸರನ್ನು ಅಲ್ಲಲ್ಲೇ ಯಾವ ಮುಚ್ಚುಮರೆಯಿಲ್ಲದೆ ಕಾಣಿಸಿದ್ದಾರೆ. ಇಂತಹ ಪುಸ್ತಕಗಳನ್ನು ಹೊರತರುವಾಗ ಹಲವರು ಅದು 'ಸಂಗ್ರಹ ಕೃತಿ'ಯಾಗಿದ್ದಾಗಲೂ, ಎಲ್ಲಾ ಹೆಸರೂ ತಮಗೇ ದಕ್ಕಬೇಕೆಂದು ಮೂಲ ಲೇಖಕರ ಹೆಸರನ್ನೇ ಹಾಕುವುದಿಲ್ಲ. ರಾಮಮೂರ್ತಿಯವರ ಕಾಳಜಿ ತಮ್ಮ ಹೆಸರಿನ ಪುಸ್ತಕ ಬರಬೇಕು ಎನ್ನುವುದಕ್ಕಿಂತ ರೈತರ ಆರೋಗ್ಯದ ಹಾಗೂ ಬದುಕಿನ ಸಂಕಷ್ಟಗಳ ನಿವಾರಣೆಯ ಕೈಪಿಡಿಯೊಂದನ್ನು ತರುವುದೇ ಆಗಿದೆ ಎನ್ನುವುದು ಎದ್ದು ಕಾಣುತ್ತದೆ.

ಈ ಸರ್ಕಾರೀ ಮೆಡಿಕಲ್ ಕಾಲೇಜಿನ ಮೇಷ್ಟರು, ಸರ್ಕಾರದ ಮುಂದೆ ರೈತ-ಕಾರ್ಮಿಕರ ಸಂಘಟನೆಗಳು ಮುಂದಿಡಬಹುದಾದ ಪ್ರಣಾಳಿಕೆಯ ತುಣುಕುಗಳನ್ನು ಪುಸ್ತಕದುದ್ದಕ್ಕೂ, ಬಾಕ್ಸ್‌ನಲ್ಲಿ ನೀಡುತ್ತಾರೆ. ಇದು ಸ್ವಾರಸ್ಯಕರವಾಗಿಯೂ, ಮೆಚ್ಚುಗೆಗೆ ಅರ್ಹವಾದ ಅಂಶವಾಗಿಯೂ ಕಂಡುಬರುತ್ತದೆ.

* ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆಗಳು ಎಲ್ಲಾ ಹಂತಗಳಲ್ಲೂ ಲಭ್ಯವಾಗಬೇಕು.

* ಸಂಕಷ್ಟಕ್ಕೀಡಾದ ರೈತರು ಮತ್ತು ಕಾರ್ಮಿಕರ ಮಕ್ಕಳ ಶಿಕ್ಷಣದ ಪೂರ್ತಿ ವೆಚ್ಚವನ್ನು (ಸರ್ಕಾರ) ಭರಿಸಬೇಕು.

* ನಮ್ಮೆಲ್ಲ ಸುಖ-ಸಂಪತ್ತುಗಳ ಹಿಂದೆ ಅಗೋಚರ ಅನಾಮಿಕ ಅನ್ನದಾತನಿದ್ದಾನೆ; ಕಾರ್ಮಿಕನಿದ್ದಾನೆ.

ಇಂತಹವು ಕೇವಲ ಲೇಖನಗಳ ಕೊನೆಯ ತುಣುಕುಗಳಾಗಿ ಮಾತ್ರವೇ ಇಲ್ಲ, ರಾಮಮೂರ್ತಿಯವರ ರೈತ ಕಾರ್ಮಿಕರ ಪರ ಕಾಳಜಿ, ನೈಸರ್ಗಿಕ ಕೃಷಿ ಹಾಗೂ ಸ್ಥಳೀಯ ಸಂಸ್ಕೃತಿಯ ಪರವಾದ ನಿಲುವು ಪುಸ್ತಕದ ಧಾರೆಯಾಗಿಯೇ ಇದೆ. ಹಾಗಾಗಿಯೇ ಕಾರಣಗಳು ಮತ್ತು


ಪುಸ್ತಕ ವಿಮರ್ಶೆ

ಪರಿಹಾರೋಪಾಯಗಳ ವಿಚಾರ ಬಂದಾಗ 'ವಿಷಯು[...] ಬೇಸಾಯ ಪದ್ಧತಿಯ' ಸಮಸ್ಯೆಗಳನ್ನೂ, ನೈಸರ್ಗಿಕ ಕೃಷಿಯ[...] ಅಗತ್ಯವನ್ನೂ ಪುಸ್ತಕ ಪರೋಕ್ಷವಾಗಿ ಪ್ರತಿಪಾದಿಸುತ್ತ[...] ಇದರ ಜೊತೆಗೆ ರೈತರ ಆತ್ಮಹತ್ಯೆಗಳ ಕುರಿತ ಒಂದ[...] ಪ್ರತ್ಯೇಕ ಲೇಖನವೇ ಇದೆ. ಸಮಾಜದ ಆರೋಗ್ಯ[...] ಸಮಸ್ಯೆಗಳು ಅವರ ಬದುಕಿನ ಸಮಸ್ಯೆಗಳಿಂ[...] ಬೇರೆಯಾದವಲ್ಲ ಎಂಬ ಅನಿಸಿಕೆ ಬಹುಶ[...] ರಾಮಮೂರ್ತಿಯವರದ್ದಿರಬಹುದು.

ಪುಸ್ತಕದ ಇನ್ನೊಂದು ಕೊರತೆಯನ್ನು ಹೇಳಲೇಬೇಕು[...] ಇದನ್ನು ರೈತ-ಕಾರ್ಮಿಕರ ಆರೋಗ್ಯದ ಸಮಸ್ಯೆಗಳು ಎಂದ[...] ಕರೆಯಲಾಗಿದೆ. ಆದರೆ ಇಡೀ ಪುಸ್ತಕ ರೈತರು ಮ[...] ಕೃಷಿ ಕಾರ್ಮಿಕರನ್ನೇ ಕೇಂದ್ರವಾಗಿಟ್ಟುಕೊಂಡಿದೆ. ಕೃಷಿಯೇತ[...] ಕಾರ್ಮಿಕರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ ಮತ್ತು ಅದ[...] 2020ರ ವೇಳೆಗೆ ಇಡೀ ರೈತಾಪಿಯ ಜನಸಂಖ್ಯೆಗಿಂ[...] ಹೆಚ್ಚಾಗಲಿದೆ. ನಿರ್ದಿಷ್ಟವಾದ ವೃತ್ತಿಜನ್ಯ ಕಾಯಿಲೆಗಳು [...] ಕೃಷಿಯೇತರ ಕಾರ್ಮಿಕರಲ್ಲೇ ಗಮನಾರ್ಹವಾಗಿಯೂ ಇವ[...] ಆದರೆ ಅದರ ಕುರಿತು ಪುಸ್ತಕ ಹೆಚ್ಚೇನೂ ಮಾತಾಡುವುದಿ[...]

ಒಟ್ಟಿನಲ್ಲಿ ವೈದ್ಯರೊಬ್ಬರು ತನ್ನ ವೃತ್ತಿ ನೈಪುಣ್ಯತೆಯ[...] ಜೊತೆಗೆ ಜನಪರ ಕಾಳಜಿಯನ್ನು ಬೆಸೆದರೆ ಯಾವ ಬಗೆಯ[...] ಬರಹ ಹೊರಬರುತ್ತದೆಂಬುದಕ್ಕೆ ಈ ಪುಸ್ತಕ ಒಂದ[...] ನಿದರ್ಶನವಾಗಿದೆ. ಪುಸ್ತಕ ಪ್ರಾಧಿಕಾರವು ಮತ್ತಷ್ಟು ಕಡಿಮೆ[...] ಬೆಲೆಯಲ್ಲಿ ಎಲ್ಲಾ ಅಕ್ಷರಸ್ಥ ರೈತ ಕುಟುಂಬಗಳ[...] ತಲುಪುವಂತೆ ಮಾಡಲು ಯೋಗ್ಯವಾದ ಕೃತಿ ಇದಾಗಿದ[...]

● ಡಾ.ವಾಸು ಎಚ್.[...]



(ಹಿಂದಿನ ಸಂಚಿಕೆಯಿಂದ)

ನಾನ್ ಬರಲ್ಲ ಅಂತ ಕಿರುಚ್ಕಂಡೆ. ವೊಟ್ಟೆ ತೆಗೀ ಬ್ಯಾಡಾ ಡಾಕಟ್ರಮ್ಮ, ನಿನ್ಕಾಲಿಗ್ಬೀಳ್ತೀನಿ ಅಂತ ಜೋರಾಗಿ ಅಳ್ತಾನೇ ಬೇಡ್ಕಂಡೆ. ಬಿಡಿಸ್ಕಂಡು ವೊಡೋಕೋಗೂ ನೋಡ್ದೆ. ನರ್ಸಮ್ಮ ಒಬ್ಳು ಘಟೀರಂತ ಕೆನ್ನೆ ಮ್ಯಾಲೊಂದ್ಕೊಟ್ಳು, ಗಿರ್‍ಗಿರ ತಿರುಗ್ದಂಗಾಯ್ತು. "ನಾಚಿಗ್ಗೆಟ್ಟ ಮುಂಡೇ! ತೆಗಿಸ್ಕಳಲ್ವಾ? ಅದನ್ನೇನು ಎತ್ತು ಬಿಸಾಡ್ತೀಯೇನು" ಅಂತ ತಿರ್ಗಾ ಬೈದ್ಲು.

ಮೊದಲ ಸಾವು



ತೆಲುಗು ಮೂಲ: ಓಲ್ಗಾ (ರಚನೆ: 1997)

ಕನ್ನಡಕ್ಕೆ: ನಗರಗೆರೆ ರಮೇಶ್

...ಂದ್ಕಂದೋಳೇ ನನ್ನಿಡ್ಕಂಡು ಅಳೋಕೇ ಶುರು ...ಳ್ಕ "ಯೆಂತಾ ಗತಿ ಬಂತೇ ತಾಯೀ ನಿಂಗೆ" ...ಡ್ಕಂತಾನೇ ಯಿದ್ಲು.

...ಯುವಮ್ಮಂಗೆಂಗೊತ್ತಾಯ್ತು! ಅವ್ನೇನಾದ್ರೂ ...ತೂ ಯೇಳ್ಕಬಂದವ್ನಾ! ಅವಾಗ ನಂಗೂ ಅಳು ...ತ್ತಿಬ್ಟೆ. ಶಾಂತಮ್ಮ ಅಳ್ತಾ ಅಳ್ತಾನೇ ಮಾತಾಡ್ತಾ ...ನಮ್ಮಪ್ಪ ಯೆಂಗಿದ್ದಿದ್ದು. ಯೆಲ್ಲಾರ್ಗೂ ಯೆಸ್ಟು ...ದ್ದು. ಬ್ಯಾರೇವ್ರಿಗೆ ಯೆಸ್ಟು ಸಾಯ ಮಾಡ್ತಾ ... ಯೆಲ್ಲಾ ಯೇಳ್ತಾ ಯೇಳ್ತಾ ಅಳ್ತಾನೇ ಯಿದ್ಲು. ...ಗ್ತಾಯ್ತು, ಆಯಮ್ಮ ಆಳತಾ ಯಿದ್ದಿದ್ಯಾಕೆ ಅಂತ. ...ಮ್ಮಪ್ಪ ಸತ್ತೋಗಿದ್ದ. ಅದರ್ತ ಆದ್ಮ್ಯಾಲೆ ನಾನೂ ...ದ್ಕಂಡತ್ತೆ.

...ಮ್ಮಪ್ಪ ನನ್ನ ಬೈತಾ ಇದ್ದ. ಆದ್ರೆ ನನ್ಕಂಡ್ರೆ ಅವ್ನಿಗಿಷ್ಟ. ...ಅಷ್ಟೇ. ನಮ್ಮಪ್ಪ ಅಂದ್ರೆ ಪಿರಾಣ.

...ಮ್ಮಪ್ಪ ನಂಗ್ಬಂದಿರೋ ಕಷ್ಟ ಗೊತ್ತಾಗ್ದಿರಾನೇ ಸತ್ತ. ...ಂತೂ ನನ್ ಕಷ್ಟ, ನಮ್ಮಪ್ಪ ಸತ್ತಿದ್ದು ಯೆಲ್ಲಾ ... ಅದ್ಯಾಗಿದ್ನೋ ನಂಗೇ ಗೊತ್ತಿಲ್ಲ.

...ಣ ತಕಂಬಂದ್ರು. ಅಮ್ಮ ಅಳ್ತಾನೇ ಯಿದ್ಲು. ...ಅತ್ತೆ, ನಮ್ಮನೆ ಆಕಡೆ ಯೀಕಡೆ ಯಿರೋರು ...ಾ ಅಳ್ತಾನೇ ಯಿದ್ವಿ. ಅಣ್ಣಂದ್ರು, ಅತ್ಗೆ, ಬಾವ, ...ಮೆಲ್ಲಾ ಬಂದ್ರು. ಅತ್ರು. ಕೊನೇ ಸಾರಿ ಅಪ್ಪನ ...ಮುಟ್ಟಿ ನಮಸ್ಕಾರ ಮಾಡ್ರಿ ಅಂದ್ರು ಮಾಡಿದ್ವಿ. ... ಬಂದ್ರು. ಬಂದೋರೆಲ್ಲಾ ವೋದ್ರು.

...ಗಾಕ್ಮುಂಚೆ ನಮ್ಮಣ್ಣ ನಮ್ಮಿಬ್ರುನ್ನೂ ಅವನ್ಜತೇಗೆ ...ಅಂದ. ನಮ್ಮಮ್ಮ ಬ್ಯಾಡ ಅಂದ್ಲು. "ಸುಮ್ನೆ ...ೀ ಕಸ್ಟ. ನಿಮ್ಮಪ್ಪ ಕಟ್ಸಿದ್ಮನೆ ಯಿದೆ. ನಾಲಕ್ಮನ್ಯಾಗೆ ...ಕಿದ್ರೆ ನಮ್ಮಿಬ್ರ ವೊಟ್ಟೆ ತುಂಬುತ್ತೆ, ಅಬ್ಬ ಆಗಾಗ್ಗೆ ...ಯುರ್ರಿ" ಅಂದ್ಲು.

...ಸತ್ತೋದ್ಮ್ಯಾಲೆ ಅಮ್ಮಂಗೂ ಮೈಚಸ್ನಾಗೇ ಇರಲಿಲ್ಲ ...ನಂಗೆ ಮನೆ ವಳಿಗೆ, ವೊರ್ಗೆ ಕೆಲ್ಸ ಜಾಸ್ತೀನೇ ...ಾದ್ರಲ್ಲೆಲ್ಲಾ ಬಿದ್ದು ನಾನು ಅವತ್ತಾದ್ದುನ್ನೆ ಮರ್‍ತೋಗಿದ್ದೆ ...ನ್ನಾಗಾಗೊಷ್ಟೊತ್ತ್ಗೆ ಒಂತಿಂಗ್ಳಾಯ್ತು. ಅಮ್ಮ ತಿರ್ಗಾ ... ಮುಸ್ರೆ ತಿಕ್ಕೋದು, ಅಣ್ಣು ತರ್ಕಾರಿ ಮಾರೋದು ...ಡ್ಬಿಟ್ಲು.

...ಾ ಬಂತು. ರಜಾ ಬಂತು ಅಂತ ಯೆಲ್ಲಾರು ...ರೋಪ್ಪು ದಿನ ಯಿದ್ರು. ವೋದ್ರು. ತಿರ್ಗಾ ... ನಂಗೂ ಅವಾಗವಾಗ ಬಿಡುವು ಸಿಗ್ತಾಯಿತ್ತು. ...ಯೆದುರ್ಗೇ ಆ ರೂಮು ಯಿತ್ತು. ಅವ್ನ ...ನ್ನಾ ರೂಮಿನ್ಮುಂದೆ ನಿಂತ್ಕಳ್ತಾ ಯಿದ್ದ. ಅವಾಗ ...ಗೆಪ್ತಿ ಬರ್ತಾಯಿತ್ತು, ಅವ್ನ ನನ್ನೋಡಿ ನಗತಾ ...ಕ್ಕೊಡಿತಿದ್ದ. ನಂಗೆ ಅವನ್ನ ನೋಡಿದ್ರೆ ವಾಂತಿ ...ಗ್ತಾಯಿತ್ತು, ನಾಚ್ಕೆ ಮಾನಮರ್ಯಾದೆ ಇಲ್ಲೋನು. ...ನಡುಗ್ತಾ ಯಿತ್ತು, ಅವ್ನ ನಕ್ಕಾಗ ಅವ್ನ ಮಕದ್ ...ಕ್ಯಾಕರ್ಸಿ ಉಗೀಬೇಕು ಅಂತ ಅನ್ಸುಸ್ತಾ ಯಿತ್ತು. ...ಿನ ನಮ್ಮಮ್ಮ ನನ್ಕಡೇನೇ ನೋಡ್ತಾನಿಂತ್ಕಂಡ್ಲು. ...ದಿರಾ! ಯೆಷ್ಟಿನ ಆಯ್ತೆ ನೀನ್ನೀರಾಕ್ಕಂಡು?" ಅಂತ ... ಅವಾಗ ಗೆಪ್ತಿ ಬಂತು. "ಅಪ್ ಸಾಯೋಕೆ ...ಂಚೆ" ಅಂದೆ.

...ದ್ರೆ, ಯೆದ್ದು ತಿಂಗ್ಳು!" ಅವ್ಳ ಕಣ್ಣು ಯಿಷ್ಟಗ್ಲಾ ...ಂಗಂದೋಳೇ ತಲೇ ಮ್ಯಾಲೆ ಕೈಯೊತ್ಕಂಡ್ ...ಬಿಟ್ಲು, "ನಾನು ಮನೇಗಿಲ್ಲಾ ಯಿದ್ದಾಗ ಯಾರಾದ್ರೂ ...ನೇ?"

...! ಲಚ್ಚಮ್ಮ, ಶಾಂತಮ್ಮ ಬಂದಿದ್ರು."

...ದಸ್ರು ಯಾರಾದ್ರೂ ಬಂದಿದ್ದೇನೇ? ನಾನು ...ಸ್ನೊಂಡು ಆಸ್ಪತ್ರೆನಾಗಿದ್ದಾಗ?"

...ಮ್ಮ ನನ್ನೊಂಡೂ ಯಿಂಗೆಲ್ಲಾ ಕೇಳಿರ್ಲಿಲ್ಲ, ...ನ ಕೋಡ್ತಾನೇ ಇದ್ಲು, ನಾನು ಯೇನೂ ಯೇಳ್ಲಿಲ್ಲ,

"ಬೊಗ್ಸೇ! ಬೊಗ್ಸಿ ಸಾಯಿ."

ಸುಮ್ನೆ ಅಂಗೇ ನೆಲ ನೋಡ್ತ ನಿಂತೆ.

ಯೇನಂತ ಯೇಳ್ಲಿ! ಅವ್ನ ಬಂದಿದ್ದ ನನ್ನ ಆಳ್ಮಾಡೋದ ಅಂತ ಯೇಳ್ಲಾ? ಯೇಳಾನ ಅಂತಾನೇ ಅನ್ನುಸ್ತಾ ಯಿತ್ತು. ಆದ್ರೆ ಯೆಂಗೇಳ್ಲಿ? ಸುಮ್ನೆ ಅಂಗೇ ನೆಲ ನೋಡ್ತಾ ನಿಂತ್ಕಂಡಿದ್ದೆ. ಅವ್ಳು ಯೆದ್ದು ನಂಜುಟ್ಟಿಡ್ಕಂಡು ನಾಲಕ್ಕು ಬಾರ್ಸಿದ್ಲು, ತಲೆ ಯಿಡ್ಕಂಡ್ ಗೋಡೇಗ್ ಚಚ್ಚಿದ್ಲು.

"ನಾನಂದ್ಕಂತಾನೇ ಯಿದ್ದೆ, ಯಿಂತಾದೇ ಯೇನೋ ಆಯ್ತದೆ ಅಂತ. ನಾನಂದ್ಕಂಡಂಗೇ ಆಗೋಯ್ತಲ್ಲೇ! ಯೆಂದೋ ವೊಂದಿನ ನೀನು ನಮ್ಮನೆ ಮಾನ ಅರಾಜಾಕ್ತೀ ಅಂತ ಅಂದ್ಕಂತಾನೇ ಯಿದ್ದೆ. ಅಂಗೇ ಆಗೋಗದೆ ಯೀಗ. ನೀನು ಬೆಳೀತಾ ಯಿದ್ರೆ ನಂಗೆ ಬಯ ಆಗ್ತಾನೇ ಯಿತ್ತು. ನೀನು ಸೋಕಿ ಮಾಡ್ಕಂಡಾಗೆಲ್ಲಾ ಅನ್ಸಾ ್ತನೇಯಿತ್ತು. ಯೆಂದೋ ಒಂದಿನ ಅನಾವುತ ಆಗೇ ಆಗುತ್ತೆ ಅಂತ. ಯಾರ್ದಾದ್ರೂ ಕಣ್ಣು ನಿನ್ಮ್ಯಾಲ್ಬೀಳುತ್ತೆ ಅಂತ ಅಂದ್ಕಂತಾನೇ ಇದ್ದೆ. ಅಂಗೇ ಆಗೋಯ್ತಲ್ಲೇ!"

ಅಂಗಳ್ತಾ ಅಳ್ತಾನೇ ಕೇಳಿದ್ಲು "ಯಾವೋನೇ ಅವ್ನು?"

ಅವ್ಳು ಬೈತಾನೇ ಇದ್ಲು, ಅಳ್ತಾನೇ ಇದ್ಲು, ನನ್ನ ಮಾತಾಡಕೇ ಬಿಡ್ತಾ ಇರ್ಲಿಲ್ಲ. ಕೊನೇಗೂ ಅವ್ಳು ಅಳು ನಿಲ್ಸಿದ್ಲು, ತಿರ್ಗಾ ಕೇಳಿದ್ಲು ಅವ್ನು ಯಾರು ಅಂತ.

"ಅವ್ನೇ, ಎದುರುಗಡೆ ರೂಮ್ನಾಗೌನಲ್ಲ ವುಡ್ಗ ಅವ್ನು" ಅಂದೆ.

ಆಮ್ಯಾಲೆ ಅವತ್ತು ಅವ್ನು ಯೆಂಗೆ ವಳಕ್ಬಂದ, ಯಂಗೆ ನಾನು ಬ್ಯಾಡ, ಬ್ಯಾಡ ಅಂದ್ರೂನು ಬಿಡ್ದೇ ನನ್ಮ್ಯಾಲ್ಬಿದ್ದ. ಆಮ್ಯಾಲ್ರೆ ಅಮ್ಮಂಗೇಳಾನ ಅಂದ್ರೆ, ಅವತ್ತೇ ಅಪ್ಪ ಸತ್ತಿದ್ದು ಯೆಲ್ಲಾ ಯೇಳ್ದೆ.

ಅಮ್ಮ ನನ್ನ ಗಟ್ಟ್ಯಾಗಿಡ್ಕಂಡು ತಿರ್ಗಾ ಜೋರಾಗತ್ಲು.

"ನಿಂಗೇನ್ಕಸ್ಟಾ ಬಂತೇ ನಂತಾಯೀ, ನಾನಿದ್ದೂ ಯಿಲ್ದಂಗಾಗೋಯ್ತಲ್ಲೇ! ನಿಂಗ್ಯಾಕಿಸ್ಟು ದಯೆ ಯಿಲ್ದೇ ವೋಯ್ತೋ ನಮ್ಮ್ಯಾಲೆ, ದ್ಯಾವ್ರೇ! ಅವ್ನಿಗೆ ನನ್ಮಗಳೇ ಸಿಗಬೇಕಾ ಆಳ್ಮಾಡಾಕೆ?" ಅಂತ ವೊಂದೇ ಅಳು.

ಆಮಾತೂ, ಅವ್ಳು ಯಿವಾಗಳೋದು ಕೇಳಿ ನಂಗೆ ಯರ್ಡು ತಿಂಗ್ಳಿಂದ ಪಟ್ಕಸ್ಟ ಯೆಲ್ಲ ತೀರೋದಂಗಾಯ್ತು. ಅಮ್ಮ ನನ್ನ ತಬ್ಕಂಡು ಅಳ್ತಾ ಯಿದ್ರೆ ನಂಗೋಸ್ರ ಅಳೋಅಮ್ಮ ಯಿದಾಳಲ್ಲ ಅಂತ ಅನ್ಸಿ ಸಂತೋಸಾನೇ ಆಯ್ತು, ನಾವಿಬ್ರೂ ಅಳ್ತಾ ಇದ್ವಿ. ಅಂಗಳೋವಾಗ್ಲೂ ನಂಗಂತೂ ಸಂತೋಸಾನೇ ಆಗ್ತಾಯಿತ್ತು. ನನ್ನ ವೊಟ್ಟೇಗಾಕ್ಕಳೋ ಅಮ್ಮ ಯಿದಾಳಲ್ಲ ಅಸ್ಟು ಸಾಕು ಅಂತ ಅನ್ಸಿ ಅಳ್ತಾ ಯಿದ್ರೂನೂ ದುಕ್ಕ ಜಸ್ತಿ ಆಗ್ತಾಯಿರ್ಲಿಲ್ಲ.

"ಯಾರ್ತಾದ್ರೂ ಯೇಳಕ್ಕೂ ಆಗಲ್ಲ, ಯೇಳ್ದೇ ಯಿದ್ರೂ ಯೆಲ್ರುಗೂ ಗೊತ್ತಾಗುತ್ತೆ, ನಾಲಕ್ ಜನಕ್ಕೆ ಗೊತ್ತಾದ್ರೆ ನಾಳೆ ನಿಂಗೆ ಮದ್ವೆ ಯೆಂಗಾಗ್ತೈತೇ!! ಬರೀನ ಯೇನಾರ ಮಾಡ್ಬೇಕಲ್ಲೇ!" ಅಂದ್ಲು.

ನಂಗರ್ತ ಆಗ್ಲಿಲ್ಲ, ನಾವು ಯೇಳ್ದೇ ಯಿದ್ರೆ ಬ್ಯಾರೇವ್ರಿಗೆ ಅದೆಂಗೊತ್ತಾಗುತ್ತೆ?

ಅಮ್ಮ ಅವಾಗ ಯೇಳಿದ್ಮಾತ್ಗೆ ನನ್ನೆದೆ ದಸಕ್ ಅಂತು. ನನ್ನೊಟ್ಟೇನಾಗ ಪಿಂಡ ಐತಂತೆ, ಅಷ್ಟೆ ಅಲ್ಲ ಬೆಳೀತೈತಂತೆ. ಆ ಮಾತು ಕೇಳಿ ನನ್ನೊಟ್ಟೆನಾಗ ಆವು ಓಡಾಡ್ದಂಗಾಯ್ತು, ಬೋಬಯ ಆಯ್ತು.

ನಂಗೊತ್ತಿಲ್ದೀರಾನೇ ನನ್ನೊಟ್ಟೇನಾಗೆ ಅದೆಂಗೆ ಬೆಳೀತಾ ಐತೆ? ಅದೆಂಗೆ ನನ್ನೊಟ್ಟೆನಾಗೋಯ್ತು? ಮದ್ವೆ ಆದ್ಮ್ಯಾಲಲ್ವಾ ಮಕ್ಕಾಗೋದು! ನಂಗೆ ಮದ್ವೇನೇ ಅಗಿಲ್ಲ, ಇನ್ನ ನನ್ನೊಟ್ಟೆನಾಗೆ ಮಗಿ ಯೆಂಗ್ಬರಾಕಗುತ್ತೆ?

ನಂಗಂತೂ ಯೇನೂ ಗೊತ್ತಾಗ್ತಾನೇ ಯಿಲ್ಲ.

ನಂತಲೆ ಕೆಟ್ಟೋಯ್ತು. ಯೇನೂ ಗೊತ್ತಾಗ್ದೇ ಅಂಗೇ ನೆಲ ನೋಡ್ತಾ ನಿಂತ್ಕಂಡಿದ್ದೆ. ಅವ್ಳು ಮಾಡಿದ್ಕೆಲ್ಸಕ್ಕೇ ಯಿಂಗಾಗೋಯ್ತು ಅಂತಾನೇ ಯಿದ್ಲು ಅಮ್ಮ...

ಆ ದಿನಾಲೂ ಅದೇ ರಾಗ. ಮನೆ ಕೆಲ್ಸ, ಆಚೆ ಕೆಲ್ಸ ಮಾಡ್ತಾನೇ ಯಿದ್ದೆ. ಆದ್ರೆ ಮುಂಚೆ ಯಿದ್ದಂಗೆ ವುಸಾರಾಗಿರ್ತಿಲ್ಲ, ಯೇನೋ ಸಂಕ್ಟ. ತಿಂತಾ ಯಿದ್ರೆ, ಮನಿಕ್ಕಂಡಿದ್ರೆ ವಾಂತಿ ಬರೋಅಂಗೇ ಆಗೋದು. ನನ್ನ ವೊಟ್ಟೆ ಕಡೇನೇ ನೋಡ್ತಾಯಿರ್ಬೆಕು ಅನ್ಸಾ ್ತ ಯಿತ್ತು.

ಅಮ್ಮ ನನ್ನ ನಮ್ಮಕ್ಕನೂರ್ಗೆ ಕರ್ಕೊಂಡೋದ್ಲು.

ಅವ್ರಿಬ್ರೂ ಅದೇನೋ ಶಾನೇ ವೊತ್ತು ಮಾತಾಡ್ತಾನೇ ಯಿದ್ರು. ನನ್ನ ದೂರಾನೇ ಯಿರ್ಸಿದ್ರು. ನಮ್ಮಕ್ಕಾನೂ ಅಳ್ತಾಯಿದ್ಲು. ನಂಗವಾಗವಾಗ ಒಂದೆರ್ಡು ಮಾತು ಕೇಳ್ತಾ ಯಿತ್ತು.

"ನಿನ್ಗಂಡಂಗೇಳ್ಬ್ಯಾಡ. ನಿನ್ನಣ್ಣಂದೀರ್ಗೂ ಯೇಳೋದ್ಬ್ಯಾಡ. ಅವ್ರಿಬ್ರ ಯೆಂದ್ತೀರ್ಗೂ ಯೇನಾರ ಗೊತ್ತಾಗ್ಬಿಟ್ರೆ ಊರೆಲ್ಲ ಸುದ್ದಿ ಆಗ್ಬಿಡ್ತೈತೆ."

"ಅದೆಲ್ಲಾ ನಾನೋಡ್ಕಂತೀನ್ಬಿಡು ನೀ ಸುಮ್ಕಿರು."

ಒಂದಿನ ನಂಬಾವ ಯಿಲ್ದೇರೋ ವೊತ್ನಾಗ ನನ್ನ ವೊಂದಾಸ್ಪತ್ರೀಗೆ ಕರ್ಕಂಡೋದ್ರು. ಡಾಕಟ್ರಮ್ಮ ನನ್ನ ಟೇಬಲ್ ಮ್ಯಾಲೆ ಮಲ್ಕೋ ಅಂದ್ಲು, ಮಲಿಕ್ಕಂಡೆ. ಮೈಯೆಲ್ಲಾ ಮುಟ್ಟಿದ್ಲು, ಅದೇನೇನೋ ಪರೀಕ್ಸೆ ಮಾಡಿದ್ಲು, "ವಳಗೆ ಮಗು ಇದ್ದಂಗಿದೆ" ಅಂದ್ಲು, ನನ್ನೊಳಕ್ಕೆ ಕೈ ಆಕಿದ್ಲು, "ಮೂರ್ತಿಂಗ್ಳು" ಅಂದ್ಲು.

ಅಮ್ಮ ತಿರ್ಗಾ ಅಳಾಕ್ ಶುರು ಮಾಡಿದ್ಲು, ನಂಗೂ ಅಳು ಬಂತು. ಅಳ್ಬೇಕು ಅನ್ನುಸ್ತು ಆದ್ರೆ ಅದು ಆಚೇಗ್ಬರ್ಲಿಲ್ಲ, ಮನ್ಸೆಲ್ಲಾ ಯೆಂಗೆಂಗೋ ಆಗಿತ್ತು.

"ಯಿಲ್ಲಿ ಅಳಬ್ಯಾಡ" ಅಂತ ಜೋರು ಮಾಡಿದ್ಲು ಡಾಕಟ್ರಮ್ಮ. "ಆಸ್ಪತ್ರೆಗ್ಸೇರ್ಬೆಕು. ಒಂದಿನ ಇದ್ರೆ ಸಾಕು. ತೆಗುದ್ಬಿಡ್ತೀನಿ. ಮನೆಗೋಗ್ಬೋದು."

ನಂಗರ್ತ ಆಗ್ಲಿಲ್ಲ, ಅಂಗೇ ಕೇಳಿಸ್ಕಂತಾನೇ ಯಿದ್ದೆ. "ಯಿನ್ನ ಜಾಸ್ತಿ ದಿನ ಯಿದ್ರೆ ಪಿಂಡ ಬೆಳೆದ್ಬಿಡುತ್ತೆ ಇವತ್ನಾಳೆ ಸೇರುಸ್ಬಿಡಿ" ಅಂದ್ಲು.

ಪಿಂಡ ತೆಗೀತಾಳಂತೆ. ಅದೆಂಗ್ ತೆಗೀತಾಳೆ? ಆಚೇಗ್ ಬರೋ ಮಗೀನ ಯೇನ್ಮಾಡ್ತಾರೆ? ಯಾರ್ಗ್ಕೊಡ್ತಾರೆ? ಯೆಂಗ್ನೋಡ್ಕಳಾದು? ಬಸ್ರಾದ್ರೆ ಒಂಬತ್ತಿಂಗ್ಳಾಗ್ಬೇಕಲ್ವಾ! ಮತೆ ಈಯಮ್ಮ ಇಂಗಂತಾಳೆ!

ನಂಗೇನೂ ಗೊತ್ತಾಗ್ತಾಯಿರ್ಲಿಲ್ಲ, ಯಾರನ್ನಾದ್ರೂ ಕೇಳಾಣಾ ಅಂದ್ರೆ ಬಯ, ಬೈದ್ಬಿಡ್ತಾರೆ ಅಂತ.

ನನ್ನ ನೋಡೋರೆಲ್ಲಾ ಬೈತಾನೇ ಇದ್ರು. ನಾನೇನ್ಮಾಡ್ಲಿ?

ಅವತ್ತು ರಾತ್ರೀನೇ ಆಸ್ಪತ್ರೇಗ್ ಸೇರ್ಸಿದ್ರು.

ಬೆಳಗ್ಗೇನೇ ನರ್ಸಮ್ಮ ಬಂದ್ಲು. ಅದೇನೋ ಎನೀಮಾನಂತೆ. ವಳಕ್ಕೆ ತುರುಕಿದ್ಲು, ನಂಗೆ ನಾಚ್ಕೆ, ಆದ್ರೆ ಯೇನೂ ಯೇಳೊ ಅಂಗೇ ಯಿರ್ಲಿಲ್ಲ, ಅವ್ರು ಯೇಳ್ದಂಗೆ ಕೇಳ್ಬೇಕಾಗಿತ್ತು, ಬೈದ್ರೆ ಬೈಸ್ಕೋ ಬೇಕಾಗಿತ್ತು, ನರ್ಸಮ್ಮಾನೂ ವೋಗ್ಗೋಕ್ಮುಂಚೆ ಬೈದೇ ವೋದ್ಲು.

ಕಕ್ಕಸ್ಸಿಗೆ ಅಂತ ವೋಗ್ತಾಯಿದ್ರೆ ಅಲ್ಲೊಬ್ಬ ತಾತಪ್ಪ ಯಿದ್ದ. ನನ್ನೋಡಿ ಥೂ ಅಂದ. "ಭೋಟುದ್ದ ಯಿರಲ್ಲ ಮುಂಡೇರು ಇವ್ರಿಗೆ ಅವಾಗ್ಲೆ ಬೇಕು" ಅಂತ ಅಂದು ಯಿನ್ನಾ ವೊಂದ್ಸಾರಿ ವುಗ್ದ.

ಯಿನ್ನೊಬ್ಳು ನರ್ಸಮ್ಮ ಬಂದ್ಲು. ನನ್ಬಟ್ಟೆ ಯೆಲ್ಲಾ ಬಿಚ್ಚಿಸ್ಬಿಟ್ಲು, ಮೈಮ್ಯಾಲೆ ಒಂದು ಬಿಳೀ ಬಟ್ಟೆ ವೊದ್ಸಿದ್ಲು.

"ವಯಸ್ಸ್ಬರಾಕಿಲ್ಲ, ಆಗ್ಲೆ ಇವ್ರಿಗೆ ತಲೆ ತಿರುಗ್ತೈತೆ" ಅಂತ ಬೈದೋದ್ಲು.

ಯಿವ್ರೆಲ್ಲಾ ಯಾಕಂಗೆ ನನ್ನೇ ಬೈತಾ ಅವ್ರೆ? ಗೊತ್ತಾ ಆಗ್ತಾಯಿಲ್ಲ, ನನ್ನ ಒಂದ್ರೂಮ್ನೊಳಕ್ಕೆ ಕರ್ಕವೋದ್ರು.

ಒಂದು ಬುಲ್ಡೋಜು ಶೀಸಿ, ಒಂದು ಬೆಂಚು, ಇನೊಬ್ಳು ನರ್ಸಮ್ಮ. ಅವ್ಳೂ ಬೈದ್ಲು, ಯೆಲ್ರೂ ನನ್ನ ಬೈಲಿ ಅಂತನೇ ಯಿಷ್ಟೊಂಜನ ನರ್ಸವ್ಮಗಳು ಬರ್ತಾಯಿದಾರೇನೊ ಅನ್ಸು ್ತ. ಯಿನ್ನ ನನ್ಕೆಲ್ಸ ಮುಗೀತು ಅಂದ್ಕಂಡೆ.

ಅಂಗನ್ಸಿದ್ದೇ ತಡ, ನಂಗಳು ಬಂತು. ಅಳಾಕ್ಶುರು ಮಾಡ್ದೆ. ಅದೇನ್ಮಾಡ್ತಾರೋ ಗೊತ್ತಿರ್ಲಿಲ್ಲ. ಯೇನೋ ಮಾಡ್ಬಿಡ್ತಾರೆ ಅನ್ಸು ್ತ.

ನಾನ್ ಬರಲ್ಲ ಅಂತ ಕಿರುಚ್ಕಂಡೆ. ವೊಟ್ಟೆ ತೆಗೀ ಬ್ಯಾಡಾ ಡಾಕಟ್ರಮ್ಮ, ನಿನ್ಕಾಲಿಗ್ಬೀಳ್ತೀನಿ ಅಂತ ಜೋರಾಗಿ ಅಳ್ತಾನೇ ಬೇಡ್ಕಂಡೆ. ಬಿಡಿಸ್ಕಂಡು ವೊಡೋಕೊಗೂ ನೋಡ್ದೆ. ನರ್ಸಮ್ಮ ಒಬ್ಳು ಘಟೀರಂತ ಕೆನ್ನೆ ಮ್ಯಾಲೊಂದ್ಕೊಟ್ಳು, ಗಿರ್‍ಗಿರ ತಿರುಗ್ದಂಗಾಯ್ತು, "ನಾಚಿಗ್ಗೆಟ್ಟ ಮುಂಡೇ! ತೆಗಿಸ್ಕಳಲ್ವಾ? ಅದನ್ನೇನು ಎತ್ತು ಬಿಸಾಡ್ತೀಯೇನು" ಅಂತ ತಿರ್ಗಾ ಬೈದ್ಲು.

ಡಾಕಟ್ರಮ್ಮ ಅಲ್ಲೇ ನಿಂತಿದ್ಲು, ಅವ್ಳ ಕಣ್ಣಾಗೂ ಕ್ವಾಪ ಯಿತ್ತು, ಅಷ್ಟೊತ್ತಿಗೆ ವೊಬ್‌ಗಂಡ್ಸು ಬಂದ ಅಲ್ಲಿಗೆ. ನನ್ನ ಗಟ್ಟ್ಯಾಗಿಡ್ಕಂಡ. ಇನ್ನೊಬ್ಳು ವೊಂದ್ಸೂಜಿ ತಕಂಡು ಚುಚ್ಚಿದ್ಲು, ತಲೆ ಸುತ್ಕಂಬಂದಂಗಾಯ್ತು. ಬೀಳೋ ಅಂಗಾಯ್ತು. ಯೆಲ್ರೂ ನನ್ನುತ್ಲೂ ನಿಂತ್ಕಂಡು ನೋಡ್ತಾ ಯಿದ್ರು. ಯಿವ್ರೆಲ್ಲಾ ಸೇರಿ ನನ್ಸಾಯಿಸ್ತಾರೆ. ನನ್ನ ಬಾವಿನಾಗಾಕ್ತಾರೆ. ನನ್ನ ಸಾಯ್ಸಿ ನನ್ಮಗೀನ ತಗುದ್ರೆ ಅದನ್ನ ಸಾಕೋರ್ಯಾರು?

ನಾನೇ ಬೇಕಾದ್ರೆ ಬಾವೀಗ್ಬೀಳ್ತಿದ್ದೆ. ಆದ್ರೆ ನನ್ಸಾವು ನಾನ್ಸಾಯಕ್ಬಿಡ್ದೀರ ಇವ್ರೆಲ್ಲ ಸೇರಿ ನನ್ನ ನೂಕ್ತಾ ಯಿದಾರೆ. ಅಮ್ಮಾ ಯೆಲ್ಲಿದೀಯೇ? ಯೇನ್ಮಾಡ್ತಾಯಿದೀಯೇ? ತಮ್ಮಂಗೆ ಅಬ್ಬಕೆ ವೊಸಂಗಿ ವೊಲ್ಸಾನ ಅಂತ ಇಪ್ಪತ್ರೂಪಾಯಿ ಬಚ್ಚಿಕ್ಕಿದ್ದೆ ನಾನೋದ್ಮ್ಯಾಲೆ ಅವ್ನಿಕೊಡೇ. ನನ್ನ ಯಿಡ್ಕಳೇ. ಇವ್ರೆಲ್ಲಾ ನನ್ನ ಸಾಯಿಸ್ತಾ ಯಿದಾರೆ. ಅಪ್ಪನತ್ರಕ್ಕೆ ವೋಗ್ತಾಯಿದೀನೇ.ಬಾರೇ ಯಿಡ್ಕಳೇ.

ಸತ್ತೆ ಅಂದ್ಕಂಡೆ. ಆದ್ರೆ ಸತ್ತಿರ್ಲಿಲ್ಲ, ಅಮ್ಮ ಅಲ್ಲೇ ನಿಂತಿದ್ಲು.

"ಅಮ್ಮ! ನಾನ್ಸತ್ತಿಲ್ಲ, ಬದ್ಕೇ ಯಿದೀನಿ" ಅಂತ ಯೇಳನ ಅಂತ ಬಾಯ್ತೆಗ್ದೆ. ಆದ್ರೆ ಬಾಯಿಂದ ಮಾತೇ ವೊರಡ್ಲಿಲ್ಲ.

"ನನ್ನ ವೊಟ್ಟೆ ತುಂಬ ಅಳುವೇಯಿದೆ" ಅಂತ ಅವ್ಳೇಳ್ತಾ ಯಿದ್ದಿದ್ಮಾತು ಗೆಪ್ತಿ ಬಂತು. ಇವಾಗ ನನ್ನೊಟ್ಟೇಗೂ ಅಷ್ಟೆ. ಬರೀ ಅಳುವೇ. ವೊರಕ್ಬರ್ತಾ ಯಿಲ್ಲ, ಕರುಳಿನ್ಸುದ್ದಾಗಿ ಅಳುವೇ ಅಲ್ಲಿ ಸುತ್ಕೊಂಡ್ಬಿದ್ದಿದೆ. ಅಮ್ಮ ಅದೆಲ್ಲ ಯಾಕೇಳ್ತಾ ಯಿದ್ಲು ಅಂತ ನಂಗೆ ಯಿವಾಗ ಗೊತ್ತಾಯ್ತು.

ಅವಾಗತ್ತೆ ಯೆಷ್ಟತ್ತೆ ಅಂದ್ರೆ ಆಸ್ಪತ್ರೆನಾಗಿರೋರೆಲ್ಲ ವೋಡಿ ಬಂದ್ರು ಯೇನಾಗೋಯ್ತೋ ಅಂತ. ನಂಗೆ ತಿರ್ಗಾ ಗ್ಯಾನ ತಪ್ತು, ಗ್ಯಾನ ಬರೋವಷ್ಟತ್ತಿಗೆ ಅಮ್ಮ ಅಲ್ಲೆ ಯಿದ್ಲು.

"ಅಮ್ಮಾ! ನನ್ಬದ್ಕಿದೀನಾ. ಸತ್ತಿದೀನಾ?"

"ನೀನು ಸತ್ತು ಬದ್ಕಿದೀಯ ತಾಯಿ. ಯಿಲ್ಲಿಗೆ ಯೇನಾಯ್ತು? ಯಿನ್ನ ಅದೆಷ್ಟು ಸಾರಿ ಸತ್ತು ಬದುಕ್ಬೇಕೋ! ಯೆಂಗಸ್ಗೆ ವೊಂದೇ ಸಾವಲ್ಲಮ್ಮಾ! ಯೆಸ್ಟು ಸಾವುಗ್ಳೋ! ಶಾನೆ ಸಾರಿ ಸಾಯ್ತಾನೇ ಯಿರ್ತಾಳೆ. ಬದುಕ್ತಾನೇ ಯಿರ್ತಾಳೆ" ನನ್ನ ಗಟ್ಟ್ಯಾಗಿಡ್ಕಂಡು ಅಮ್ಮ ಅಳ್ತಾ ಯಿದ್ರೆ ನಂಗೆ ಬೊಲು ಬಯ ಆಯ್ತು.


"ನಂಗೆಸ್ಟು ಸಾವುಗ್ಳು! ದ್ಯಾವ್ರೇ ಅಸ್ಟು ಸಾರಿ ಯೆಂಗ್ ಸಾಯ್ಲಿ!"

ನನ್ಮಗೂಗೇನೋ ಒಂದೇ ಸಾವಂತೆ. ಅದು ಸತ್ತೇ ವೋಗಿತ್ತಂತೆ. ವುಟ್ಟೀರಾನೇ ಸತ್ತೋಗಿತ್ತಂತೆ. ಅದೆಂಗೆ?

ನಾನು ಸತ್ತು ಬದ್ಕಿದ್ರೆ ಅದು ವುಟ್ಟೀರಾನೇ ಸಾಯ್ತು. ನನ್ಮಗೀನ ಅದುಸ್ಟ ನಂಗಿಲ್ಲ.

(ಮುಕ್ತಾಯ)

ಲಾಂಗ್ ಲಿವ್ ಆರೋನ್!




'ಆರೋನ್ ಸತ್ತಿದ್ದಾನೆ. ಇಂದು ಜಗತ್ತಿಗೆ ಸೂತಕ. ಲಾಂಗ್ ಲಿವ್ ಆರೋನ್'.- 13ನೇ ತಾರೀಖು ನನ್ನ ಯುವ ಗೆಳೆಯನೊಬ್ಬನಿಂದ ಈ ಮೆಸೇಜ್ ಬಂತು. ನನಗೆ ತಲೆಬುಡ ಗೊತ್ತಾಗಲಿಲ್ಲ. 15ನೇ ತಾರೀಖಿನ 'ದಿ ಹಿಂದು' ಪತ್ರಿಕೆಯಲ್ಲಿ ಸುದ್ದಿ ಇತ್ತು.- "ಆರೋನ್ ಸ್ವಾರ್ಟ್ಜ಼ ಆತ್ಮಹತ್ಯೆ ಮಾಡ್ಕೊಂಡಿದ್ದಾನೆ. ತನ್ನ 14ನೇ ವಯಸ್ಸಿನಲ್ಲೇ RSS1.0 ಸಂಶೋಧನೆಯಲ್ಲಿ ಪಾಲುದಾರ; ಅಮೆರಿಕ ಸರ್ಕಾರದ SOPA ಕಾಯ್ದೆಯ ವಿರುದ್ಧ ಸೆಣಸಿ, ಅದನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ ಮುಕ್ತ ಜ್ಞಾನದ ಹಕ್ಕಿನ ಚಳವಳಿಗಾರ; 2011ರಲ್ಲಿ JSTOR ಎಂಬ ಹಣ ನೀಡಿದರೆ ಮಾತ್ರ ಜಗತ್ತಿನ ವಿದ್ವತ್ ಜ್ಞಾನಭಂಡಾರವನ್ನು ಉಪಯೋಗಿಸಲು ಅವಕಾಶ ಮಾಡಿಕೊಡುವ ಅಂತರ್ಜಾಲ ಜ್ಞಾನಕೋಶಕ್ಕೆ ಕನ್ನ ಹಾಕುವ ಯೋಜನೆ ಹಾಕಿದ. ಅದಕ್ಕಾಗಿ ಅತ್ಯಂತ ಮುಕ್ತ ಜ್ಞಾನ ಪ್ರಸಾರದ ವಿದ್ಯಾಸಂಸ್ಥೆ ಎಂದು ಖ್ಯಾತವಾದ ಮೆಸಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (MIT) ಕಂಪ್ಯೂಟರ್ ಜಾಲದಲ್ಲಿ ಕನ್ನ ಕೊರೆದು, JSTOR ತಾಣದಿಂದ ಲಕ್ಷಾಂತರ ವಿದ್ವತ್ ಬರಹಗಳನ್ನು ಮೊಗೆದು ತೆಗೆದು ಜಗತ್ತಿಗೆ ಮುಕ್ತವಾಗಿ ಹಂಚಲು ಮುಂದಾದ; ಸಿಕ್ಕು ಬಿದ್ದ; ಅಮೆರಿಕದ ನ್ಯಾಯಾಲಯಗಳು ಕಠಿಣ ಶಿಕ್ಷೆಗೆ ಅರ್ಹವಾಗುವಂಥ ಕೇಸುಗಳನ್ನು ಅವನ ಮೇಲೆ ಜಡೆದವು."

ಈ ಸುದ್ದಿಗಳನ್ನು ಓದಿ ನಿಮಗೆ ಎಷ್ಟು ಅರ್ಥವಾಗುತ್ತಿದೆಯೊ ನಂಗೂ ಅಷ್ಟೇ ಅರ್ಥವಾದದ್ದು. ಸಮಾಧಾನವಾಗದೆ ಇಂಟರ್ನೆಟ್ ಅಗೆದು ನೋಡಿದೆ. ಅಲ್ಲಿ ನನಗೆ ಆರೋನ್ ತನ್ನ ಬ್ಲಾಗ್ 'ರಾ ಥಾಟ್' ನಲ್ಲಿ ಬರೆದ ಬರಹಗಳು ಸಿಕ್ಕವು. ಅವನ ಬದುಕು-ಸಾಧನೆ-ಸಾವಿನ ಕುರಿತು ಬಂದಿರುವ ಅನೇಕ ಬಗೆಯ ನಿರೂಪಣೆಗಳಲ್ಲಿ ಟಿಂ ಕಾರ್ಮೋಡಿ 'ದಿ ವರ್ಜ್' ಎಂಬ ಪತ್ರಿಕೆಯಲ್ಲಿ ಬರೆದ 'ಮೆಮೊರಿ ಟು ಮೈತ್: ಟ್ರೇಸಿಂಗ್ ಆರೋನ್ ಸ್ವಾರ್ಟ್ಜ಼ ಥ್ರೂ ಟ್ವೆಂಟಿಫಸ್ಟ್ ಸೆಂಚುರಿ' (http://www.theverge.com/2013/1/22/3898584/aaron-swartz-profile-memory-to-myth) ಅನ್ನೋ ಸಂಯಮದ ಬರಹವೊಂದು ನನಗೆ ಕಂಡಿತು. ಅವುಗಳನ್ನು ಆಧರಿಸಿ ಆರೋನ್ ಬಗ್ಗೆ ಹೇಳುತ್ತೇನೆ.


ಆರೋನ್ ಬಾಲಕನಾಗಿದ್ದಾಗ

ಯಾರು ಈ ಆರೋನ್? ಏನವನ ಸಾಧನೆ? ಈ ಪ್ರಶ್ನೆಗಳಿಗೆ ಸಮಾಧಾನದ ಉತ್ತರ ಕೊಡಲು, ದಶಕಗಳ ಕಾಲ ಅವನ ಜೊತೆ ಕೆಲಸ ಮಾಡಿದ ಇಂಟರ್ನೆಟ್ ತಂತ್ರಜ್ಞಾನ ವಲಯದ ದಿಗ್ಗಜರೂ ಭಾಷೆಗಾಗಿ ತೊಳಲುತ್ತಾರೆ. ಆರೋನ್ ಎಷ್ಟು ತೀವ್ರವಾಗಿ ಬದುಕಿದನೆಂದರೆ, ಅವನ ಸಾವು ಮಾತ್ರವೇ ಅವನ ಬದುಕನ್ನು ಒಂದು ಚೌಕಟ್ಟಲ್ಲಿ ಇಟ್ಟು ನೋಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ! ತನ್ನ 11ನೇ ವಯಸ್ಸಿನಿಂದ 15 ವರ್ಷಗಳ ಕಾಲ ಆರೋನ್ ಇಂಟರ್ನೆಟನ್ನು ಮುಕ್ತ ಮಾಹಿತಿ ಸಂವಹನದ ನೈಜ ತಂತ್ರಜ್ಞಾನವನ್ನಾಗಿ ಪರಿವರ್ತಿಸಲು ಬೇಕಾದ ಪ್ರಬಲ ಸಲಕರಣೆಗಳನ್ನು ರಚಿಸಿಕೊಟ್ಟು ಹೋಗಿಬಿಟ್ಟಿದ್ದಾನೆ; ಜ್ಞಾನವನ್ನು ಎಲ್ಲರಿಗೂ ಮುಕ್ತವಾಗಿ ಹಂಚಲು ಅವನು ರೂಪಿಸಿದ ಗೆರಿಲ್ಲಾ ಮಾದರಿಯ ಹೋರಾಟ, ಮುಕ್ತ ಮಾಹಿತಿ ಸಂವಹನೆಯ ಚಳವಳಿ ಎದುರಿಸಬೇಕಾದ ಸವಾಲುಗಳನ್ನು ನಿರೂಪಿಸಿದೆ. ಆರೋನನ ಬಹುಕಾಲದ ಒಡನಾಡಿಯಾಗಿದ್ದ ಬರ್ನರ್ ಲೀ, ಅವನ ಸಾವಿನ ಬಗ್ಗೆ ಬರೆದ ಶೋಕ ಸಂದೇಶ, ಅವನ ಬದುಕು ಮತ್ತು ಸಾಧನೆಗಳನ್ನು ಒಟ್ಟಂದದಲ್ಲಿ ಹೇಳುತ್ತದೆ: "ಆರೋನ್ ತೀರಿಕೊಂಡಿದ್ದಾನೆ. ಅಂತರ್ಜಾಲ ಜಗತ್ತಿನ ಚಾರಣಿಗರೇ ನಾವು ಬುದ್ಧಿಶಾಲಿ ಪಿತಾಮಹನನ್ನು ಕಳೆದುಕೊಂಡಿದ್ದೇವೆ. ಜ್ಞಾನವನ್ನು ಮುಕ್ತಗೊಳಿಸಲು ಉಳ್ಳವರ ತಿಜೋರಿಗೆ ಕನ್ನಹಾಕುವ ಚಳವಳಿಗಾರರೇ ನಾವು ಸಂಗಾತಿಯೊಬ್ಬನನ್ನು ಕಳೆದುಕೊಂಡು ನಿಶಕ್ತರಾಗಿದ್ದೇವೆ. ಜಗದೆಲ್ಲ ತಾಯಿ-ತಂದೆಯರೇ ನಮ್ಮ ಮಗುವನ್ನು ಕಳೆದುಕೊಂಡಿದ್ದೇವೆ.. ಎಲ್ಲರೂ ಕಣ್ಣೀರು ಹಾಕೋಣ."

ಆರೋನನ ಬದುಕಿನ ತೀವ್ರತೆ ದಂಗುಹೊಡಿಸುವಂಥದ್ದು: 1997ರಲ್ಲಿ ಅವನಿಗಿನ್ನೂ 11 ವರ್ಷ. ಇಂಟರ್ನೆಟ್ ತಂತ್ರಜ್ಞಾನದ ಅನಂತಾನಂತ ಸೃಜನಶೀಲ ಸಾಧ್ಯತೆಗಳನ್ನು ನಿರೂಪಿಸುವ ಬರ್ನರ್ ಲೀಯ 'ವೇವಿಂಗ್ ವೆಬ್' ಪುಸ್ತಕ ಓದಿ; ಆರೋನ್ ಇಂಟರ್ನೆಟ್ ಪ್ರೋಗ್ರಾಮುಗಳನ್ನು ಕಲಿತು ಬರೆಯಲು ಶುರುಮಾಡಿದ. 2000ದ ಹೊತ್ತಿಗೆ ಇವತ್ತು ವೆಬ್‌ಸೈಟುಗಳಲ್ಲಿ ಹೊಸ ಮಾಹಿತಿ ಬರುತ್ತಿದ್ದ ಹಾಗೆಯೇ 'ಇಗೋ ನೋಡು. ನಿನ್ನ ಆಯ್ಕೆಯ ಸೈಟಲ್ಲಿ ನೀನು ಬಯಸುವ ಹೊಸ ವಿಷಯ ಬಂದಿದೆ' ಎಂದು ಅನಾಮತ್ತಾಗಿ ಬಳಕೆದಾರನಿಗೆ ತಿಳಿಸುವ RSS2.0 ತಂತ್ರಜ್ಞಾನದ ಮೂಲ ಪ್ರೋಗ್ರಾಮನ್ನು ಅವನು ಬರೆದಿದ್ದ. ಆ ಕಾರಣಕ್ಕಾಗಿಯೇ ಇದರ ಹಳೆಯ ಅವತಾರ RSS1.0 ತಂತ್ರಜ್ಞಾನ ರೂಪಿಸುವ ತಂಡಕ್ಕೆ ಅವನನ್ನು ಸೇರಿಸಿಕೊಂಡರು. ಆಗಿನ್ನು ಅವನಿಗೆ ಹದಿನಾಲ್ಕು ವರ್ಷ. ಆರೋನ್ ಶಾಲೆ ಬಿಟ್ಟ. ಇಂಟರ್ನೆಟ್ ತಂತ್ರಜ್ಞಾನ ವಲಯದಲ್ಲಿ ತೊಡಗಿಸಿಕೊಂಡ. ಒಂದೇ ವರ್ಷದಲ್ಲಿ ಅವನೆಂಥ ಮೇಧಾವಿ ಅಂತ ಈ ವಲಯದಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕೆಯ ದಿಗ್ಗಜರಿಗೆ ಗೊತ್ತಾಗಿ ಹೋಯ್ತು. 2002ರಲ್ಲಿ ಜಗತ್ತಿನಾದ್ಯಂತ ಜ್ಞಾನ ಸಂಪನ್ಮೂಲಗಳನ್ನು ದಾನರೂಪದಲ್ಲಿ ಪಡೆದು ಮುಕ್ತವಾಗಿ ಇಂಟರ್ನೆಟ್ ಮೂಲಕ ಪೂರಿಸುವ ಧ್ಯೇಯವುಳ್ಳ 'ಕ್ರಿಯೇಟಿವ್ ಕಾಮನ್ಸ್' ಸಂಸ್ಥೆಯ ಸ್ಥಾಪಕ ಸದಸ್ಯನಾದ. ಈ ನಡುವೆ ನೋಮ್ ಚೋಮ್‌ಸ್ಕಿ ಮತ್ತು ಡೇವಿಡ್ ಹಾರ್ಮನರ ವಿಖ್ಯಾತ ಕೃತಿ 'ಮ್ಯಾನುಫ್ಯಾಕ್ಚರಿಂಗ್ ಕನ್ಸೆಂಟ್'ನ್ನು ಆಧರಿಸಿದ ಡಾಕ್ಯುಮೆಂಟರಿ ಸಿನಿಮಾ ನೋಡಿದ. ಚೋಮ್‌ಸ್ಕಿಯ 'ಅಂಡರ್ ಸ್ಟ್ಯಾಂಡಿಂಗ್ ಪವರ್' ಪುಸ್ತಕ ಓದಿದ. ಅಮೆರಿಕದ ಸಮಾಜ ವ್ಯವಸ್ಥೆಯ ಬಗ್ಗೆ ಅವನಿಗಿದ್ದ ಕಣ್ಣೋಟವೇ ಕ್ರಾಂತಿಕಾರಕವಾಗಿ ಬದಲಾಯಿತು. ಉಳ್ಳವರ ಲಾಭಕ್ಕಾಗಿಯೇ ಸರಕಾರ ಕಾಪಿರೈಟ್ ಕಾಯ್ದೆಗಳನ್ನು ರೂಪಿಸುತ್ತದೆ ಎಂದು ಆರೋನ್‌ಗೆ ಗೊತ್ತಾಯ್ತು, 2012ರಲ್ಲಿ ಅಮೆರಿಕದ ಸಂಸತ್ತಿನಲ್ಲಿ SOPA (STOP ONLINE PIRACY ACT) ನ್ನು ಮಂಡಿಸಿ ಇಂಟರ್ನೆಟ್ಟಿನಲ್ಲಿ ಮುಕ್ತ ಮಾಹಿತಿ ಸಂವಹನಕ್ಕೆ ಕಡಿವಾಣ ಹಾಕಲು ಪ್ರಯತ್ನಿಸಲಾಯಿತು. ಇದರ ವಿರುದ್ಧ ಮುಕ್ತ ತಂತ್ರಜ್ಞಾನ ಚಳವಳಿಗಾರರು ಆಂದೋಲನ ನಡೆಸಿದರು; ಆರೋನ್ ಈ ಚಳವಳಿಯ ಮುಂಚೂಣಿಯಲ್ಲಿದ್ದ. ಗೂಗಲ್, ವಿಕಿಪೀಡಿಯಾದಂಥ ಸಂಸ್ಥೆಗಳೂ ಈ ಕಾಯ್ದೆಯನ್ನು ವಿರೋಧಿಸಿದವು.




ಕೊನೆಗೆ ಆ ಕಾಯ್ದೆಯನ್ನು ಕೈಬಿಡಲಾಯಿತು. ಆಗ ಆರೋನ್ "ಇದು ಮೊದಲ ಹೆಜ್ಜೆ ಮಾತ್ರ. ಈಗಾಗಲೇ ಗೂಗಲ್‌ನಂಥ ಸಂಸ್ಥೆಗಳು ಈ ವಿಜಯವ ತಮ್ಮದಾಗಿಸಿಕೊಳ್ಳಲು, ತಮ್ಮ ಲಾಭಕೋರತನಕ್ಕೆ ಕುಮ್ಮಕ್ಕಾಗುವಂ ಉಪಯೋಗಿಸಿಕೊಳ್ಳಲು ಹವಣಿಸುತ್ತಿವೆ. ನಾವು ಈ ಚಳವಳಿಯನ್ನು ಹಲ ವಿಧಗಳಲ್ಲಿ ತೀವ್ರಗೊಳಿಸಬೇಕು. ಇಲ್ಲದಿದ್ದರೆ ಪ್ರಭುತ್ವ ನಮ್ಮ ಬಾಯಿಕಟ್ಟಿಹಾಕುತ್ತದೆ" ಎಂದು ಹೇಳಿದ.

ಆದರೆ ಈ ಮೇಲಿನ ಮಾತುಗಳಲ್ಲಿ ಕಾಣುವಷ್ಟು ಎಚ್ಚರ ಸಂಯಮ ಚಳವಳಿಗಾರ ಆರೋನನ ಒಳಗೆ ತಳಮಳಿಸುವ, ಏಕಾಂಗಿ ಗೆರಿಲ್ಲಾ ಮಾದರಿಯ ಸೆಣಸುವ ರಮ್ಯ ಹುಡುಗನೊಬ್ಬನಿದ್ದ. public.org ಅನ್ನೋ ವೆಬ್‌ಸೈ ಮಾಡಿಕೊಂಡಿದ್ದ ಕಾರ್ಲ್ ಮಲ್ಮುಡ್, ಅಮೆರಿಕದ ನ್ಯಾಯಾಲಯ ದಾಖಲೆಗಳನ್ನು ಇಂಟರ್ನೆಟ್ಟಿನಲ್ಲಿ ಕಾಸು ಕೊಟ್ಟು ಪಡೆಯುವ ವ್ಯವಸ್ಥೆಯ ಪ್ರಶ್ನಿಸಿ ಹೋರಾಡತೊಡಗಿದ. ಆರೋನ್ ಅವನ ಜೊತೆ ಸೇರಿದ. ಫಲವಾಗಿ 2008ರ ಸೆಪ್ಟಂಬರ್ ತಿಂಗಳಲ್ಲಿ ನ್ಯಾಯಾಲಯದ ದಾಖಲೆಗಳ ಅಮೆರಿಕದ 17 ಗ್ರಂಥಾಲಯಗಳ ಕಂಪ್ಯೂಟರ್ ಜಾಲದಲ್ಲಿ ಹಾಕಿ, ಒಂದು ತಿಂಗಳ ಕಾಲ ಮುಕ್ತವಾಗಿ ನಕಲು ಮಾಡಿಕೊಳ್ಳಬಹುದಾದ ವ್ಯವಸ್ಥೆಯ ಪ್ರಯೋಗಾರ್ಥ ಮಾಡಲಾಯಿತು. ಮಲ್ಮುಡ್ ಆದಷ್ಟು ದಾಖಲೆಗಳನ್ನು ಸಂಗ್ರಹಿ ಎಂದು ಮುಕ್ತ ಮಾಹಿತಿ ಚಳವಳಿಗಾರರಿಗೆ ಮನವಿ ಮಾಡಿದ. ಆರೋನ ದಾಖಲೆಗಳು ನಿರಂತರವಾಗಿ, ತನಗೆ ತಾನೆ ನಿಗದಿತ ಸ್ಥಳದಲ್ಲಿ ಬಂದುಬೀಳುವಂ ಮಾಡುವ ಒಂದು ಪ್ರೋಗ್ರಾಮ್ ಬರೆದ. ಸತತ ಇಳಿಸಿ ನ್ಯಾಯಾಲಯಗ ಕಾಲುವಾಸಿ ದಾಖಲೆಗಳನ್ನು ಮೂರು ವಾರಗಳಲ್ಲಿ ಪಡೆದುಬಿಟ್ಟಿದ್ದ! ವೇಗ ನ್ಯಾಯಾಲಯಗಳ ಕಂಪ್ಯೂಟರ್ ಜಾಲ ನಿರ್ವಾಹಕರನ್ನು ಕಂಗೆಡಿಸಿತು ಯಾರೋ ತಮ್ಮ ಭದ್ರತೆಯ ಕೋಟೆಯನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾ ಎಂದು ದೇಶದ ಉನ್ನತ ತನಿಖಾ ದಳ ಎಫ್.ಬಿ.ಐ.ಗೆ ದೂರು ನೀಡಿದರು ಎಫ್.ಬಿ.ಐ. ತನಿಖೆ ನಡೆಸಿ, ಇದು ಆರೋನ್ ಸ್ವಾರ್ಟ್ಜ಼ ಕೆಲಸ ಎಂದು ವರದಿ ನೀಡಿತು. ಆದರೆ ಮುಕ್ತ ನಕಲಿಗೆ ಅವಕಾಶ ಇತ್ತಾದ್ದರಿಂದ ಕೇಸು ಹಾಕುವ ಹಾಗಿರಲಿಲ್ಲ. ಎಫ್.ಬಿ.ಐ. ಆರೋನ್ ಮೇಲೆ ಕಣ್ಣಿಟ್ಟಿತು. 2011ರ ಪ್ರತಿಷ್ಠಿತ MIT ಯ ಜಾಲದಿಂದ JSTOR ತಾಣಕ್ಕೆ ಕನ್ನ ಹಾಕಿ ಪ್ರಕರಣ ನಡೆಯಿತು. ಅವನ ಮೇಲೆ 35 ವರ್ಷಗಳ ಕಾಲ ಸೆರೆಮನೆ ತಳ್ಳಬಹುದಾದ 'ವೈರ್ ಅಂಡ್ ಕಂಪ್ಯೂಟರ್ ಫ್ರಾಡ್' ಅಡಿ ಕೇಸು ಹಾಕಿದರು ಅಧ್ಯಕ್ಷ ಒಬಾಮಾಗೆ 25000 ಜನ ಕೇಸು ಕೈಬಿಡುವಂತೆ ಮನವಿ ಮಾಡಿದರು ಅಮೆರಿಕ ಸಂವಿಧಾನ ಪ್ರಕಾರ ಅಂತಹ ಅಧಿಕಾರ ಅಧ್ಯಕ್ಷರಿಗಿದೆ. ಆದ ಒಬಾಮಾ ಮನವಿಯನ್ನು ಅಂಡಡಿ ಹಾಕಿ ಕೂತ.

ಆರೋನ್ ಹೇಡಿಯೋ? ತಂತ್ರಗಾರಿಕೆ ಅರಿಯದ ಭಾವುಕನೋ ಗೊತ್ತಿಲ್ಲ, ಆದರೆ ಆರೋನ್ ದುರ್ಬಲರು ನ್ಯಾಯ ಕೇಳಿ ಎದ್ದು ನಿಂತ ಪ್ರಭುತ್ವ ಎಷ್ಟು ಹೆದರುತ್ತದೆ, ದುರ್ಬಲರಿಗೆ ಅವನು ಹೋರಾಟ ಮಾದರಿಯಾಗದಂತೆ ತುಳಿಯಲು ಹೇಗೆ ಉತ್ಸುಕವಾಗುತ್ತದೆ ಅನ್ನೋದನ್ನು ಮಾತ್ರ ತೋರಿ ಹೋಗಿದ್ದಾನೆ. ಅವನ ಚಿತ್ರ ಪಾರದರ್ಶಕವಾಗಿದೆ. ಅದ ಮೂಲಕ ನನಗೆ ನಾನು ಒಡನಾಡಿದ, ಒಡನಾಡುತ್ತಿರುವ ಚಳವಳಿಗಾರರು ಕಾಣುತ್ತಿದ್ದಾರೆ. ಇದು ಅವನ ಸಾವಿನ ಕಣ್ಣೀರಿನಿಂದ ಮಂಜಾದ ಕಣ್ಣು ಕಾಣು ದೃಶ್ಯವಾದರೂ ಅಡ್ಡಿ ಇಲ್ಲ. 'ಲಾಂಗ್ ಲಿವ್ ಆರೋನ್'.

ಬುದ್ಧ



ಆಸೆಗಳ ಸಂತೆಯೊಳಗೆ
ಮುಸ್ಸಂಜೆ ಬೆಳಕಲ್ಲಿ
ಬದುಕು ಚಿತ್ತಾರದ
ಚಿತ್ರವೆಂದು ಭಾವಿಸಿದ ಬುದ್ಧ

ಮಗದೊಮ್ಮೆ ನಕ್ಕು,
ಜಂಗು ಹಿಡಿದ ಕತ್ತಿ ಹಿಡಿದು,
ಕನಸಿನಂಗಳದ
ಚಿತ್ರವಿಚಿತ್ರ ಬೆಳಗನ್ನು ನಿರೀಕ್ಷಿಸಿದ್ದ

ಒಲವಿನ ಹೊಲದಲ್ಲಿ
ಬೀಸುವ ಬಯಲು ಗಾಳಿಗೆ,
ಮೈಯೊಡ್ಡಿ ಮುಂಗಾರಿನ
ಹನಿ ಮುತ್ತಾಗಲೆಂದು
ಬಯಸಿದ ಬುದ್ಧ

ಬದುಕಿನ ದಿಬ್ಬಣಕೆ
ನಿಜದ ನಿಲುವು ತಿಳಿಸಿ
ಮರೆವ ಮೊದಲೇ
ಯುಗಧರ್ಮ ಪಾಲಿಸಿ
ಆತ್ಮ ಸುಖ ಅನುಭವಿಸಿ
ಸಾವಿಗಂಜದ ಸಾಧಕನಾಗಿದ್ದ

ಪುಟ್ಟರಾಜಕುಮಾರ ಬುದ್ಧ
ಹಿಮಾಲಯದ ನಿಶ್ಚಲ ಮೌನದ
ಗಡಿದಾಟಿ ವರ್ಣಮಯ
ಜಗವ ಚುಂಬಿಸಿ, ನಿತ್ಯಸತ್ಯಗಳ
ಮರೆತು, ತೂತಿಟ್ಟ ಕುಂಭದೊಳಗೆ
ನೀರಿಟ್ಟು ತೂಗಲೆತ್ನಿಸಿದ

ತ್ರಿವೇಣಿ ಸಂಗಮದ ಮುಂದೆ
ನಿಂತು, ಮಹಾ ಪ್ರಳಯದ
ಅಪರೂಪದ ದರ್ಶನ
ಕಂಡ ಬುದ್ಧ ಜ್ಞಾನದ ಬೆಳಕಲ್ಲಿ ಅಜ್ಞಾನವ
ಹೊಡೆದೋಡಿಸಿದೆನೆಂಬ
ಭ್ರಮೆಯಲ್ಲಿ ಮಹಾ
ಪುರುಷನಾಗಿ ಹೊರ ಹೊಮ್ಮಿದ್ದ

ಅಹಿಂಸೆಯ ನುಡಿಮುತ್ತು
ಕಾಲಗರ್ಭಕೆ ತಳ್ಳಿದ ಬುದ್ಧ
ನಂದಿ ಹೋಗದ ದೀಪಗಳಿಗೆ
ಜ್ಞಾನದ ಎಣ್ಣೆ ಸುರಿದು
ಬದುಕಿಗೆ ಖಾಲಿಪುಟದ
ಕಥೆ ಬರೆದು ಮೌನಿಯಾದ.

● ಡಾ. ಡಿ.ಸಿ. ರಾಜಪ್ಪ



ಈ ಶತಮಾನದಲ್ಲೇ ಇಂತ ತಿಥಿ ನೋಡಲಿಲ್ಲ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಈ ಶತಮಾನದಲ್ಲೇ ಇಂತ ತಿಥಿ ನ್ಯಡದಿಲ್ಲ ಬುಡು" …ಕೊಂಡು ಉಗ್ರಿ, ಜುಮ್ಮಿ ಬಂದರು.

…ಾರಿ ಜನ ಸೇರಿತ್ತೆ?" ಎಂದ ಕಾಳಮಾವ.

…ಸದ ಮ್ಯಾಲೆ ಜನಸಂಕೆ ಜಾಸ್ತಿಯಾಗ್ಯದೆ ಕಣಮಾವ. …ಚುಂಚನಗಿರಿ ಬೆಟ್ಟದ ಮ್ಯಾಲೆ ನಿಂತಗಂಡು ನೋಡಿದೆ …ಾವ. ಎತ್ತ ನೋಡಿದ್ರು ಜನ. ಅಷ್ಟು ಜನ ಸೇರಿದ್ರು" … ಜುಮ್ಮಿ.

…ಡುಗೆ ಚನ್ನಾಗಿ ಮಾಡಸಿದ್ರೆ?"

…ರ್ಜರಿಯಾಗಿ ಮಾಡಿಸಿದ್ರು. ಅದು ಮೂರು ನಾಕು …ಲ್ಲಿ ಮಾಡಿಸಿದ್ರು. ಅಂಗೆ ಊಟ ಮಾಡೋರಿಗೆ …ಲಾಗಿತ್ತು" ಎಂದ ಉಗ್ರಿ. ಆಗ ಕಿಸಕ್ಕೆಂದು …ದ ಸೀರ ಏನೋ ಹೇಳಲು ತವಕಿಸಿದ.

…ದ್ಯಾಕೊ ಮಾವ ನಗತಿ?" ಎಂದಳು ಜುಮ್ಮಿ.

…ಈ ಸ್ವಾಮಿಗಿಂತ, ಹಿಂದಿನ ಸ್ವಾಮಿ ಇದ್ರು …ು, ಅವುರ ತಿಥಿಗೆ ನಾನು ಇಲ್ಲಿಂದ …ಹೋಗಿದ್ದೆ ಕಂಡ್ಯ. ಹೋದರೇನು ಮಾಡ್ತೀ. …ಕಾರ್ಯ ಮಾಡೊರಿಲ್ದೆ ಊಟವೇ ಸಿಗಲಿಲ್ಲ, …ಮಾತ್ರ ಸರಿಯಾಗಿ ಮಾಡಿ ಮಡಗಿದ್ರು. …ಜೊನ್ನೆ ತಗಂಡು ಅವುರೆಕಾಳ ಸಾರ ಮೂರು …ಕುಡುದು ಊರಿಗೆ ಬಂದೆ ಅತ್ತಗೆ. ಆದ್ರೆ …ತಿ ಮಾತ್ರ ಸ್ರೀಮಂತ ಮನೆ ಮದುವೆಲಿ …ಗಾಯ್ತು ಕಂಡ್ಯ" ಎಂದ.

…ಡುಗೆ ಯಾರು ಮಾಡಿಸಿದ್ರೂ?"

…ನ್ಯಾರು ಮಠದೋರೆ ಮಾಡಿಸಿರತರೆ. ಅದ್ಕೆ …ದ್ದು ಈ ಶತಮಾನದಲ್ಲಿ ಇಂತ ತಿಥಿ …ರಲಿಲ್ಲ ಅಂತ."

…ಈ ಶತಮಾನ ಬಂದು ಇನ್ನ ಹನ್ನೆರಡೊರ್ಸ …ಕೊ ಉಗ್ರಿ. ಇನ್ನು ಯಂತ್ಯಂಥಾ ಗಟಗಳವೆ. … ತಿಥಿ ಯಂಗಾಯ್ತದೆ ನೋಡನಿರು" …ಕೊಂಡು ವಾಟಿಸ್ಸೆ ಬಂದ.

…ದ್ರು ಇಂತ ತಿಥಿ ಯಾರು ಮಾಡ್ತರೋ?"

…ದ್ದಗಂಗೆ ಸ್ವಾಮಿ ತೀರಿಕಂಡಾಗ ಮಾಡಬವುದು. …ರಣದಲ್ಲಿ ನಮ್ಮ ದ್ಯಾವೇಗೌಡ್ರು ತೀರಿಕಂಡಾಗ …ವುದು. ನಾನ್ಯಾಕೇಳಿದೆ ಅಂದ್ರೇ ಆ ಕುಮಾರಣ್ಣ …ಗಿರಿ ಸ್ವಾಮಿ ತಿಥಿಲಿ ರಿಹರ್ಸಲ್ ತಗಂಡಿರದ್ರಿಂದ … ದೊಡ್ಡ ದೊಡ್ಡ ತಿಥಿಗಳೇ ನಡದೋಗಬವುದು."


…ದೇನೋ ನಿಜಬುಡು. ಮಠಕಿಂತ ಮಠ ದೊಡ್ಡದು. …ುರಾರೇ ತಿಥಿ ಮಾಡಿದ್ರು ಚುಂಚನಗಿರಿಗೆ ಬಂದಷ್ಟು …ರದಿಲ್ಲ, ನೋಡಿದಲ್ಲ ಯಲ್ಲಾ ಪಾರ್ಟಿಯೋರು … ಬಂದು ಕುಂತಿದ್ರು."

…ೋಡಿದೆ ಕಣೊ ಉಗ್ರಿ. ಯಲ್ಲಾ ಪಾರ್ಟಿಯೋರು …ಟಿಮ್ಯಾಲೆ ಬಂದು ಕೂತಿದ್ರು. ಪಾಪ ಹೊಸ ಸ್ವಾಮಿ …ನಡುವೆ ಹುಲಿಗಳ ಮದ್ಯದಲ್ಲಿ ಜಿಂಕೆ ಸಿಗಾಯ್ಕಂಡಂಗೆ ಕುಂತಿದ್ರು."

"ದ್ಯಾವೇಗೌಡ್ರ ಮುಖದಲ್ಲಿ ಯಾವ ದುಃಖನೂ ಇರಲಿಲ್ಲಪ್ಪ."

"ಯಾಕಿರಲಿಲ್ಲ ಗೊತ್ತೇನೊ? ಸ್ವಾಮಿಗಳು ಇರೋವರಿಗೂ ಅವುರಲ್ಲಿಗೆ ಬರಕ್ಕಾಗಲಿಲ್ಲ. ಈಗ ಸಲೀಸಾಗಿ ಬಂದು ಚಿಕ್ಕ ಸ್ವಾಮಿಗಳಿಗೆ ಆಶೀರ್ವಾದ ಮಾಡಿ ಹೋಗಬವುದು. ಅದ್ಕೆ ಒಂಥರಾ ಉಸ್ತುವಾರಿ ಸ್ವಾಮಿತರ ಪೋಸು ಕೊಟಗಂಡು ಕುಂತಿದ್ರು. ಆದ್ರು ದೊಡ್ಡ ಸ್ವಾಮಿಗಳು ದ್ಯಾವೇಗೌಡ್ರು ಮತ್ತೂ ಅವುರ ಮಕ್ಕಳತ್ರ ಯಂಗೆ ನಡಕಬೇಕು ಅಂತ ಹೇಳಿಬಿಟ್ಟು ಹೋಗಿದ್ದರಂತೆ."

"ಅದೇನೇಳಿದ್ರೂ?"



"ಈ ಸ್ವಾಮಿ ಎಂ.ಟೆಕ್‌ನಲ್ಲಿ ರ್‍ಯಾಂಕ್ ಸ್ಟೂಡೆಂಟು. ಚೆನ್ನಾಗಿ ಇಂಗ್ಲಿಷ್ ಬತ್ತದೆ. ಅದ್ಕೆ ರೇವಣ್ಣ, ಕುಮಾರಸ್ವಾಮಿ ಮಠಕ್ಕೆ ಬಂದಾಗ ವಳ್ಳೆ ಇಂಗ್ಲಿಸಲ್ಲಿ ಮಾತಾಡಿಬುಡಿ, ಆಗವುರು ಜಾಸ್ತಿ ಮಾತಾಡದೆ ವಂಟೋಯ್ತರೆ ಅಂತ ಹೇಳಿದ್ದರಂತೆ."

"ಅಂಗರೆ ಕುಮಾರಸ್ವಾಮಿಗೆ ಇಂಗ್ಲಿಸ್ ಬರಕ್ಕುಲವೇನ್ಲಾ?"

"ಕನ್ನಡನೇ ಸರಿಯಾಗಿ ಬರದಿಲ್ಲವಲ್ಲಕ್ಕ. ಅವುನ ಮಾತಾಡಿದ ಸಾಲು ತಗೊಂಡು ಜೋಡಿಸಿಗಂಡು ನಾವೇ ಒಂದು ವಾಕ್ಯ ಮಾಡಿಕಬೇಕು. ಅಂಥೋನು ಇಂಗ್ಲಿಸ್ ಮಾತಾಡಿದ್ರೆ, ಹೋಗ್ಲಿ ಸುಮ್ಮನಿರಯ್ಯ ಅತ್ತಗೆ ಅನ್ನಂಗಾಯ್ತದೆ."

"ಅಂಗರೆ ರೇವಣ್ಣನಂತೂ ಕೇಳದೆ ಬ್ಯಾಡ."

"ಅಂಗೇನೂ ಇಲ್ಲ. ಅವುನು ಕನ್ನಡ ಮಾತಾಡುವಾಗ ಪದಗಳಿಗೆ ತಡಕಾಡದಿಲ್ಲ. ಆದ್ರೆ ಇಂಗ್ಲಿಸ್ ಮಾತ್ರ ನಾನೇ ಪರವಾಗಿಲ್ಲ, ಮೈ ಫಾದರ್ ಕಂ, ಐ ಗೊ, ಮೀಲ್ಸ್ ರೆಡಿ ಅಂತನೆ. ರಸ್ತೆ ಚನ್ನಾಗಿಲ್ಲ ಅಂದ್ರೆ ರೋಡ್ ಪುಲ್ ಬಟನ್ ಅಂತನೆ. ಅದೇ ಒಂಥರಾ ಮಜ."

"ಅಂಗಂದ್ರೇನ್ಲ?"

"ರೋಡ್ ಪುಲ್ ಬಟನ್ ಅಂದ್ರೆ, ರೋಡಿನ ತುಂಬ ಗುಂಡಿನೆ ಅವೆ ಅಂತ. ನಾನ್ಯಾವ ಲ್ಯಕ್ಕ ಅನ್ನಕ್ಕೆ ವಾಟ್ಯೆ ಮ್ಯಾತಮೆಟಿಕ್ ಅಂತನೆ. ನಾನು ಮಾತಾಡಿದ್ರಲ್ಲಿ ತಪ್ಪಿರಬವುದೆ ಅಂತ ಇವತ್ತಿಗೂ ಯೋಚನೆ ಮಾಡಿಲ್ಲ."

"ಅಂಗೋಚನೆ ಮಾಡೋದೆ ಆಗಿದ್ರೆ, ರಾಜಕಾರಣಕ್ಕೆ ಯಾಕೆ ಬತ್ತಿದ್ದಾ. ಒಂದಿಷ್ಟು ಹಸ ಯಮ್ಮೆ ಕಟಿಗಂಡು ಡೈರಿಗೆ ಹಾಲಾಕತಿದ್ದ ಅಲವೆ" ಎಂದ ಉಗ್ರಿ.

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಈ ಬಿ.ಜೆ.ಪಿ ರಾಜಕಾರಣಿಗಳಿಗೆ ಓಲಿಸಿದರೆ ರೇವಣ್ಣನೇ ಪರವಾಗಿಲ್ಲ ಅನ್ನಸ್ತದೆ. ಅದರಲ್ಲೂ ಆ ಸ್ಪೀಕರ್ ಬೋಪಯ್ಯನಂಥಾ ಮನುಷ್ಯನನ್ನು ಇಲ್ಲಿವರಿಗೂ ನೋಡಲಿಲ್ಲ."

"ಅಂಗನ್ನಬಾರದು ಕಣೊ ವಾಟಿಸ್ಸೆ. ಅವುನು ವಿಧಾನಸಭೆ ಸ್ಪೀಕರ್ರು."

"ವಿಧಾನಸಭೆ ಸ್ಪೀಕರ್ರಾದ್ರೆ ವಿಧಾನಸಭೆ ವಳಗಿರಬೇಕು ಕಣೊ. ಅದು ಬಿಟ್ಟು ತಲೆ ಮರಿಸಿಗಂಡು ತಿರಗದಲ್ಲಾ. ಒಂದು ಸತಿ ಸಿಲೋನ್ನಲ್ಲವುನೆ ಅಂದ್ರು, ಇನ್ನೊಂದು ಸತಿ ಆಸ್ಟ್ರೇಲಿಯಾದಲ್ಲಿ ತಿರುಗ್ತಾ ಅವುನೆ ಅಂದ್ರು. ಆಮ್ಯಾಲೆ ಕೊಡಗಿನ ಕಾಡಲ್ಲಿ ಅವುಸಿಗಂಡವುನೆ ಅಂದ್ರು. ವಿಧಾನಸಭೆ ಇತಿಹಾಸದಲ್ಲಿ ಇಂತ ಸ್ಪೀಕರ್ರೇ ಬಂದಿರಲಿಲ್ಲ ಕಣೊ. ಆ ಮನುಷ್ಯನಿಗೆ ಇನ್ನೂರ ಇಪ್ಪತ್ತನಾಲ್ಕು ಜನ ಎಮ್ಮೆಲ್ಗೆಗಳ ಅಧಿಪತಿ ಯಂಗಿರಬೇಕು ಅನ್ನೋದೇ ಗೊತ್ತಿಲ್ಲ ಕಣೊ. ಅವುನ ಮಕ ನೋಡಿದ್ರೆ ತಪ್ಪು ಮಾಡಿ ಪೊಲೀಸ್‌ನೋರಿಗೆ ಸಿಕ್ಕದಂಗೆ ತಿರುಗೋನಂಗೆ ಕಾಣ್ತನೆ."

"ಅಂಗರೆ ಪೊಲೀಸ್‌ನೋರಿಗೆ ಸಿಗಬೇಕಾದೋನೇನ್ಲ ಅವುನು?" ಎಂದ ಕಾಳಮಾವ.

"ಥೂ, ಮಾತಿಗೇಳಿದೆ ದೊಡಪ್ಪ, ಈ ಬಿ.ಜೆ.ಪಿ ಜನಕೆ ಹೇಳಿ ಮಾಡಿಸಿದಂಗವುನೆ. ಅದ್ಕೆ ಅಂಗಂದೆ. ಎಡೂರಪ್ಪನ್ನ ಸಪೋರ್ಟು ಮಾಡೋ ಎಮ್ಮೆಲೆಗಳು ರಾಜೀನಾಮೆ ಕೊಡ್ತೀವಿ ಅಂದ್ರೆ, ಇವುನು ಈಸಗಬೇಕೂ ಅಥವ ಕದ್ದು ಹೋಗಬೇಕೋ ಹೇಳು."

"ಅವುರ್‍ಯಾಕ್ ರಾಜಿನಾಮೆ ಕೊಡ್ತರೆ?"

"ಬಿ.ಜೆ.ಪಿ. ಬುಟ್ಟು ಕೆ.ಜೆ.ಪಿ. ಸೇರಬೇಕಾದ್ರೆ ರಾಜಿನಾಮೆ ಕೊಡ್ಬೆಬೇಕಾಯ್ತದೆ. ಅದ್ಕೆ ಅವುರು ರಾಜೀನಾಮೆ ಬರದ್ರೆ ಅದ ಈಸ್ಕಬೇಕು. ಇಲ್ಲಾ ಅಂದ್ರೆ ಇವುನು ಆಡಳಿತ ಪಕ್ಷ ಹೇಳಿದಂಗೆ ತಲೆಮರಿಸಿಗಂಡು ಕಾಲ ಹಾಕ್ತನೆ ಅಂತ ಅರ್ಥ."

"ಅವುನತಾನೆ ಏನು ಮಾಡ್ತನೊ ಪಾಪ. ಆಗ ಎಡೂರಪ್ಪ ಹೇಳಿದಂಗೆ ಕೇಳಿ ಸ್ಪೀಕರಿಗಿದ್ದ ಮರಿಯಾದಿನೆ ಕಳದಿದ್ದಾ. ಈಗ ಈಶ್ವರಪ್ಪ, ಅನಂತಕುಮಾರ, ಶೆಟ್ರು ಮಾತ ಕೇಳಿ ತಲಿಯೇ ಕೆಟ್ಟೊಗಿರಬೇಕು. ಅದ್ಕೆ ಅಂಗೆ ಮಾಡಿರಬೇಕು ತಗೊ. ಹಿಂದೆ ನಮ್ಮ ಕೆ.ಆರ್.ಪೇಟೆ ಕಿಸ್ಣನೂ ಹಿಂಗೆ ಮಾಡಿರಲಿಲ್ವೆ?" ಎಂದ ಉಗ್ರಿ.

"ನಿಜ ಕಣೊ ಉಗ್ರಿ. ಕೆ.ಆರ್.ಪೇಟೆ. ಕೃಷ್ಣನಿಗೆ ಜನ ಭಾಳ ರೆಸ್ಪೆಕ್ಟ್ ಕೊಡತಿದ್ರು. ರಸ್ತೆಲೋಯ್ತಾಯಿದ್ರೆ ಕೈಮುಗಿತಿದ್ರು. ಇವತ್ತು ಯಾರೂ ಬ್ಯಲೆ ಕೊಡದಿಲ್ಲ, ಯಾಕಪ್ಪ ಅಂದ್ರೇ, ಸ್ಪೀಕರ್ ಸ್ಥಾನ ಹಾಳು ಮಾಡಿದ ಅಂತ" ಎಂದ ವಾಟಿಸ್ಸೆ.


"ಕ್ಯಾರ್‌ಪೇಟೆ ಕಿಸ್ಣ ಈಗ ಎಮ್ಮೆಲ್ಲೆ ಅಲವೇನ್ಲೆ?"

"ಇಲ್ಲ ದೊಡಪ್ಪ, ಇದೇ ಬೋಪಯ್ಯನಂಗೆ ಸ್ಪೀಕರ್ ಸ್ಥಾನ ಹಾಳು ಮಾಡಿದ್ಕೆ ಜನ ಸೋಲಿಸಿಬಿಟ್ರು. ಈಗೇನಾಗ್ಯದೆ ಅಂದ್ರೆ, ಅವುನಿಂದ ಯಾವ ಕ್ಯಲಸ ಬೇಕೊ ಅದನ್ನ ಮಾಡಿಸಿಗಂಡಾಯ್ತು, ಇನ್ನ ಅವುನ ಸುದ್ದಿ ಯಾಕೆ ಅಂತ ಜೆ.ಡಿ.ಎಸ್.ನ ಫಾದರ್ ಅಂಡ್ ಸನ್ ನೆಗ್ಲೆಟ್ ಮಾಡಿಬುಟ್ಟಿದ್ದರಂತೆ. ಅದ್ಕೆ ಕಿಷ್ಣನಿಗೆ ರಾಜಕಾರಣ ಕಂಡ್ರೆ ವೈರಾಗ್ಯ ಬಂದದಂತೆ."

"ಈ ಕೃಷ್ಣಂದು ಇರಲಿ ಆ ಕೃಷ್ಣನ ಕತೆ ಏನಾಯ್ತೋ?"

"ಯಾರು ನಮ್ಮ ಡೆಂಟ್ಲು ಡಾಕ್ಟರ್ ಕೃಷ್ಣನಾ? ಪಾಪ ಅವುನು ಒಳ್ಳೆ ಮನಸ ಕಣೊ. ಜನಗಳ ಹಲ್ಲ ಚೆನ್ನಾಗಿ ನೋಡೋನು. ದುಡ್ಡನೆ ತಗತ್ತಿರಲಿಲ್ಲ. ಆದ್ರೆ ದ್ಯಾವೇಗೌಡ್ರ ಕಟ್ಟಾ ಅಭಿಮಾನಿ. ಅವುರು ಹಾಸನಕ್ಕೆ ಬತ್ತರೆ ಅಂದ್ರೆ ಶಾಪಿನ ಬಾಗಲಾಕಿ ಕಾಯ್ಕಂಡಿದ್ದು ಕತ್ತಿಗೆ ಹೂವಿನಾರ ಹಾಕಿ, ಕೈಗೆ ನಿಂಬೆಹಣ್ಣು ಕೊಡೋನು. ಅಂತ ನಿಷ್ಠಾವಂತನ್ನ ನಮ್ಮ ದೇವೇಗೌಡ್ರು ಕೆ.ಪಿ.ಎಸ್.ಸಿ ಮೆಂಬರ್ ಮಾಡಿದ್ರು. ತಾವು ಹೇಳಿದೋರ ಪಾಸು ಮಾಡ್ಲಿ, ತಾಸಿಲ್ದಾರ, ಎ.ಸಿ. ಮಾಡು ಅಂದ್ರು. ಅಂಗೆ ಮಾಡಿದ. ಹಾಗೆ ಕ್ಯಲಸ ಹ್ವಡದೋರಿಗೆ ದ್ಯಾವೇಗೌಡ್ರು ಕಡಿಯೋರು ಹೆಣ್ಣು ಕೊಟ್ಟು ಮದುವೆ ಮಾಡಿದ್ರು. ಇತ್ಲಾಗಿ ಅನ್ಯಾಯ ಆದೋರು ಕೋರ್ಟಿಗೆ ಹೋದ್ರು. ಕೋರ್ಟು ಅನ್ಯಾಯಾಗಿರದು ನಿಜ ಅಂತ ಡಾ. ಕೃಷ್ಣ ಅವರನ್ನು ಜೈಲಿಗಾಕ್ತು. ಮದುವೆ ಮಾಡಿಕಂಡೋರು ಸೋಬನ ಮಾಡಿಕಂಡು ಸರಕಾರಿ ಕೆಲಸದಲ್ಲಿ ಲಂಚ ವಡಕಂಡು ಸುಖವಾಗಿದ್ರೆ, ಕೃಷ್ಣ ಯಾರಿಗೂ ಮುಖ ತೋರಿಸದಂಗಾಗವುನೆ. ಯಂಗದೆ ನ್ಯಾಯ?" ■

ಇಂದ್ರಿಯಗಳ ಸಹಕಾರಿ



…ಏನನ್ನು ಕೊಟ್ಟರೂ ಅದನ್ನು ನೀಟಾಗಿ ಕತ್ತರಿಸಿ ಊಟದ ಟೇಬಲ್ ಮೇಲೆ ಇಡುವ ಗೃಹಿಣಿಯರಿದ್ದಾರೆ. …ಸಿನ ಹಣ್ಣನ್ನು ಚೂರುಚೂರು ಮಾಡಿ ಅದಕ್ಕೆ ಸಕ್ಕರೆ ಬೆರೆಸಿ, ಹಾಲು ಹಾಕಿ, ಜೇನುತುಪ್ಪ ಸೇರಿಸಿ ತಂದು ಒಂದು …ಚಾದೊಂದಿಗೆ ನನಗೆ ಕೊಟ್ಟರು; ಹಾಗೆಯೇ ಮಾವಿನ ಹಣ್ಣು, ಬಾಳೆಹಣ್ಣು ರಸಾಯನವಾಗಿ ಹೋಗಿದ್ದವು. …ಳ್ಳಿಯನ್ನು ಚೂರು ಮಾಡಿ ಇಟ್ಟಿದ್ದರು. ಸೌತೇ ಕಾಯಿ ಎಂತಹ ಗಾರಿಗೆ ಆಗಿತ್ತೆಂದರೆ ಅದು ಸೌತೇಕಾಯಿ …ೇ ಗೊತ್ತಾಗುವಂತಿರಲಿಲ್ಲ. ನಾನು ಅವನ್ನೆಲ್ಲ ನಾಲಗೆಗೆ ತಾಗಿಸಿ ರುಚಿ ನೋಡಿ, 'ಇವೆಲ್ಲ … ಇಷ್ಟವಿಲ್ಲ, ನೀವು ತಿನ್ನಿ' ಎಂದು ಬೇರೆಯವರ ಕಡೆಗೆ ಸರಿಸಿ ಕೂತುಬಿಟ್ಟೆ.

…ಯಾಕೆಂದರೆ ಹಣ್ಣುಗಳನ್ನು ತಿನ್ನುವ ಶೈಲಿಯಲ್ಲಿ ಕೂಡ ನಾನು ಹಳೇ ಕಾಲದವನು. …ನಹಣ್ಣು ಹೋಳುಗಳಾಗಿದ್ದಾಗ ನನಗೆ ಇಷ್ಟವಿಲ್ಲ; ಇಡೀ ಹಣ್ಣನ್ನು ತೊಳೆದು ಕೊಟ್ಟರೆ … ಮೂತಿಯನ್ನು ಕಚ್ಚಿ ಅದು ನಾಟಿಯಾಗಿದ್ದರೆ ಆ ತೂತಾದ ಮೂತಿಯಿಂದ ರಸವನ್ನು … ಸಿಪ್ಪೆಯನ್ನು ತೆಗೆದು ಒಳಗಿನ ತಿರುಳನ್ನು ತಿಂದು ವಾಟೆಗೆ ತಗುಲಿಕೊಂಡು, ಆ …ಯಲ್ಲಿ ನಾರಿದ್ದರೆ ಅದನ್ನು ಚೀಪಿ ಸಿಪ್ಪೆ, ವಾಟೆ ಎರಡನ್ನೂ ಎಸೆಯುವವನು. ನಾನು …ನಾಗಿದ್ದಾಗ ನನ್ನ ಜೊತೆಗಾರರಂತೆಯೇ ವಾಟೆಯನ್ನು ಮುಷ್ಟಿಯಲ್ಲಿ ಹಿಂಡಿ ರಸ ಹೀರುತ್ತಿದ್ದೆ. …ಮಾವಿನ ಹಣ್ಣಾಗಿದ್ದರೆ ಯಥಾಪ್ರಕಾರ ಮೂತಿಯಿಂದ ಶುರು ಮಾಡಿ, ಆದಷ್ಟು ಸಿಪ್ಪೆಯನ್ನು …ಯೊಂದಿಗೆ ತಿಂದು ವಾಟೆಯನ್ನು ತಿರುಳಿನಿಂದ ನಾಲಗೆಯಿಂದಲೇ ಬೇರ್ಪಡಿಸಿ ತಿನ್ನುವುದು …ಸ. ಇದೇನು ಅಂಥ ಬ್ರಹ್ಮವಿದ್ಯೆಯಲ್ಲ; ಚಿಕ್ಕಂದಿನಿಂದ ಬಂದ ಅಭ್ಯಾಸವೆನ್ನುವ ಜೊತೆಗೆ … ಇಡಿಯಾಗಿದ್ದಾಗಲೇ ಇಂದ್ರಿಯಗಳಿಗೆ ಹಿತ ಎನ್ನುವ ಅನುಭವ ಇದರಲ್ಲಿ ಸೇರಿಕೊಂಡಿದೆ. …ು ತಿನ್ನುವಾಗ ಅದರ ವಾಸನೆ, ಆಕಾರ, ಸ್ಪರ್ಶ, ರುಚಿ ಎಲ್ಲವೂ ನಮ್ಮ ಇಂದ್ರಿಯಗಳನ್ನು …ಗಿಸುತ್ತವೆ. ಮನುಷ್ಯರಲ್ಲಿ ಬಹು ನಿರ್ಲಕ್ಷ್ಯಕ್ಕೊಳಗಾದ ಇಂದ್ರಿಯ ಮೂಗು; ಆದರೆ ಅದು …ತ ಮುಖ್ಯವಾದ ಇಂದ್ರಿಯ ಎನ್ನುವುದು ಅನೇಕರಿಗೆ ಗೊತ್ತಿಲ್ಲ. ವಾಸನೆ ನೋಡುವ ಶಕ್ತಿ …ತವಾದರೆ ನಮ್ಮ ನಾಲಗೆ ರುಚಿ ಕಳೆದುಕೊಳ್ಳುತ್ತದೆ; ಮನಸ್ಸು ಮಂಕಾಗುತ್ತದೆ. …ಯಿಂದಲೇ ನಮ್ಮ ಪ್ರಿಯರನ್ನು ನಾವು ಮೊದಲು ಗ್ರಹಿಸುವುದು; ಲೈಂಗಿಕ ಕ್ರಿಯೆಯಲ್ಲಿ … ಇದು ಬಹುಮುಖ್ಯ, ಇದನ್ನು ನಿರ್ಲಕ್ಷಿಸಿ ನಾಲಗೆ, ಸ್ಪರ್ಶ, ನೋಟ ಯಾವುದೂ …ಗ್ಯವಾಗಿ ಇರುವುದಿಲ್ಲ.



ಹಲಸಿನ ಹಣ್ಣನ್ನು ನಾವು ಬರೀ ನೋಡುವುದಿಲ್ಲ; ವಾಸನೆಯಿಂದಲೇ 'ಇವತ್ತು ಹಲಸಿನ ಹಣ್ಣು ಮನೆಯಲ್ಲಿದೆ' ಎಂದು ಇಂದ್ರಿಯಗಳು ಹೇಳುತ್ತವೆ. ಹಲಸಿನ ತೊಳೆಯನ್ನು ಅದರ ವಾಸನೆ ಹೊರಟುಹೋಗುವಂತೆ ಕೊಚ್ಚಿಹಾಕಿದರೆ ಅದೊಂದು ತಿನಿಸು ಆಗಬಹುದೇ ಹೊರತು, ನಮ್ಮ ಹಲಸಿನ ಹಣ್ಣಿನ ನೆನಪು, ಕರಡಿ ಜೇನುತುಪ್ಪದೊಂದಿಗೆ ಹಲಸನ್ನು ಬಗೆದು ತಿನ್ನುವುದು... ಎಲ್ಲವೂ ಇಲ್ಲವಾಗುತ್ತದೆ. ನೆನಪನ್ನು ನಾವು ಅನೇಕ ಸಲ ಮಾಡಿಕೊಳ್ಳುವುದೇ ವಾಸನೆಯ ಮೂಲಕ; 'ಪೂರ್ವಜನ್ಮದ ವಾಸನೆ' ಎಂಬ ಮಾತನ್ನು ನೀವು ಕೇಳಿರಬಹುದು.

ಇಡೀ ಪೇರಲ ಹಣ್ಣು, ಈರುಳ್ಳಿ, ಬಿಕ್ಕೆ ಹಣ್ಣು ಸೌತೇಕಾಯಿ ಮುಂತಾದವನ್ನು ತಿಂದರೆ ಹಲ್ಲು 'ತಮಗೂ ಈ ತಿನ್ನುವ ಕ್ರಿಯೆಯಲ್ಲಿ ಸ್ಥಾನವಿದೆ' ಎಂದು ಗಟ್ಟಿಯಾಗುತ್ತವೆ. ಸೌತೇಕಾಯಿಯ ಚೂರನ್ನೊಮ್ಮೆ, ಇಡೀ ಸೌತೇಕಾಯಿಯನ್ನೊಮ್ಮೆ ಕಡಿದು ನೋಡಿ. ಸೌತೇಕಾಯಿಯನ್ನು ಕಚ್ಚಿದಾಗ ಅದರ ಸ್ವಾದ ಮೂಗನ್ನು ಆವರಿಸುತ್ತದೆ; ಅದೊಂದು ವಿಚಿತ್ರ ಅನುಭವ. ಹಾಗೆಯೇ ಕಬ್ಬಿನ ರಸ ಕಬ್ಬಲ್ಲ ಎಂಬ ಪ್ರಾಥಮಿಕ ವಿಷಯ ಕೂಡ ಅನೇಕರಿಗೆ ಗೊತ್ತಿರುವುದಿಲ್ಲ. ನಮ್ಮ ಕಡೆ ತಿನ್ನುವುದಕ್ಕೆಂದೇ ಇರುವಂತಿದ್ದ ರಸದಾಳಿ ಕಬ್ಬು ಬೆಳೆಯುತ್ತಿದ್ದರು. ಬೆಂಗಳೂರಲ್ಲಿ ಕಾಣುವ ಕಬ್ಬನ್ನು 'ಸರ್ಕಾರಿ ಕಬ್ಬು' ಎಂದು ನಾವು ಕರೆಯುತ್ತಿದ್ದೆವು. ತಿನ್ನುವುದಕ್ಕೆಂದೇ ಇದ್ದ ರಸದಾಳಿ ಕಬ್ಬು ಗೀರುಗೀರಿನ, ತುಂಬ ಮೃದುವಾದ, ಕಚ್ಚಿದರೆ ದ್ರವಿಸುವ ಕಬ್ಬು, ಅದನ್ನು ತಿಂದರೆ ನಾಲಗೆ ಸೀಳುತ್ತಿರಲಿಲ್ಲ; ಬಾಯಿ ನೋಯುತ್ತಿರಲಿಲ್ಲ. ರಸದಾಳಿ ಕಬ್ಬು ಈಗ ನೋಡಲೂ ಸಿಕ್ಕುವುದಿಲ್ಲ.

ಹಣ್ಣನ್ನೂ ಆದಷ್ಟೂ ಇಡಿಯಾಗಿ, ಹಣ್ಣಿಂದೇ ತಿನ್ನಬೇಕು. ಹಣ್ಣು ತಿನ್ನುವುದು ಬೇರೆ ಸಿಹಿ ತಿಂಡಿಯಂತಲ್ಲ; ಪ್ರಕೃತಿ ಸೃಷ್ಟಿಸಿದ ವಿಶಿಷ್ಟ ವಸ್ತು ಅದು. ಅದರ ವಾಸನೆ, ಆಕಾರ, ರುಚಿ ಸೊಗಡು ಎಲ್ಲವನ್ನೂ ಸವಿದರೆ ಆರೋಗ್ಯಕ್ಕೆ ಒಳ್ಳೆಯದು.

• ಜೂನ್ 3, 1998

ಬಿಜೆಪಿ ಹೆಸರು ಕೆಜೆಪಿ ಬಸರು ಇರಬೇಕಂತೆ!

'ಲಿಜ್ಜೆ ಇಲ್ಲದ ಅವನನ್ನು ವಾಪಸ್ಸು ಕಳಿಸಿ.'

ಇದನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?

ಹೇಳಿದ್ದು: ಮಾಜಿ ಮುಖ್ಯಮಂತ್ರಿ ಯಡ್ಯೂರಪ್ಪ

ಗುರಿ: ಹಾಲಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್.

ಸಂದರ್ಭ: ಹೀಗಿದೆ.

ರಾಜೀನಾಮೆ ಮಂತ್ರ ಜಪಿಸುತ್ತಿದ್ದ ಕೆಲವು ಶಾಸಕರು ಮಾಜಿಯವರ ನೇತೃತ್ವದಲ್ಲಿ ವಿಧಾನಸಭೆಯ ಅಧ್ಯಕ್ಷರ ಕೊಠಡಿಗೆ ಬಂದರು. ಆದರೆ... ಮದುವೆ ಗಂಡೇ ಇರಲಿಲ್ಲ. ಸಭಾಧ್ಯಕ್ಷರೇ ನಾಪತ್ತೆ!

ಬೆಟ್ಟವನ್ನೇ ಕಡಿದಿದ್ದರು. ಆದರೆ ಇಲಿಯೂ ಸಿಗಲಿಲ್ಲ!

ರೇಗಿತು ಮಾಜಿಗಳಿಗೆ.

ಅತ್ತೆಯ ಸಿಟ್ಟು ಕೊತ್ತಿ ಮೇಲೆ. ಮಾಜಿ ಸಿಟ್ಟು ಅಧಿಕಾರಿಗಳತ್ತ ಹರಿಯಿತು.

'ನೀವೇ ತೆಗೆದುಕೊಂಡು ಅವರಿಗೆ ತಲುಪಿಸಿ.'

'ನಮಗೆ ಆ ಅಧಿಕಾರ ಇಲ್ಲ.'

'ಹಾಗಂತ ಬರೆದು ಕೊಡಿ.'

'ಹಾಗೆ ಬರೆದು ಕೊಡುವಂತಿಲ್ಲ.'

ಮಾಜಿ ಮುಖ್ಯಮಂತ್ರಿಗೇ ಇಂತಹ ದಾರ್ಷ್ಟ್ಯದ ಮಾತು! ಅವರು ಹೇಳಿದ ಮೇಲೆ ಮುಗಿಯಿತು. ಅಧಿಕಾರ ಇಲ್ಲದಿದ್ದರೂ ತೆಗೆದುಕೊಳ್ಳಬೇಕು. ಅದು ನಮ್ಮ ಅಧಿಕಾರಿ ನಡವಳಿಕೆ! ಇಲ್ಲಿ ಎಲ್ಲವೂ ತಿರುವುಮುರುವು ಆಗಿದೆ.

ಸಹಿಸದಾದರು ಯಡ್ಯೂರಪ್ಪ.

ಮುಖ್ಯಮಂತ್ರಿ ಎಲ್ಲಿ?

ಅದು ಅವರ ಪ್ರಶ್ನೆ.

ಮುಖ್ಯಮಂತ್ರಿಯವರು ಗುಲ್ಬರ್ಗಾ ಪ್ರವಾಸದಲ್ಲಿದ್ದರು! ಅದೂ ಎಂತಹ ಸಮಯದಲ್ಲಿ? ಮಾಜಿಯವರು ಈಗಿನ ಸರ್ಕಾರಕ್ಕೆ ಬಹುಮತ ಇಲ್ಲ ಎಂದು ಸಾರಿಸಾರಿ ನುಡಿದಿದ್ದಾಗ! ಅದರ ಸಾಕ್ಷಾತ್ಕಾರಕ್ಕಾಗಿ ಶಾಸಕರೊಡನೆ ಬಂದಿದ್ದಾಗ! ಮಾಜಿ ಮಾತಿಗೆ ಸಂದ ಗೌರವ ಇದು! ಈ ಹಿಂದೆ ಇಂತಹದ್ದೇ ಮಾತನ್ನು ಹಲವು ಬಾರಿ ಹೇಳಿದ್ದರು ನಿಜ. ಡೆಡ್‌ಲೈನ್ ಹಾಕಿದ್ದೂ ನಿಜ. ಅನಂತಕುಮಾರ್ ಹೇಳಿದಂತೆ ಡೆಡ್‌ಲೈನ್‌ಗಳೆಲ್ಲ ಮಾಧ್ಯಮಗಳ ಹೆಡ್‌ಲೈನ್‌ಗಳಿಗೆ ಸೀಮಿತ ಆಗಿತ್ತು. ಅದೂ ನಿಜ. ಈ ಮಾತಿಗೆ ಪುಷ್ಟಿ ನೀಡುವಂತಿತ್ತು ಜಗದೀಶ್ ಶೆಟ್ಟರ್ ನಡವಳಿಕೆ!

ಮಾಜಿ ಮಾತಿಗೆ ಮನಸೋತು ಗುಲ್ಬರ್ಗಾದ ಮಹಾಜನತೆ ಹಾಲಿಯನ್ನು ಹೊರಹಾಕಿದರೆ?

ಜೆಲ್ಲೆ ಎಂಬುದು ಕೂಗುಬಂಡೆಯಾಯಿತು. ಅವರ ಮಾತು ಅವರಿಗೇ ಅಪ್ಪಳಿಸಿತು!

ಎಂತಹ ಅಪಮಾನ!

ಇದು ಆ ಮಾತಿನ ಸಂದರ್ಭ.

ರಾಜೀನಾಮೆ ನೀಡಲು ಶಾಸಕರು ಬಂದಿದ್ದರು. ತೆಗೆದುಕೊಳ್ಳಲು ಸಭಾಧ್ಯಕ್ಷರು ಇರಲಿಲ್ಲ. ಮುಖ್ಯಮಂತ್ರಿ ಪ್ರವಾಸದಲ್ಲಿದ್ದರು. ಇದೆಲ್ಲ ನಿಜ.

ಶಾಸಕರ ಮನಸ್ಥಿತಿ ಹೇಗಿತ್ತು?

ಯಡ್ಯೂರಪ್ಪನವರಿಗೆ ಹೋಲಿಕೆಯಾಗುತ್ತಿತ್ತೆ?

ಕೆಲವರು ಸಮಾಧಾನದ ನಿಟ್ಟುಸಿರುಬಿಟ್ಟರಂತೆ!

ಯಾಕೆ ಇಂತಹ ನಿರಾಳ ಮನಸ್ಸು ಅವರಿಗೆ?

ರಾಜೀನಾಮೆ ಸದ್ಯಕ್ಕಿಲ್ಲ ಎಂದು!

ಬೀಸುವ ದೊಣ್ಣೆ ತಪ್ಪಿತ್ತು.

ಸಂದರ್ಭ ನೋಡಿ.

ರಾಜೀನಾಮೆ ನೀಡಲು ಹಿಂಬಾಲಕರು ಬಂದಿದ್ದರು ಎಂದು ಮಾಜಿಗಳಿಗೆ ಹರ್ಷ. ಸದ್ಯಕ್ಕೆ ಅದನ್ನು ನೀಡಬೇಕಿಲ್ಲ



ಅಂತ ಶಾಸಕರಿಗೆ ಸಮಾಧಾನ! ಇಂಗ್ಲಿಷಿನಲ್ಲಿ **Win Win Situation** ಅಂತಾರಲ್ಲ ಇಂತಹದ್ದೇ ಇರಬೇಕು!

ಅದು ಹಾಗಿರಲಿ.

ಶಾಸಕರು ರಾಜೀನಾಮೆ ಕೊಡುತ್ತಿಲ್ಲ. ಕೊಡಿಸುತ್ತಿದ್ದಾರೆ ಯಡ್ಯೂರಪ್ಪ.

ಅವರು ಯಾಕೆ ಹೀಗೆ ಮಾಡುತ್ತಿದ್ದಾರೆ?

'ಸರ್ಕಾರ ಉರುಳಿಸಲು ಅಲ್ಲ!'

ಒಡಕಲು ಗ್ರಾಮಾಫೋನ್ ಪ್ಲೇಟಿನಂತೆ ಯಡ್ಯೂರಪ್ಪ ದನಿ.

ಹಾಗಾದರೆ ಯಾಕೆ?

'ತಾನು ಇಲ್ಲದಿದ್ದರೆ ಯಾರೂ ಇರುವಂತಿಲ್ಲ' ಎಂಬ ಯಡ್ಯೂರಪ್ಪ ಸಿದ್ಧಾಂತವೆ?

ಅದೂ ಅಲ್ಲವಂತೆ. ಈಗಿರುವ ಸರ್ಕಾರ ಬಿಜೆಪಿ-ಕೆಜೆಪಿ ಸಮ್ಮಿಶ್ರ ಸರ್ಕಾರ ಎಂದು ಒಪ್ಪಬೇಕಂತೆ. ಹಾಗೆ ನಡೆದುಕೊಳ್ಳಬೇಕಂತೆ. ಈಗ ಹಾಗೆ ಆಗುತ್ತಿಲ್ಲವಂತೆ.

ಅಂದರೆ ಯಾರೋ ಹುಟ್ಟಿಸಿದ ಕೂಸನ್ನು ತನ್ನದು ಎಂದು ಆಲಂಗಿಸಿಕೊಳ್ಳಬೇಕು!

ಈಗ ಅದು ಆಗುತ್ತಿಲ್ಲ. ಬಿಜೆಪಿ ಹೆಸರಲ್ಲಿ ಕೆಜೆಪಿ ಬಸಿರು ನಿಲ್ಲುತ್ತಿಲ್ಲ!

ಇದು ಎಂತಹ ಮಾತು? ಹುಚ್ಚರ ಮಾತಿನಂತೆ ಇದೆಯಲ್ಲಾ?


ರಾಜಕೀಯದಲ್ಲಿ ಇಂತಹ ಮಾತಿಗೇ ಬೆಲೆ!

ಡೆಡ್‌ಲೈನಿಗೆ ಜೀವಾನೇ ಇಲ್ಲ ಅಂದ್ಕಂಡ್ರಂತೆ!

ಏನಯ್ಯಾ ಬೋಪಯ್ಯ, ಒಳ್ಳೆ ಭೂಪ ಕಣಯ್ಯ ನೀನೂವೆ. ಹದಿಮೂರೋ ಹದಿನಾಲ್ಕೋ ಶಾಸಕರು ರಾಜೀನಾಮೆ ನೀಡಲು ಬಯಸಿ ಬರುವುದಾಗಿ ತಿಳಿಸಿದ್ದರೂ ನೀನು ಹೀಗೆ ಪತ್ತೆ ಇಲ್ಲದಂತೆ ಆದುದು ಸರಿಯೆ ಅಯ್ಯಾ ಎಂದು ಮುಂತಾಗಿ ಹಿರೀಕರೊಬ್ಬರು ತರಾಟೆಗೆ ತೆಗೆದುಕೊಳ್ಳಲಾಗಿ ಅವರು ಇಂತೆಂದರಂತೆ. ಅದನ್ನು ಅರಿತ ನಂತರ ಅನ್ನಿಸುವುದು ಏನೆಂದರೆ.....

ಪಾಪ ಬೋಪಯ್ಯನವರ ಪೂರ್ವಾಪರಗಳನ್ನೆಲ್ಲ ಜಾಲಾಡಿಸುತ್ತಾ ಅವರಿಂದ ಸಂವಿಧಾನದ ಪಾವಿತ್ರ್ಯ ಹಾಳಾಯಿತೋ ಎಂದು ಕೂಗಾಡುತ್ತಿದ್ದಾರಲ್ಲ, ಹಂಗೆ ಏನೂ ಆಗೇ ಇಲ್ಲವಂತೆ ಕಣ್ರೀ. ಈ ಶಾಸಕರು ಅಂತ ಇದಾರಲ್ಲ ಆರು ತಿಂಗಳಿನಿಂದ ಇದೇ ಕಸುಬು ಅಂತೆ. ರಾಜೀನಾಮೆ ಕೊಡ್ತೀನಿ, ರಾಜೀನಾಮೆ ಕೊಡ್ತೀನಿ ಅಂತಾವ ರಾಜೀನಾಮೆ ರೋಗ ಬಡಿದಂಗೆ ಕುಣೀತಾ ಇದ್ದವಂತೆ. ಅವತ್ತು ಮಾಡ್ತೀನಿ, ಇವತ್ತು ಮಾಡ್ತೀನಿ ಅನ್ನೋವಂತೆ. ಡೆಡ್‌ಲೈನನ್ನೂ ಫಿಕ್ಸ್ ಮಾಡೋವಂತೆ. ಬೋಪಯ್ಯನವರು ಸ್ಪೀಕರ್ ಅಲ್ಲವಾ. ಅವರ ಡೆಡ್‌ಲೈನ್ ದಿವಸ ಈಗ ಬರಬಹುದೇನೋ, ಇನ್ನೊಂದು ಗಳಿಗೇಗೆ ಬರಬಹುದೇನೋ ಅಂತಾವ ಇವರು ಕಾಯ್ತಾ ಇದ್ದರಂತೆ. ಅವರು ರಾಜೀನಾಮೆ ಪತ್ರ ಕೊಡುವ ಮಾತು ಹಾಗಿರಲಿ, ಅವರ ಮುಖ ದರ್ಶನವೂ ಆಗುತ್ತಿರಲಿಲ್ಲವಂತೆ. ಇವರಿಗೆ ಏನಾಯಿತು ಓಹೋ ಇವರ ರಾಜೀನಾಮೆ ಅಂದರೆ ತೋಳ ಬಂತು ತೋಳದ ಕತೆ ಇದ್ದಂಗೆ. ಅದು ಬರಲಿಲ್ಲ, ಅದು ಆಗಲಿಲ್ಲ, ಹಂಗೇಯ ಇದೂವೆ ಅಂದುಕೊಂಡರಂತೆ.

ಅಣಕ



• ಎಚ್.ಎಲ್.ಕೇಶವಮೂರ್ತಿ

ಇಂತಹ ಹಾಳುಬಸ್ತೀವ ನಂಬಿದರೆ ಕೆಲಸ ಎಲ್ಲ ಹಾಳು, ಇಂತೋರ ಮಾತ ನಂಬಿ ನಾನೂ ಮೂರ್ಖನಾದೆನಲ್ಲ ಅಂತಾನೂ ಅನ್ನಿಸಿತಂತೆ. ಇನ್ನು ಮೇಲೆ ಹಿಂಗೆ ಪೆದ್ದುಪೆದ್ದಾಗಿ ಶಾಸಕರ ಮಾತ ನಂಬಬಾರದು ಅಂತ ಮನಸ್ಸು ಮಾಡಿದರಂತೆ. ಈಗ ಏನಾಗಿತ್ತು ನೋಡಿ. ರಾಜೀನಾಮೆ ಕೊಡೋಕೆ ಬರ್‍ತೀವಿ ಅಂತ ಹೇಳಿದ್ದೊ ನಿಜ. ಆದರೇನು ಮಾಡ್ತೀರಿ. ಅವು ಬಾಯಿಮಾತಿನಲ್ಲಿ ಹಂಗೆ ಅಂದಿದ್ದವಂತೆ, ಲಿಖಿತವಾಗಿ ಏನನ್ನೂ ನೀಡಿರಲಿಲ್ಲವಂತೆ. ಹಿಂದಿನ ಅನುಭವ ಇತ್ತಲ್ಲ, ರಾಜೀನಾಮೆ ಕೊಡ್ತೀನಿ ಅಂತಾವೆ. ಕೊಡೋದೂ ಇಲ್ಲ ಗಿಡೋದೂ ಇಲ್ಲ, ಇದೂ ಹಂಗೇಯ ಅನ್ಕಂಡರಂತೆ. ಇಂತೋರ ಮಾತ ನಂಬಲೇಬಾರದು ಅನ್ನೊ ಶಪಥ ಮಾಡಿದ್ದರಲ್ಲಾ, ಅದು ನೆನಪಾಯಿತಂತೆ. ಪಶುಪತಿದೇವರಿಗೆ ಯಾವಾಗಲೋ ಹರಕೆ ಮಾಡಿಕೊಂಡಿದ್ದರಂತೆ. ಅದನ್ನಾದರೂ ತೀರಿಸಾನ ಅಂತಾವ ನೇಪಾಳಕ್ಕೆ ಹೋದರಂತೆ. ಅದೂ ಸರ್ಕಾರಿ ದುಡ್ಡಿನಲ್ಲಿ ಅಂದುಕೋಬೇಡಿ. ಸ್ವಂತ ದುಡ್ಡಿನಲ್ಲಿ ದೇವರ ದರ್ಶನ ಸಾಂಗವಾಗಿ ನೆರವೇರಿತಂತೆ. ಅದು ಆದಮೇಲೆ ಇವರೇನೂ ಅಲ್ಲಿಯೇ ಉಳಿಯಲಿಲ್ಲ, ಸ್ವದೇಶಕ್ಕೆ ಹಿಂತಿರುಗಿದರಂತೆ. 'ರಾಜೀನಾಮೆ ತೆಗೆಳ್ಳೋಕೆ ಸ್ಪೀಕರ್ರೇ ಇಲ್ಲ ಅಂತ ಅರುಚಾಡ್ತಾ ಇದ್ದವಲ್ಲ ಅವು ಕೊಡ್ಲಿ ರಾಜೀನಾಮೆಯ, ಮಾರಾಯರಂಗೆ ಕೊಡ್ಲಿ ಯಾರ ಬೇಡ ಅಂತಾರೆ' ಅಂತಾರಂತೆ ಬೋಪಯ್ಯನವರು. ಈ ತರ್ಕಾನೂ ಸರಿ ಅನ್ನಿಸುತ್ತೆ!

ಪೆದ್ದ ಹಾದರಗಿತ್ತಿಯರು

ಅತ್ಯಂತ ಭ್ರಷ್ಟರು ಯಾರು?

ಉತ್ತರ ಸುಲಭ.

ಹಿಂದುಳಿದವರು, ಪರಿಶಿಷ್ಟ ಜಾತಿ/ಪಂಗಡಗಳವರು

ನಿದರ್ಶನಗಳು ಉಂಟೆ?

ಬೇಕಿಲ್ಲ, ಚಿಂತಕ ಆಶಿಷ್ ನಂದಿ ಅವರ ಮಾತೇ ವೇದವಾಕ್ಯ.

ಜೈಪುರ ಸಾಹಿತ್ಯೋತ್ಸವದಲ್ಲಿ ಅವರು ಹೇಳಿರುವ ಮಾತು ಇದು.

ಒಂದು ಉಪಮಾತು. ಜೈಪುರದ ಉತ್ಸವ ನೋಡಿ ಧಾರವಾಡದಲ್ಲಿ 'ಸಾಹಿತ್ಯ ಸಂಭ್ರಮ' ಆಯೋಜಿಸಲಾಗಿತ್ತಂತೆ. ಇದು ಬಾರೀ ಸುದ್ದಿಯೂ ಆಯಿತು. ಆಶಿಷ್ ನಂದಿಯವರ ಮಾತಿಗೆ ಪ್ರತಿಕ್ರಿಯೆ ಅಲ್ಲಿ ಬಂದಂತಿಲ್ಲ. ಪ್ರಾಯಶಃ ಆಹ್ವಾನಿತ ಸಾಹಿತಿಗಳ ಅಭಿಪ್ರಾಯವೂ ಆಶಿಷ್ ಅವರದ್ದೇ

ಅನಾಯ ಪ್ರಕರಣ ಲುಝ್ ಲಾಂಗ್‌ನನ್ನು ನೆನಪಿಸಿತು

ಪಾರ್ವತೀಶರ 'ಬಿಡಿ ಚಿತ್ರ'ದಲ್ಲಿನ ಫರ್ನಾಂಡಿಸ್ ಅನಾಯನ ಗೆಲುವಿನ ಕತೆ (ಫೆಬ್ರವರಿ 6, 2013 ಸಂಚಿಕೆ) ಮನಸ್ಸಿಗೆ ಮುದ ನೀಡಿತು. ಸಾರ್ವಕಾಲಿಕ ಶ್ರೇಷ್ಠ ಕ್ರೀಡಾಪಟುಗಳಲ್ಲೊಬ್ಬನಾದ ಜೆಸ್ಸಿ ಓವೆನ್ಸ್‌ನ ಜೀವನದಲ್ಲೂ ಸಹ ಇಂತಹ 'ಅನಾಯ'ನೊಬ್ಬ ವಿಕಾವಿಕಿ ಪ್ರವೇಶಿಸಿ ಆತನ ಬದುಕಿನ ದಿಕ್ಕನ್ನೇ ಬದಲಿಸಿದ ಕತೆ ಜಗದ್ವಿಖ್ಯಾತವಾದುದು.

ಪರಮ ಜನಾಂಗೀಯವಾದಿ ಹಿಟ್ಲರ್ ಶುದ್ಧ ಆರ್ಯನ್ ರಕ್ತದ ಮಹತ್ವವನ್ನು ತೋರುವ ಮಹತ್ವಾಕಾಂಕ್ಷೆಯಿಂದಲೇ ತನ್ನ ನೆಲದಲ್ಲಿ ಒಲಿಂಪಿಕ್ಸನ್ನು ನಡೆಸಲು ಮುಂದಾದ. 1936ರ ಈ ಕ್ರೀಡಾಕೂಟದಲ್ಲಿ ಆ ಕಾಲದ ಜನಾಂಗೀಯವಾದಿಗಳ ಪ್ರಕಾರ ಮನುಷ್ಯರೇ ಅಲ್ಲದ ಕಪ್ಪು ಮೈಬಣ್ಣ ಹೊಂದಿದ್ದ ಜನಾಂಗದ ಸ್ಪರ್ಧಿಗಳ ಪಾಡು ದೇವರಿಗೇ ಪ್ರೀತಿ. ಅಂಥವರಲ್ಲಿ ಅಮೆರಿಕದ ಕ್ರೀಡಾಪಟು ಜೆಸ್ಸಿ ಓವೆನ್ಸ್ ಕೂಡ ಒಬ್ಬನಾಗಿದ್ದ.

ಎದುರಾಗುವ ತಿರಸ್ಕಾರದ ನೋಟ ಹಾಗು ಅಪರಿಚಿತ ನೆಲದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲಲೇಬೇಕೆಂಬ ಒತ್ತಡ ಇವೆಲ್ಲವುಗಳಿಂದ ದೈಹಿಕವಾಗಿ ಸದೃಢನಿದ್ದರೂ ಮಾನಸಿಕವಾಗಿ ಓವೆನ್ಸ್ ಕುಗ್ಗಿಹೋಗಿದ್ದ. ಈ ಎಲ್ಲ ಗೊಂದಲಗಳಿಂದಾಗಿ ಲಾಂಗ್‌ಜಂಪ್‌ನ ಅರ್ಹತಾ ಸ್ಪರ್ಧೆಯನ್ನೇ ಆತನಿಂದ ದಕ್ಕಿಸಿಕೊಳ್ಳಲಾಗದೇ 'ವಿಫಲನಾಗುತ್ತಿದ್ದ. ಇದನ್ನೆಲ್ಲ ಹಿಟ್ಲರ್‌ನ 'ಆರ್ಯನ್ ಬ್ಲಡ್'ಗೆ ಸೇರಿದ್ದ ಲುಝ್ ಲಾಂಗ್ ಎಂಬ ಕ್ರೀಡಾಪಟು ಗಮನಿಸುತ್ತಿದ್ದ. ಜರ್ಮನಿ ಹಾಗು ಹಿಟ್ಲರನ ಮರ್ಯಾದೆ ಉಳಿಸುವ ಭಾರೀ ಹೊಣೆ ಬೇರೆ ಆತನ ಹೆಗಲ ಮೇಲಿತ್ತು. ಆದರೂ ಆತ ತನ್ನ ಪ್ರತಿಸ್ಪರ್ಧಿ ಓವೆನ್ಸನ ಬಳಿ ಬಂದು ಆತನ ವಿಫಲತೆಯ ಕಾರಣ ಹಾಗು ಅದನ್ನು ತಿದ್ದಿಕೊಳ್ಳುವ ಬಗೆಯನ್ನು ಸೂಕ್ಷ್ಮವಾಗಿ ತಿಳಿಸಿಹೋದ. ಅರ್ಹತಾ ಸುತ್ತಿನಲ್ಲೇ ವಾಪಸ್ಸಾಗುತ್ತಿದ್ದ ಓವೆನ್ಸ್ ನಂತರ ಆ ಒಲಿಂಪಿಕ್ಸ್‌ನಲ್ಲಿ ಹಲವು ಪದಕಗಳನ್ನು ಜಯಿಸಿಕೊಂಡು ದಾಖಲೆಗಳನ್ನು ಬರೆದ. ಆದರೆ ತಾನು ಗೆದ್ದ ಚಿನ್ನದ ಪದಕಗಳೊಂದಿಗೆ ಪ್ರದರ್ಶನಕ್ಕೆ ಇಡಲಾಗದ, ಕುತ್ತಿಗೆಗೆ ಹಾಕಿಕೊಳ್ಳಲಾಗದ ವಿಶೇಷ ಪದಕವೂ ಜರ್ಮನಿಯಿಂದ ಆತನಿಗೆ ಅಚಾನಕ್ಕಾಗಿ ದೊರಕಿತ್ತು, ಅದೇ ಲುಝ್ ಲಾಂಗ್‌ನ ಸ್ನೇಹ. "ನನಗೆ ಸಿಕ್ಕ ಬಂಗಾರದ ಪದಕ - ಕೀರ್ತಿಗಳನ್ನೆಲ್ಲ ಒಟ್ಟು ಹಾಕಿದರೂ ಲುಝ್ ಲಾಂಗ್‌ನೊಂದಿಗಿನ ನನ್ನ ಸ್ನೇಹಕ್ಕೆ ಸಾಟಿಯಾಗದು" - ಇದು ಓವೆನ್ಸ್ ತನ್ನ ಸ್ನೇಹಿತನ ಕುರಿತು ಆಡಿದ ಮಾತು. ಅನಾಯ ಸಂತತಿ ಸಾವಿರವಾಗಲಿ....

- ರವಿ ಪುತ್ತೂರ್, ದಕ

ಪುರಾಣಕತೆಗಳ ಕುರಿತ ಬರಹ ಚೆನ್ನಾಗಿತ್ತು

ಗೌರಿ ಅವರು ತಮ್ಮ ಕಂಡಹಾಗೆ ಅಂಕಣದಲ್ಲಿ ಬರೆದ 'ಪುರಾಣ ಕತೆಗಳೆಲ್ಲವೂ ಪೂಜಾರ್ಹವಲ್ಲ' (ಜನವರಿ 30, 2012 ಸಂಚಿಕೆ) ತುಂಬಾ ಚೆನ್ನಾಗಿತ್ತು. ಕಟು ಸತ್ಯವನ್ನು ಹೇಳುವ ಇಂತಹ ಲೇಖನಗಳು ಬೇಕು. ಹಾಗೆಯೇ ಇವುಗಳನ್ನು ಶಾಲೆ ಮತ್ತು ಕಾಲೇಜಿನಲ್ಲಿರುವ ಯುವಪೀಳಿಗೆಗೆ ಅರ್ಥ ಮಾಡಿಸಿಕೊಡಬೇಕು.

ನಮ್ಮ ಪುರಾಣಗಳ ಬಗ್ಗೆ ನಮಗೆ 'ಬ್ರಶ್ ಅಪ್' ಮಾಡಿದ್ದಕ್ಕೆ ಥ್ಯಾಂಕ್ಯು. ನಿಮ್ಮ ಲೇಖನವನ್ನು ನನ್ನ ಎಲ್ಲ ಮಿತ್ರರು ಓದುವಂತೆ ಮಾಡಿದೆ.

- ರಮೇಶ್ ಗೌಡ, ಈ ಮೇಲ್ ಮೂಲಕ

ಗೌರಿ ಅವರ 'ಪುರಾಣ ಕತೆಗಳೆಲ್ಲವೂ ಪೂಜಾರ್ಹವಲ್ಲ' ಅದ್ಭುತವಾಗಿತ್ತು. ಅದರಲ್ಲಿ ಇಂದ್ರ, ರಾಮ, ಕೃಷ್ಣ ಪರಶುರಾಮ, ಭೀಷ್ಮರನ್ನು ವಿಡಂಬನೆಗೆ ಗುರಿಪಡಿಸಿದ್ದು ತೀಕ್ಷ್ಣವಾಗಿತ್ತು.

'ಕಂಡಗಾಗೆ' ಅಂಕಣವು ಕಂಡಹಾಗೆಯೇ ಅರ್ಥಪೂರ್ಣವಾಗಿದೆ.

ಧನ್ಯವಾದಗಳು.


- ಕೇಶವ ಪೌಜೆ, ಮಡಿಕೇರಿ



ಆರೆಸ್ಸೆಸ್ ಭಯೋತ್ಪಾದಕ ಸಂಘಟನೆ

ಗಾಂಧೀಜಿಯನ್ನು ಕೊಂದ ಮೇಲೂ, ಗುಜರಾತ್ ನರಹತ್ಯೆಯ ನಂತರವೂ ಆರೆಸ್ಸೆಸ್ ಭಯೋತ್ಪಾದಕ ಸಂಘಟನೆಯಲ್ಲ ಎಂದು ಯಾರಾದರೂ ಹೇಳಿದರೆ ಅದು ಆರೆಸ್ಸೆಸ್ಸಿನವರು ಮಾತ್ರ. ಕತ್ತಲೆ ತೋರಿಸಲು ಯಾರೂ ಭೂತಕನ್ನಡ ಹಿಡಿಯುವುದಿಲ್ಲ.

ಅಂದಹಾಗೆ, ಸಾಹಿತ್ಯ ಎಲ್ಲಾ ಜನಪರ ಚಳವಳಿಗಳಿಗೆ ಸ್ಫೂರ್ತಿಯನ್ನು




ಒದಗಿಸುತ್ತದೆ. ಆದರೆ ಸಾಹಿತಿಗಳನ್ನೇ ಖರೀದಿಸಿಬಿಟ್ಟರೆ, ಅವರನ್ನು ಖಾಸಗಿ ಸರಕಾಗಿಸಿಬಿಟ್ಟರೆ, ಕಾರ್ಪೊರೇಟ್ ಕ್ರೌರ್ಯ ಬಿಡುಬೀಸಾಗಿ ಮೆರೆಯಲು ಸಾಧ್ಯ. ಚಳವಳಿಗಳನ್ನಷ್ಟೇ ಅಲ್ಲ, ಸ್ಫೂರ್ತಿಯನ್ನೇ ಪಾರು ಮಾಡಿಕೊಳ್ಳುವ ಚಾಲೆಂಜ್ ನಮ್ಮದು. ಹೋಗಲಿ, ಈ ಸಾಹಿತ್ಯ ಸಂಭ್ರಮದ ಸ್ಫೂರ್ತಿ ಏನು? ಅಲ್ಲಿನ 'ಕಂಫರ್ಟ್ ಜೋನ್'ಗೆ ಸೇರಿದ ಮನಸ್ಸುಗಳೇ ಹೇಳಬೇಕು.

- ರವಿಕುಮಾರ್, ಹಾಸನ

ಇದು ನಾ ಕಂಡ ಕಂಡಹಾಗೆ...

ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳುವಷ್ಟು ಸಂಪನ್ನ ಬುದ್ಧಿ ನನ್ನದಲ್ಲ.



...ಬಹುದು. ಹಿಂದೆ ಆಡಳಿತ ಎನ್ನುವುದು ದಕ್ಷತೆಯ ...ತ್ತು, ಏಸೊಂದು ಸೊಗಸಾಗಿತ್ತು ಆ ಕಾಲ. ಮೀಸಲಾತಿ ... ಎಲ್ಲವನ್ನೂ ಹಾಳುಗೆಡವಿತು. ಅದು ತೊಲಗಬೇಕು ...ಮನೋಭಾವ ಇದ್ದರೂ ಇರಬಹುದು. ಅಂತಹ ...ಮೂಹೂರ್ತಕ್ಕೆ 'ಸಾಹಿತ್ಯ ಸಂಭ್ರಮ' ಮುನ್ನುಡಿ ...ಸುದು. ಆದರೆ ಹಾಗೆ ಯಾರೂ ಹೇಳದೆ ಇದ್ದರೂ ...ರ ಆಳದಲ್ಲಿ ಹೀಗಿದ್ದರೂ ಇರಬಹುದೇನೋ ಇರಲಿ.


...ತ್ತೆ ಜೈಪುರಕ್ಕೆ ಬರೋಣವಂತೆ. ಆಶಿಷ್ ಮಾತು ...ಸುದ್ದಿ ಆಯಿತು. ಏನು ಸೋಜಿಗ ಅಂದರೆ ಆಶಿಷ್ ...ಮೊಟ್ಟು ಮಾಡಿ ತೋರಿಸಿರುವವರಲ್ಲಿ ಮುಕ್ಕಾಲು ... ಮೀಸೆ ಜನರು ಮಾತ್ರ ಯಾಕೆ ಪೂರ್ತಿ ಅಂದರೂ ... ಅವರೆಲ್ಲ ಜವಾನಗಿರಿ, ಗುಮಾಸ್ತಗಿರಿಯಲ್ಲೇ ಇಂದ್ರನ ...ಗದ ಸಂಭ್ರಮ ಕಾಣುತ್ತಾರಲ್ಲ. ಉನ್ನತ ಹುದ್ದೆಗಳಲ್ಲಿ ... ಮೇಲ್ಜಾತಿಯವರೇ ಮೆರೀತಿದ್ದಾರಲ್ಲ ಅಂದರೆ ...ವಿಡ್ರಿ. ಆಶಿಷ್‌ನಂತಹ ಆಶಿಷ್ ಅವರೇ ಹಂಗಂದವ್ರೇ ...ಸತ್ಯಸ್ಯ ಸತ್ಯ ಅನ್ನೋ ಹಂಗೆ ಮಾಧ್ಯಮಗಳು ವರದಿ ...ತ್ತಿವೆಯಲ್ಲಾ ಏನು ಸಮಾಚಾರ ಅಂದರೆ ...ಮುಗಳೆಲ್ಲ ಮೇಲ್ಜಾತಿಯವರ ಕಪಿಮುಷ್ಠಿಯಲ್ಲೇ ...ಂತೆ! ಅದಕ್ಕೆ ಏನೋ ಈ ಸುದ್ದಿಗೆ ಬಣ್ಣ ಕಟ್ಟಿ ...ತ್ತಿದ್ದಾರೆ. ಅದೇ ಅವರು ಈ ವರ್ಗದ ಜನರು ... ಲಂಚ ತಿಂದು ಅರಗಿಸಿಕೊಳ್ಳುವ ಜಾಣತನ ...ದರು. ಸಿಕ್ಕಿಹಾಕಿಕೊಳ್ಳುತ್ತಾರೆ. ಸಣ್ಣ ಮೀನುಗಳು ...ಕೊಳ್ಳವೆ. ತಿಮಿಂಗಲಗಳು ತಪ್ಪಿಸಿಕೊಳ್ಳವೆ ಅನ್ನೋ ... ಮಾತನ್ನು ಹೇಳಿದ್ದರೂ ಅದ ಈ ಆರ್ಭಟದ ... ಕಾಣದೇಹೋಗುವ ಹಾಗೆ ಕುಳ್ಳರಿಸವ್ರೆ!

...ಳಬಾರದ್ದನ್ನು ಹೇಳ್ತಾರೆ. ಹೇಳಬೇಕಾದ್ದನ್ನು ...ಚಾತ್ತಾರೆ. ಇಂತಹ ವಿದ್ಯೆಗೇ ಇರಬೇಕು.... ಪೆದ್ದ ...ಗಿತ್ತಿತನ ಅನ್ನೋದು! ■

ರಾಗಿಣಿ 'ವ್ಯಾಪ್ತಿ ಪ್ರದೇಶದಿಂದ ಹೊರಕ್ಕೆ...'

ನಟಿ ರಾಗಿಣಿ ಇನ್ನು ಮುಂದೆ ಕನ್ನಡದ ನಿರ್ಮಾಪಕರು ಮತ್ತು ಪತ್ರಕರ್ತರ ಪಾಲಿಗೆ 'ನಾಟ್ ರೀಚೆಬಲ್' ಆಗುತ್ತಾರೆ. ಅದರರ್ಥ ಆಕೆ ಒಬ್ಬ ಮ್ಯಾನೇಜರ್‌ನನ್ನು ತನ್ನ ಪ್ರಚಾರ, ಕಾಲ್‌ಶೀಟ್ ಹಾಗೂ ಸಂಭಾವನೆಯನ್ನು ನೋಡಿಕೊಳ್ಳಲು ನೇಮಿಸಿಕೊಂಡಿ ದ್ದಾಳೆ. ಅಂದರೆ ಆಕೆಯ ಮ್ಯಾನೇಜರ್ ಜೊತೆಗೇ ಪತ್ರಕರ್ತರು ಮತ್ತು ನಿರ್ಮಾಪಕರು ಒಂದೆರಡು ಸುತ್ತಿನ ಮಾತುಕತೆ ನಡೆಸಿದ ನಂತರವೇ ರಾಗಿಣಿ 'ರೀಚೆಬಲ್' ಆಗುತ್ತಾಳೆ.

ಈ ರೀತಿ ಮ್ಯಾನೇಜರ್‌ಗಳನ್ನು ನೇಮಿಸಿಕೊಳ್ಳುವುದು ಪರಭಾಷಾ ಸಿನಿಮಾಗಳ ಸಂಸ್ಕೃತಿಯಾಗಿತ್ತು, ಮುಂಬೈ ಮತ್ತು ತೆಲುಗು ಉದ್ಯಮಗಳಲ್ಲಿರುವ ಬಹುತೇಕ ಎಲ್ಲ ನಟ-ನಟಿಯರು ಮ್ಯಾನೇಜರ್‌ಗಳನ್ನು ನೇಮಿಸಿಕೊಂಡಿದ್ದಾರೆ. ಆದರೆ ಹೀಗೆ ಮ್ಯಾನೇಜರ್ ಗಳನ್ನು ನೇಮಿಸುವ ಫ್ಯಾಷನ್ ಕನ್ನಡದಲ್ಲೂ ಆರಂಭವಾಗಿದೆ. ಕಳೆದ ವರ್ಷ ನಟಿ ರಮ್ಯಾ ಓರ್ವ ಮ್ಯಾನೇಜರ್‌ಳನ್ನು ನೇಮಿಸಿ ಆಕೆಯನ್ನು ಎಲ್ಲರಿಗೂ ಪರಿಚಯಿಸಿದ್ದಳು. ಆದರೆ ಒಂದೇ ತಿಂಗಳಿಗೆ ಆ ಮ್ಯಾನೇಜರ್ ರಮ್ಯಾಳಿಗೆ ಟಾಟಾ ಹೇಳಿ ಓಡಿಹೋಗಿದ್ದಳು. ಈಗ ರಾಗಿಣಿಯ ಮ್ಯಾನೇಜರ್ ಎಷ್ಟು ಸಮಯ ಈಕೆಯ ಕೆಲಸವನ್ನು ನಿಭಾಯಿಸುತ್ತಾಳೋ ಕಾದು ನೋಡಬೇಕು.



ಕನ್ನಡ ಚಿತ್ರರಂಗದಲ್ಲಿ ನಾಯಕ ನಟ ಸುದೀಪ್, ಪುನೀತ್ ರಾಜ್‌ಕುಮಾರ್, ರವಿಚಂದ್ರನ್, ಶಿವರಾಜ್‌ಕುಮಾರ್, ದರ್ಶನ್ ಮೊದಲಾದವರ್‍ಯಾರೂ ಮ್ಯಾನೇಜರ್‌ಗಳನ್ನು ನೇಮಿಸಿಕೊಂಡಿಲ್ಲ, ನಿರ್ಮಾಪಕರಾಗಲಿ, ಪತ್ರಕರ್ತರಾಗಲಿ ಫೋನ್ ಮಾಡಿದರೆ ಸ್ವತಃ ತಾವೇ ಫೋನ್ ಎತ್ತಿಕೊಂಡು ಈ ನಾಯಕ ನಟರು ಮಾತನಾಡುತ್ತಾರೆ. ಆದರೆ ಯುವ ನಾಯಕನಟರಾದ ದುನಿಯಾ ವಿಜಿ ಮತ್ತು ನೆನಪಿರಲಿ ಖ್ಯಾತಿಯ ಪ್ರೇಮ್ ಮ್ಯಾನೇಜರನನ್ನು ನೇಮಿಸಿದ್ದಾರೆ. ಉಳಿದಂತೆ ಯಾರೇ ಆದರೂ ಎಲ್ಲರಿಗೂ ಈಜಿಲಿ ರೀಚೆಬಲ್ ಆಗುತ್ತಾರೆ. ■

ನಿರ್ದೇಶಕರ 'ಕತ್ತರಿಸುವ' ಚಾಳಿ

ಕನ್ನಡ ಚಿತ್ರರಂಗದ ನಿರ್ದೇಶಕರು ಈಗ ಎರಡು ರೀತಿಯ ಚಾಳಿಗಳನ್ನು ಆರಂಭಿಸಿದ್ದಾರೆ. ಸಿನಿಮಾ ಮಾಡುವ ಮೊದಲೇ ಸರಿಯಾಗಿ ಪ್ಲಾನ್ ಮಾಡದೆ ಮನಸ್ಸೋ ಇಚ್ಛೆ ಚಿತ್ರಿಸಿದ ನಂತರ ಯಾಕೋ ಸರಿಬಂದಿಲ್ಲ ಎಂದು ಮತ್ತೆ ರೀಶೂಟ್ ಮಾಡುವುದು ಒಂದು ರೀತಿಯ ಚಾಳಿಯಾದರೆ, ಚಿತ್ರ ಬಿಡುಗಡೆಯಾದ ನಂತರ ಪ್ರೇಕ್ಷಕರ ಒತ್ತಾಯದ ಮೇರೆಗೆ ಕೆಲವು ದೃಶ್ಯಗಳನ್ನು ಕತ್ತರಿಸಿ ಚಿತ್ರವನ್ನು ಟ್ರಿಮ್ ಮಾಡಿದ್ದೇವೆ ಎಂದು ಹೇಳುವುದು ಎರಡನೆ ರೀತಿಯ ಚಾಳಿಯಾಗಿದೆ.

ಈ ವಾರ ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿರುವ 'ಲಕ್ಕಿ' ಚಿತ್ರದ ನಿರ್ದೇಶಕ ರಾಘವಲೋಕಿ ಮೊನ್ನೆ ಪತ್ರಿಕಾಗೋಷ್ಠಿ ಕರೆದು "ಸುಮಾರು 15 ನಿಮಿಷಗಳ ಕಾಲಾವಧಿಯ ದೃಶ್ಯಗಳನ್ನು ಕತ್ತರಿಸಿ ಚಿತ್ರವನ್ನು ಟ್ರಿಮ್ ಮಾಡಿದ್ದೇವೆ. ಈ ರೀತಿ ಟ್ರಿಮ್ ಮಾಡಿದ ನಂತರ ಪ್ರೇಕ್ಷಕರ ಸಪೋರ್ಟ್ ಹೆಚ್ಚಾಗಿದೆ ಮಾತ್ರವಲ್ಲ, ಚಿತ್ರದ ಗಳಿಕೆಯಲ್ಲೂ ಚೇತರಿಕೆಯಾಗಿದೆ" ಎಂದು ಬೀಗಿದರು.


ಒಂದು ಮಾತಂತೂ ನಿಜ. 'ಲಕ್ಕಿ' ಚಿತ್ರ ಇತ್ತೀಚಿಗಿನ ಶಿವಣ್ಣನ ಚಿತ್ರಗಳಲ್ಲಿ ಅತ್ಯುತ್ತಮವಾಗಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಈ ಚಿತ್ರದ ಕೆಲವು ಭಾಗಗಳನ್ನು ಈಗ ಕತ್ತರಿಸಿರುವುದು ಕೂಡ ನಿಜಕ್ಕೂ ಒಳ್ಳೆಯದೆ. ಆದರೆ ನಮ್ಮ ಪ್ರಶ್ನೆಯಿಷ್ಟೇ: "ಈ ಚಿತ್ರದ ನಿರ್ಮಾಣದ ಸಂದರ್ಭದಲ್ಲಿ ಹಲವು ದೃಶ್ಯಗಳು ಅಗತ್ಯವಿಲ್ಲ ಎಂದು ನಿರ್ದೇಶಕರಿಗೆ ಯಾಕೆ ಅರ್ಥವಾಗಲಿಲ್ಲ? ಹೀಗೆ ಹತ್ತು-ಹದಿನೈದು ನಿಮಿಷ ಹೆಚ್ಚಿನ ಅವಧಿಯ ದೃಶ್ಯಗಳನ್ನು ಶೂಟ್ ಮಾಡಿದ ಅದನ್ನು ಕತ್ತರಿಸುವುದು ಹಣವನ್ನು ಪೋಲು ಮಾಡಿದಂತಲ್ಲವೇ? ಚಿತ್ರಕ್ಕೆ ಹಣ ಸುರಿದ ನಿರ್ಮಾಪಕ ನಿರ್ದೇಶಕರ ಇಂತಹ ಕೃತ್ಯಗಳಿಂದು ನಷ್ಟ ಅನುಭವಿಸುವುದು ಎಷ್ಟು ಸರಿ?"

ಈ ಪ್ರಶ್ನೆಗಳಿಗೆ ಇಂತಹ ಚಾಳಿ ಬೆಳೆಸಿಕೊಂಡಿರುವ ನಿರ್ದೇಶಕರು ಉತ್ತರಗಳನ್ನು ನೀಡುತ್ತಾರೆಯೇ? ■

ಸಿನಿಮಾದವರ 'ರಾಜಕೀಯ' ವ್ಯಾಮೋಹ

ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ರಮ್ಯಾ ಈ ಬಾರಿಯ ವಿಧಾನ ಸಭಾ ಚುನಾವಣೆಯಲ್ಲಿ ಯಾವುದಾದರೂ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ಪುಕಾರು ರಾಜಕೀಯ ಮತ್ತು ಸಿನಿಮಾ ವಲಯಗಳಲ್ಲಿ ಹಬ್ಬಿತ್ತು. ಅದರಲ್ಲೂ ರಮ್ಯಾ ಕಾಂಗ್ರೆಸ್ ಸಕ್ರಿಯ ಕಾರ್ಯಕರ್ತೆಯಾಗಿರುವುದರಿಂದ ಆಕೆ ಸ್ಪರ್ಧಿಸುವುದು ಗ್ಯಾರಂಟಿ ಎಂಬ ಮಾತು ಕೇಳಿಬರುತ್ತಿತ್ತು.

ಆದರೆ ಈಗ ದರ್ಶನ್ ಮತ್ತು ರಮ್ಯಾ ಇಬ್ಬರೂ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಯಾವುದೇ ಆಸಕ್ತಿಯನ್ನು ತೋರಿಸಲಿಲ್ಲ. ಆದರೆ ಅವರ ಬದಲಿಗೆ ಅವರ ತಾಯಂದಿರು ಕಾಂಗ್ರೆ ಟಿಕೆಟನ್ನು ಅಪೇಕ್ಷಿಸಿ ಅರ್ಜಿ ಸಲ್ಲಿಸಿದ್ದಾರೆ. ಅಂದರೆ ಸ್ವತಃ ತಾವೇ ಚುನಾವಣೆಯಲ್ಲಿ ಸ್ಪರ್ಧಿಸುವ ಬದಲು ತಮ್ಮ ತಾಯಿ ಸ್ಪರ್ಧಿಸಿದರೆ ಗೆಲ್ಲಬಹುದು ಎಂಬ ಲೆಕ್ಕಾಚಾರ ಅವರಿಬ್ಬರದ್ದಾಗಿರುವಂತಿದೆ.



ಜನಪ್ರಿಯ ತಾರೆಯರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದರೆ ಅದರಿಂದ ಆ ಪಕ್ಷಕ್ಕೆ ಖಂಡಿತವಾಗಿಯೂ ಚುನಾವಣಾ ಸಂದರ್ಭದಲ್ಲಿ ಲಾಭವಾಗುತ್ತದೆ. ಯಾಕೆಂದರೆ ಆ ನಟನಟಿಯರು ಪ್ರಚಾರಕ್ಕೆಂದು ಹೋದಾಗ ಜನ ಸಲೀಸಾಗಿ ಸೇರುತ್ತಾರೆ. ಆದರೆ ನಟನಟಿಯರ ತಾಯಂದಿರನ್ನು ಕಟ್ಟಿಕೊಂಡು ರಾಜಕೀಯ ಪಕ್ಷಗಳಿಗೆ ಆಗುವ ಲಾಭ ಕಡಿಮೆಯೇ.


ಅದೇನೇ ಇರಲಿ, ಸದ್ಯಕ್ಕೆ ಕಾಂಗ್ರೆನಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಕನ್ನಡದ ಸಿನಿಮಾ ನಟ-ನಟಿಯರಲ್ಲಿ ಉತ್ಸಾಹ ಕಂಡುಬರುತ್ತಿದೆ. ಕಳೆದೆರಡು ವರ್ಷಗಳಿಂದ ಉತ್ತರ ಕರ್ನಾಟಕದ ಬಿಜಾಪುರಕ್ಕೆ ಆಗಾಗ್ಗೆ ಪ್ರವಾಸ ಮಾಡುತ್ತಿದ್ದ ಉಮಾಶ್ರೀ ಅಲ್ಲಿಂದಲೇ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಕಾಂಗ್ರೆನಿಂದ ಸ್ಪರ್ಧಿಸುವ ಆಸೆಯನ್ನು ನಟಿ ಭಾವನಾ ವ್ಯಕ್ತಪಡಿಸಿದ್ದಾರೆ.



ಆಕೆ ದಾವಣಗೆರೆ ಜಿಲ್ಲೆ ಅಥವಾ ಕಾರವಾರದ ಸುತ್ತಮುತ್ತ ಯಾವುದಾದರೂ ಕ್ಷೇತ್ರ ಪರವಾಗಿಲ್ಲ ಎಂಬ ಮೂಡಿನಲ್ಲಿದ್ದಾರೆ. "ಈ ಬಾರಿ ಚುನಾವಣೆಗೆ ನಿಲ್ಲಲೇಬೇಕೆಂಬ ಆಸೆ ನನಗೇನೂ ಇಲ್ಲ, ಟಿಕೆಟ್ ಸಿಗದಿದ್ದರೂ ಪರವಾಗಿಲ್ಲ, ಸಿಗದಿದ್ದರೂ ಪರವಾಗಿಲ್ಲ, ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಲು ನಾನು ರೆಡಿ" ಎಂದಿದ್ದಾಳೆ ಭಾವನಾ. ಇವರಿಬ್ಬರ ಹೊರತಾಗಿ ಈಗಾಗಲೇ ಪಳಗಿದ ರಾಜಕಾರಣಿಗಳಂತೆ ಕಾಣಿಸುವ ಶಶಿಕುಮಾರ್ ಮತ್ತು ಬಿ.ಸಿ.ಪಾಟಿಲ್ ಕೂಡ ಕಾಂಗ್ರೆ ಚಿಹ್ನೆಯಡಿ ಚುನಾವಣೆಯನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ.

ಕಳೆದ ಬಾರಿ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಲು ತಾ ಮುಂದು, ನಾ ಮುಂದು ಎಂದು ಕಲಾವಿದರು ಪೈಪೋಟಿ ನಡೆಸಿದ್ದರೆ ಈ ಬಾರಿ ಅವರೆಲ್ಲ ಕಾಂಗ್ರೆ ಮನೆಯ ಬಾಗಿಲನ್ನು ತಟ್ಟುತ್ತಿರುವುದು ಮಜವಾಗಿದೆ!

● ಶೆಣೈ



...ನಿಮ್ಮ ಪತ್ರಿಕೆಯನ್ನು ಓದುತ್ತಿರುವಾಗ, ನನ್ನಲ್ಲಿ ಅಸ್ತಿತ್ವ ...ರ್ಗಿಸುವ ಪ್ರಶ್ನೆಗಳಿಗೆ ನಿಮ್ಮ ಪತ್ರಿಕೆಯ ಬರವಣಿಗೆಯ ...ಗಳೇ ಉತ್ತರಗಳಾಗಿ ದಿಟ್ಟಿಸುತ್ತವೆ.

...ಅದಕ್ಕಾಗೆ ನಿಮ್ಮನ್ನು ಇಲ್ಲಿಯವರೆಗೂ ಸುಮ್ಮನೆ ...ದ್ದೇನೆ...!

...ಇಂತಿ ನಿಮ್ಮ ಬೆನ್ನಿಗೆ,

- ಪ್ರಮೋದ್ ದಾನಪ್ಪ, ಮಸ್ಕಿ

...ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮವನ್ನು ಕುರಿತು ... ಸಂಕ್ಷಿಪ್ತವಾಗಿ ಹೇಳಬಹುದು:


...ನವ ಬ್ರಾಹ್ಮಣರನ್ನು ಇಷ್ಟಲಿಂಗವೆಂದು ತಿಳಿದು ಸದಾ ...ಗೊಯ್ಯುವ ಧಾರವಾಡದ ವೀರಶೈವರ ಪೂಜಾ ...ದಂತೆ ಘನವಾಗಿ ನಡೆದು ಪಾವಿತ್ರ್ಯವನ್ನು ...ಡಿಕೊಂಡಂತಿತ್ತು."

- ರಾಜು, ಈ ಮೇಲ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...nkesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ...ನಿಮ್ಮ ಪ್ರತಿಕ್ರಿಯೆಗಳನ್ನು 9980331427 ...ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಶೀಲವೆಂಬ ಕೆಂಡವೂ ಪೌರುಷವೆಂಬ ಅಹಂಭಾವವೂ

ಭಾರತೀಯ ಸಂಪ್ರದಾಯಿಕ ಮನಸ್ಸುಗಳು ಶೀಲವೆಂಬ ಕೆಂಡವನ್ನು ಮಹಿಳೆಯಾದವಳು ಸೆರಗಿನಲ್ಲಿ ಕಟ್ಟಿಕೊಂಡೇ ಹುಟ್ಟಬೇಕೆಂದು ನಿರ್ಧರಿಸಿದಂತಿದೆ. "ಪಾರಂಪರಿಕ ಮೌಲ್ಯಗಳನ್ನು ಸಂಶಯಿಸದೇ ಅನುಕರಣೆ ಮಾಡಬೇಕು" ಎಂದು ವಾದಿಸುವುದು ಬಹಳ ಸುಲಭ. ಶೀಲವು ಮೌಲ್ಯವೆಂಬುದನ್ನು ಒಪ್ಪಬಹುದಾದ ಸಂಗತಿಯಾದರೂ ಅದು ಲಿಂಗಾನುಸಾರವಾಗಿ ತನ್ನ ಮೌಲ್ಯವನ್ನು ಪಲ್ಲಟಗೊಳಿಸಬಾರದು. ಸ್ತ್ರೀಗೆ ಮಾತ್ರ ಗಂಟು ಹಾಕಲಾಗಿರುವ ಈ ಮೌಲ್ಯ ಪುರುಷನ ಚರ್ಚೆಯ ಸಂದರ್ಭದಲ್ಲಿ ಅವಮಾನದ ಸಂಗತಿಯಾಗುವುದಿಲ್ಲ, ಬದಲಾಗಿ ಅಭಿಮಾನದ ಸಂಗತಿಯಾಗಿ ನೀಚತನದ ಪ್ರದರ್ಶನವಾಗುತ್ತದೆ. ನಮ್ಮ ಪ್ರಾಚೀನ ಅರಸರು, ಇಂದಿನ ಹಲವಾರು 'ಮುಂದಾಳು'ಗಳು ತಮ್ಮ ಪೌರುಷ ಪ್ರದರ್ಶನವನ್ನು ತಾವೆಷ್ಟು ಮಹಿಳೆಯರನ್ನು ಆಳುತ್ತಿರುವದು ಎಂಬುದನ್ನು ವಿವರಿಸುವ ಮೂಲಕ ಮಾಡುತ್ತಿರುತ್ತಾರೆ. ಅದೇ ಮಹಿಳೆಯೊಬ್ಬಳು ಪರಪುರುಷರಲ್ಲಿ ಅನುರಕ್ತಳಾದರೆ, ಅಷ್ಟೇ ಏಕೆ ಯಾವನೋ ಕಾಮುಕನೊಬ್ಬ ಅವಳ ಮೇಲೆ ಕಣ್ಣು ಹಾಕಿದರೂ ಮಹಿಳೆಯೇ ಶೀಲಗೆಟ್ಟವಳು ಎಂಬ ನಿರ್ಧಾರಕ್ಕೆ ಸಮಾಜ ಬಂದು ಬಿಡುತ್ತದೆ.



ಇಂತಹ ದುರಂತಮಯ ಆಲೋಚನೆಗಳು ನಮ್ಮ ಚಿಂತನಾಕ್ರಮಗಳಲ್ಲಿಯೇ ಮಿಳಿತಗೊಂಡಿವೆ. ಮಗುವಿನ ಲಿಂಗನಿರ್ಧಾರದೊಂದಿಗೇ ನೂರಾರು ಕಟ್ಟುಪಾಡುಗಳು ಅದರ ಲಿಂಗಾನುಸಾರ ಹೇರಲ್ಪಡುತ್ತವೆ. ಹೆಣ್ಣಾದರೆ 'ಶೀಲ'ವೆಂಬ ಆಚರಣೆಯ ಕಟ್ಟುಪಾಡು ಏಕಮುಖಿಯಾಗಿ ಅವಳ ತಲೆಗೆ ಕಟ್ಟಿಬಿಡಲಾಗುತ್ತದೆ. 'ಶೀಲ' ಹೆಣ್ಣಿನ ಪಾವಿತ್ರ್ಯ ಶೃಂಗಾರ ಶಕ್ತಿ ಎಂದೆಲ್ಲ ಹುಸಿಮೌಲ್ಯಗಳೊಂದಿಗೆ ಸಮೀಕರಿಸಲಾಗುತ್ತದೆ. ಜನ್ಮದಿಂದಲೇ ಅವಳ ದೇಹದ ಅಂಗಾಂಗಗಳನ್ನು ಕುರಿತು ಕೀಳರಿಮೆಯನ್ನು ಬೆಳೆಸಲಾಗುತ್ತದೆ. ತನ್ನದೇ ಆಗಿರುವ ಈ ಅಂಗಾಂಗಗಳ ನೆನಪಾದಾಗಲೊಮ್ಮೆ 'ಮೌಲ್ಯ'ಗಳು ಅವಳ ಮನಸ್ಸನ್ನು ಚುಚ್ಚಲಾರಂಭಿಸುತ್ತವೆ. ಮಾನಸಿಕವಾಗಿ ಇಂಥ ಆಲೋಚನೆಯನ್ನು ಬಾಲ್ಯದಲ್ಲಿ ಬಿತ್ತುತ್ತ ಯೌವನದಲ್ಲಿ ದೈಹಿಕ ರಕ್ಷಣೆಗಾಗಿ ಕರಾಟೆ ಜುಡೋ ಮುಂತಾದ ರಕ್ಷಣಾ ತಂತ್ರಗಳನ್ನು ಕಲಿಸಿದರೆ ಏನು ಫಲ? ದೆಹಲಿ ಸಾಮೂಹಿಕ ಅತ್ಯಾಚಾರದ ನಂತರ ಕೆಲವೆಡೆ ಮಹಿಳೆಯರಿಗೆ ಖಾರದ ಪುಡಿಯ ಪ್ಯಾಕೇಟುಗಳನ್ನು ಹಂಚಲಾಯಿತಂತೆ. ಅತ್ಯಾಚಾರದಂಥ ಗಂಭೀರ ವಿಷಯಗಳಿಗೂ ನಾವೆಂಥ ಸರಳೀಕೃತ ಪರಿಹಾರಗಳನ್ನು ಸೂಚಿಸುತ್ತೇವೆ ಎಂಬುದನ್ನು ಈ ಸಂಗತಿಗಳು ತೋರಿಸಿಕೊಡುತ್ತವೆ.

ಇನ್ನು ಶೀಲಹರಣಗೊಂಡವಳಿಂದಲೇ ಸ್ತ್ರೀಕುಲದ ಪಾವಿತ್ರ್ಯ ನಾಶವಾಯಿತು ಎಂಬಂತೆ ಅರ್ಥ ಬರುವ ಮಾತುಗಳನ್ನು ಕೆಲವು ಚಾಣಾಕ್ಷಮತಿ ನಾಯಕರು ಹೇಳುತ್ತಿದ್ದಾರೆ. 'ಒಂದೇ ಕೈಯಿಂದ ಚಪ್ಪಾಳೆ ಸಾಧ್ಯವಾಗುವುದಿಲ್ಲ' ಎಂಬ ಬೇಜವಾಬ್ದಾರಿ ಹೇಳಿಕೆಗಳನ್ನು ಹರಿಬಿಡುತ್ತಾರೆ. ಶೀಲ, ಪಾವಿತ್ರ್ಯ ನಡವಳಿಕೆ ಎಂಬ ಕಲ್ಪನೆಗಳು ಪುರುಷ-ಮಹಿಳೆಯರಿಗೆ ಭಿನ್ನ-ಭಿನ್ನ ದೃಷ್ಟಿಯಿಂದ ಪ್ರತಿಪಾದಿಸಲ್ಪಡುತ್ತಿರುವುದು ಅತ್ಯಂತ ದುರಂತಮಯವಾದದ್ದು. ಇಂದಿಗೂ ಅತ್ಯಾಚಾರಕ್ಕೊಳಗಾದವಳನ್ನೇ 'ಕಳಂಕಿತಳು' ಎಂಬ ಹೊಸಗೇಡಿ ಆಪಾದನೆ ಮಾಡುವವರು ನಮ್ಮನಡುವೆ ಅಧಿಕವಾಗಿದ್ದಾರೆ. ಇದಕ್ಕೆ ನಮ್ಮ ದೋಷಪೂರ್ಣ ಆಲೋಚನಾ ವಿಧಾನವೇ ಕಾರಣ. ಪಾವಿತ್ರ್ಯ ಸೌಂದರ್ಯ ಶೀಲ ಎಂಬೆಲ್ಲ ಅಮೂರ್ತ ಕಲ್ಪನೆಗಳು ನಾವು ಬೆಳೆಸಿಕೊಂಡ ದೃಷ್ಟಿಕೋನದಲ್ಲಿವೆ. ಅನಪೇಕ್ಷಿತ ಘಟನೆಯೊಂದಕ್ಕೆ ಥಟ್ಟನೇ ಪ್ರತಿಕ್ರಿಯಿಸಿದರೆ ಆ ಪ್ರತಿಕ್ರಿಯೆಯಿಂದ ನಮ್ಮ ಆಲೋಚನಾ ವಿಧಾನ ಬೆಳೆದ ರೀತಿ ತಿಳಿಯುತ್ತದೆ 'ಶೀಲಗೆಟ್ಟಗಳು, ಕಳಂಕಿತಗಳು' ಎಂಬ ಜನಾಭಿಪ್ರಾಯ ರೂಪಿಸುವ ಸಾಮಾಜಿಕ ಮನೋಭಾವವೇ ಪ್ರಶ್ನಾರ್ಹ, ಖಂಡನಾರ್ಹವಾಗಿರುತ್ತದೆ. ಅತ್ಯಾಚಾರಕ್ಕೊಳಗಾದ ಮಹಿಳೆ ಕಳಂಕಿತಳಲ್ಲ, ಅತ್ಯಚಾರಗೈದ ಪುರುಷ ಕಳಂಕಿತನಾದವನು, ಅವನ ರಕ್ಷಣೆಗೆ ನಿಲ್ಲದೇ ಶಿಕ್ಷೆಗೆ ಗುರಿಪಡಿಸಲು ಆಗ್ರಹಿಸುವುದು ನಾಗರಿಕರ ಕರ್ತವ್ಯವಾಗಿದೆ.

ಪ್ರತಿ ಅತ್ಯಾಚಾರದ ಹಿಂದಿರುವುದು ಕೇವಲ ಲೈಂಗಿಕತೆ, ಕಾಮಾಂಧತೆ ಮಾತ್ರವಲ್ಲ, ಪುರುಷನು ಮಹಿಳೆಯ ಮೇಲೆ ತನ್ನ ಪೌರುಷತ್ವದ ಹಕ್ಕನ್ನು ಬಲಾತ್ಕಾರವಾಗಿ ಸ್ಥಾಪಿಸಲು ಆಯ್ಕೆ ಮಾಡಿಕೊಂಡ ಮಾರ್ಗ ಅತ್ಯಾಚಾರ. ಪುರುಷ ಪ್ರಾಬಲ್ಯತೆಯನ್ನು ದೌರ್ಜನ್ಯದಿಂದ ಸ್ಥಾಪಿಸುವಂಥ ಹೀನ ಕೃತ್ಯಕ್ಕೆ ಇಳಿದ ನಂತರವೂ ಅವನ ಮುಂದೆ ಮಂಡಿಯೂರಿ ಮೊರೆಯಿಡುವುದು ಹೇಗೆ ಸಾಧ್ಯ? ಪುರುಷತ್ವವೇ ಹೆಡೆಯೆತ್ತಿ ಮೃಗದಂತೆ ವರ್ತಿಸುವವನ ಮುಂದೆ "ಅಣ್ಣಾ ನನ್ನನ್ನು ಬಿಟ್ಟು ಬಿಡು" ಎಂದು ಆಕ್ರಂದಿಸುತ್ತಾ ಮಾನವ ಸಂಬಂಧ ನೆನಪಿಸಿದರೆ ತೋಳದ ಮುಂದೆ ಕುರಿ ರಕ್ಷಣೆ ಬಯಸಿದಂತಾಗುವುದಿಲ್ಲವೇ? ಸಂದರ್ಭದ ದಾರುಣತೆಯನ್ನು, ಸೂಕ್ಷ್ಮತೆಯನ್ನು ಅರಿತು ಅತ್ಯಾಚಾರಕ್ಕೆಳೆಸುವವನಿಗೆ ಪ್ರತಿಭಟಿಸುವ ಮಹಿಳೆಯ ಧೀಮಂತಿಕೆಗೆ ಧೈರ್ಯಕ್ಕೆ ಹೆಮ್ಮೆ ಪಡಬೇಕು. ಶೀಲ, ಕಳಂಕ ಎಂದೆಲ್ಲ ಕುಹಕವಾಡುತ್ತ ಸಾಮಾಜಿಕ ಅಸ್ಪೃಶ್ಯತೆಗೆ ಕಾರಣವಾಗಬಾರದು.

- ದಿ.ಎಂ. ನದಾಫ್, ಅಫಜಲಪುರ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/-

ಕಿತ್ತೂರು ಚೆನ್ನಮ್ಮನಿಗೂ ಲಾಭ



'ಸಂಗೊಳ್ಳಿ ರಾಯಣ್ಣ' ಚಿತ್ರವು ಅದರ ನಿರ್ಮಾಪಕ ಆನಂದ್ ಅಪ್ಪುಗೋಳ್, ನಾಯಕನಟ ದರ್ಶನ್ ಮತ್ತು ಇತರ ಕಲಾವಿದರಿಗೆ ಲಾಭ ಮತ್ತು ಜನಪ್ರಿಯತೆಯನ್ನು ತಂದುಕೊಟ್ಟಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಆ ಸಿನಿಮಾ ನಮ್ಮ ನಾಡಿಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ರಾಯಣ್ಣ ಮತ್ತು ಕಿತ್ತೂರು ಚೆನ್ನಮ್ಮನಿಗೂ ಲಾಭ ತಂದಿದೆ ಎಂದರೆ ನೀವು ನಂಬುತ್ತೀರಾ?

ಕಿತ್ತೂರಿನಲ್ಲಿ 'ಸಂಗೊಳ್ಳಿ ರಾಯಣ್ಣ' ಸಿನಿಮಾ ಪ್ರದರ್ಶನ ಕಾಣುತ್ತಿರುವ ಥಿಯೇಟರ್‌ನ ಹೊರಗಡೆ ನಿರ್ಮಾಪಕ ಅಪ್ಪುಗೋಳ್ ಅವರು ಎರಡು ಹುಂಡಿಗಳನ್ನು ಇಟ್ಟಿದ್ದಾರಂತೆ. ಒಂದು ಹುಂಡಿಗೆ 'ಸಂಗೊಳ್ಳಿ ರಾಯಣ್ಣ ಹುಂಡಿ' ಎಂದೂ; ಇನ್ನೊಂದು ಹುಂಡಿಗೆ 'ಕಿತ್ತೂರು ಚೆನ್ನಮ್ಮ ಹುಂಡಿ' ಎಂದೂ ಹೆಸರಿಟ್ಟಿದ್ದಾರೆ. ಸಿನಿಮಾ ನೋಡಿ ಹೊರಬಂದನಂತರ ಜನ ಈ ಎರಡೂ ಹುಂಡಿಗಳಿಗೆ ತಮ್ಮ ಕೈಲಾದಷ್ಟು ಕಾಣಿಕೆಯನ್ನು ಹಾಕುತ್ತಿದ್ದಾರಂತೆ. ಈ ಚಿತ್ರ ಶತದಿನೋತ್ಸವ ಆಚರಿಸಿದ ನಂತರ ಆ ಹುಂಡಿಗಳನ್ನು ಒಡೆದು ಅವುಗಳಲ್ಲಿ ಎಷ್ಟು ಹಣ ಸಂಗ್ರಹವಾಗಿದೆ ಎಂದು ಲೆಕ್ಕ ಮಾಡಲು ಆನಂದ್ ಅಪ್ಪುಗೋಳ್ ನಿರ್ಧರಿಸಿದ್ದಾರೆ. ಅಂದಹಾಗೆ, ಈ ಹುಂಡಿಗಳಲ್ಲಿ ಸಂಗ್ರಹವಾದ ಹಣವನ್ನು ಸಂಗೊಳ್ಳಿ ರಾಯಣ್ಣ ಮತ್ತು ಕಿತ್ತೂರು ಚೆನ್ನಮ್ಮ ಸಮಾಧಿಗಳನ್ನು ಅಭಿವೃದ್ಧಿಪಡಿಸಲು ಬಳಸುವುದು ಎಂದು ಅಪ್ಪುಗೋಳ್ ಆರಂಭದಲ್ಲೇ ಘೋಷಿಸಿದ್ದರು.

ನಮ್ಮ ನಾಡಿಗೆ ಪ್ರಾಣತೆತ್ತ ಈ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರಿಗಾಗಿ ಇಂದಿನತನಕ ಸರಿಯಾದ ಒಂದು ಸಮಾಧಿಯನ್ನು ನಮ್ಮ ಸರ್ಕಾರ ನಿರ್ಮಿಸಿಲ್ಲ. ಈಗ ಆ ಕೆಲಸವನ್ನು ಅಪ್ಪುಗೋಳ್ ಅವರು ಮಾಡಲು ಸಜ್ಜಾಗಿರುವುದು ನಿಜಕ್ಕೂ ಮೆಚ್ಚತಕ್ಕದ್ದು.

ಅಭಿಮಾನಿಗಳಿಗೆ ಫೆಬ್ರುವರಿ 'ದರ್ಶನ್ ಮಾಸ'



ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳ ಪಾಲಿಗೆ ಫೆಬ್ರುವರಿ ತಿಂಗಳು 'ದರ್ಶನ್ ಮಾಸ'ದಂತಿರುತ್ತದೆ. ಏಕೆಂದರೆ ಆ ಇಡೀ ತಿಂಗಳು ದರ್ಶನ್ ಸುದ್ದಿಯಲ್ಲಿರುತ್ತಾರೆ.

ಫೆಬ್ರುವರಿ ತಿಂಗಳ 5 ರಂದು ದರ್ಶನ್ ಅಭಿನಯಿಸಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ ಶತದಿನೋತ್ಸವವನ್ನು ತಲುಪಲಿದೆ. ಈ ಸಿನಿಮಾ ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿ ವೆಚ್ಚದ ಚಿತ್ರವಾಗಿದ್ದರಿಂದ ಇದು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತದೋ ಇಲ್ಲವೋ ಎಂಬ ಅಂಜಿಕೆ ಎಲ್ಲರಿಗಿತ್ತು. ಅದರಲ್ಲೂ ಇದೊಂದು ಐತಿಹಾಸಿಕ ಚಿತ್ರವಾದ್ದರಿಂದ ಇದು ಗೆಲ್ಲುವ ಬಗ್ಗೆ ಆರಂಭದಿಂದಲೂ ಅಪನಂಬಿಕೆಯಿತ್ತು. ಆದರೆ ಎಲ್ಲ ನಿರೀಕ್ಷೆಗಳನ್ನು ಮೀರಿ ಚಿತ್ರ ಬಾಕ್ಸ್ ಆಫೀಸಿನಲ್ಲಿ ಗೆದ್ದಿತು. ಈ ಕಾರಣಕ್ಕೆ ಫೆಬ್ರುವರಿ 5 ದರ್ಶನ್ ಅಭಿಮಾನಿಗಳಿಗೆ ಪುಳಕವನ್ನುಂಟುಮಾಡುತ್ತದೆ.

ಅದ್ದಾದನಂತರ ಫೆಬ್ರುವರಿ 16 ದರ್ಶನ್‌ರ ಹುಟ್ಟುಹಬ್ಬ. ಒಬ್ಬ ನಾಯಕನಟನ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆದ್ದಾಗ ಅಭಿಮಾನಿಗಳು ಆತನ ಹುಟ್ಟುಹಬ್ಬವನ್ನು ಗ್ರ್ಯಾಂಡ್ ಆಗಿ ಆಚರಿಸುತ್ತಾರೆ. ಆದರೆ ಓರ್ವ ನಟನ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದರೆ ಆತ ಯಾರನ್ನೂ ತನ್ನ ಹುಟ್ಟುಹಬ್ಬಕ್ಕೆ ಕರೆಯುವುದಿಲ್ಲ. ಈ ಬಾರಿ ರಾಯಣ್ಣ 'ಸೆಂಚುರಿ' ಭಾರಿಸಿರುವುದರಿಂದ ಸಹಜವಾಗಿಯೇ ದರ್ಶನ್‌ರ ಹುಟ್ಟುಹಬ್ಬ ವಿಜೃಂಭಣೆಯಿಂದ ಜರುಗಲಿದೆ. ಅಷ್ಟೇ ಅಲ್ಲ, ಅದೇ ದಿನ ದರ್ಶನ್ ನಾಯಕನಾಗಿ ನಟಿಸಲಿರುವ ಹೊಸ ಚಿತ್ರ 'ಬೃಂದಾವನ' ಆರಂಭವಾಗಲಿದೆ. ಹೀಗಾಗಿ ದರ್ಶನ್ ಹುಟ್ಟುಹಬ್ಬದ ದಿನದಂದು ಒಂದು ಕಡೆ ರಾಯಣ್ಣ ಚಿತ್ರದ ಶತದಿನೋತ್ಸವ, ಇನ್ನೊಂದು ಕಡೆ ಹೊಸ ಚಿತ್ರದ ಮುಹೂರ್ತ ಇವೆರಡೂ ಅಭಿಮಾನಿಗಳಿಗೆ ಖುಷಿ ಕೊಡಲಿವೆ.

ತನ್ನ ಹುಟ್ಟುಹಬ್ಬದ ದಿನದಂದೇ 'ಸಂಗೊಳ್ಳಿ ರಾಯಣ್ಣ'ನ ಶತದಿನೋತ್ಸವವನ್ನು ಆಚರಿಸಬೇಕೆಂದು ದರ್ಶನ್ ಆರಂಭದಲ್ಲಿಯೇ ಪ್ಲ್ಯಾನ್ ಮಾಡಿದ್ದರು. ಆದರೆ ದರ್ಶನ್ ಹುಟ್ಟುಹಬ್ಬದ ದಿನದ ಬದಲು ಫೆಬ್ರುವರಿ 22 ರಂದು 'ಸಂಗೊಳ್ಳಿ ರಾಯಣ್ಣ' ಚಿತ್ರದ ಶತದಿನೋತ್ಸವ ಸಮಾರಂಭವನ್ನು ಅತ್ಯಂತ ವೈಭವದಿಂದ ಆಚರಿಸಲು ಆ ಚಿತ್ರದ ನಿರ್ಮಾಪಕ ಆನಂದ್ ಅಪ್ಪುಗೋಳ್ ನಿರ್ಧರಿಸಿದ್ದಾರೆ.

ಈ ಮೂರು ಸಮಾರಂಭಗಳು ಒಂದರ ಹಿಂದೆ ಒಂದರಂತೆ ಸಾಲುಸಾಲಾಗಿ ಫೆಬ್ರುವರಿ ತಿಂಗಳಲ್ಲಿ ನಡೆಯಲಿರು ವುದರಿಂದ ಅವರ ಅಭಿಮಾನಿಗಳಿಗೆ ಆ ತಿಂಗಳು 'ದರ್ಶನ್ ಮಾಸ'ದಂತೆ ಕಂಡರೆ ಅಚ್ಚರಿ ಏನಿದೆ?



ಬುಲ್ ಬುಲ್
ರಚಿತಾ ರಾಮ್
ದರ್ಶನ್

ಭವಿಷ್ಯ ನುಡಿಯುವುದು ಕಷ್ಟ

ಕನ್ನಡ ಚಿತ್ರರಂಗದ ಸದ್ಯದ ಬೊಗಸೆ ಕಂಗಳ, ಹಾಲು ಮೈಬಣ್ಣದ ಹುಡುಗಿ ಪ್ರಣೀತ ನೆರೆಯ ಆಂಧ್ರಪ್ರದೇಶದ ತೆಲುಗು ಸಿನಿಮಾ ಒಂದರಲ್ಲಿ ಎರಡನೆ ನಾಯಕಿಯಾಗಿ ನಟಿಸಲು ಒಪ್ಪಿಕೊಂಡಿರುವ ಸುದ್ದಿ ಬಂದಿದೆ. ಕನ್ನಡದಲ್ಲಿ ದರ್ಶನ್ ಮತ್ತು ದುನಿಯಾ ವಿಜಿ ಜೊತೆ ನಾಯಕಿಯಾಗಿ ನಟಿಸಿಯೂ ಅಷ್ಟೊಂದು ಲೈಮ್‌ಲೈಟ್‌ಗೆ ಬಾರದ ಪ್ರಣೀತ ಈಗ ತೆಲುಗಿನ ಸೂಪರ್‌ಸ್ಟಾರ್ ಪವನ್ ಕಲ್ಯಾಣ್ ಜೊತೆ ನಟಿಸುವ ಅವಕಾಶ ಪಡೆದು ಅಚ್ಚರಿ ಮೂಡಿಸಿದ್ದಾಳೆ.

"ಪವನ್ ಕಲ್ಯಾಣ್ ಜೊತೆ ಎರಡನೇ ನಾಯಕಿಯಾಗಿ ನಟಿಸುತ್ತಿರುವುದು ಆಕೆಗೆ ತಾರಾಮೌಲ್ಯ ತಂದುಕೊಟ್ಟಿದೆ. ಏಕೆಂದರೆ ಪವನ್ ಕಲ್ಯಾಣ್ ಚಿತ್ರದಲ್ಲಿ ದ್ವಿತೀಯ ನಾಯಕಿಯಾಗಿ ಕಾಣಿಸಿಕೊಳ್ಳುವುದು ಕನ್ನಡದಲ್ಲಿ ಫುಲ್‌ಲೆಂತ್ ನಾಯಕಿಯಾಗಿ ಕಾಣಿಸಿಕೊಳ್ಳುವುದಕ್ಕಿಂತಲೂ ದೊಡ್ಡ ಸಾಧನೆ" ಎಂದು ಗಾಂಧಿನಗರದವರು ಹೇಳುತ್ತಿದ್ದಾರೆ.



ಪ್ರಣೀತ ಪಾಲಿಗೆ ಆಕೆಯ ವೃತ್ತಿಜೀವನದ ಒಂದು ಮಹತ್ತರವಾದ ತಿರುವು ಇದಾಗಿದೆ ಎಂದರೆ ತಪ್ಪಾಗುವುದಿಲ್ಲ. ಸಾಮಾನ್ಯವಾಗಿ ಕನ್ನಡತಿಯರು ಪರಭಾಷಾ ಚಿತ್ರಗಳಲ್ಲಿ ನಟಿಸಿದ ನಂತರವೇ ನಮ್ಮ ನಿರ್ಮಾಪಕರು ಅವರತ್ತ ಗಮನ ಹರಿಸುತ್ತಾರೆ. ಕೆಲವೊಮ್ಮೆ ಆ ನಟಿಯರು ಪರಭಾಷೆಯಲ್ಲೇ ಗಟ್ಟಿಯಾಗಿ ನೆಲೆಯೂರುವುದರಿಂದ ಅವರು ಕನ್ನಡ ಚಿತ್ರೋದ್ಯಮಕ್ಕೆ ಗಗನಕುಸುಮಗಳೂ ಆಗುತ್ತಾರೆ. ಇದಕ್ಕೆ ಅತ್ಯಂತ ಉತ್ತಮ ಉದಾಹರಣೆಯೆಂದರೆ ಕನ್ನಡದ ಸೌಂದರ್ಯ ತೆಲುಗಿನಲ್ಲಿ ಮೆರೆದು ವಿಜೃಂಭಿಸಿದ್ದು.

ಪ್ರಣೀತ ತೆಲುಗು ಸಿನಿಮಾ ಪ್ರೇಕ್ಷಕರ ಮನ ಗೆಲ್ಲುತ್ತಾಳೋ? ಅಥವಾ ಅಲ್ಲಿ ಸೋತು ತವರುಮನೆಗೆ ವಾಪಾಸ್ ಬರುತ್ತಾಳೋ? ಎಂದು ಭವಿಷ್ಯ ನುಡಿಯಲು ಸದ್ಯಕ್ಕಂತೂ ಕಷ್ಟ.

ಸುದೀಪ್ ಬಾಲಂಗೋಚಿಯಾಗಿರುವ ಶಂಕ್ರೇಗೌಡ

'ವರದನಾಯಕ' ಚಿತ್ರದ ನಿರ್ಮಾಪಕ ಶಂಕ್ರೇಗೌಡ ಈಗ ಖುಷಿ ಖುಷಿಯಾಗಿದ್ದಾರೆ. ಕಾರಣ ವೆರಿಸಿಂಪಲ್. ಅ ನಿರ್ಮಾಣದ 'ವರದನಾಯಕ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿಸಿದೆ. ಆರಂಭದಲ್ಲಿ ಆ ಚಿತ್ರ ರಿಪೋರ್ಟ್ ಚೆನ್ನಾಗಿಲ್ಲದಿದ್ದರೂ ಬಾಕ್ಸ್ ಆಫೀಸಿನಲ್ಲಿ ಮೊದಲ ನಾಲ್ಕು ದಿನ ಕೆಲವು ಭಾಗಗಳಲ್ಲಿ ಆ ಚಿತ್ರದ ದರ್ಶನ್ ಅಭಿನಯದ 'ಸಾರಥಿ' ಚಿತ್ರದ ಗಳಿಕೆಗೆ ಸಮನಾಗಿತ್ತು. ಸಹಜವಾಗಿಯೇ ಇದರ ಕೀರ್ತಿ ಚಿತ್ರದಲ್ಲಿ ಅ ನಟನಾಗಿ ನಟಿಸಿರುವ ನಾಯಕ ನಟ ಸುದೀಪ್‌ಗೆ ಸಲ್ಲುತ್ತದೆ.



ಕಳೆದ ವರ್ಷ 'ವಿಷ್ಣುವರ್ಧನ' ಚಿತ್ರ ಬಿಡುಗಡೆಯಾದ ನಂತರ ಸುದೀಪ್ ನಟಿಸಿದ ಯಾವುದೇ ಚಿತ್ರ ಕನ್ನಡದಲ್ಲಿ ತೆರೆ ಕಂಡಿರಲಿಲ್ಲ. ಈ ಮಧ್ಯೆ ಆತ ನಟಿಸಿದ ತೆಲುಗು ಚಿತ್ರ 'ಈಗ' ಗಲ್ಲಾಪೆಟ್ಟಿಗೆಯಲ್ಲಿ ಭರ್ಜರಿ ಜಯಭೇರಿ ಭಾರಿಸಿದ್ದರಿಂದ ಸುದೀಪ್ ತಾರಾಮೌಲ್ಯ ಏಕ್‌ದಮ್ ಗಗನಕ್ಕೇರಿತು. ಬಹುಶಃ ಆ ಚಿತ್ರದ ಯಶಸ್ಸೂ 'ವರದನಾಯಕ'ನ ತಾರಾಮೌಲ್ಯವನ್ನು ಹೆಚ್ಚಿಸಿರಬಹುದೋ ಏನೊ?

'ವರದನಾಯಕ' ಗೆದ್ದಿದ್ದರಿಂದಲೋ ಏನೊ ನಿರ್ಮಾಪಕ ಶಂಕ್ರೇಗೌಡ ಈಗ ಎಲ್ಲೆಡೆ ಸುದೀಪ್ ನೆರಳಿನಂತೆ ಕಾಣಿಸಿಕೊಳ್ಳುತ್ತಿದ್ದಾರೆ. ಮೊನ್ನೆ ಉಜಿರೆಯಲ್ಲಿ ಪತ್ರಕರ್ತರು ಮತ್ತು ಸುದೀಪ್ ತಂಡದ ನಡುವೆ ಕ್ರಿಕೆಟ್ ಪಂದ್ಯಕ್ಕೆ ಸುದೀಪ್‌ರನ್ನು ತಮ್ಮ ಕಾರಿನಲ್ಲಿ ಕರೆದುಕೊಂಡುಬಂದಿದ್ದೇ ಶಂಕ್ರೇಗೌಡರು. ಅಷ್ಟೇ ಅಲ್ಲ, ಈಗ ಅದೇ ಶಂಕ್ರೇಗೌಡ ಸುದೀಪ್ ಜೊತೆ ವಿದೇಶಕ್ಕೆ ಹೋಗಿರುವುದೂ ಅಚ್ಚರಿ ಮೂಡಿಸುವಂತಿದೆ.

ಸುದೀಪ್ ಅಭಿನಯಿಸುತ್ತಿರುವ 'ಬಚ್ಚನ್' ಚಿತ್ರದ ಒಂದು ಹಾಡನ್ನು ಮಸ್ಕತ್‌ನಲ್ಲಿ ಚಿತ್ರೀಕರಿಸಲಾಗು ಅಲ್ಲಿ ಶಂಕ್ರೇಗೌಡರಿಗೆ ನಯಾ ಪೈಸೆಯ ಕೆಲಸವಿಲ್ಲ. ಆದರೂ ಅವರು 'ಬಚ್ಚನ್' ಚಿತ್ರದ ನಿರ್ಮಾಪಕ ಕಾಡಿಬೇಡಿ ಸುದೀಪ್ ಜೊತೆಗೆ ಮಸ್ಕತ್‌ಗೆ ಹಾರಿಹೋಗಿದ್ದಾರೆ. ಶಂಕ್ರೇಗೌಡರ ಈ ವರ್ತನೆಯನ್ನು ನೋಡಿ ಅ ಸಹೋದ್ಯೋಗಿಗಳು ಕುಹಕದಿಂದ ಏನು ಹೇಳುತ್ತಿದ್ದಾರೆ ಗೊತ್ತೇ? "ಈ ಶಂಕ್ರೇಗೌಡ್ರು ಇನ್ನೊಂದು ಕಾಲ್‌ಶಿ ಸಿಗುವತನಕ ಸುದೀಪ್‌ನನ್ನು ಬೆನ್ನುಬಿಡದ ಬೇತಾಳನಂತೆ ಕಾಡುತ್ತಾರೆ" ಎಂದು ಆಡಿಕೊಳ್ಳುತ್ತಿದ್ದಾರೆ. ಇದ ಇನ್ನೊಂದು ರೀತಿಯಲ್ಲಿ 'ಗೆದ್ದೆತ್ತಿನ ಬಾಲ ಹಿಡಿಯುವುದು' ಎಂದೂ ವರ್ಣಿಸಬಹುದು. ● ಶ್ರೇ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com